ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸುಡಾನ್: 121 ಮಂದಿ ರಕ್ಷಿಸಿದ ಭಾರತೀಯ ವಾಯುಪಡೆ 12
ಬೈಜೂಸ್ ಸಂಸ್ಥಾಪಕನ ಮೇಲೆ ಇ.ಡಿ ದಾಳಿ 11

ದಾಖಲೆಯಿಲ್ಲದ ₹5 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ಜಿಲ್ಲೆಯ ಲೋಕಾಪುರ ಬಳಿ ಲಕ್ಷಾನಟ್ಟಿ ಚೆಕ್‌ಪೋಸ್ಟ್‌ನಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹5 ಕೋಟಿಯನ್ನು ಶುಕ್ರವಾರ ರಾತ್ರಿ ಜಪ್ತಿ ಮಾಡಲಾಗಿದೆ.

ಹುಬ್ಬಳ್ಳಿಯಿಂದ ಮುಧೋಳಗೆ ಸಾಗಿಸಲಾಗುತ್ತಿತ್ತು. ಅಧಿಕಾರಿಗಳು ವಾಹನ ತಪಾಸಣೆ ಮಾಡಿದಾಗ ಹಣ ಪತ್ತೆಯಾಗಿದೆ.

‘ಯೂನಿಯನ್ ಬ್ಯಾಂಕಿಗೆ ಸೇರಿದ ಹಣ ಎಂದು ವಾಹನದಲ್ಲಿದ್ದವರು ತಿಳಿಸಿದ್ದಾರೆ. ಆದರೆ, ಸೂಕ್ತ ದಾಖಲೆ ನೀಡದ ಕಾರಣ ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಜಿಲ್ಲಾ ಚುನಾವಣಾಧಿಕಾರಿ ಪಿ. ಸುನೀಲ್‌ಕುಮಾರ್ ತಿಳಿಸಿದರು.

ಹಂಚಲು ಇಟ್ಟಿದ್ದ ಸೀರೆ ಜಪ್ತಿ

ಪ್ರಜಾವಾಣಿ ವಾರ್ತೆ

ರಾಮನಗರ: ಚನ್ನಪಟ್ಟಣ ತಾಲ್ಲೂಕಿನ ದಶವಾರ ಗ್ರಾಮದಲ್ಲಿ ಶನಿವಾರ ಚುನಾವಣಾ ಅಧಿಕಾರಿಗಳ ತಂಡ ದಾಳಿ ನಡೆಸಿ, ಮತದಾರರಿಗೆ ಹಂಚಲು ಮನೆಯೊಂದರಲ್ಲಿ ಸಂಗ್ರಹಿಸಿಡಲಾಗಿದ್ದ ₹56 ಸಾವಿರ ಮೌಲ್ಯದ 113 ಸೀರೆಗಳು ಹಾಗು ₹90 ಸಾವಿರ ನಗದು ವಶ ಜಪ್ತಿ ಮಾಡಲಾಗಿದೆ.

‘ಸೀರೆಗಳ ಮೇಲೆ ಚನ್ನಪಟ್ಟಣ ಬಿಜೆಪಿ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಭಾವಚಿತ್ರ, ಬಿಜೆಪಿ ಚಿಹ್ನೆ ಇದೆ’ ಎಂದು ಚುನಾವಣಾ ಅಧಿಕಾರಿಗಳು ತಿಳಿಸಿದ್ದಾರೆ.



ಫೆಮಾ ಉಲ್ಲಂಘಿಸಿ ₹28 ಸಾವಿರ ಕೋಟಿ ಎಫ್‌ಡಿಐ ಹೂಡಿಕೆ ● 3 ಕಡೆ ಶೋಧ

ಬೈಜೂಸ್ ಸಂಸ್ಥಾಪಕನ ಮೇಲೆ ಇ.ಡಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ (ಫೆಮಾ) ಉಲ್ಲಂಘನೆ ಆರೋಪದಡಿ ಬೈಜೂಸ್ ಕಂಪನಿಯ ಮಾಲೀಕ ರವೀಂದ್ರನ್ ಬೈಜು ಅವರ ಮನೆ ಮತ್ತು ಕಚೇರಿಗಳ ಮೇಲೆ ಶನಿವಾರ ದಾಳಿ ಮಾಡಿರುವ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು, ದಾಖಲೆಗಳನ್ನು ವಶ ಪಡಿಸಿಕೊಂಡಿದ್ದಾರೆ.

ರವೀಂದ್ರನ್ 'ಬೈಜೂಸ್' ಹೆಸರಿನಲ್ಲಿ ತಂತ್ರಜ್ಞಾನ ಆಧಾರಿತ ಶಿಕ್ಷಣ ಪೋರ್ಟಲ್ ನಡೆಸುತ್ತಿರುವ ಥಿಂಕ್ ಆ್ಯಂಡ್ ಲರ್ನ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆಗಿದ್ದಾರೆ. ಅವರಿಗೆ ಸೇರಿದ ಎರಡು ವ್ಯವಹಾರ ಸ್ಥಳಗಳು ಮತ್ತು ಒಂದು ಮನೆಯಲ್ಲಿ ಇ.ಡಿ ಅಧಿಕಾರಿಗಳು ಶೋಧ ನಡೆಸಿದ್ದಾರೆ.

ಕಂಪನಿಯ ವಿರುದ್ಧ ಫೆಮಾ ಉಲ್ಲಂಘನೆ ಆರೋಪದಡಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ. ಶೋಧ ಕಾರ್ಯಾಚರಣೆ ವೇಳೆ ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಹಲವು ದಾಖಲೆಗಳು ಮತ್ತು ಡಿಜಿಟಲ್ ದತ್ತಾಂಶಗಳನ್ನು ವಶಪಡಿಸಿಕೊಳ್ಳ-ಲಾಗಿದೆ ಎಂದು ಇ.ಡಿ ಅಧಿಕಾರಿಗಳು ತಿಳಿಸಿದ್ದಾರೆ.

ಮುಖ್ಯಾಂಶಗಳು

- ₹ 28,000 ಕೋಟಿ ವಿದೇಶಿ ನೇರ ಹೂಡಿಕೆ ಸ್ವೀಕೃತಿ
- ₹ 9,754 ಕೋಟಿ ಸಾಗರೋತ್ತರ ನೇರ ಹೂಡಿಕೆ
- 2020–21ರ ಲೆಕ್ಕಪತ್ರ ವರದಿ ಸಲ್ಲಿಸದ ಕಂಪನಿ

'ಬೈಜೂಸ್ 2011ರಿಂದ 2023ರ ಅವಧಿಯಲ್ಲಿ ₹ 28,000 ಕೋಟಿಯಷ್ಟು ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಸ್ವೀಕರಿಸಿದೆ. ಸುಮಾರು ₹ 9,754 ಕೋಟಿಯಷ್ಟು ಮೊತ್ತವನ್ನು ಸಾಗರೋತ್ತರ ನೇರ ಹೂಡಿಕೆ ಹೆಸರಿನಲ್ಲಿ ವಿವಿಧ ದೇಶಗಳಲ್ಲಿ ಹೂಡಿಕೆ ಮಾಡಿದೆ. ಜಾಹೀರಾತು ಮತ್ತು ಮಾರುಕಟ್ಟೆ ವೆಚ್ಚದ ರೂಪದಲ್ಲಿ ₹ 944 ಕೋಟಿಯನ್ನು ವರ್ಗಾಯಿಸಿರುವುದು ಕಂಡುಬಂದಿದೆ' ಎಂದು ಇ.ಡಿ ತಿಳಿಸಿದೆ.

ಕಂಪನಿಯು 2020–21ರ ಹಣಕಾಸು ಲೆಕ್ಕದ ವರದಿಯನ್ನು ಸಿದ್ಧ ಪಡಿಸಿಲ್ಲ. ಕಾನೂನು ಪ್ರಕಾರ ನಡೆಸಬೇಕಿದ್ದ ಲೆಕ್ಕ ಪರಿಶೋಧನಾ ಪ್ರಕ್ರಿಯೆಯನ್ನೂ ಪೂರ್ಣಗೊಳಿ ಸಿಲ್ಲ. ಹಣಕಾಸು ವಹಿವಾಟಿಗೆ ಸಂಬಂಧಿ ಸಿದಂತೆ ಕಂಪನಿ ನೀಡಿರುವ ಅಂಕಿ-ಅಂಶ ಗಳನ್ನು ಬ್ಯಾಂಕ್‌ಗಳ ದಾಖಲೆಗಳೊಂದಿಗೆ ಪರಿಶೀಲನೆ ನಡೆಸಲಾಗುವುದು ಎಂದೂ ತಿಳಿಸಿದೆ. ರವೀಂದ್ರನ್ ವಿರುದ್ಧ ಹಲವು ಮಂದಿ ಖಾಸಗಿ ವ್ಯಕ್ತಿಗಳು ದೂರು ಸಲ್ಲಿಸಿದ್ದರು. ಅವುಗಳನ್ನು ಆಧರಿಸಿ ತನಿಖೆ ಆರಂಭಿಸಲಾಗಿತ್ತು. ತನಿಖೆಯ ಅವಧಿಯಲ್ಲಿ ಅವರಿಗೆ ಹಲವು ಬಾರಿ ಸಮನ್ಸ್ ಜಾರಿಗೊಳಿಸಲಾಗಿತ್ತು. ತನಿಖೆ ಯಿಂದ ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದ ಅವರು, ಒಮ್ಮೆಯೂ ತನಿಖಾಧಿಕಾರಿಗಳ ಎದುರು ಹಾಜರಾಗಿರಲಿಲ್ಲ ಎಂದು ಇ.ಡಿ ಹೇಳಿದೆ.

'ತನಿಖೆಗೆ ಸಂಪೂರ್ಣ ಸಹಕಾರ'

'ನಮ್ಮ ಕಾರ್ಯ ನಿರ್ವಹಣೆಯಲ್ಲಿ ಬದ್ಧತೆ ಮತ್ತು ನೈತಿಕತೆ ಕಾಯ್ದುಕೊಂ-ಡಿದ್ದೇವೆ. ತನಿಖಾ ಸಂಸ್ಥೆಗೆ ಸಂಪೂರ್ಣ ಸಹಕಾರ ನೀಡುತ್ತೇವೆ. ತನಿಖೆಗೆ ಅಗತ್ಯವಿರುವ ಎಲ್ಲ ಮಾಹಿತಿಗಳನ್ನೂ ಸಕಾಲಕ್ಕೆ ಒದಗಿಸುತ್ತೇವೆ. ಈ ಪ್ರಕರಣವು ಸಕಾಲಕ್ಕೆ ಮತ್ತು ತೃಪ್ತಿದಾಯಕ ರೀತಿಯಲ್ಲಿ ಇತ್ಯರ್ಥ-ವಾಗಲಿದೆ ಎಂಬ ವಿಶ್ವಾಸ ನಮಗಿದೆ' ಎಂದು 'ಬೈಜೂಸ್' ವಕ್ತಾರ ಪ್ರತಿಕ್ರಿಯಿಸಿದ್ದಾರೆ.

ಇ.ಡಿ ದಾಳಿ ಕುರಿತು 'ಪಿಟಿಐ' ಸುದ್ದಿ ಸಂಸ್ಥೆಗೆ ಪ್ರತಿಕ್ರಿಯಿಸಿರುವ ಅವರು, 'ಭಾರತ ಹಾಗೂ ಜಗತ್ತಿನಾದ್ಯಂತ ಇರುವ ನಮ್ಮ ಗ್ರಾಹಕರಿಗೆ ಅತ್ಯುತ್ತಮ ಗುಣಮಟ್ಟದ ಶೈಕ್ಷಣಿಕ ಉತ್ಪನ್ನಗಳು ಮತ್ತು ಸೇವೆಗಳನ್ನು ನೀಡುವುದಕ್ಕೆ ಸಂಸ್ಥೆ ಬದ್ಧವಾಗಿದೆ. ಭವಿಷ್ಯಕ್ಕಾಗಿ ವಿದ್ಯಾರ್ಥಿಗಳ ಕಲಿಕೆ ಮತ್ತು ಸಿದ್ಧತೆಯ ವಿಧಾನವನ್ನು ಪರಿವರ್ತಿಸುವುದಕ್ಕೆ ಆದ್ಯತೆ ನೀಡುವುದನ್ನು ಮುಂದುವರಿಸುತ್ತೇವೆ' ಎಂದು ತಿಳಿಸಿದ್ದಾರೆ.

ರವೀಂದ್ರನ್ ಮತ್ತು ಅವರ ಪತ್ನಿ ದಿವ್ಯಾ ಗೋಕುಲ್‌ನಾಥ್ ಬೈಜೂಸ್ ಕಂಪನಿಯನ್ನು ನಡೆಸುತ್ತಿದ್ದಾರೆ. ಕಂಪನಿಯು ₹ 2,200 ಕೋಟಿ ಮೌಲ್ಯ ಹೊಂದಿರುವುದಾಗಿ 2022ರ ಮಾರ್ಚ್‌ನಲ್ಲಿ ಘೋಷಿಸಿಕೊಂಡಿತ್ತು. ಕಂಪನಿಯು ವೆಚ್ಚ ಕಡಿತಕ್ಕಾಗಿ 2,500 ನೌಕರರನ್ನು ಕೈಬಿಟ್ಟು, 10,000 ಶಿಕ್ಷಕರನ್ನು ನೇಮಿಸಿಕೊಳ್ಳು ವುದಾಗಿ ಕಳೆದ ಅಕ್ಟೋಬರ್‌ನಲ್ಲಿ ಘೋಷಿಸಿತ್ತು.

2020–21ನೇ ಆರ್ಥಿಕ ವರ್ಷದಲ್ಲಿ ₹ 4,588 ಕೋಟಿ ನಷ್ಟ ಅನುಭವಿಸಿರುವುದಾಗಿ ಬೈಜೂಸ್ ಘೋಷಿಸಿಕೊಂಡಿತ್ತು. 2019–20ರಲ್ಲಿ ₹ 231.69 ಕೋಟಿ ನಷ್ಟ ಘೋಷಿಸಿತ್ತು. ಕಂಪನಿಯ ವರಮಾನವು 2019–20ರಲ್ಲಿ ₹ 2,511 ಕೋಟಿ ಇದ್ದು, 2020–21ರಲ್ಲಿ ₹ 2,428 ಕೋಟಿಗೆ ಕುಸಿದಿದೆ ಎಂದು ಹೇಳಿತ್ತು.

ಅದಾನಿ ಪ್ರಕರಣ: 6 ತಿಂಗಳ ಸಮಯ ಕೇಳಿದ ಸೆಬಿ

ಮುಂಬೈ/ನವದೆಹಲಿ (ರಾಯಿಟರ್ಸ್/ಪಿಟಿಐ): ಅದಾನಿ ಸಮೂಹದ ವಿರುದ್ಧ ಅಮೆರಿಕದ ಹಿಂಡನ್‌ಬರ್ಗ್ ರಿಸರ್ಚ್ ಸಂಸ್ಥೆಯು ಮಾಡಿರುವ ಆರೋಪಗಳ ತನಿಖೆ ಪೂರ್ಣಗೊಳಿಸಲು ಆರು ತಿಂಗಳ ಹೆಚ್ಚುವರಿ ಕಾಲಾವಕಾಶ ನೀಡುವಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸುಪ್ರೀಂ ಕೋರ್ಟ್‌ಗೆ ಶನಿವಾರ ಮನವಿ ಮಾಡಿದೆ.

ಅದಾನಿ ಸಮೂಹವು ಷೇರು ದರಗಳನ್ನು ಅಕ್ರಮವಾಗಿ ಏರಿಳಿತ ಮಾಡಿದೆ ಮತ್ತು ಮಾಹಿತಿಗಳನ್ನು ಮುಚ್ಚಿಟ್ಟಿದೆ ಎನ್ನುವ ಆರೋಪಗಳ ಕುರಿತು ಎರಡು ತಿಂಗಳಲ್ಲಿ ತನಿಖೆ ನಡೆಸುವಂತೆ ಸುಪ್ರೀಂ ಕೋರ್ಟ್ ಮಾರ್ಚ್ 2ರಂದು ನಿರ್ದೇಶನ ನೀಡಿತ್ತು.

ಮುಖ್ಯಾಂಶಗಳು

- ನಿಯಮ ಉಲ್ಲಂಘನೆ ಪ್ರಾಥಮಿಕ ತನಿಖೆಯಲ್ಲಿ ಪತ್ತೆ
- ವಿದೇಶಿ ನಿಯಂತ್ರಣ ಸಂಸ್ಥೆಗಳಿಂದ ಹೆಚ್ಚುವರಿ ಮಾಹಿತಿ ಕೋರಿಕೆ

ಅದರಂತೆ ಮೇ 2ರ ಒಳಗಾಗಿ ಸೆಬಿ ತನ್ನ ವರದಿ ಸಲ್ಲಿಸಬೇಕಿದೆ. ಈ ಬೆನ್ನಲ್ಲೇ ಹೆಚ್ಚುವರಿ ಕಾಲಾವಕಾಶ ನೀಡುವಂತೆ ಸೆಬಿ ಅರ್ಜಿ ಸಲ್ಲಿಸಿದೆ.

ಅದಾನಿ ಸಮೂಹದ, ಷೇರುಪೇಟೆಯಲ್ಲಿ ನೋಂದಾಯಿತ ಮತ್ತು ನೋಂದಣಿ ಆಗದೇ ಇರುವ ಹಾಗೂ ವಿದೇಶಿ ವಹಿವಾಟುಗಳ ಬಗ್ಗೆ ಆಳವಾದ ತನಿಖೆ ನಡೆಸುವ ಅಗತ್ಯ ಇದೆ ಎಂದು ಅರ್ಜಿಯಲ್ಲಿ ಸೆಬಿ ಕೇಳಿದೆ. ಈ ಕುರಿತು ಸೆಬಿ ಮತ್ತು ಅದಾನಿ ಸಮೂಹ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

> **ಸೆಬಿ ಮಾಡಿರುವ ಮನವಿಯು, ಹಗರಣವನ್ನು ಮುಚ್ಚಿಹಾಕುವ ಪ್ರಯತ್ನವಲ್ಲ ಅಥವಾ ಗದ್ದಲ ತಣ್ಣಗಾಗಲಿದೆ ಎನ್ನುವ ಭರವಸೆಯಿಂದ ಪ್ರಕರಣವನ್ನು ಎಳೆಯುತ್ತಿಲ್ಲ ಎಂದು ಭಾವಿಸುತ್ತೇನೆ**
>
> **ಜೈರಾಮ್ ರಮೇಶ್,** ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಹಿಂಡನ್‌ಬರ್ಗ್ ವರದಿಯನ್ನು ಅದಾನಿ ಸಮೂಹವು ಅಲ್ಲಗಳೆದಿದ್ದು, ಆಧಾರರಹಿತ ಹೇಳಿದೆ.

ನಿಯಮ ಉಲ್ಲಂಘಿಸಿರುವುದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ. ಇದನ್ನು ಖಾತರಿ ಪಡಿಸಿಕೊಳ್ಳಲು ಮತ್ತು ಹೆಚ್ಚಿನ ತನಿಖೆ ನಡೆಸಲು ಹೆಚ್ಚುವರಿ ಕಾಲಾವಕಾಶದ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯಲ್ಲಿ ಸೆಬಿ ಹೇಳಿದೆ.

ಅದರೆ, ಸಮೂಹದಿಂದ ಯಾವ ರೀತಿಯಲ್ಲಿ ಉಲ್ಲಂಘನೆಗಳು ಆಗಿವೆ ಎನ್ನುವ ವಿವರಗಳನ್ನು ಅರ್ಜಿಯಲ್ಲಿ ತಿಳಿಸಿಲ್ಲ. ಅದಾನಿ ಸಮೂಹದ ಹಲವು ಕಂಪನಿಗಳಿಂದ ಮಾಹಿತಿ ಪಡೆಯಲಾಗಿದೆ. ಪ್ರತಿಯೊಂದನ್ನೂ ಪ್ರತ್ಯೇಕವಾಗಿ ಖಚಿತಪಡಿಸಿಕೊಳ್ಳಬೇಕಿದೆ. ವಿದೇಶಿ ನಿಯಂತ್ರಣ ಸಂಸ್ಥೆಗಳಿಂದ ಹೆಚ್ಚುವರಿ ಮಾಹಿತಿಗಳನ್ನು ಕೇಳಲಾಗಿದೆ ಎಂದು ಅರ್ಜಿಯಲ್ಲಿ ತಿಳಿಸಿದೆ.

ಭಾನುವಾರ, ಏಪ್ರಿಲ್ 30, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 119 | ಪುಟ 26

www.prajavani.net /prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ನಮೀಬಿಯಾದಿಂದ ಕುನೊಗೆ ತಂದಿದ್ದ ಚೀತಾಗಳ ಸಾವಿನ ಸೂತಕದಲ್ಲಿ ವನ್ಯಜೀವಿ ವಸ್ತುಸ್ಥಿತಿ



ಗೋಲ್ಡನ್ ಗ್ಲೋಬ್ ರೇಸ್: ಅಭಿಲಾಷ್ ಐತಿಹಾಸಿಕ ಸಾಧನೆ 14
ನರೇಗಾ ಕೆಲಸಕ್ಕೆ ಕಾರ್ಮಿಕರ ಕೊರತೆ! 7
ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ತನಿಖೆಗೆ ಸಿದ್ಧ; ರಾಜೀನಾಮೆ ಕೊಡಲ್ಲ 14

ಪ್ರಜಾ ಮತ
ಜನತಂತ್ರದ ಹಬ್ಬ

ಕೈ – ತೆನೆಗೆ 'ಕಮಲ' ಸವಾಲು 5
ಕೈ– ಕೇಸರಿ ಕಲಿಗಳ ಜಂಗೀಕುಸ್ತಿ 5
ಉರಿಗೌಡ–ನಂಜೇಗೌಡ ಸ್ಮರಿಸಿದ ರಾಜನಾಥ ಸಿಂಗ್ 4
ಕುಸಿದ ಸಿದ್ದರಾಮಯ್ಯ; ರಕ್ಷಿಸಿದ ಅಂಗರಕ್ಷಕ 4

ಚಿನಕುರಳಿ
ಪ್ರಕಾಶ್ ಶೆಟ್ಟಿ

ನೆಲೆ ಕಸಿದ ನೀರಾವರಿ

ಜಮೀನು, ಮನೆ ಬಿಟ್ಟುಕೊಟ್ಟ ಸಂತ್ರಸ್ತರು: ದಾಖಲೆಗಳಿಗೆ ತಪ್ಪದ ಅಲೆದಾಟ

ಒಳನೋಟ
ಹಲವು ದಶಕದ ಹೋರಾಟ
ಪ್ರತಿಕ್ರಿಯಿಸಿ: 9606038256
feedback@prajavani.co.in

• ಚಿದಂಬರಪ್ರಸಾದ

ಹಾಸನ: 'ನಾಡಿಗೆ ಬೆಳಕು ನೀಡಲು ಬದುಕನ್ನೇ ಮುಡುಪಿಟ್ಟ ನಮ್ಮ ಜೊತೆ ಸರ್ಕಾರಗಳು ಚೆಲ್ಲಾಟವಾಡುತ್ತಿವೆ. ಐದು ದಶಕಗಳಲ್ಲಿ ಬಂದು ಹೋದ ಯಾವುದೇ ಸರ್ಕಾರಕ್ಕೆ ನಮ್ಮ ಸಮಸ್ಯೆಗಳನ್ನು ಬಗೆಹರಿಸಲು ಆಗಿಲ್ಲ. ರಾಜಕಾರಣಿಗಳ ಸುಳ್ಳು ಭರವಸೆಗಳಿಂದ ನಮ್ಮ ಬದುಕಂತೂ ಹಸನಾಗಿಲ್ಲ. ಜೀವಂತ ಶವದಂತೆ ಇದ್ದೇವೆ.'

–ಶರಾವತಿ ಯೋಜನೆಯ ಸಂತ್ರಸ್ತ ರಾಘವೇಂದ್ರ ಜೋಯಿಸ್ ಹೀಗೆ ಸಂಕಟದಿಂದ ನಿಟ್ಟುಸಿರಿಡುತ್ತಾರೆ.

'ಜಮೀನು ಮುಳುಗಡೆಯಾದಾಗ 8ನೇ ತರಗತಿಯಲ್ಲಿದ್ದೆ. ಆಗಲೇ ಮನೆ, ಜಮೀನು ಬಿಟ್ಟು ಬರಬೇಕಾಯ್ತು. ಈಗ ನನಗೆ 68 ವರ್ಷ ವಯಸ್ಸು. ಜಮೀನು ದಾಖಲೆ ಸರಿಪಡಿಸಲು ಜಿಲ್ಲಾಧಿಕಾರಿ ಕಚೇರಿವರೆಗೆ ಕಾಲ್ನಡಿಗೆ ಜಾಥಾ, ಕಂದಾಯ ಇಲಾಖೆ ಮುಂದೆ ಪ್ರತಿಭಟನೆ, ಲೋಕಾಯುಕ್ತಕ್ಕೆ ದೂರು ಸೇರಿದಂತೆ ಹಲವು ಪ್ರತಿಭಟನೆ ಮಾಡಿದರೂ ಪ್ರಯೋಜನವಾಗಿಲ್ಲ.'

ಬಾಗಲಕೋಟೆ ಜಿಲ್ಲೆಯ ಕಲಾದಗಿಯ ಸಂತ್ರಸ್ತರ ಬಡಾವಣೆ

ಈಗ ಸಾಗುವಳಿ ಮಾಡುತ್ತಿರುವ ರೈತರ ಜಾಗವನ್ನು ಅಳತೆ ಮಾಡಿಸಲಾಗುವುದು. ಅದಕ್ಕೆ ಅನುಗುಣವಾಗಿ ದಾಖಲೆಗಳನ್ನು ಸರಿಪಡಿಸಲಾಗುವುದು.
ಮೋಹನ್, ಹಾಸನ ಜಿಲ್ಲೆಯ ಆಲೂರಿನ ಹಿಂದಿನ ತಹಶೀಲ್ದಾರ್

ಸ್ಥಳಾಂತರ ಸಂದರ್ಭದಲ್ಲಿ ಗ್ರಾಮದ ಮುಖಂಡರಿಗೆ ಹಕ್ಕುಪತ್ರಗಳನ್ನು ನೀಡಲಾಗಿತ್ತು. ಅವು ನಮಗೆ ತಲುಪಿಲ್ಲ. ಈಗ ಮತ್ತೊಮ್ಮೆ ಪಡೆಯಲು ಅಲೆದಾಡಿಸುತ್ತಿದ್ದಾರೆ. ಸೌಲಭ್ಯಗಳಿಂದ ವಂಚಿತರಾಗಿದ್ದೇವೆ.
ಹಣಮಂತ ಮಾದರ, ಸಂತ್ರಸ್ತ, ಹಿರೇಹೊದ್ಲೂರ, ಬಾಗಲಕೋಟೆ ಜಿಲ್ಲೆ

ಹೇಮಾವತಿ ಜಲಾಶಯಕ್ಕಾಗಿ ಜಮೀನು ಕಳೆದುಕೊಂಡ ಜಿಲ್ಲೆಯ ರೈತ ಕುಟುಂಬಗಳಿಗೆ ಈವರೆಗೂ ಖಾತೆ, ಪಹಣಿ ಮಾಡಿಕೊಡದೇ ಅನ್ಯಾಯ ಮಾಡಲಾಗುತ್ತಿದೆ.
ಎಸ್.ಕೃಷ್ಣ, ಹೇಮಾವತಿ ಅಣೆಕಟ್ಟೆ ಸಂತ್ರಸ್ತರ ಹೋರಾಟ ಸಮಿತಿ ಅಧ್ಯಕ್ಷ

–ಹೇಮಾವತಿ ಜಲಾಶಯ ಯೋಜನೆಯಿಂದ ಜಮೀನು ಕಳೆದುಕೊಂಡು, ಸದ್ಯಕ್ಕೆ ಬ್ಯಾಬ ಫಾರೆಸ್ಟ್ 2ನೇ ಕಾಲೊನಿಯಲ್ಲಿ ವಾಸಿಸುತ್ತಿರುವ ಕೃಷ್ಣೇಗೌಡರ ಅಸಹಾಯಕತೆ ಇದು.

ನೀರಾವರಿ, ಜಲ ವಿದ್ಯುತ್ ಯೋಜನೆಗಾಗಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿರುವ ಸರ್ಕಾರಗಳು, ಯೋಜನೆಗಳಿಗಾಗಿ ಜಮೀನು, ಮನೆ ಬಿಟ್ಟುಕೊಟ್ಟ ಸಂತ್ರಸ್ತರನ್ನು ಮರೆತಿವೆ ಎಂಬುದಕ್ಕೆ ಈ ಇಬ್ಬರ ಮಾತುಗಳು ಕನ್ನಡಿ ಹಿಡಿಯುತ್ತವೆ.

'ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ಸಾಗುವಳಿದಾರರಿಗೆ 30 ವರ್ಷಗಳವರೆಗೆ ಲೀಸ್‌ಗೆ ಕೊಡಲು ಸರ್ಕಾರವೇ ಮುಂದಾಗಿದೆ. ಆದರೆ ಜಮೀನು, ಮನೆ ಬಿಟ್ಟುಕೊಟ್ಟ ನಮಗೆ, ಪರ್ಯಾಯ ಜಮೀನು, ನಿವೇಶನ ಕೊಡಿ ಎಂಬ ಕೂಗಿಗೆ ಅರ್ಧ ಶತಮಾನ ಆದ್ರೂ ಬೆಲೆಯೇ ಇಲ್ಲ'.

6ನೇ ಪುಟ ನೋಡಿ

'ರಾಷ್ಟ್ರೀಯ ಪುನರ್ವಸತಿ ನೀತಿ ಅನ್ವಯಿಸಿ'

'ರಾಷ್ಟ್ರೀಯ ಪುನರ್ವಸತಿ ನೀತಿಯಡಿ ಭೂಮಿ ಕಳೆದುಕೊಂಡವರಿಗೆ 2.5 ಎಕರೆ ನೀರಾವರಿ ಅಥವಾ ಐದು ಎಕರೆ ಒಣಬೇಸಾಯದ ಭೂಮಿ ನೀಡಬೇಕು' ಎನ್ನುತ್ತಾರೆ ಉತ್ತರ ಕರ್ನಾಟಕ ಸ್ವಾಭಿಮಾನ ವೇದಿಕೆ ರಾಜ್ಯ ಸಂಚಾಲಕ ಪ್ರಕಾಶ ಅಂತರಗೊಂಡ.

'ಪರಿಹಾರ ನೀಡಿ ಕೈತೊಳೆದು ಕೊಂಡಿದ್ದರಿಂದ ಸಂತ್ರಸ್ತರು ಕೂಲಿಗೆ ಹೋಗುವಂತಾಗಿದೆ. ನೀತಿ ಅಡಿ ಪ್ರಾಥಮಿಕ ಆರೋಗ್ಯ ಕೇಂದ್ರವಿರಬೇಕು. ಉದ್ಯೋಗ ಸೃಷ್ಟಿಸಬೇಕು. ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು. ಆದರೆ, ಯಾವುದೂ ಪಾಲನೆಯಾಗಿಲ್ಲ. ಪುನರ್ವಸತಿ ಕೇಂದ್ರಗಳಲ್ಲಿ ಮೂಲಸೌಲಭ್ಯಗಳಿಲ್ಲ. ರಸ್ತೆ, ಚರಂಡಿ, ಒಳಚರಂಡಿ ವ್ಯವಸ್ಥೆ ಕಲ್ಪಿಸಬೇಕು. ಕೆಲವೆಡೆ ಕುಡಿಯುವ ನೀರಿಗೂ ತೊಂದರೆ ಇದೆ' ಎನ್ನುತ್ತಾರೆ.

ಜೆಡಿಎಸ್ ಅಭ್ಯರ್ಥಿಗೆ ಆಮಿಷ ಪ್ರಕರಣ

ಉಮೇದುವಾರಿಕೆ ಅನರ್ಹ ಭೀತಿಯಲ್ಲಿ ಸೋಮಣ್ಣ?

ಪ್ರಜಾವಾಣಿ ವಾರ್ತೆ

ನವದೆಹಲಿ: ನಾಮಪತ್ರ ಹಿಂಪಡೆಯುವಂತೆ ಚಾಮರಾಜನಗರ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಮಲ್ಲಿಕಾರ್ಜುನಸ್ವಾಮಿ (ಆಲೂರು ಮಲ್ಲು) ಅವರಿಗೆ ಆಮಿಷ ಒಡ್ಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ, ವಸತಿ ಸಚಿವರೂ ಆಗಿರುವ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಚುನಾವಣಾ ಆಯೋಗ ಉಮೇದುವಾರಿಕೆಯಿಂದ ಅನರ್ಹಗೊಳಿಸುವ ಸಾಧ್ಯತೆಯೂ ಇದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಭ್ರಷ್ಟ ಆಚರಣೆಗಳ ಕಾರಣಕ್ಕೆ ಪ್ರಜಾಪ್ರತಿನಿಧಿ ಕಾಯ್ದೆ 1951ರ ಸೆಕ್ಷನ್ 123 ಅಡಿ ಈ ಕ್ಷೇತ್ರದ ಚುನಾವಣೆಯನ್ನು ರದ್ದುಗೊಳಿಸಬಹುದು ಹಾಗೂ ಕಾಯ್ದೆಯ ಸೆಕ್ಷನ್ 8 (1) (ಎ) ಅಡಿಯಲ್ಲಿ ಅಭ್ಯರ್ಥಿಯನ್ನು ಚುನಾವಣೆಯಿಂದ ಅನರ್ಹಗೊಳಿಸಬಹುದು ಎಂದು ಈ ಮೂಲಗಳು ತಿಳಿಸಿವೆ.

ಸೋಮಣ್ಣ ವಿರುದ್ಧ ಕೇಂದ್ರ ಆಯೋಗದ ನಿರ್ದೇಶನದ ಮೇರೆಗೆ ಚಾಮರಾಜನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ನಿನಗೆ ಗೂಟದ ಕಾರು ಕೊಡ್ತೀವಿ. ಮೊದಲು ನಾಮಪತ್ರ ವಾಪಸ್ ತಗೊ' ಎಂದು ಮಲ್ಲಿಕಾರ್ಜುನಸ್ವಾಮಿ ಅವರಿಗೆ ಸೋಮಣ್ಣ ಕರೆ ಮಾಡಿ ಹೇಳಿರುವ ಆಡಿಯೊ ತುಣುಕು ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡಿತ್ತು. ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದ ಆಯೋಗವು, ಈ ಬಗ್ಗೆ ತನಿಖೆ ನಡೆಸುವುದಾಗಿ ತಿಳಿಸಿತ್ತು. ಐಪಿಸಿ 1860ರ ಸೆಕ್ಷನ್ 171ಇ ಹಾಗೂ 171ಎಫ್ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಆರೋಪ ಸಾಬೀತಾದರೆ ಏನು ಶಿಕ್ಷೆ?

- **ಸೆಕ್ಷನ್ 171 ಇ (ಲಂಚ ಪಡೆದ ಆರೋಪ):** ಈ ಆರೋಪ ಸಾಬೀತಾದಲ್ಲಿ ಒಂದು ವರ್ಷದ ಸೆರೆವಾಸ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶ ಇದೆ
- **ಸೆಕ್ಷನ್ 171 ಎಫ್ (ಚುನಾವಣೆಯಲ್ಲಿ ಆಮಿಷ ಒಡ್ಡಿದ ಆರೋಪ):** ಈ ಆರೋಪ ಸಾಬೀತಾದಲ್ಲಿ ಆರೋಪಿಗೆ ಒಂದು ವರ್ಷದ ಸೆರೆವಾಸ ಅಥವಾ ದಂಡ ಅಥವಾ ಎರಡನ್ನೂ ವಿಧಿಸಲು ಅವಕಾಶ ಇದೆ

ಕಾಸಾಗ್ರ್ಯಾಂಡ್: ₹2 ಸಾವಿರ ಕೋಟಿ ಹೂಡಿಕೆಯ ಉದ್ದೇಶ

ಬೆಂಗಳೂರು: ಕಾಸಾಗ್ರ್ಯಾಂಡ್ ಸಂಸ್ಥೆಯು ನಗರದ ವಸತಿ ಮಾರುಕಟ್ಟೆಯಲ್ಲಿ ತನ್ನ ಹೆಜ್ಜೆ ಗುರುತುಗಳನ್ನು ಮತ್ತಷ್ಟು ಬಲಪಡಿಸುವ ಉದ್ದೇಶ ಹೊಂದಿದ್ದು, 2024ರ ವೇಳೆಗೆ ₹2 ಸಾವಿರ ಕೋಟಿ ಹೂಡಿಕೆ ಮಾಡಲು ಯೋಜನೆ ರೂಪಿಸಿದೆ.

ಇತ್ತೀಚೆಗೆ ಕನಕಪುರ ಮುಖ್ಯ ರಸ್ತೆಯಲ್ಲಿ ವಾಸ್ತುಶಿಲ್ಪದ ಮೇರುಕೃತಿ ಎಂದೇ ಬಿಂಬಿಸಲಾದ ಕಾಸಾಗ್ರ್ಯಾಂಡ್ 'ಝ್ಯೂಡೆನ್' ಯೋಜನೆಯನ್ನು ಅನಾವರಣಗೊಳಿಸಲಾಗಿದೆ. ಜೆಪಿ ನಗರದಿಂದ ಕೇವಲ 10 ನಿಮಿಷಗಳಲ್ಲಿ ಇಲ್ಲಿಗೆ ತಲುಪಬಹುದಾಗಿದೆ. ಹೊಚ್ಚ ಹೊಸ ಯೋಜನೆಗಳು ನಗರದ ಇತರ ಭಾಗಗಳಿಗೆ ಉತ್ತಮ ಸಂಪರ್ಕವನ್ನು ಹೊಂದಿವೆ. ಒಟ್ಟು 3 ಎಕರೆ 69 ಗುಂಟೆ ಆಸ್ತಿಯಲ್ಲಿ 1 ಎಕರೆ 25 ಗುಂಟೆ ಸೆಂಟ್ರಲ್ ಲ್ಯಾಂಡ್‌ಸ್ಕೇಪ್ ಪೋಡಿಯಂ ಅನ್ನು ನೀಡಲಾಗಿದೆ.

ಬೆಂಗಳೂರು ವಲಯದ ಕಾಸಾಗ್ರ್ಯಾಂಡ್‌ನ ನಿರ್ದೇಶಕರಾದ ಸತೀಶ್ ಸಿ.ಜಿ., ಮಾತನಾಡಿ, 'ಕಳೆದ ವರ್ಷ ರಿಯಲ್ ಎಸ್ಟೇಟ್ ಮಾರುಕಟ್ಟೆಯು ವಿಶೇಷವಾಗಿ ಬೆಂಗಳೂರು ಮಾರುಕಟ್ಟೆಯು ಉತ್ತಮವಾಗಿ ಕಾರ್ಯನಿರ್ವಹಿಸಿದೆ. ಈ ನಗರವು ವೈವಿಧ್ಯಮಯ ಮನೆ ಖರೀದಿದಾರರನ್ನು ಹೊಂದಿದೆ' ಎಂದರು.



ನಗರದ ಎಂ.ಜಿ. ರಸ್ತೆಯಲ್ಲಿ ಶನಿವಾರ ಮಳೆ ನೀರಿನಲ್ಲೇ ಸಂಚರಿಸುವಾಗ ದ್ವಿಚಕ್ರ ವಾಹನ ಸವಾರರೊಬ್ಬರು ಆಯತಪ್ಪಿದರು (ಎಡಚಿತ್ರ) ನಗರದ ಚರ್ಚ್ ಸ್ಟ್ರೀಟ್‌ನಲ್ಲಿ ಮಳೆ ಆರಂಭವಾಗುತ್ತಿದ್ದಂತೆ ಯುವತಿಯರಿಬ್ಬರು ಸುರಕ್ಷಿತ ಸ್ಥಳದತ್ತ ಓಡಿದರು – ಪ್ರಜಾವಾಣಿ ಚಿತ್ರಗಳು

ಮೋಡದ ವಾತಾವರಣ: ಜೋರು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶನಿವಾರ ಬೆಳಿಗ್ಗೆಯಿಂದ ಮೋಡ ಕವಿದ ವಾತಾವರಣ ಕಾಣಿಸಿಕೊಂಡು, ಹಲವೆಡೆ ಜೋರು ಮಳೆ ಸುರಿಯಿತು.

ಬೇಸಿಗೆ ಆರಂಭವಾದ ದಿನದಿಂದ ಬಿಸಿಲಿನ ಧಗೆ ಹೆಚ್ಚಿದೆ. ಕೆಲ ದಿನ ಸಂಜೆ ಮಾತ್ರ ಮೋಡ ಕವಿದು ಮಳೆ ಸುರಿದಿತ್ತು. ಆದರೆ, ಶನಿವಾರ ಮಧ್ಯಾಹ್ನವೇ ಮಳೆ ಜೋರಾಗಿತ್ತು. ಹಲವು ರಸ್ತೆಗಳಲ್ಲಿ ನೀರು ಹರಿಯುತ್ತಿದ್ದ ದೃಶ್ಯಗಳು ಕಂಡುಬಂದವು.

ಬಿಸಿಲಿನಿಂದ ರಕ್ಷಣೆ ಪಡೆಯಲು ಕೊಡೆ ಸಮೇತ ಮಾರುಕಟ್ಟೆಗೆ ಬಂದಿದ್ದ ಜನ, ಅದೇ ಕೊಡೆಯನ್ನು ಮಳೆಯಿಂದ ರಕ್ಷಿಸಿಕೊಳ್ಳಲು ಬಳಸಿದರು.

ವಾರಾಂತ್ಯದ ದಿನವಾಗಿದ್ದರಿಂದ ಕೆ.ಆರ್. ಮಾರುಕಟ್ಟೆ, ಚಿಕ್ಕಪೇಟೆ, ಮೆಜೆಸ್ಟಿಕ್, ಗಾಂಧಿನಗರ ಹಾಗೂ ಸುತ್ತಮುತ್ತಲ ಮಾರುಕಟ್ಟೆ ಪ್ರದೇಶಗಳಲ್ಲಿ ಜನರ ಓಡಾಟ ಹೆಚ್ಚಿತ್ತು. ಮಧ್ಯಾಹ್ನ ಮಳೆ ಸುರಿಯುತ್ತಿದ್ದ ಸಂದರ್ಭದಲ್ಲಿ, ಜನರು ಅಂಗಡಿಗಳಲ್ಲಿ ಆಶ್ರಯ ಪಡೆದಿದ್ದರು. ಮಳೆ ಕಡಿಮೆಯಾದ ನಂತರವೂ ರಸ್ತೆಯಲ್ಲಿ ನೀರು ನಿಂತುಕೊಂಡಿತ್ತು. ಅದರಲ್ಲೇ ಜನರು ಓಡಾಡಿದರು.

ನಾಗಸಂದ್ರ, ಜಾಲಹಳ್ಳಿ, ಪೀಣ್ಯ, ದಾಸರಹಳ್ಳಿ, ಯಶವಂತಪುರ, ರಾಜಾಜಿ ನಗರ, ಮಹಾಲಕ್ಷ್ಮಿಪುರ, ನಂದಿನಿ ಲೇಔಟ್, ವಿಜಯನಗರ, ರಾಜರಾಜೇಶ್ವರಿನಗರ, ಕೆಂಗೇರಿ, ದೀಪಾಂಜಲಿ ನಗರ, ಕಾಮಾಕ್ಷಿಪಾಳ್ಯ, ಚಾಮರಾಜಪೇಟೆ, ಮಲ್ಲೇಶ್ವರ, ಗಿರಿನಗರ, ಹನುಮಂತನಗರ, ಜಯನಗರ, ಬನಶಂಕರಿ, ಸುತ್ತಮುತ್ತ ಪ್ರದೇಶಗಳಲ್ಲಿ ಮಳೆ ಸುರಿಯಿತು. ಶಿವಾಜಿನಗರ, ಎಂ.ಜಿ.ರಸ್ತೆ, ಕೋರಮಂಗಲ, ಹಲಸೂರು, ಅಶೋಕ ನಗರ, ವಿವೇಕನಗರ, ಇಂದಿರಾನಗರ, ವಸಂತನಗರ, ಸಂಪಂಗಿರಾಮನಗರ ಹಾಗೂ ಇತರೆಡೆ ಮಳೆಯಾಯಿತು. ಕೆಲವೆಡೆ ಸಂಜೆಯೂ ಮಳೆ ಆಯಿತು. ಹಾನಿ ಬಗ್ಗೆ ಬಿಬಿಎಂಪಿ ಸಹಾಯವಾಣಿಗೆ ಯಾವುದೇ ದೂರುಗಳು ಬಂದಿಲ್ಲ.

'ನಗರದಲ್ಲಿ ಶನಿವಾರ ಉತ್ತಮ ಮಳೆಯಾಗಿದೆ. ಮುಂದಿನ ಕೆಲ ದಿನ ಮಳೆ ಮುಂದುವರಿಯುವ ಸಾಧ್ಯತೆ ಇದೆ' ಎಂದು ಹವಾಮಾನ ಇಲಾಖೆ ತಿಳಿಸಿದೆ.

ವಾರ್ತಾ ಇಲಾಖೆ ಅಧಿಕಾರಿಗಳಿಗೆ ಬೀಳ್ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೃತ್ತರಾದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಡಿ.ಪಿ. ಮುರಳೀಧರ್, ಉಪನಿರ್ದೇಶಕ ಕೆ.ಪಿ.ಪುಟ್ಟಸ್ವಾಮಯ್ಯ, ಆಡಳಿತಾಧಿಕಾರಿ ಲತಾ, ಸಿಬ್ಬಂದಿ ಧನರಾಜ್ ಅವರಿಗೆ ವಾರ್ತಾ ಇಲಾಖೆಯ ಬಳಗದಿಂದ ಶನಿವಾರ ಬೀಳ್ಕೊಡಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಿರ್ದೇಶಕ ಮುರುಳೀಧರ್, 'ಸರ್ಕಾರ ಮತ್ತು ಮಾಧ್ಯಮಗಳ ಕೊಂಡಿಯಾಗಿರುವ ಇಲಾಖೆಯಲ್ಲಿ 30 ವರ್ಷಕ್ಕೂ ಹೆಚ್ಚು ಕಾಲ ಕೆಲಸ ಮಾಡಿರುವುದು ಸಂತೋಷ ತಂದಿದೆ ಎಂದರು.

ಇಲಾಖೆಯಲ್ಲಿ ಬಹಳಷ್ಟು ಜನ ನಿವೃತ್ತಿಯಾಗುತ್ತಿದ್ದಾರೆ. ಆದರೆ, ನೇಮಕಾತಿ ಆಗುತ್ತಿಲ್ಲ. ಶೇ 50ರಷ್ಟು ಹುದ್ದೆಗಳು ಖಾಲಿ ಉಳಿದಿವೆ. ಸಿಬ್ಬಂದಿ ಕೊರತೆ ಇದ್ದರೆ ದಕ್ಷತೆಯಿಂದ ಕೆಲಸ ಮಾಡುವುದು ಕಷ್ಟ ಎಂದು ಹೇಳಿದರು.

ಉಪನಿರ್ದೇಶಕ ಕೆ.ಪಿ.ಪುಟ್ಟಸ್ವಾಮಯ್ಯ ಮಾತನಾಡಿ, 'ಮಾಧ್ಯಮ ನಿರ್ವಹಣೆ ಅತ್ಯಂತ ಸವಾಲಿನದ್ದು, ಎಲ್ಲರೊಂದಿಗೆ ಸಂಪರ್ಕ ಸಾಧಿಸಿ ಸಮರ್ಥವಾಗಿ ನಿರ್ವಹಿಸಿದ ತೃಪ್ತಿ ಇದೆ' ಎಂದರು,

ಇಲಾಖೆಯ ಉಪನಿರ್ದೇಶಕಿ ಪಲ್ಲವಿ ಹೊನ್ನಾಪುರ, ಮಂಜುನಾಥ ಡೊಳ್ಳಿನ್, ಬಿ.ಕೆ ರಾಮಲಿಂಗಪ್ಪ, ಹಿರಿಯ ಸಹಾಯಕ ನಿರ್ದೇಶಕ ಹಿಮಂತರಾಜು, ಸಹಾಯಕ ನಿರ್ದೇಶಕರಾದ ಬಿ.ಜಿ.ಪೂರ್ಣಿಮಾ, ಭಾಗ್ಯ, ಚೇತನಕುಮಾರ್ ಇದ್ದರು.

ನಗರದ ಪ್ರೆಸ್ ಕ್ಲಬ್ ನಲ್ಲಿ ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಶುಕ್ರವಾರ ಆಯೋಜಿಸಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಡಿ.ಪಿ.ಮುರುಳಿಧರ, ಕೆ.ಪಿ. ಪುಟ್ಟಸ್ವಾಮಿ, ಬಿ.ಎಸ್ ಲತಾ ಅವರನ್ನು ಸನ್ಮಾನಿಸಲಾಯಿತು. ಅಕಾಡೆಮಿ ಅಧ್ಯಕ್ಷ ಸದಾಶಿವ ಶೆಣೈ, ಮಾಜಿ ಅಧ್ಯಕ್ಷ ಸಿದ್ದರಾಜು, ವಿಠ್ಠಲ್ ಮೂರ್ತಿ, ಎಂ.ಎ.ಪೊನ್ನಪ್ಪ, ಪಿ. ರಾಮಯ್ಯ, ಎಚ್.ಬಿ. ದಿನೇಶ್, ರಮೇಶ್, ಅಕಾಡೆಮಿ ಕಾರ್ಯದರ್ಶಿ ಸಿ.ರೂಪಾ ಇದ್ದರು –ಪ್ರಜಾವಾಣಿ ಚಿತ್ರ

ನೈಋತ್ಯ ರೈಲ್ವೆ

ಅರ್ಜಿ ಅಧಿಸೂಚನೆ ಸಂಖ್ಯೆ: 210/Halt/SBC/05/2023

The undersigned on behalf of President of India invites sealed applications for appointment of Halt Agent from educated unemployed persons residing in and around the below mentioned Halt stations for issuing Unreserved tickets on Commission Basis for a period of five (05) years or till up-gradation of the station whichever is earlier.

ಕ್ರ.	ನಿಲ್ದಾಣ	ವಿಭಾಗ	ಕಾರ್ಯನಿರ್ವಹಿಸಲು ಪ್ರಾರಂಭವಾಗುವ ದಿನಾಂಕ
1	ದೊಡ್ಡಜಾಲ	ವೈಎನ್‌ಕೆ-ಕೆಕ್ಯೂರ್ಝೆಡ್	ಆಡಳಿತದಿಂದ ಸೂಚಿಸಲಾಗುವುದು
2	ಜನಘಟ್ಟ	ಸಿಬಿಪಿ-ಕೆಕ್ಯೂರ್ಝೆಡ್	

ಅರ್ಜಿಯನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ: 12-05-2023, 10.00 ಗಂಟೆಯಿಂದ. 16:00 ಗಂಟೆಗಳವರೆಗೆ

ಮಾಹಿತಿಗಾಗಿ ಲಾಗಾನ್ ಆಗಿ: www.swr.indianrailways.gov.in

ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಬೆಂಗಳೂರು

PUB/51/AAV/PRB/SWR/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. CAO/CN/BNC/7/2023 ದಿನಾಂಕ: 24.04.2023

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ	ಕಾಮಗಾರಿಗಳ ಹೆಸರು	ಅಂದಾಜು ಮೌಲ್ಯ
1	1) ಸಿಪಿಎಲ್ ಯಾರ್ಡ್‌ನಲ್ಲಿ ಪ್ರಸ್ತಾವಿತ ಪಿಎಫ್ ಶೆಲ್ಟರ್, ಎಫ್‌ಒಬಿ, ಪಿಎಫ್ ಕೆಲಸ ಮತ್ತು ಇತರ ಕೆಲಸ. 2) ಯಲಹಂಕ – ಪೆನುಕೊಂಡದಲ್ಲಿ SMWAVWA ನಿಲ್ದಾಣಗಳ ನಡುವೆ ಮೇಲ್ಮೈ ನೀರಿನ ಒಳಚರಂಡಿ ವ್ಯವಸ್ಥೆಗಳಿಗೆ ಸುಧಾರಣೆಗಳು ಮತ್ತು ಆರ್‌ಯುಬಿ ಸಂಖ್ಯೆ 313 ಮತ್ತು 336 ರ ದುರಸ್ತಿ. 3) ಹಿಂದೂಪುರದಲ್ಲಿ ಎಆರ್‌ಎಂಇ ಕೊಠಡಿ. (ಟೆಂಡರ್ ಉಲ್ಲೇಖ ಸಂಖ್ಯೆ: YNK-PKD-49).	ರೂ. 6,66,04,681/-
	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 12-05-2023, 15:00 ಗಂಟೆಯವರೆಗೆ	
2	ಹುಬ್ಬಳ್ಳಿ-ಚಿಕ್ಕಜಾಜೂರು ಡಬ್ಲಿಂಗ್ ಯೋಜನೆ: ಕರಜಗಿಯಲ್ಲಿ ಕ್ಯಾಂಟೀನ್ ಕಟ್ಟಡ, ಬ್ಯಾಲೆನ್ಸ್ ಸ್ಟೇಷನ್ ಕಟ್ಟಡ, ಹಾವೇರಿಯಲ್ಲಿ ಪ್ಲಾಟ್‌ಫಾರ್ಮ್ ಶೆಲ್ಟರ್ ಮತ್ತು ಫುಟ್ ಓವರ್ ಬ್ರಿಡ್ಜ್ ಮತ್ತು ದೇವರಗುಡ್ಡ, ಬ್ಯಾಡಗಿ, ಕಳಸೂರು ಮತ್ತು ಸವಣೂರು ನಿಲ್ದಾಣಗಳಲ್ಲಿ ಪ್ಲಾಟ್‌ಫಾರ್ಮ್ ಡಿಸ್ಪೆನ್ಸರ್ ಗೋಡೆ ನಿರ್ಮಾಣ. (ಟೆಂಡರ್ ಉಲ್ಲೇಖ ಸಂಖ್ಯೆ: UBL-JRU-63-R).	ರೂ. 7,74,59,069/-
	ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15-05-2023, 15:00 ಗಂಟೆಯವರೆಗೆ	

For details log on: www.ireps.gov.in

ಉಪ ಮುಖ್ಯ ಎಂಜಿನಿಯರ್ / ನಿರ್ಮಾಣ ಕಾರ್ಯಗಳು / ಬೆಂಗಳೂರು ಕಂಟೋನ್ಮೆಂಟ್

PUB/52/AAV/PRB/SWR/2023-24

S.W.Railways SWRRLY SWRRLY

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರ್ ಸೂಚನೆ ಸಂ. HE-TRD-2023-24-OT-01 ದಿನಾಂಕ: 21.04.2023

ಕ್ರ	ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
1	ಹುಬ್ಬಳ್ಳಿ ವಿಭಾಗದ ತೋರಣಗಲ್ಲು-ರಣಜಿತ್‌ಪುರ ವಿಭಾಗದಲ್ಲಿ ಸುರಂಗ ಪೋರ್ಟಲ್ ವಿಸ್ತರಣೆಯ ಮೂಲಕ ಸುರಂಗದ ಮುಂದೆ ಬೀಳುವ ಬಂಡೆಗಳಿಂದ ಟ್ರ್ಯಾಕ್‌ನ ರಕ್ಷಣೆಗಾಗಿ ಓಎಚ್‌ಇ ಮಾರ್ಪಾಡು.	ರೂ. 28,37,211.50

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22-05-2023, 11:00 ಗಂಟೆಯವರೆಗೆ

ಟೆಂಡರ್ ಸೂಚನೆ ಸಂ. HE-TRD-2023-24-OT-02 ದಿನಾಂಕ: 24.04.2023

ಕ್ರ	ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
2	1 ವರ್ಷಕ್ಕೆ ಹುಬ್ಬಳ್ಳಿ ವಿಭಾಗದ ಬಳ್ಳಾರಿಯಲ್ಲಿ ಎಫ್‌ಸಿಐ ಸೈಡಿಂಗ್, ಕುಡತಿನಿಯಲ್ಲಿ ಎಸಿಸಿ ಸೈಡಿಂಗ್, ಕುಡತಿನಿಯಲ್ಲಿ ಬಿಟಿಪಿಎಸ್ ಸೈಡಿಂಗ್, ತೋರಣಗಲ್ಲುನಲ್ಲಿ ಜೆಎಸ್‌ಡಬ್ಲ್ಯೂ ಸೈಡಿಂಗ್, ಕಾರಿಗನೂರಿನಲ್ಲಿ ಎಂಎಸ್‌ಪಿಎಲ್ ಸೈಡಿಂಗ್, ಗಿಣಿಗೇರಾದಲ್ಲಿ ಅಲ್ಟ್ರಾಟೆಕ್ ಸೈಡಿಂಗ್, ಗಿಣಿಗೇರಾದಲ್ಲಿ ಕಲ್ಯಾಣಿ ಸೈಡಿಂಗ್, ಗಿಣಿಗೇರಾದಲ್ಲಿ ಕಿರ್ಲೋಸ್ಕರ್ ಸೈಡಿಂಗ್, ಕೂಡಗಿಯಲ್ಲಿ ಎನ್‌ಟಿಪಿಸಿ ಸೈಡಿಂಗ್, ಹುಬ್ಬಳ್ಳಿಯಲ್ಲಿ ಎಫ್‌ಸಿಐ ಸೈಡಿಂಗ್, ಅಂಬೇವಾಡಿಯಲ್ಲಿ ಡಬ್ಲ್ಯುಸಿಪಿಎಂ ಸೈಡಿಂಗ್‌ನಲ್ಲಿ ಟಿಆರ್‌ಡಿ ನಿರ್ವಹಣೆ ಮತ್ತು ಟಿಆರ್‌ಡಿ ಸ್ವತ್ತುಗಳ ವೈಫಲ್ಯದ ಚಟುವಟಿಕೆಗಳ ಹೊರಗುತ್ತಿಗೆ.	ರೂ. 1,62,19,319.48/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 23-05-2023, 11:00 ಗಂಟೆಯವರೆಗೆ

ಟೆಂಡರ್ ಸೂಚನೆ ಸಂ. HE-TRD-2023-24-OT-03 ದಿನಾಂಕ: 21.04.2023

ಕ್ರ	ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
3	1 ವರ್ಷದ ಅವಧಿಗೆ ಹುಬ್ಬಳ್ಳಿ ವಿಭಾಗದ ಗದಗ-ಹೊಳೆ ಆಲೂರು, ವಿಜಯಪುರ-ವಂದಾಲ, ಘಟಪ್ರಭಾ-ಕುಡಚಿ, ತಿನ್ನೈ ಘಾಟ್-ಕ್ಯಾಸಲ್ ರಾಕ್ ಮತ್ತು ಕುಲೆಮ್-ಮಡಗಾಂವ್ ವಿಭಾಗಗಳಲ್ಲಿ ಟಿಆರ್‌ಡಿ ನಿರ್ವಹಣೆ ಮತ್ತು ಟಿಆರ್‌ಡಿ ಸ್ವತ್ತುಗಳ ವೈಫಲ್ಯದ ಚಟುವಟಿಕೆಗಳ ಹೊರಗುತ್ತಿಗೆ.	ರೂ. 4,80,03,317.26

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 22-05-2023, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಎಂಜಿನಿಯರ್ ಟಿಆರ್‌ಡಿ / ಹುಬ್ಬಳ್ಳಿ

PUB/53/AAV/PRB/SWR/2023-24

S.W.Railways SWRRLY SWRRLY

ನವೋದಯ ಪ್ರವೇಶ ಪರೀಕ್ಷೆಯಲ್ಲಿ ಅಕ್ರಮ: ಆರೋಪ

ಪ್ರಜಾವಾಣಿ ವಾರ್ತೆ

ಪಾವಗಡ: ಪಟ್ಟಣದಲ್ಲಿ ಶನಿವಾರ ನಡೆದ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆಯಲ್ಲಿ ಅಕ್ರಮ ನಡೆದಿದೆ ಎಂದು ಪೋಷಕರು ಆರೋಪಿಸಿದ್ದಾರೆ.

ಮೇಲ್ವಿಚಾರಕರು ತಮಗೆ ಬೇಕಿರುವವರಿಗೆ ಉತ್ತರ ಹೇಳಿಕೊಟ್ಟಿದ್ದಾರೆ. ವರ್ಷಗಟ್ಟಲೆ ಮಕ್ಕಳಿಗೆ ತರಬೇತಿ ಕೊಡಿಸಿ ಅವರ ಭವಿಷ್ಯಕ್ಕಾಗಿ ಶ್ರಮಿಸಿದ ಪೋಷಕರು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ ಎಂದು ಆರೋಪಿಸಿದರು. ಪರೀಕ್ಷೆ ಮುಗಿದ ಕೂಡಲೇ ತಮಗೆ ಅನ್ಯಾಯವಾಗಿದೆ ಎಂದು ಮಕ್ಕಳು ಪೋಷಕರೆದುರು ಕಣ್ಣೀರು ಹಾಕುತ್ತಿದ್ದರು.

'ಪಟ್ಟಣದ ಪ್ರೌಢಶಾಲೆಯಲ್ಲಿ ನಡೆದ ಪರೀಕ್ಷೆಯಲ್ಲಿ ಹಣ ನೀಡಿದವರಿಗೆ ಉತ್ತರ ಹೇಳಿಕೊಡಲಾಗಿದೆ. ಪರೀಕ್ಷೆ ಮುಗಿದು ಉತ್ತರ ಪತ್ರಿಕೆಗಳನ್ನು ಮೇಲ್ವಿಚಾರಕರಿಗೆ ಮರಳಿಸಿದ ನಂತರವೂ ಕೆಲ ಶಿಕ್ಷಕರು ಉತ್ತರ ಪತ್ರಿಕೆಗಳನ್ನು ತಿದ್ದಿದ್ದಾರೆ. ಇಂತಹ ಪರೀಕ್ಷೆ ನಡೆಸುವುದಾದರೂ ಏಕೆ?' ಎಂದು ಪ್ರಶ್ನಿಸಿದ ಪೋಷಕರು, ಮರು ಪರೀಕ್ಷೆ ನಡೆಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗೆ ದೂರು ನೀಡಿದರು.

ನಗರದಲ್ಲಿ ಇಂದು

ವಾಸವಿ ಜಯಂತಿ ಮಹೋತ್ಸವ: ಬೆಳಿಗ್ಗೆ 6.30ಕ್ಕೆ ಗಣಪತಿ ಪೂಜೆ, ಸ್ವಸ್ತಿ ಪುಣ್ಯಾಹ, ದೇವನಾಂದಿ, ನವಗ್ರಹ ಪೂಜೆ, ಕಲಶ ಸ್ಥಾಪನೆ, ಬೆಳಿಗ್ಗೆ 10ಕ್ಕೆ ಕನ್ನಿಕಾ ಪೂಜೆ, 10.30ಕ್ಕೆ ಪೂರ್ಣಾಹುತಿ, 11ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 1 ಭೋಜನ, ಸಂಜೆ 7ಕ್ಕೆ ಗಿರಿನಗರದ ರಾಜಬೀದಿಗಳಲ್ಲಿ ವಾಸವಿದೇವಿಯ ಮೆರವಣಿಗೆ, ಆಯೋಜನೆ: ಗಿರಿನಗರ ವಾಸವಿ ಕ್ಷೇತ್ರ, ಸ್ಥಳ: ವಾಸವಿ ದೇವಸ್ಥಾನದ ರಸ್ತೆ, ಗಿರಿನಗರ

ವಿ. ರಾಣಿ ಗೋವಿಂದರಾಜು ಅವರ ಕೃತಿಗಳ ಕುರಿತು ವಿಚಾರಗೋಷ್ಠಿ, ಕವಿಗೋಷ್ಠಿ: ವಿಷಯ ಮಂಡನೆ: ಆರ್. ವಾದಿರಾಜು, ಶಾಂತರಾಜು, ತುಕ್ಕಪ್ಪ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಕವಿಗೋಷ್ಠಿ ಅಧ್ಯಕ್ಷತೆ: ಪ್ರೇಮಾ ಸಿದ್ದರಾಜು, ಅತಿಥಿ: ಎಂ. ತಿಮ್ಮಯ್ಯ, ಉಪಸ್ಥಿತಿ: ವೂಡೇ ಪಿ. ಕೃಷ್ಣ, ಸ್ಥಳ: ಶೇಷಾದ್ರಿಪುರ ದತ್ತಿ ಸಭಾಂಗಣ, ಶೇಷಾದ್ರಿಪುರ ಕಾಲೇಜು, ಬೆಳಿಗ್ಗೆ 10

ಶ್ರೀಧರ ಬಳಗಾರ ಅವರ 'ವಿಸರ್ಗ', 'ಮಾಲತಿ ಮಾತಾಡಿದಳು', ಚಿಂತಾಮಣಿ ಕೊಡ್ಲೆಕೆರೆ ಅವರ 'ಭರತದ ಮಧ್ಯಾಹ್ನ' ಮತ್ತು ಎ.ಎನ್. ನಾಗರಾಜ್ ಅವರ 'ಆನಂದದ ಹುಡುಕಾಟದಲ್ಲಿ' ಪುಸ್ತಕಗಳು ಬಿಡುಗಡೆ: ಜೋಗಿ, ಅತಿಥಿಗಳು: ಎಚ್.ಎಸ್. ಸತ್ಯನಾರಾಯಣ, ದೇವು ಪತ್ತಾರ, ಆಯೋಜನೆ: ಅಂಕಿತ ಪುಸ್ತಕ, ಬುಕ್ ಬ್ರಹ್ಮ, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10.30

ಪ್ರೊ. ಬಿ. ಕೃಷ್ಣಪ್ಪ ಅವರ ಪರಿನಿಬ್ಬಾಣ ದಿನಾಚರಣೆ: ಚಾಲನೆ: ರವಿ ವರ್ಮಕುಮಾರ್, ಅಧ್ಯಕ್ಷತೆ: ಮಾವಳ್ಳಿ ಶಂಕರ್, ಅತಿಥಿಗಳು: ಇಂದೂಧರ ಹೊನ್ನಾಪುರ, ಎನ್. ವೆಂಕಟೇಶ್, ಗುರುಪ್ರಸಾದ್ ಕೆರಗೋಡು, ವಿ. ನಾಗರಾಜ್, ಡಿ.ಜಿ. ಸಾಗರ್, ಲಕ್ಷ್ಮೀನಾರಾಯಣ ನಾಗವಾರ, ಅಣ್ಣಯ್ಯ, ಅರ್ಜುನ ಭದ್ರೆ, ಎನ್. ಮುನಿಸ್ವಾಮಿ, ಎಂ. ಸೋಮಶೇಖರ್, ಜಿಗಣಿ ಶಂಕರ್, ಎಸ್.ಆರ್. ಕೊಲ್ಲೂರು, ಆಯೋಜನೆ: ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ, ಸ್ಥಳ: ಕಸ್ತೂರಬಾ ಹಾಲ್, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಬಿ. ಶಿವಮೂರ್ತಿ ಶಾಸ್ತ್ರಿ ಸ್ಮಾರಕ ದತ್ತಿ ಉಪನ್ಯಾಸ: 'ಪೂರ್ವದ ಅಪೂರ್ವ ಚಿಂತನೆಗಳು' ಕುರಿತು: ಎಚ್. ಶಶಿಕಲಾ, 'ಬೆಂಗಳೂರಿನ ಜೀವಜಲ ಸಂಪತ್ತು' ಕುರಿತು: ಸುರೇಶ್ ನೆಲಮಂಗಲ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

ಚೈತ್ರದ ಚಿಗುರು ಮಕ್ಕಳ ಸಾಂಸ್ಕೃತಿಕ ಬೇಸಿಗೆ ಶಿಬಿರ ಸಮಾರೋಪ: ಉದ್ಘಾಟನೆ: ಸತ್ಯಪ್ರಸಾದ್, ಅತಿಥಿ: ಸುಧಾ ನರಸಿಂಹರಾಜು, ಅಧ್ಯಕ್ಷತೆ: ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಾಂಸ್ಕೃತಿಕ ಭವನ, ಕೆಂಪೇಗೌಡನಗರ, ಸಂಜೆ 5

'ಕಲಾನುಭೂತಿ' ಕರ್ನಾಟಕ ಕಲಾ ವೈಭವ: ಅತಿಥಿಗಳು: ಮನೋರಮಾ ಬಿ.ಎನ್., ಶಾಲಿನಿ ವಿಠ್ಠಲ್, ಆಯೋಜನೆ: ನಿರ್ಮಿತಿ, ಸ್ಥಳ: ಎ.ಡಿ.ಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

'ಚೌ' ನೃತ್ಯೋತ್ಸವ: ಅತಿಥಿಗಳು: ತಪನ್ ಕುಮಾರ್ ಪಟ್ನಾಯಕ್, ರತ್ನಾ ಸುಪ್ರಿಯಾ ಶ್ರೀಧರನ್, ಸುನಿಲ್ ಕುಮಾರ್ ಸಿಂಗ್, ಮಧುಲಿತಾ ಮೊಹಪಾತ್ರ, ವಿಶ್ವಕರ್ಮ ಡಿ.ಆರ್.ಕೆ., ನಳಿನಿ ಗೋಪಾಲ್ ದುಬೆ, ಆಯೋಜನೆ: ಶ್ರೇಷ್ಠಾ ಹೆರಿಟೇಜ್ ಫೌಂಡೇಷನ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಸಂಜೆ 5

'ಸಾರಾ ಸಾಹಿತ್ಯ'ದ ಕುರಿತು ಚರ್ಚೆ: ಪ್ರಸ್ತಾವನೆ: ಜಯಲಕ್ಷ್ಮಿ ಪಾಟೀಲ, ಅಧ್ಯಕ್ಷತೆ: ಬಿ.ಟಿ. ಲಲಿತಾ ನಾಯಕ್, ಉಪನ್ಯಾಸ: ಎಚ್.ಎಸ್. ಸತ್ಯನಾರಾಯಣ, ಇಂದಿರಾ ಶರಣ, ಸಂಧ್ಯಾರಾಣಿ ಎನ್., ಆನಂದ್ ಕುಂಚನೂರ್, ಆಯೋಜನೆ: ಈ ಹೊತ್ತಿಗೆ, ಸ್ಥಳ: ಕಪ್ಪಣ್ಣ ಅಂಗಳ, ಜೆ.ಪಿ. ನಗರ, ಸಂಜೆ 5

ಗಂಗಮ್ಮ ಅವರ ಸ್ಮರಣಾರ್ಥ ದತ್ತಿ ಕಾರ್ಯಕ್ರಮ, ಬಸವ ಜಯಂತಿ: ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಎನ್.ಎಸ್. ಗೌರಿಶಂಕರ್, ರೇಣುಕಾ ಗೌರಿಶಂಕರ್, ಬಸವರಾಜಯ್ಯ, ಸುಧಾ ಬಸವರಾಜಯ್ಯ, ರಾಜೇಶ್ವರಿ, ನಿರಂಜನ್ ಪ್ರಸಾದ್, ಪ್ರಮೀಳಾ ಫಾಲನೇತ್ರ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ರಾಜಾಜಿನಗರ ಘಟಕ, ಸ್ಥಳ: ನಂ.687, 9ನೇ ಮುಖ್ಯರಸ್ತೆ, 3ನೇ ಹಂತ ಬಸವೇಶ್ವರನಗರ, ಸಂಜೆ 5.30

ಕಲಾ ವಿಕಸನ ಶಿಬಿರದ ಸಮಾರೋಪ ಸಮಾರಂಭ: ಅತಿಥಿಗಳು: ಸಂಜೀವ ಸುವರ್ಣ, ಅನಂತ್ ವಿಕ್ರಂ, ಮನೋಜವಂ ಆತ್ರೇಯ, ಸಚ್ಚಿದಾನಂದ ಮೂರ್ತಿ, ಆಯೋಜನೆ: ಕಲಾ ಕದಂಬ, ಸ್ಥಳ: ಮನೋರಂಜಿನಿ ಸಭಾಂಗಣ, ಸಿದ್ಧಿ ಗಣಪತಿ ದೇವಾಲಯ, ಕೆ.ಎಸ್.ಆರ್.ಟಿ.ಸಿ. ಬಡಾವಣೆ, ಚಿಕ್ಕಲ್ಲಸಂದ್ರ, ಸಂಜೆ 5.30

ರಾಮೋತ್ಸವ ವಿಶೇಷ

ಶ್ರೀರಾಮ ನವಮಿ ಸಂಗೀತೋತ್ಸವ: ಬೆಳಿಗ್ಗೆ 8ಕ್ಕೆ ವಸಂತೋತ್ಸವ, ಗಾಯನ: ಅಭಿಷೇಕ್ ರಘುರಾಮ್ ಮತ್ತು ತಂಡ, ಪಿಟೀಲು: ಎಚ್. ಎನ್. ಭಾಸ್ಕರ್, ಮೃದಂಗ: ಅನಂತಕೃಷ್ಣ, ತಬಲಾ: ಓಜಸ್ ಅಧಿಯಾ, ತ್ಯಾಗರಾಜ ವೈಭವಂ ನೃತ್ಯ ಪ್ರದರ್ಶನ: ರಕ್ಷಾ ಕಾರ್ತಿಕ್ ಮತ್ತು ತಂಡ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 6ರಿಂದ

ಅಭಿಷೇಕ್ ರಘುರಾಮ್



ಹೆಮ್ಮಿಗೆ ಎಸ್.ಪ್ರಶಾಂತ್

'ಪುರಂದರ' ಗಾನ ಲಹರಿ: ಗಾಯನ: ಹೆಮ್ಮಿಗೆ ಎಸ್. ಪ್ರಶಾಂತ್, ಪಿಟೀಲು: ಅಚ್ಯುತ್ ರಾವ್, ಮೃದಂಗ: ಅನಿರುದ್ಧ ಭಟ್, ಆಯೋಜನೆ: ಪುರಂದರದಾಸ ಮೆಮೋರಿಯಲ್ ಟ್ರಸ್ಟ್, ಸ್ಥಳ: ಪುರಂದರ ಮಂಟಪ, ಇಸ್ರೊ ಲೇಔಟ್, ದೇವರಕೆರೆ, ಸಂಜೆ 6ರಿಂದ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ, nagaradalli_indu@prajavani.co.in

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೆಮ್ಮೆಯ ಕ್ಷಣ

ಚೆನ್ನೈಯಲ್ಲಿ ಶನಿವಾರ ಅಧಿಕಾರಿಗಳ ತರಬೇತಿ ಅಕಾಡೆಮಿಯಲ್ಲಿ ತರಬೇತಿ ಪೂರ್ಣಗೊಳಿಸಿದ ಸೇನಾ ಕೆಡೆಟ್‌ಗೆ ಸಿಹಿ ಮುತ್ತು

ಅಫ್ಜಲ್ ದೋಷಿ: ಸಂಸತ್ ಸ್ಥಾನಕ್ಕೆ ಕುತ್ತು? 12

ಮಾನನಷ್ಟ ಮೊಕದ್ದಮೆ: ಮೇಲ್ಮನವಿ ವಜಾಗೆ ಗುಜರಾತ್ ಸರ್ಕಾರ ಮನವಿ

ಸ್ನಾನದ ಮನೆಯಲ್ಲಿ ಅಡಗಿದ್ದ ಚಿರತೆ ರಕ್ಷಣೆ 7

ರಾಹುಲ್ ಗಾಂಧಿ ಅರ್ಜಿಗೆ ವಿರೋಧ 12

ಮೋದಿ ಪ್ರಚಾರ; 'ಕಮಲ' ಸಡಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಹತ್ತು ದಿನಗಳು ಬಾಕಿ ಇರುವಾಗ ಪ್ರಚಾರ ಕಣಕ್ಕೆ ಧುಮುಕಿದ ಪ್ರಧಾನಿ ನರೇಂದ್ರ ಮೋದಿ ಅವರು, ಬಹಿರಂಗ ಸಭೆ ಹಾಗೂ ರೋಡ್ ಶೋ ನಡೆಸಿ ಬಿಜೆಪಿ ಪರ ಅಲೆ ಎಬ್ಬಿಸಲು ತಮ್ಮ ಪಕ್ಷದ ಕಾರ್ಯಕರ್ತರನ್ನು ಹುರಿದುಂಬಿಸಿದರು.

ವಿಧಾನಸಭೆ ಚುನಾವಣೆ ಘೋಷಣೆಯಾದ ಬಳಿಕ ಮೊದಲ ಬಾರಿಗೆ ಶನಿವಾರ ರಾಜ್ಯಕ್ಕೆ ಕಾಲಿಟ್ಟ ಅವರು, ಹೋದೆಡೆಯೆಲ್ಲ ಕಾಂಗ್ರೆಸ್ ಪಕ್ಷವನ್ನು ಗುರಿಯಾಗಿ ವಾಕ್ ಪ್ರಹಾರ ನಡೆಸಿದರು. ತಮ್ಮನ್ನೇ ಗುರಿಯಾಗಿಸಿ ಕಾಂಗ್ರೆಸ್

> ಕಾಂಗ್ರೆಸ್‌ನವರ ಬೈಗುಳಕ್ಕೆ ಲಿಂಗಾಯತರು ಈ ಸಲದ ವಿಧಾನಸಭೆ ಚುನಾವಣೆಯಲ್ಲಿ ತಕ್ಕ ಉತ್ತರ ನೀಡುವರು. ಮತಗಳ ಮೂಲಕ ತಕ್ಕ ಪಾಠ ಕಲಿಸುವರು
>
> **ನರೇಂದ್ರ ಮೋದಿ,** ಪ್ರಧಾನಿ

> ಪ್ರಚಾರದಲ್ಲಿ ಹಳಿ ತಪ್ಪಿರುವ ಬಿಜೆಪಿಯು ಪ್ರಧಾನಿಯವರಿಂದ ಆಮ್ಲಜನಕಕ್ಕಾಗಿ ಕಾದಿದೆ. ಆದರೆ, ಮೋದಿಯವರು ನಿಷ್ಫಲ ಪ್ರದರ್ಶನ ನೀಡಿದ್ದಾರೆ. ಹಲವು ಬಾರಿ ಮುಂದೂಡಿಕೆಯಾದ ನಂತರ ಶನಿವಾರ ಪ್ರಧಾನಿ ನಡೆಸಿದ ಪ್ರಚಾರ ಅತ್ಯಂತ ನೀರಸವಾಗಿತ್ತು
>
> **ರಣದೀಪ್ ಸಿಂಗ್ ಸುರ್ಜೇವಾಲಾ,** ರಾಜ್ಯ ಕಾಂಗ್ರೆಸ್ ಉಸ್ತುವಾರಿ

ನಾಯಕರು ಮಾಡುತ್ತಿರುವ ಟೀಕೆಗೆ ತಮ್ಮ ಧಾಟಿಯಲ್ಲಿ ಎದಿರೇಟು ಕೊಟ್ಟ ಅವರು, ವಿನಾಯಕ ದಾಮೋದರ ಸಾವರ್ಕರ್, ಬಿ.ಆರ್. ಅಂಬೇಡ್ಕರ್ ಅವರನ್ನು ಅವಮಾನಿಸಿದ ರೀತಿಯಲ್ಲಿಯೇ ಕಾಂಗ್ರೆಸ್ ತಮ್ಮನ್ನು ಗುರಿ ಮಾಡಿದೆ ಎಂದು ಹೇಳುವ ಮೂಲಕ ಭಾವನಾತ್ಮಕ ಎಳೆಗಳನ್ನು ಬಳಸಿ ಮತದಾರರನ್ನು ಸೆಳೆಯುವ ಯತ್ನವನ್ನೂ ಮಾಡಿದರು.

ಚುನಾವಣೆಗೆ 'ಈ ಬಾರಿ ನಿರ್ಧಾರ; ಬಹುಮತದ ಬಿಜೆಪಿ ಸರ್ಕಾರ' ಎಂಬ ಹೊಸ ಪರಿಭಾಷೆಯನ್ನು ಪ್ರಚಾರಕ್ಕೆ ಕೊಟ್ಟ ಮೋದಿ ಅವರು, 'ರಾಜ್ಯದ ಪ್ರತಿ ಮನೆಗೂ ಹೋಗಿ ಮೋದಿಯವರು ನಿಮ್ಮ ಆಶೀರ್ವಾದ ಬೇಡಿದ್ದಾರೆ' ಎಂಬುದಾಗಿ ತಿಳಿಸಿ ಎಂದು ಕಾರ್ಯಕರ್ತರಿಗೆ ಕರೆ ಕೊಟ್ಟರು.

ಮೊದಲ ದಿನವೇ ರಕ್ಷಣಾತ್ಮಕ ಆಟಕ್ಕೆ ದಾಂಗುಡಿಯಿಟ್ಟ ಅವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರು ಉಲ್ಲೇಖಿಸದೇ ಕಾಂಗ್ರೆಸ್‌ನ ಕಟು ಮಾತುಗಳಿಗೆ ಪ್ರತಿಕ್ರಿಯೆ ಕೊಡುವುದನ್ನು ಮರೆಯಲಿಲ್ಲ.

'ಕಾಂಗ್ರೆಸ್ ಕೆಸರು ಎರಚಿದಷ್ಟೂ ಕಮಲ ಅರಳಲಿದೆ' ಎಂದು ಅವರು ಕುಟುಕಿದರು.

ಬೀದರ್, ಬೆಳಗಾವಿ, ವಿಜಯಪುರದಲ್ಲಿ ಪ್ರಚಾರ ಸಭೆ ನಡೆಸಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಭಗವಂತ್ ಖೂಬಾ ಸಭೆಯಲ್ಲಿದ್ದರು.

ಬೆಂಗಳೂರಿನಲ್ಲಿ ರೋಡ್ ಶೋ ನಡೆಸಿದರು. ಮಾಗಡಿ ರಸ್ತೆಯ ನೈಸ್ ಜಂಕ್ಷನ್‌ನಿಂದ ರೋಡ್ ಶೋ ಆರಂಭಿಸಿದ ಅವರು, ಕೊಟ್ಟಿಗೆ ಪಾಳ್ಯದ ಸುಮನಹಳ್ಳಿ ಜಂಕ್ಷನ್‌ನಲ್ಲಿ ಅದನ್ನು ಪೂರ್ಣಗೊಳಿಸಿದರು. ಸಂಸದ ಡಿ.ವಿ. ಸದಾನಂದಗೌಡ ಹಾಗೂ ವಿಧಾನ ಪರಿಷತ್ತಿನ ಸದಸ್ಯ ಛಲವಾದಿ ನಾರಾಯಣಸ್ವಾಮಿ ಅವರಿಗಷ್ಟೇ ರೋಡ್ ಶೋಗಾಗಿ ಸಿದ್ಧಪಡಿಸಿದ್ದ ವಾಹನದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಪಕ್ಷದ ಅಭ್ಯರ್ಥಿಗಳು ಜನರೊಂದಿಗೆ ಇದ್ದರು. ರೋಡ್ ಶೋ ಆರಂಭವಾದ ಕೆಲ ದೂರ ಬಿಟ್ಟರೆ ವಾಹನ ಸಾಗಿದಾದ್ಯಂತ ಇಕ್ಕೆಲಗಳಲ್ಲಿ ಭಾರಿ ಜನಸ್ತೋಮವೇ ಸೇರಿತ್ತು.

4ನೇ ಪುಟ ನೋಡಿ

ಸಬ್ ಕಾ ಸಾಥ್...ಗೆ ಬಸವಣ್ಣ ಪ್ರೇರಣೆ

'ಬಸವಣ್ಣನವರ ಕಾಯಕ, ದಾಸೋಹ ಆಶಯಗಳನ್ನು ಈಡೇರಿಸಲು ಬಿಜೆಪಿ ಡಬಲ್ ಎಂಜಿನ್ ಸರ್ಕಾರ ಆದ್ಯತೆ ನೀಡಿದೆ. ಬಿಜೆಪಿಯ ವಿಚಾರಧಾರೆ ಆಗಿರುವ 'ಸಬ್ ಕಾ ಸಾಥ್, ಸಬ್ ಕಾ ವಿಕಾಸ್' ಎನ್ನುವ ಉಕ್ತಿಗೆ ಬಸವಣ್ಣನವರ ಆಶಯವೇ ಆಧಾರವಾಗಿದೆ' ಎಂದು ಮೋದಿ ಹೇಳಿದರು.



'ಜನರೆದುರು ತನ್ನ ಕಷ್ಟ ಹೇಳುವ ಪ್ರಧಾನಿ'

ನವಲಗುಂದ (ಧಾರವಾಡ ಜಿಲ್ಲೆ): 'ಜನರ ಕಷ್ಟಗಳನ್ನು ಆಲಿಸುವ ಹಲವು ಪ್ರಧಾನಿಗಳನ್ನು ನೋಡಿದ್ದೇನೆ. ಆದರೆ, ಜನರೆದುರು ತನ್ನ ಕಷ್ಟಗಳನ್ನು ಹೇಳಿಕೊಳ್ಳುವ ಪ್ರಧಾನಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ವಾಗ್ದಾಳಿ ನಡೆಸಿದರು.

ನವಲಗುಂದದಲ್ಲಿ ಶನಿವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಪ್ರಧಾನಿಯಾಗಿ ಕಾರ್ಯನಿರ್ವಹಿಸಿದ ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಪಿ.ವಿ. ನರಸಿಂಹ ರಾವ್, ಅಟಲ್ ಬಿಹಾರಿ ವಾಜಪೇಯಿ ಹಾಗೂ ಮನಮೋಹನ ಸಿಂಗ್ ಅವರನ್ನು ನೋಡಿದ್ದೇನೆ. ಇವರೆಲ್ಲ ಜನರ ಕಷ್ಟಗಳನ್ನು ಆಲಿಸುತ್ತಿದ್ದರು. ಅವರೆದುರು ಯಾವತ್ತೂ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುತ್ತಿರಲಿಲ್ಲ' ಎಂದು ಹೇಳಿದರು.

'ಪ್ರಧಾನಿ ಇರುವುದು ನಿಮ್ಮ ಕಷ್ಟಗಳನ್ನು ಆಲಿಸಲು ಮತ್ತು ಪರಿಹರಿಸಲು ಎನ್ನುವುದನ್ನು ನೆನಪಿಟ್ಟುಕೊಳ್ಳಿ. ತಮ್ಮ ಜವಾಬ್ದಾರಿಯನ್ನು ನಿಭಾಯಿಸದ, ನಿರ್ವಹಿಸದವರಿಗೆ ತಕ್ಕ ಪಾಠ ಕಲಿಸಿ. ನಿಮ್ಮ ಮತಕ್ಕಿರುವ ಶಕ್ತಿಯನ್ನು ತಿಳಿದುಕೊಳ್ಳಿ' ಎಂದರು.



4ನೇ ಪುಟ ನೋಡಿ

ಮೈತ್ರಿಗೆ ದೂತರು ಬಂದಿದ್ದು ನಿಜ ಎಂದ ದೇವೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೋತ್ತರ ಮೈತ್ರಿಗಾಗಿ ರಾಷ್ಟ್ರೀಯ ಪಕ್ಷಗಳ ದೂತರು ನನ್ನ ಬಳಿಯೇ ಬಂದಿದ್ದರು. ಅವರನ್ನು ಎಚ್.ಡಿ. ಕುಮಾರಸ್ವಾಮಿ ಬಳಿ ಕಳಿಸಿದ್ದೇನೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ತಿಳಿಸಿದರು.

ವಿಧಾನಸಭಾ ಚುನಾವಣೆ ಕುರಿತು 'ಪ್ರಜಾವಾಣಿ'ಗೆ ಶನಿವಾರ ನೀಡಿದ ಸಂದರ್ಶನದಲ್ಲಿ 'ರಾಷ್ಟ್ರೀಯ ಪಕ್ಷಗಳ ದೂತರು ಮೈತ್ರಿಗಾಗಿ ಬಂದಿದ್ದಾರೆ' ಎಂಬ ಕುಮಾರಸ್ವಾಮಿ ಅವರ ಹೇಳಿಕೆ ಕುರಿತ ಪ್ರಶ್ನೆಗೆ ಉತ್ತರಿಸಿದ ಅವರು, ಈ ವಿಷಯವನ್ನು ಖಚಿತಪಡಿಸಿದರು.

'ನನಗೆ ವಯಸ್ಸಾಗಿರುವ ಕಾರಣದಿಂದ ಆ ಹೊಣೆಗಾರಿಕೆ ಹೊರುವುದು ಕಷ್ಟ. ಆ ಜವಾಬ್ದಾರಿಯನ್ನು ಕುಮಾರಸ್ವಾಮಿ ಅವರಿಗೆ ನೀಡಿರುವೆ. ಕೆ. ಚಂದ್ರಶೇಖರ್ ರಾವ್, ಮಮತಾ ಬ್ಯಾನರ್ಜಿ ಸೇರಿದಂತೆ ಅನೇಕರು ಈ ವಿಚಾರದಲ್ಲಿ ಅವರೊಂದಿಗೆ ಸಂಪರ್ಕದಲ್ಲಿದ್ದಾರೆ' ಎಂದು ಹೇಳಿದರು.

ಮೈತ್ರಿಗಾಗಿ ಪ್ರಯತ್ನಿಸುತ್ತಿರುವವರ ಕುರಿತು ಖಚಿತ ಸುಳಿವು ಬಿಟ್ಟುಕೊಡದ ಅವರು, ತಮ್ಮ ಪಕ್ಷ ಸ್ವತಂತ್ರವಾಗಿಯೇ ಅಧಿಕಾರ ಹಿಡಿಯಲಿದೆ ಎಂದು ಸಂದರ್ಶನದುದ್ದಕ್ಕೂ ಪ್ರತಿಪಾದಿಸಿದರು.

'ದೇಶದಲ್ಲಿ ಒಟ್ಟು 543 ಲೋಕಸಭಾ ಕ್ಷೇತ್ರಗಳಿವೆ. ರಾಜ್ಯದಲ್ಲಿರುವುದು 28 ಕ್ಷೇತ್ರಗಳು ಮಾತ್ರ. ರಾಜ್ಯ ವಿಧಾನಸಭಾ ಚುನಾವಣೆಯ ಫಲಿತಾಂಶವನ್ನು ಲೋಕಸಭಾ ಚುನಾವಣೆಯ ದಿಕ್ಸೂಚಿ ಎನ್ನಲು ಸಾಧ್ಯವಿಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

'ಬಿಜೆಪಿ ಆಟ ಗೊತ್ತಿಲ್ಲ'

'ನಾನು ಯಾರ ಬಗ್ಗೆಯೂ ಲಘುವಾಗಿ ಮಾತನಾಡುವುದಿಲ್ಲ. ಸಿದ್ದರಾಮಯ್ಯ ಎದುರು ಯಡಿಯೂರಪ್ಪ ಅವರ ಮಗ ವಿಜಯೇಂದ್ರ ಅವರನ್ನು ಕಣಕ್ಕಿಳಿಸುವುದಾಗಿ ಬಿಜೆಪಿ ಹೇಳಿತ್ತು. ನಂತರ ಆ ನಿರ್ಧಾರದಿಂದ ಹಿಂದೆ ಸರಿಯಿತು. ಬೆಂಗಳೂರಿನಲ್ಲಿ ಸ್ಪರ್ಧಿಸಬೇಕಿದ್ದ ಸೋಮಣ್ಣ ಅವರಿಗೆ ಇಲ್ಲಿ ಟಿಕೆಟ್ ನಿರಾಕರಿಸಿ ವರುಣದಲ್ಲಿ ಕಣಕ್ಕಿಳಿಸಿದ್ದಾರೆ. ಬಿಜೆಪಿಯ ಆಂತರಿಕ ಆಟ ಏನಿದೆಯೋ ಗೊತ್ತಿಲ್ಲ' ಎಂದು ದೇವೇಗೌಡ ಹೇಳಿದರು.

ಸಿದ್ದರಾಮಯ್ಯ ಅವರನ್ನು ಸೋಲಿಸಲು ಬಿಜೆಪಿ ಮತ್ತು ಜೆಡಿಎಸ್ ಒಂದಾಗಿ ಪ್ರಯತ್ನಿಸುತ್ತಿವೆ ಎಂಬ ಆರೋಪ ಇದೆಯಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ವರುಣದಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಬದಲಿಸಿದ್ದು ಏಕೆ ಎಂಬ ಪ್ರಶ್ನೆಗೆ ಆ ಪಕ್ಷದ ಹೈಕಮಾಂಡ್ ಉತ್ತರಿಸಬೇಕು. ಏಕೆ ಮೊದಲು ಹಾಗೆ ಹೇಳಿ, ನಂತರ ಬದಲಾಯಿಸಿದರು ಎನ್ನುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಉತ್ತರ ಹೇಳಬೇಕು' ಎಂದರು.

ಸಂದರ್ಶನ 4

ಮಾರಾಮಾರಿ: ಬಿ.ಇ ವಿದ್ಯಾರ್ಥಿ ಕೊಲೆ

ಭಾಸ್ಕರ್ ಜೆಟ್ಟಿ

ಬೆಂಗಳೂರು: ಬಾಗಲೂರು ಠಾಣೆ ವ್ಯಾಪ್ತಿಯಲ್ಲಿರುವ ಕಾಲೇಜೊಂದರ ಉತ್ಸವದ ಸಂದರ್ಭದಲ್ಲಿ ವಿದ್ಯಾರ್ಥಿಗಳ ಎರಡು ಗುಂಪಿನ ನಡುವೆ ಮಾರಾಮಾರಿ ನಡೆದಿದ್ದು, ಬಿ.ಇ ವಿದ್ಯಾರ್ಥಿ ಭಾಸ್ಕರ್ ಜೆಟ್ಟಿ (25) ಎಂಬುವವರನ್ನು ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದೆ.

'ಗುಜರಾತ್‌ನ ಭಾಸ್ಕರ್, ಮೆಕ್ಯಾನಿಕಲ್ ಎಂಜಿನಿಯರಿಂಗ್ 4ನೇ ವರ್ಷದಲ್ಲಿ ವ್ಯಾಸಂಗ ಮಾಡುತ್ತಿದ್ದರು. ಇವರ ಕೊಲೆ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಶುಕ್ರವಾರ ರಾತ್ರಿ ಕಾಲೇಜು ಉತ್ಸವ ಆಯೋಜಿಸಲಾಗಿತ್ತು. ಭಾಸ್ಕರ್ ಅವರ ಸ್ನೇಹಿತರೊಬ್ಬರು ವೇದಿಕೆಯಲ್ಲಿ ಹಾಡು ಹೇಳುತ್ತ ನೃತ್ಯ ಮಾಡುತ್ತಿದ್ದರು. ಅದೇ ಸಂದರ್ಭದಲ್ಲಿ ಎದುರಾಳಿ ತಂಡದ ವಿದ್ಯಾರ್ಥಿಯೊಬ್ಬ, ವೇದಿಕೆ ಏರಿದ್ದ. ಮೈಕ್ ಕಸಿದುಕೊಳ್ಳಲು ಯತ್ನಿಸಿದ್ದ. ಅದೇ ವಿಚಾರವಾಗಿ ಜಗಳ ಶುರುವಾಗಿತ್ತು' ಎಂದು ತಿಳಿಸಿದರು.

'ಎರಡೂ ಗುಂಪಿನ ವಿದ್ಯಾರ್ಥಿಗಳು, ಪರಸ್ಪರ ಕೈ ಕೈ ಮಿಲಾಯಿಸಿದ್ದರು. ವಿದ್ಯಾರ್ಥಿಯೊಬ್ಬ ತನ್ನ ಬಳಿಯ ಚಾಕುವಿನಿಂದ ಭಾಸ್ಕರ್ ಅವರಿಗೆ ಇರಿದಿದ್ದ. ತೀವ್ರ ರಕ್ತಸ್ರಾವದಿಂದ ಭಾಸ್ಕರ್ ಮೃತಪಟ್ಟಿದ್ದಾರೆ' ಎಂದು ಹೇಳಿದರು.

'ಕೊಲೆ ಬಳಿಕ ಆರೋಪಿಗಳು ಪರಾರಿಯಾಗಿದ್ದಾರೆ. ಕಾಲೇಜಿನಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಸಂಗ್ರಹಿಸಿ ಪರಿಶೀಲಿಸಲಾಗುತ್ತಿದೆ' ಎಂದರು

ಮೆಜೆಸ್ಟಿಕ್ ಬಸ್ ನಿಲ್ದಾಣ: ಅಪರಾಧ ಪ್ರಕರಣ ಹೆಚ್ಚಳ • ಗಸ್ತು ತಿರುಗಲು ಪೊಲೀಸರ ನಿರ್ಲಕ್ಷ್ಯ

ಪ್ರಯಾಣಿಕರ ಭಯದ ತಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ ಹಾಗೂ ಸುತ್ತಮುತ್ತ ಅಪರಾಧ ಕೃತ್ಯಗಳು ಹೆಚ್ಚಾಗುತ್ತಿದ್ದು, ದೂರದ ಊರುಗಳಿಂದ ಬರುವ ಪ್ರಯಾಣಿಕರು ಭಯದಲ್ಲಿ ಓಡಾಡುವಂತಾಗಿದೆ. ಪೊಲೀಸರ ನಿರ್ಲಕ್ಷ್ಯ ಹಾಗೂ ಅಪರಾಧ ಪತ್ತೆ ತಡವಾಗುತ್ತಿರುವುದಕ್ಕೆ ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

ಹೊರ ರಾಜ್ಯ ಹಾಗೂ ಹೊರ ಜಿಲ್ಲೆಗಳಿಂದ ಬಸ್ಸಿನಲ್ಲಿ ರಾಜಧಾನಿಯತ್ತ ಬರುವ ಬಹುತೇಕ ಜನ, ಮೆಜೆಸ್ಟಿಕ್ ನಿಲ್ದಾಣದಲ್ಲಿ ಇಳಿಯುತ್ತಾರೆ. ಜೊತೆಗೆ, ದೇಶದ ಎಲ್ಲ ಭಾಗಕ್ಕೂ ಮೆಜೆಸ್ಟಿಕ್ ನಿಲ್ದಾಣದಿಂದ ಬಸ್ ವ್ಯವಸ್ಥೆ ಉತ್ತಮವಾಗಿದೆ. ಹೀಗಾಗಿ, ನಿತ್ಯವೂ ಲಕ್ಷಾಂತರ ಸಂಖ್ಯೆಯ ಜನರು ನಿಲ್ದಾಣಕ್ಕೆ ಬಂದು ಹೋಗುತ್ತಾರೆ.

ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳು, ನಿಲ್ದಾಣದಲ್ಲಿರುವ ಜನ ಸಂದಣಿ ನಡುವೆಯೇ ಕಳ್ಳತನ ಹಾಗೂ ಸುಲಿಗೆ ಕೃತ್ಯ ಎಸಗುತ್ತಿದ್ದಾರೆ. ಚಿನ್ನ ಹಾಗೂ ಹಣ ಕಳೆದುಕೊಂಡ ಜನ, ಉಪ್ಪಾರಪೇಟೆ ಠಾಣೆಗೆ ದೂರು ನೀಡುತ್ತಿದ್ದಾರೆ. ಎಫ್‌ಐಆರ್ ದಾಖಲಿಸಿಕೊಳ್ಳುತ್ತಿರುವ ಪೊಲೀಸರು, ತನಿಖೆ ಪ್ರಗತಿಯಲ್ಲಿರುವುದಾಗಿ ಹೇಳಿ ದಿನ ಕಳೆಯುತ್ತಿದ್ದಾರೆಂದು ಸಾರ್ವಜನಿಕರು ದೂರುತ್ತಿದ್ದಾರೆ.

ಗಸ್ತು ತಿರುಗಲು ಪೊಲೀಸರ ನಿರ್ಲಕ್ಷ್ಯ: 'ಮೆಜೆಸ್ಟಿಕ್‌ನಲ್ಲಿ ರೈಲು ಹಾಗೂ ಬಸ್ ನಿಲ್ದಾಣಗಳಿವೆ. ಇಂಥ ಸ್ಥಳಗಳಲ್ಲಿ ಅಪರಾಧ ಕೃತ್ಯ ಎಸಗುವ ದೊಡ್ಡ ತಂಡವಿದೆ. ಇದು ಗೊತ್ತಿದ್ದರೂ ಪೊಲೀಸರು ಮೌನವಾಗಿದ್ದಾರೆ. ನಿರಂತರವಾಗಿ ಗಸ್ತು ತಿರುಗಲು ನಿರ್ಲಕ್ಷ್ಯ ವಹಿಸುತ್ತಿದ್ದಾರೆ' ಎಂದು ಸ್ಥಳೀಯ ವ್ಯಾಪಾರಿ ಗಣೇಶ್ ಆರೋಪಿಸಿದರು.

ಬೆಂಗಳೂರು ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ

'ನಿತ್ಯವೂ ಬೆಳಿಗ್ಗೆ ಹಾಗೂ ರಾತ್ರಿ ನಿಲ್ದಾಣದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿರುತ್ತದೆ. ಇಂಥ ಸಂದರ್ಭದಲ್ಲೇ ಕೆಲವರು, ಚಿನ್ನಾಭರಣ ಇಟ್ಟುಕೊಂಡಿರುವ ಪ್ರಯಾಣಿಕರನ್ನು ಹಿಂಬಾಲಿಸಿ ಕಳವು ಮಾಡುತ್ತಿದ್ದಾರೆ. ಮತ್ತಷ್ಟು ಮಂದಿ, ಬಸ್ ಏರಿ ಯಾರ ಗಮನಕ್ಕೂ ಬಾರದಂತೆ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದಾರೆ. ಚಿನ್ನ ಹಾಗೂ ಹಣ ಕಳೆದುಕೊಂಡ ಪ್ರಯಾಣಿಕರ ಗೋಳು ಹೇಳತೀರದು' ಎಂದರು.

ಒಂದೇ ತಿಂಗಳಿನಲ್ಲಿ ಹಲವು ಪ್ರಕರಣ: 'ನಿಲ್ದಾಣಕ್ಕೆ ಭೇಟಿ ನೀಡಿದ್ದ ಪ್ರಯಾಣಿಕರ ಚಿನ್ನ ಹಾಗೂ ಇತರೆ ವಸ್ತುಗಳು ಕಳುವಾದ ಬಗ್ಗೆ ಒಂದೇ ತಿಂಗಳಿನಲ್ಲಿ ಹಲವು ಪ್ರಕರಣಗಳು ನಡೆದಿವೆ. ಕೆಲವರು ದೂರು ನೀಡಿದ್ದಾರೆ. ಮತ್ತಷ್ಟು ಮಂದಿ, ದೂರು ನೀಡಲು ಹಿಂದೇಟು ಹಾಕುತ್ತಿದ್ದಾರೆ' ಎಂದು ನಿಲ್ದಾಣದ ವ್ಯಾಪಾರಿಯೊಬ್ಬರು ಹೇಳಿದರು.

'ಪವನ್ ಎಂಬುವವರು ಹೈದರಾಬಾದ್‌ಗೆ ಹೋಗಲು ಏಪ್ರಿಲ್ 12ರಂದು ನಿಲ್ದಾಣಕ್ಕೆ ಬಂದಿದ್ದರು. ಚಿನ್ನಾಭರಣವನ್ನು ಚಿಕ್ಕ ಪೊಟ್ಟಣದಲ್ಲಿ ಹಾಕಿ, ಜೇಬಿನಲ್ಲಿಟ್ಟುಕೊಂಡಿದ್ದರು. ಮೊಬೈಲ್ ಸಹ ಜೊತೆಗಿತ್ತು. ಅವರ ಗಮನ ಬೇರೆಡೆ ಸೆಳೆದಿದ್ದ ಆರೋಪಿಗಳು, ಜೇಬಿನಲ್ಲಿದ್ದ ₹1.45 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಮೊಬೈಲ್ ಕದ್ದೊಯ್ದಿದ್ದಾರೆ' ಎಂದರು.

'ಶಿಕ್ಷಕ ಶಿವಾನಂದ ಎಂಬುವರು ಏಪ್ರಿಲ್ 13ರಂದು ಹುಮನಾಬಾದ್‌ನಿಂದ ಬೆಂಗಳೂರಿಗೆ ಬಸ್‌ನಲ್ಲಿ ಬಂದಿದ್ದರು. ಮೆಜೆಸ್ಟಿಕ್ ಬಳಿ ಬಸ್ಸಿನಿಂದ ಇಳಿದಿದ್ದರು. ಅವರ ಕೊರಳಲ್ಲಿದ್ದ ₹ 1 ಲಕ್ಷ ಮೌಲ್ಯದ 20 ಗ್ರಾಂ ಚಿನ್ನದ ಸರ ಇರಲಿಲ್ಲ. ಚಿನ್ನದ ಸರ ಕಿತ್ತೊಯ್ದ ಬಗ್ಗೆ ಅವರು ಠಾಣೆಗೆ ದೂರು ನೀಡಿದ್ದಾರೆ' ಎಂದು ಅವರು ಹೇಳಿದರು.

ಹೆಸರಿಗಷ್ಟೇ ಪೊಲೀಸ್ ಹೊರ ಠಾಣೆ: 'ಕಳ್ಳತನ ಹಾಗೂ ಸುಲಿಗೆ ಪ್ರಕರಣಗಳು ಹೆಚ್ಚುತ್ತಿರುವುದರಿಂದ ನಿಲ್ದಾಣದಲ್ಲಿ ಸುತ್ತಾಡಲು ಜನ ಭಯಪಡುತ್ತಿದ್ದಾರೆ. ನಿಲ್ದಾಣದಲ್ಲಿ ಹೆಸರಿಗಷ್ಟೇ ಪೊಲೀಸ್ ಹೊರ ಠಾಣೆ ತೆರೆಯಲಾಗಿದೆ' ಎಂದು ಪ್ರಯಾಣಿಕರು ಹೇಳಿದರು.

'ಕರ್ತವ್ಯಕ್ಕೆ ನಿಯೋಜನೆಗೊಳ್ಳುವ ಸಿಬ್ಬಂದಿ, ಹೊರ ಠಾಣೆಯಲ್ಲಿ ಇರುವುದಿಲ್ಲ. ನಿಲ್ದಾಣದಲ್ಲಿರುವ ಅಂಗಡಿಯಿಂದ ಅಂಗಡಿ ಸುತ್ತಾಡಿ 'ಕೈ ಬೀಸಿ' ಮಾಡಿಕೊಂಡು ಕರ್ತವ್ಯ ಮುಗಿಸುತ್ತಿದ್ದಾರೆ. ಅತ್ತ ನಿಲ್ದಾಣದಲ್ಲಿ ಅಪರಾಧ ಕೃತ್ಯಗಳು ನಡೆದರೂ ಅದರ ತಡೆಗೆ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದಲೇ ಅಪರಾಧ ಕೃತ್ಯಗಳು ಹೆಚ್ಚುತ್ತಿವೆ. ಪೊಲೀಸ್ ಹಿರಿಯ ಅಧಿಕಾರಿಗಳು, ನಿಲ್ದಾಣದಲ್ಲಿ ಭದ್ರತೆಗೆ ಕ್ರಮ ಕೈಗೊಳ್ಳಬೇಕು. ಕಳ್ಳತನ, ಸುಲಿಗೆ ಪ್ರಕರಣದ ಆರೋಪಿಗಳನ್ನು ಪತ್ತೆ ಮಾಡಿ ಕಠಿಣ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

'ಕೆಎಸ್‌ಆರ್‌ಟಿಸಿ, ಬಿಎಂಟಿಸಿಗೆ ಪತ್ರ'

'ನಿಲ್ದಾಣದಲ್ಲಿ ಅಪರಾಧ ತಡೆಗೆ ಆದ್ಯತೆ ನೀಡಲಾಗಿದೆ. ನಿಲ್ದಾಣದ ಎಲ್ಲ ಕಡೆ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸುವಂತೆ ಹಾಗೂ ಇತರೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವಂತೆ ಕೆಎಸ್‌ಆರ್‌ಟಿಸಿ– ಬಿಎಂಟಿಸಿ ಅಧಿಕಾರಿಗಳಿಗೆ ಹಲವು ಬಾರಿ ಪತ್ರ ಬರೆಯಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಬಸ್ ನಿಲ್ದಾಣದ ಜಾಗ, ಕೆಎಸ್‌ಆರ್‌ಟಿಸಿ–ಬಿಎಂಟಿಸಿಗೆ ಸೇರಿದ್ದು. ನಿಗಮದ ಭದ್ರತಾ ಸಿಬ್ಬಂದಿಯೂ ಇದ್ದಾರೆ. ಅವರ ಜೊತೆ ಪೊಲೀಸರು ನಿತ್ಯವೂ ಗಸ್ತು ತಿರುಗುತ್ತಿದ್ದಾರೆ. 112 ನಿಯಂತ್ರಣ ಕೊಠಡಿಗೆ ಕರೆ ಬಂದ ಕೂಡಲೇ ಸ್ಪಂದಿಸಲಾಗುತ್ತಿದೆ' ಎಂದು ತಿಳಿಸಿದರು.

'ಹೆಚ್ಚಿನ ಪ್ರಯಾಣ ದರ ವಸೂಲಿ'

'ನಿಲ್ದಾಣದಲ್ಲಿರುವ ಆಟೊ ಚಾಲಕರು, ಪ್ರಯಾಣಿಕರಿಂದ ಹೆಚ್ಚಿನ ದರ ವಸೂಲಿ ಮಾಡುತ್ತಿದ್ದಾರೆ. ಅದನ್ನು ಪ್ರಶ್ನಿಸಿದರೆ, ಪ್ರಯಾಣಿಕರ ಜೊತೆ ಜಗಳ ತೆಗೆಯುತ್ತಿದ್ದಾರೆ. ಈ ಬಗ್ಗೆಯೂ ಹೆಚ್ಚಿನ ದೂರುಗಳಿದ್ದು, ಪೊಲೀಸರು ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಪ್ರಯಾಣಿಕ ರಮೇಶ್ ಹೇಳಿದರು.

ಸುದ್ದಿ 2 ನಿಮಿಷ

ತಲೆಗೆ ಕಲ್ಲಿನಿಂದ ಹೊಡೆದು ಕೊಲೆ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಅರುಣ್ (22) ಎಂಬುವವರನ್ನು ತಲೆಗೆ ಕಲ್ಲಿನಿಂದ ಹೊಡೆದು ಕೊಲೆ ಮಾಡಲಾಗಿದ್ದು, ಈ ಸಂಬಂಧ ಆರೋಪಿ ನಂದೀಶ್ ಸೇರಿ ಐವರನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿ ಅರುಣ್, ಶಾಮಿಯಾನ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ನಂದೀಶ್ ಹಾಗೂ ಇತರರು, ಮಾದನಾಯಕನಹಳ್ಳಿ ಬಳಿ ಇರುವ ಕಾರ್ಯಕ್ರಮ ನಿರ್ವಹಣೆ ಏಜೆನ್ಸಿಯೊಂದರ ಉದ್ಯೋಗಿಗಳು' ಎಂದು ಪೊಲೀಸರು ಹೇಳಿದರು.

'ಅರುಣ್ ಅವರು ಸ್ನೇಹಿತ ಸಾಗರ್ ಜೊತೆ ಶುಕ್ರವಾರ ರಾತ್ರಿ ಚಿಕ್ಕಬಾಣಾವರ ಬಳಿಯ ಕಲ್ಯಾಣ ಮಂಟಪವೊಂದರ ಬಳಿ ಹೋಗಿದ್ದರು. ಮಂಟಪ ಎದುರು ಬೈಕ್ ನಿಲ್ಲಿಸಿದ್ದರು. ಅದೇ ಸ್ಥಳದಲ್ಲಿ ನಂದೀಶ್ ಹಾಗೂ ಸ್ನೇಹಿತರು ಇದ್ದರು. ಅರುಣ್ ಹಾಗೂ ಸಾಗರ್, ಸಿಗರೇಟ್ ಸೇದುವುದಕ್ಕಾಗಿ ನಂದೀಶ್ ಬಳಿ ಬೆಂಕಿ ಪೊಟ್ಟಣ ಪಡೆದಿದ್ದರು.'

'ಪಾನಮತ್ತರಾಗಿದ್ದ ಅರುಣ್, ಸಿಗರೇಟ್ ಸೇದುತ್ತ ನಂದೀಶ್ ಹಾಗೂ ಇತರರನ್ನು ನಿಂದಿಸಿದ್ದರು. ಅದೇ ವಿಚಾರಕ್ಕೆ ಗಲಾಟೆ ಶುರುವಾಗಿತ್ತು. ಸಿಟ್ಟಾಗಿದ್ದ ನಂದೀಶ್ ಹಾಗೂ ಇತರರು, ಅರುಣ್ ಮೇಲೆ ಹಲ್ಲೆ ಮಾಡಿದ್ದರು. ಕೆಳಗೆ ಬೀಳುತ್ತಿದ್ದಂತೆ ತಲೆಗೆ ಕಲ್ಲಿನಿಂದ ಹಲವು ಬಾರಿ ಹೊಡೆದಿದ್ದರು. ತೀವ್ರ ರಕ್ತಸ್ರಾವವಾಗಿ ಅರುಣ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

'ಸ್ಥಳೀಯರು ಮಾಹಿತಿ ನೀಡುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹ ಸಾಗಿಸಲಾಯಿತು. ಪ್ರತ್ಯಕ್ಷದರ್ಶಿಗಳ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದರು.

ಮಾರ್ಗದರ್ಶಿ ಚಿಟ್ ಫಂಡ್ ಶಾಖೆಗಳಲ್ಲಿ ಸಿಐಡಿ ಶೋಧ

ಮಂಗಳಗಿರಿ (ಆಂಧ್ರ ಪ್ರದೇಶ) (ಪಿಟಿಐ): ಹಣಕಾಸು ಅಕ್ರಮ ಆರೋಪಗಳ ಹಿನ್ನೆಲೆಯಲ್ಲಿ ಮಾರ್ಗದರ್ಶಿ ಚಿಟ್ ಫಂಡ್ಸ್ ಪ್ರೈವೇಟ್ ಲಿಮಿಟೆಡ್‌ನ (ಎಂಸಿಎಫ್‌ಪಿಎಲ್) 37 ಶಾಖೆಗಳ ಕಚೇರಿಗಳಲ್ಲಿ ಆಂಧ್ರಪ್ರದೇಶ ಸಿಐಡಿ ಅಧಿಕಾರಿಗಳು ಶನಿವಾರ ಶೋಧ ನಡೆಸಿದ್ದಾರೆ.

'ಸಂಸ್ಥೆ ವಿರುದ್ಧ ನಡೆಯುತ್ತಿರುವ ತನಿಖೆ ಭಾಗವಾಗಿ ಶೋಧ ನಡೆಸಲಾಗಿದೆ. ಹಣ ವಹಿವಾಟಿಗೆ ಸಂಬಂಧಿಸಿದ ದಾಖಲೆಪತ್ರಗಳಿಗಾಗಿ ಶೋಧ ಕೈಗೊಳ್ಳಲಾಗಿತ್ತು' ಎಂದು ಸಿಐಡಿ ಮುಖ್ಯಸ್ಥ ಸಂಜಯ್ ತಿಳಿಸಿದ್ದಾರೆ

ಪ್ರಜಾವಾಣಿ@75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಸುಧಾ, ಮಯೂರ ಓದಿರಿ

ತಾಯಿ ಕೊಂದು ಮಗಳು ಆತ್ಮಹತ್ಯೆ?

ಪ್ರಜಾವಾಣಿ ವಾರ್ತೆ

ಜರೀನಾ ತಾಜ್

ರಿಜಿಯಾ ಸುಲ್ತಾನ್

ಅಪರಾಧ ಸುದ್ದಿ

ಬೆಂಗಳೂರು: ಬಂಡೇಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ಜರೀನಾ ತಾಜ್ (55) ಹಾಗೂ ಮಗಳು ರಿಜಿಯಾ ಸುಲ್ತಾನ್ (31) ಎಂಬುವವರು ಅನುಮಾನಾಸ್ಪದ ರೀತಿಯಲ್ಲಿ ಮೃತಪಟ್ಟಿದ್ದು, ತಾಯಿಯನ್ನು ಕೊಂದು ಮಗಳು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.

'ಮುನೇಶ್ವರನಗರ 1ನೇ ಮುಖ್ಯರಸ್ತೆಯಲ್ಲಿರುವ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ತಾಯಿ–ಮಗಳು ವಾಸವಿದ್ದರು. ಫ್ಲ್ಯಾಟ್‌ನ ಕೊಠಡಿಯಲ್ಲಿ ಜರೀನಾ ತಾಜ್ ಮೃತದೇಹ ಪತ್ತೆಯಾಗಿದೆ. ಇದರ ಸಮೀಪದಲ್ಲಿಯೇ ನೇಣು ಬಿಗಿದ ಸ್ಥಿತಿಯಲ್ಲಿ ರಿಜಿಯಾ ಸುಲ್ತಾನ್ ಮೃತದೇಹವಿತ್ತು' ಎಂದು ಪೊಲೀಸರು ಹೇಳಿದರು.

'ಜರೀನಾ ಅವರನ್ನು ಉಸಿರುಗಟ್ಟಿಸಿ ಕೊಂದು ರಿಜಿಯಾ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ. ಮೃತದೇಹಗಳನ್ನು ಆಸ್ಪತ್ರೆಗೆ ಸಾಗಿಸಿ ಮರಣೋತ್ತರ ಪರೀಕ್ಷೆ ಮಾಡಿಸಲಾಗಿದೆ. ವರದಿ ಬಂದ ನಂತರ ಸಾವಿನ ಬಗ್ಗೆ ನಿಖರ ಮಾಹಿತಿ ತಿಳಿಯಲಿದೆ' ಎಂದು ವಿವರಿಸಿದರು.

ಪತಿ ತೊರೆದಿದ್ದ ರಿಜಿಯಾ: 'ಕಾಲ್‌ಸೆಂಟರ್ ಉದ್ಯೋಗಿಯಾಗಿದ್ದ ರಿಜಿಯಾ, ಹಿಂದೂ ಯುವಕನನ್ನು ಪ್ರೀತಿಸಿ ಅಂತರ ಧರ್ಮೀಯ ಮದುವೆಯಾಗಿದ್ದರು. ಕೆಲ ವರ್ಷ ಚೆನ್ನಾಗಿದ್ದ ದಂಪತಿ ನಡುವೆ ಇತ್ತೀಚೆಗೆ ಕಲಹ ಶುರುವಾಗಿತ್ತು. ಪತಿ ತೊರೆದಿದ್ದ ರಿಜಿಯಾ, ತಾಯಿ ಜೊತೆ ವಾಸವಿದ್ದರು' ಎಂದು ಪೊಲೀಸರು ಹೇಳಿದರು.

'ರಿಜಿಯಾ ಹಾಗೂ ಜರೀನಾ ತಾಜ್ ಇಬ್ಬರೂ ಮಾನಸಿಕವಾಗಿ ನೊಂದಿದ್ದರು. ಅಕ್ಕ–ಪಕ್ಕದ ನಿವಾಸಿಗಳ ಜೊತೆಯೂ ಹೆಚ್ಚು ಬೆರೆಯುತ್ತಿರಲಿಲ್ಲ' ಎಂದು ತಿಳಿಸಿದರು.

ಕೆಲಸಕ್ಕೆ ಗೈರಾಗಿದ್ದಕ್ಕೆ ಅನುಮಾನ: 'ರಿಜಿಯಾ ಅವರು ಮೂರು ದಿನಗಳಿಂದ ಕೆಲಸಕ್ಕೆ ಹೋಗಿರಲಿಲ್ಲ. ಅನುಮಾನಗೊಂಡಿದ್ದ ಕಚೇರಿ ಸಿಬ್ಬಂದಿ, ರಿಜಿಯಾ ಪತಿಗೆ ಕರೆ ಮಾಡಿ ವಿಚಾರಿಸಿದ್ದರು. ಪತಿ ಫ್ಲ್ಯಾಟ್ ಬಳಿ ಹೋಗಿ ನೋಡಿದಾಗಲೇ, ಸಾವಿನ ವಿಷಯ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

'ಜರೀನಾ ಹಾಗೂ ರಿಜಿಯಾ ಇಬ್ಬರೇ ಮನೆಯಲ್ಲಿದ್ದರು. ತಾನು ಇಲ್ಲದಿದ್ದರೆ, ತಾಯಿಯನ್ನು ನೋಡಿಕೊಳ್ಳುವವರು ಯಾರು ಎಂಬ ಚಿಂತೆ ರಿಜಿಯಾ ಅವರಿಗೆ ಇತ್ತು. ಇದೇ ಕಾರಣಕ್ಕೆ ಅವರು, ತಾಯಿಯನ್ನು ಕೊಂದು ಆತ್ಮಹತ್ಯೆ ಮಾಡಿಕೊಂಡಿರುವ ಅನುಮಾನವಿದೆ. ಪತಿ ಹಾಗೂ ಸಂಬಂಧಿಕರಿಂದ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.

ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಹಳೆಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 85ನೇ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಎಂ.ಎಸ್. ಸುಬ್ಬಲಕ್ಷ್ಮಿ ಅವರ ಮೊಮ್ಮಕ್ಕಳಾದ ಐಶ್ವರ್ಯ ಹಾಗೂ ಸೌಂದರ್ಯ ಅವರು ಶನಿವಾರ ಸಂಗೀತ ಕಛೇರಿ ಪ್ರಸ್ತುತಪಡಿಸಿದರು

– ಪ್ರಜಾವಾಣಿ ಚಿತ್ರ

ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರ ಸಭೆಯಲ್ಲಿ ನಿರ್ಣಯ

ಕಛೇರಿ: ಶೇ 80ರಷ್ಟು ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನ ಪಡೆದು ನಡೆಸುವ ಸಂಗೀತ ಕಛೇರಿಗಳಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರಿಗೆ ಶೇ 80 ರಷ್ಟು ಅವಕಾಶ ಸೇರಿ ಮೂರು ನಿರ್ಣಯಗಳನ್ನು ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರು ಕೈಗೊಂಡಿದ್ದಾರೆ.

ಕರ್ನಾಟಕ ಶಾಸ್ತ್ರೀಯ ಸಂಗೀತ ಒಕ್ಕೂಟ ಟ್ರಸ್ಟ್ (ಕೆಸಿಎಂಸಿ ಟ್ರಸ್ಟ್) ನಗರದಲ್ಲಿ ಶನಿವಾರ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರ ಕುಂದು ಕೊರತೆ ಸಭೆ ನಡೆಸಿತು. ಟ್ರಸ್ಟ್‌ನ ಪ್ರಥಮ ಸಭೆ ಇದಾಗಿದ್ದು, ನಾಗಮಣಿ ಶ್ರೀನಾಥ್, ಆರ್.ಎಸ್. ನಂದಕುಮಾರ್, ಶ್ರೀಕಾತಂ ನಾಗೇಂದ್ರ ಶಾಸ್ತ್ರಿ, ಪ್ರಶಾಂತ್ ಅಯ್ಯಂಗಾರ್, ವಸಂತ ಮಾಧವಿ, ಟಿ.ಎಸ್. ಸತ್ಯವತಿ, ಜ್ಯೋತ್ಸ್ನಾ ಶ್ರೀಕಾಂತ್, ಎಂ.ಎಸ್. ಶೀಲಾ ಸೇರಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರದ ಪ್ರಮುಖರು ಪಾಲ್ಗೊಂಡಿದ್ದರು.

‘ಸಂಗೀತ ಕಾರ್ಯಕ್ರಮಗಳಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರಿಗೆ ಸೂಕ್ತ ಅವಕಾಶ ಸಿಗುತ್ತಿಲ್ಲ. ಸ್ವಜನ ಪಕ್ಷಪಾತ ಹೆಚ್ಚುತ್ತಿದೆ’ ಎಂದು ಕಲಾವಿದರು ಕಳವಳ ವ್ಯಕ್ತಪಡಿಸಿದರು.

‘ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರಿಗೆ ಅವಕಾಶ ಸಿಗುತ್ತಿಲ್ಲ. ಇದರಿಂದ ಈ ಕ್ಷೇತ್ರದ ಕಲಾವಿದರನ್ನು ಗುರುತಿಸಿ, ಗೌರವಿಸುವ ಕೆಲಸ ನಡೆಯುತ್ತಿಲ್ಲ’ ಎಂದು ಬೇಸರ ವ್ಯಕ್ತಪಡಿಸಿದರು.

ಸಮಾನ ಅವಕಾಶ: ‘ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನ ಪಡೆದು ಸಂಘ–ಸಂಸ್ಥೆಗಳು ನಡೆಸುವ ಸಂಗೀತ ಕಛೇರಿಗಳಲ್ಲಿ ಶೇ 80ರಷ್ಟು ಅವಕಾಶವನ್ನು ಕರ್ನಾಟಕ ಶಾಸ್ತ್ರೀಯ ಸಂಗೀತಗಾರರಿಗೆ ನೀಡಬೇಕು. ಕೆಲವು ಕಲಾವಿದರಿಗೆ ಮಾತ್ರ ಅವಕಾಶ ನೀಡದೆ, ಎಲ್ಲ ಕಲಾವಿದರಿಗೂ ಸಮಾನ ಅವಕಾಶ ಸಿಗುವಂತಾಗಬೇಕು. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರನ್ನು ಪರಿಗಣಿಸಬೇಕು. ಆಯ್ಕೆ ಸಮಿತಿಯಲ್ಲಿಯೂ ಈ ಕಲಾ ಪ್ರಕಾರದ ಕಲಾವಿದರು ಇರಬೇಕು. ಸ್ವಜನ ಪಕ್ಷಪಾತವನ್ನು ಹೋಗಲಾಡಿಸಬೇಕು. ಆಕಾಶವಾಣಿಯಲ್ಲಿ ನಡೆಯುವ ಧ್ವನಿ ಪರೀಕ್ಷೆಯಲ್ಲಿ ಪಾರದರ್ಶಕತೆ ತರಬೇಕು. ಈ ಬಗ್ಗೆ ನವದೆಹಲಿಯ ಕೇಂದ್ರಕ್ಕೂ ಪತ್ರ ಬರೆಯಬೇಕು’ ಎಂಬ ಅಭಿಮತ ವ್ಯಕ್ತವಾಯಿತು. ಈ ಬಗ್ಗೆ ನಿರ್ಣಯವನ್ನೂ ಕೈಗೊಳ್ಳಲಾಯಿತು. ನೆರೆದಿದ್ದವರು ಧ್ವನಿ ಮತದ ಮೂಲಕ ಅಂಗೀಕರಿಸಿದರು.

‘ಯುವ ಕಲಾವಿದರ ಹೆಸರನ್ನು ಪಟ್ಟಿ ಮಾಡಿ, ಎಲ್ಲ ಸಂಗೀತ ಕಲಾ ಸಂಸ್ಥೆಗಳಿಗೆ ಕಳುಹಿಸಲಾಗುತ್ತದೆ. ಆ ಕಲಾವಿದರಿಗೆ ಅವಕಾಶ ನೀಡುವಂತೆಯೂ ಮನವಿ ಮಾಡಿಕೊಳ್ಳಲಾಗುತ್ತದೆ. ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ಸಂಗೀತಕ್ಕೆ ಸಂಬಂಧಿಸಿದ ಸರ್ಕಾರಿ, ಖಾಸಗಿ ಸಂಸ್ಥೆಗಳಿಗೆ ಕಳುಹಿಸಲಾಗುತ್ತದೆ’ ಎಂದು ಟ್ರಸ್ಟ್‌ನ ಕಾರ್ಯದರ್ಶಿ ಪ್ರಶಾಂತ್ ಅಯ್ಯಂಗಾರ್ ತಿಳಿಸಿದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಾವಿದರು – ಪ್ರಜಾವಾಣಿ ಚಿತ್ರ

‘ಚೀನಾ ನೌಕೆಗಳ ಜಮಾವಣೆ: ಭಾರತ ನಿಗಾ’

ನವದೆಹಲಿ (ಪಿಟಿಐ): ‘ಹಿಂದೂ ಮಹಾಸಾಗರ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಚೀನಾ ನೌಕೆಗಳು ಜಮಾವಣೆಗೊಂಡಿವೆ. ಭಾರತವು ಈ ನೌಕೆಗಳ ಬಗ್ಗೆ ನಿಗಾ ಇರಿಸಿದೆ’ ಎಂದು ನೌಕಾಪಡೆ ಮುಖ್ಯಸ್ಥ ಆರ್. ಹರಿ ಕುಮಾರ್ ಶನಿವಾರ ತಿಳಿಸಿದರು.

‘ದೇಶದ ಹಿತಾಸಕ್ತಿಯನ್ನು ಕಾಪಾಡಲು, ಹಿಂದೂ ಮಹಾಸಾಗರ ಪ್ರದೇಶದಲ್ಲಿ ನಡೆಯುವ ಬೆಳವಣಿಗೆಗಳ ಬಗ್ಗೆ ಭಾರತವು ನಿಗಾ ಇರಿಸಿದೆ’ ಎಂದು ಅವರು ಪತ್ರಕರ್ತರ ಜೊತೆ ನಡೆಸಿದ ಸಂವಾದದಲ್ಲಿ ತಿಳಿಸಿದರು.

‘ಪಾಕಿಸ್ತಾನದ ಬಂದರುಗಳಲ್ಲಿ ಚೀನಾದ ಹಲವು ನೌಕೆಗಳನ್ನು ನಿಲ್ಲಿಸಲಾಗಿದೆ. ಈ ಬಗ್ಗೆ ನಮಗೆ ಖಚಿತ ಮಾಹಿತಿ ಇದ್ದು, ನಿಗಾ ಇರಿಸಿದ್ದೇವೆ. ಜೊತೆಗೆ ಚೀನಾದಿಂದ ಎದುರಾಗುವ ಸಾಂಪ್ರದಾಯಿಕ ಹಾಗೂ ಅಸಾಂಪ್ರದಾಯಿಕ ಬೆದರಿಕೆಗಳ ಬಗ್ಗೆಯೂ ಗಮನ ಇರಿಸಿದ್ದೇವೆ’ ಎಂದು ಅವರು ಹೇಳಿದರು.

‘ವೈಬ್ರಂಟ್ ನೇಚರ್’ ಪ್ರದರ್ಶನ

ನಗರದ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಿರುವ ಶರತ್ ನಂದಿನಿ ದೇಸಾಯಿ ಅವರ ‘ವೈಬ್ರಂಟ್ ನೇಚರ್’ ಚಿತ್ರಕಲಾ ಪ್ರದರ್ಶನವನ್ನು ನಿವೃತ್ತ ಐಎಫ್‌ಎಸ್ ಅಧಿಕಾರಿ ಬಿ. ರಘೋತ್ತಮ್ ರಾವ್ ದೇಸಾಯಿ, ಕಾಕಲ್ ಫೌಂಡೇಷನ್‌ನ ಚಂದ್ರಶೇಖರ್ ಕಾಕಲ್, ಕಲಾವಿದ ಬಿ.ಎನ್. ಹರಿಪ್ರಸಾದ್ ವೀಕ್ಷಿಸಿದರು. ಮೇ 1ರವರೆಗೆ ಈ ಕಲಾ ಪ್ರದರ್ಶನ ನಡೆಯಲಿದೆ.

‘ಸುಳ್ಳು ಸುದ್ದಿ ತಡೆಯಲು ಫ್ಯಾಕ್ಟ್ ಚೆಕ್ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವ್ಯಾಟ್ಸ್‌ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಮ್ ಹಾಗೂ ಡಿಜಿಟಲ್ ಮಾಧ್ಯಮಗಳಲ್ಲಿ ಸುದ್ದಿ ಪ್ರಸರಣ ಮಾಡುವ ಮುನ್ನ ಸುಳ್ಳು ಮತ್ತು ನೈಜ ಸುದ್ದಿಗಳ ನಡುವಿನ ಸತ್ಯಾಸತ್ಯತೆಯನ್ನು ಕಂಡು ಹಿಡಿಯಲು ಪತ್ರಕರ್ತರು ಮತ್ತು ಸಾರ್ವಜನಿಕರು ಫ್ಯಾಕ್ಟ್‌ಚೆಕ್ ಮಾಡಬೇಕು’ ಎಂದು ಗೂಗಲ್ ನ್ಯೂಸ್ ಇನ್ಷಿಯೇಟಿವ್ ಇಂಡಿಯಾ ಟ್ರೈನಿಂಗ್ ನೆಟ್‌ವರ್ಕ್ ಮತ್ತು ಡಾಟಾ ಲೀಡ್ಸ್ ಸಂಸ್ಥೆಯ ತರಬೇತುದಾರರು ಹಾಗೂ ಪ್ರಾಧ್ಯಾಪಕಿ ಶಿಲ್ಪಾ ಕಲ್ಯಾಣ್ ಅವರು ಸಲಹೆ ನೀಡಿದರು.

ಕರ್ನಾಟಕ ಪತ್ರಕರ್ತೆಯರ ಸಂಘ, ಸಾರಥಿ ಸಂಪನ್ಮೂಲ ಸಂಸ್ಥೆ ಮತ್ತು ಗೂಗಲ್ ನ್ಯೂಸ್ ಇನ್ಷಿಯೇಟಿವ್ ಸಹಯೋಗದಲ್ಲಿ ಶನಿವಾರ ನಡೆದ ‘ಫ್ಯಾಕ್ಟ್‌ಚೆಕ್ ಮತ್ತು ಸುಳ್ಳುಸುದ್ದಿ ಪತ್ತೆ ಹಚ್ಚುವಿಕೆ’ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಶಿಲ್ಪಾ ಕಲ್ಯಾಣ್

‘ಯಾವುದೇ ಚಿತ್ರ, ವಿಡಿಯೊದ ನೈಜ ಮೂಲ ಮತ್ತು ವಿಷಯದ ನಿಖರತೆಯನ್ನು ಪರಿಶೀಲಿಸಲು ರಿವರ್ಸ್ ಇಮೇಜ್ ಸರ್ಚ್ ಇಂಜಿನ್‌ಗಳು, ಜಿಯೋ ಲೊಕೇಶನ್ ಪರಿಕರಗಳು, ಗೂಗಲ್ ಲೆನ್ಸ್ ಸೇರಿದಂತೆ ಇತರ ಅಪ್ಲಿಕೇಶನ್‌ಗಳು ಮತ್ತು ಇತರ ಆನ್‌ಲೈನ್ ಪರಿಕರಗಳನ್ನು ಬಳಸಬೇಕು’ಎಂದರು.

ಕಾರ್ಯಾಗಾರ ಉದ್ಘಾಟಿಸಿದ ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷೆ ಪದ್ಮಾ ಶಿವಮೊಗ್ಗ, ‘ಇಂದಿನ ಪರಿಸ್ಥಿತಿಯಲ್ಲಿ ನಿಖರ ಮಾಹಿತಿ ನೀಡುವ ಪತ್ರಕರ್ತರಿಗೂ ಗೊಂದಲಗಳಾಗುತ್ತಿದ್ದು, ಅವುಗಳನ್ನು ಬಿತ್ತರಿಸುವ ಮುನ್ನ ಹಲವಾರು ಬಾರಿ ಪರಿಶೀಲಿಸುವ ಅಗತ್ಯವಿದೆ’ ಎಂದರು.

ಪಿಯುಸಿ ವಿದ್ಯಾರ್ಥಿಗಳ ಸಾಧನೆ

ಮದೀಹಾ, (ಶೇ 95.16, ವಾಣಿಜ್ಯ ವಿಭಾಗ), ಕಮ್ಯೂನಿಟಿ ಸೆಂಟರ್ ಪಿಯು ಕಾಲೇಜು	ಸಹನಾ ಎನ್., (ಶೇ 99.16, ವಾಣಿಜ್ಯ ವಿಭಾಗ), ಕಮ್ಯೂನಿಟಿ ಸೆಂಟರ್ ಪಿಯು ಕಾಲೇಜು	ಚೇತನ ಬಿ.ಆರ್, (ಶೇ 96.33, ವಾಣಿಜ್ಯ ವಿಭಾಗ), ಎ.ಎಸ್ ಸಿ ಇಂಡಿಪೆಂಡೆಂಟ್ ಪಿಯು ಕಾಲೇಜು



ಪದ್ಮನಾಭನಗರ, ಮಹದೇವಪುರ ವಿಧಾನಸಭಾ ಕ್ಷೇತ್ರ: ಅಭ್ಯರ್ಥಿಗಳು ಏನಂತಾರೆ..?

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಆರ್. ಮಂಜುನಾಥ್, ಚಂದ್ರಹಾಸ ಹಿರೇಮಳಲಿ** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ.

ಆರ್. ಅಶೋಕ (ಬಿಜೆಪಿ)

ನನಗೆ ವ್ಯಕ್ತಿ ಮುಖ್ಯವಲ್ಲ, ಪಕ್ಷ ಮುಖ್ಯ



• ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?

ಕ್ಷೇತ್ರದಾದ್ಯಂತ ಹಸಿರಿನ ವಾತಾವರಣ ನಿರ್ಮಿಸಲಾಗುತ್ತದೆ. ಅಂತರ್ಜಲಕ್ಕೆ ಅತ್ಯಂತ ಅಗತ್ಯವಾದ ಕೆರೆಗಳ ಪುನಶ್ಚೇತನ ಮಾಡಲಾಗುತ್ತಿದೆ. ಕ್ಷೇತ್ರದಲ್ಲಿ ಸುಗಮ ಸಂಚಾರಕ್ಕಾಗಿ ಟ್ರಾಫಿಕ್ ಮುಕ್ತ ಸಂಚಾರಕ್ಕೆ ಕ್ರಮ ಕೈಗೊಳ್ಳಲಾಗುತ್ತದೆ. ಮಕ್ಕಳಿಗೆ ಒಳಾಂಗಣ ಹಾಗೂ ಹೊರಾಂಗಣ ಆಟದ ಮೈದಾನ ನಿರ್ಮಿಸಲಾಗುತ್ತದೆ. ಕಟ್ಟುನಿಟ್ಟಿನ ಕಾನೂನು ಸುವ್ಯವಸ್ಥೆಗೆ ಆದ್ಯತೆ ನೀಡಲಾಗುತ್ತದೆ.

• ನೀವು ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂತಹದ್ದು?

ನಿಷ್ಠಾವಂತ ಕಾರ್ಯಕರ್ತರ ದೊಡ್ಡ ಪಡೆ ನನ್ನ ಜತೆ ಇದೆ. ಡಬಲ್ ಎಂಜಿನ್ ಸರ್ಕಾರದ ಸಾಧನೆ ಜನರ ಕಣ್ಣ ಮುಂದಿದೆ. ಕೋವಿಡ್ ಕಾಲದಲ್ಲಿ ಜನರಿಗೆ ಊಟ, ಔಷಧ ಕಿಟ್, ಆಹಾರ ಕಿಟ್, ಆಕ್ಸಿಜನ್ ಸಿಲಿಂಡರ್‌ಗಳನ್ನು ಉಚಿತವಾಗಿ ನೀಡಿದ್ದನ್ನು ಜನ ಮರೆತಿಲ್ಲ. ಪದ್ಮನಾಭನಗರ ಮಾದರಿ ಕ್ಷೇತ್ರ. ಹೊಸದಾಗಿ ಮಾದರಿ ಎನಿಸುವಂತಹ ಅತ್ಯುತ್ತಮ ಪಾರ್ಕ್‌ಗಳನ್ನು ನಿರ್ಮಾಣ ಮಾಡಿದ್ದೇನೆ. ಆಟದ ಮೈದಾನ, ಸುಸಜ್ಜಿತ ರಸ್ತೆ, ಶಾಲೆ, ಆಸ್ಪತ್ರೆ, ಅತ್ಯಾಧುನಿಕ ಬೀದಿ ದೀಪ, ವ್ಯವಸ್ಥಿತ ಕಸ ವಿಲೇವಾರಿ ಸೇರಿದಂತೆ ಎಲ್ಲ ಮೂಲ ಸೌಕರ್ಯಗಳನ್ನು ನಮ್ಮ ಕ್ಷೇತ್ರ ಹೊಂದಿದೆ. ಜನರ ಕಷ್ಟ-ಸುಖ-ದಲ್ಲಿ ಭಾಗಿಯಾಗಿದ್ದೇನೆ. ನಾನು ಎಷ್ಟೇ ಕಾರ್ಯದೊತ್ತಡ ಇದ್ದರೂ ಕ್ಷೇತ್ರದ ಜನರೊಟ್ಟಿಗೆ ಸಂಪರ್ಕದಲ್ಲಿ ಕಳೆದ 5 ವರ್ಷಗಳಿಂದಲೂ ಇದ್ದೇನೆ. ಸತತ 3 ಬಾರಿ ನನ್ನ ಗೆಲ್ಲಿಸಿದ್ದಾರೆ. ನನ್ನ ಕೆಲಸದಿಂದ ಜನರಿಗೆ ಹತ್ತಿರ ಆಗಿದ್ದೇನೆ.

• ನಿಮ್ಮ ನಿಜವಾದ ಎದುರಾಳಿ ಯಾರು?

ಕಾಂಗ್ರೆಸ್‌ನ ಡಿ.ಕೆ. ಶಿವಕುಮಾರ್, ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿ ನಿಜವಾದ ಎದುರಾಳಿಗಳು. ನನಗೆ ವ್ಯಕ್ತಿ ಮುಖ್ಯವಲ್ಲ, ಪಕ್ಷ ಮುಖ್ಯ.

ಮಂಜುನಾಥ್ ಬಂಜಾರಪಾಳ್ಯ (ಜೆಡಿಎಸ್)

ಜನರ ಆಶಯದಂತೆಯೇ ಅಭಿವೃದ್ಧಿ

• ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?

ಪದ್ಮನಾಭನಗರದಲ್ಲಿ ಸತತವಾಗಿ ಗೆಲ್ಲುತ್ತಾ ಬಂದಿರುವ ಬಿಜೆಪಿಯ ಅಭ್ಯರ್ಥಿಯಿಂದ ಸ್ಥಳೀಯವಾಗಿ ಕೆಲಸವಾಗಿಲ್ಲ. ಕುಡಿಯುವ ನೀರಿನ ಸಮಸ್ಯೆ ಕ್ಷೇತ್ರದಲ್ಲಿ ಹೆಚ್ಚಾಗಿದೆ. ಚರಂಡಿ ವ್ಯವಸ್ಥೆಯೇ ಇಲ್ಲದಂತಾಗಿದೆ. ಕೊಳೆಗೇರಿಗಳಲ್ಲಿ ಮನೆಗಳ ನಿರ್ಮಿಸ-ಬೇಕಾಗಿದೆ. ನಮ್ಮ ಹಿರಿಯ ನಾಯಕರಾದ ಎಚ್.ಡಿ. ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ ಅವರು ಮಾಡಿದ ಅಭಿವೃದ್ಧಿ ಕಾರ್ಯಗಳನ್ನೇ ಮುಂದಿಟ್ಟುಕೊಂಡು ಮತ ಕೇಳುತ್ತಿದ್ದೇವೆ. ಮಧ್ಯಮ ಹಾಗೂ ಬಡ ವರ್ಗದ ಜನತೆಗೆ ಶಿಕ್ಷಣ ದುಬಾರಿಯಾಗಿದೆ. ಅವರಿಗಾಗಿ ಹೈಟೆಕ್ ಶಾಲೆ ನಿರ್ಮಿಸುವ ಉದ್ದೇಶವಿದೆ. ಆರೋಗ್ಯ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳಾಗಬೇಕಿವೆ.

• ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂಥದ್ದು?

30 ವರ್ಷದಿಂದ ಸ್ಥಳೀಯವಾಗಿ ನಮ್ಮ ಕಾರ್ಯಕರ್ತರು, ಜನರೊಂದಿಗೆ ಕೆಲಸ ಮಾಡಿದ್ದೇನೆ. ಹೀಗಾಗಿ ಇಲ್ಲಿನ ಜನತೆಯ ಸಮಸ್ಯೆಗಳ ಅರಿವು ನನಗಿದೆ. ಅವರಿಗೆ ಬೇಕಾದ ಮೂಲ ಸೌಕರ್ಯವನ್ನು ಒದಗಿಸುವ ಭರವಸೆ ನೀಡುತ್ತಿದ್ದೇನೆ. ಜೆಡಿಎಸ್ ಬಂದರೆ ಅಭಿವೃದ್ಧಿ ಸಾಧ್ಯ ಎಂಬ ಮಾತು ಜನರಲ್ಲಿದೆ. ಅವರ ಆಶಯದಂತೆಯೇ ನಾನು ಅಭ್ಯರ್ಥಿಯಾಗಿದ್ದೇನೆ.

• ನಿಮ್ಮ ನಿಜವಾದ ಎದುರಾಳಿ ಯಾರು?

ಪದ್ಮನಾಭನಗರ ಕ್ಷೇತ್ರದಲ್ಲಿ ನಮಗೆ ಎದುರಾಳಿ ಎಂಬ ಪ್ರಶ್ನೆಯೇ ಇಲ್ಲ. ಬಿಜೆಪಿಯವರು ಇದೀಗ ಶಾಸಕರಾಗಿದ್ದರೂ ಅವರಿಂದ ಕ್ಷೇತ್ರಕ್ಕೆ ಯಾವುದೇ ಅನುಕೂಲವಾಗಿಲ್ಲ. ಕಾಂಗ್ರೆಸ್ ಅಭ್ಯರ್ಥಿ ಬಗ್ಗೆ ಹೇಳುವಂತಹದ್ದಿಲ್ಲ. ಪೈಪೋಟಿ ಎಂಬುದು ಈ ಬಾರಿ ಇಲ್ಲ. ಹೊಂದಾಣಿಕೆ ರಾಜಕೀಯ ಎಂಬುದು ಈ ಬಾರಿ ನಡೆಯುವುದಿಲ್ಲ.



ರಘುನಾಥ ನಾಯ್ಡು (ಕಾಂಗ್ರೆಸ್)

ಸದಾ ಜನರೊಂದಿಗಿರುವ ಶಾಸಕನಾಗುತ್ತೇನೆ

• ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?

ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿರುವ ಕೊಳೆಗೇರಿಗಳಲ್ಲಿ ನಿವಾಸಿಗಳಿಗೆ ಮನೆಗಳೇ ಇಲ್ಲ. ಕನಿಷ್ಠ ಮೂರು ಸಾವಿರ ಮನೆಗಳನ್ನು ನಿರ್ಮಿಸಿಕೊಡುತ್ತೇನೆ. ಉದ್ಯಾನಗಳು ಅಭಿವೃದ್ಧಿಯಾಗದೆ ಒಣಗುತ್ತಿವೆ. ಅವುಗಳಿಗೆ ಕಾಯಕಲ್ಪ ನೀಡಲಾಗುತ್ತದೆ. ವರ್ತುಲ ರಸ್ತೆಯಲ್ಲಿ ಸಾಕಷ್ಟು ವಾಹನದಟ್ಟಣೆ ಉಂಟಾಗುತ್ತಿದ್ದು, ಎಲ್ಲ ಜಂಕ್ಷನ್‌ಗಳನ್ನೂ ಸಿಗ್ನಲ್ ಮುಕ್ತಗೊಳಿಸಲಾಗುತ್ತದೆ. ಖಾತಾ, ಮನೆ ನಕ್ಷೆ ಮಂಜೂರಿಗೆ ಸಾಕಷ್ಟು ಹಣ ಕೇಳಲಾಗುತ್ತಿದೆ. ಸರ್ಕಾರಿ ಕಚೇರಿಗಳಲ್ಲಿ ಪಾರದರ್ಶಕ ವ್ಯವಸ್ಥೆ ಜಾರಿ ಮಾಡಲಾಗುತ್ತದೆ. ಕ್ಷೇತ್ರದ ಎಲ್ಲ ಪ್ರದೇಶಗಳಲ್ಲೂ ಸಿಸಿ ಟಿವಿ ಕ್ಯಾಮೆರಾಗಳನ್ನು ಅಳವಡಿಸಿ, ಜನರಿಗೆ ಸುರಕ್ಷೆ ನೀಡಲಾಗುತ್ತದೆ. ಮಕ್ಕಳು, ಹಿರಿಯ ನಾಗರಿಕರು ಸೇರಿದಂತೆ ಎಲ್ಲ ವರ್ಗದ ಜನರಿಗೆ ಅಗತ್ಯವಾದ ಸೌಲಭ್ಯಗಳನ್ನು ತುರ್ತಾಗಿ ಕಲ್ಪಿಸಲಾಗುತ್ತದೆ.

• ಗೆಲ್ಲುತ್ತೀರಿ ಎಂಬುದಕ್ಕೆ ನಿಮಗಿರುವ ಬೆಂಬಲ ಎಂಥದ್ದು?

ಕ್ಷೇತ್ರದಲ್ಲಿ ಮೂರು ಬಾರಿ ಗೆದ್ದಿರುವ ಬಿಜೆಪಿಯ ಆರ್. ಅಶೋಕ ಸ್ಥಳೀಯರಲ್ಲ. ಅವರನ್ನು ಭೇಟಿ ಮಾಡಬೇಕೆಂದರೆ ಜಾಲಹಳ್ಳಿಗೆ ಹೋಗಬೇಕು ಅಥವಾ ಅವರು ಇಲ್ಲಿಗೆ ಬರಲು ಕಾಯಬೇಕು. ಕಾರ್ಪೊರೇಟರ್‌ಗಳ ಪಿಎಗಳ ಮೂಲಕ ಜನ ಸಂಪರ್ಕಿಬೇಕು. ಆದರೆ ನಾನು ಸ್ಥಳೀಯನಾಗಿದ್ದು, ಜನರೊಂದಿಗೆ ಬೆರೆತಿದ್ದೇವೆ. ಚುನಾವಣೆ ಸಂದರ್ಭದಲ್ಲಿ ಮಾತ್ರ ಅಶೋಕ ಕ್ಷೇತ್ರದಲ್ಲಿ ಎರಡು–ಮೂರು ದಿನ ಸತತವಾಗಿ ಕಾಣಿಸಿಕೊಳ್ಳುತ್ತಾರೆ. ಆದರೆ, ನಾನು ಎರಡು ವರ್ಷದಿಂದ ಸತತವಾಗಿ ಜನರ ಜೊತೆ ಬೆರೆತಿದ್ದೇನೆ. 20 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರನ್ನು ಪಕ್ಷಕ್ಕೆ ಸೇರಿಸಿದ್ದೇನೆ. ಭಾರತ್ ಜೋಡೊ, ಮೇಕೆದಾಟು ಹೋರಾಟದಲ್ಲಿ ಮುಂಚೂಣಿಯಲ್ಲಿದ್ದೆ. ಕ್ಷೇತ್ರದ ಜನರು ಎಲ್ಲವನ್ನೂ ಗಮನಿಸಿದ್ದು, ಅವರೊಂದಿಗೆ ನಾನು ಇರುತ್ತೇನೆ ಎಂಬ ಭರವಸೆ ಅವರಿಗಿದೆ.

• ನಿಮ್ಮ ನಿಜವಾದ ಎದುರಾಳಿ ಯಾರು?

ಬಿಜೆಪಿಯ ಅಭ್ಯರ್ಥಿ ಆರ್. ಅಶೋಕ ನಮ್ಮ ಪ್ರಬಲ ಎದುರಾಳಿ. ಈ ಬಾರಿ ಅವರ ಮನೆಯವರೆಲ್ಲ ಬೀದಿಗಿಳಿದು ಪ್ರಚಾರ ಆರಂಭಿಸಿದ್ದಾರೆ. ಅಷ್ಟು ಭಯ ಶುರುವಾಗಿದೆ.

ಎಚ್.ನಾಗೇಶ್ (ಕಾಂಗ್ರೆಸ್)

ಮಹದೇವಪುರದಲ್ಲೂ ಮುಳಬಾಗಿಲು ಮಾದರಿ ಅಭಿವೃದ್ಧಿ

• ಯಾವ ಕಾರಣಕ್ಕೆ ಮತದಾರರು ನಿಮ್ಮನ್ನು ಬೆಂಬಲಿಸಬೇಕು?

ನನ್ನದು ಮಹದೇವಪುರ ಕ್ಷೇತ್ರದ ಬೆಳತೂರು. ಸ್ಥಳೀಯ ಅಭ್ಯರ್ಥಿಯಾಗಿದ್ದೇನೆ. ಅಧಿಕಾರಿಯಾಗಿ ಉತ್ತಮ ಸೇವೆ ಸಲ್ಲಿಸಿ ಜನಮನ್ನಣೆ ಗಳಿಸಿದ್ದೇನೆ. ಜನರೊಂದಿಗೆ ಬೆರೆಯುವ ಸ್ವಭಾವ, ಒಳ್ಳೆಯ ಕೆಲಸ ಮಾಡಲು ನನ್ನಂತವರನ್ನು ಬೆಂಬಲಿಸಬೇಕು.

• ನೀವು ಗೆಲ್ಲುತ್ತೀರಿ ಎನ್ನುವುದಕ್ಕೆ ನಿಮಗಿರುವ ಬೆಂಬಲ ಎಂತಹದ್ದು?

ಸ್ಥಳೀಯ ಎನ್ನುವ ಕಾರಣಕ್ಕೆ ಕ್ಷೇತ್ರದಲ್ಲಿ ಸರ್ವ ಜನಾಂಗದ, ಸರ್ವ ಧರ್ಮದ ಜನರ ಬೆಂಬಲ ನನಗಿದೆ. ಒಂದು ಅವಕಾಶ ನೀಡೋಣ ಎಂದು ಜನ ತೀರ್ಮಾನ ಮಾಡಿದ್ದಾರೆ. ಈ ತೀರ್ಮಾನ ಮತವಾಗಿ ಪರಿವರ್ತನೆಯಾಗುವ ಭರವಸೆ ಇದೆ.



• ಮೊದಲ ಬಾರಿ ಕ್ಷೇತ್ರಲ್ಲಿ ಸ್ಪರ್ಧಿಸುತ್ತಿದ್ದೀರಿ. ಎದುರಾಳಿ ಹೇಗೆ ಕಟ್ಟಿಹಾಕುವಿರಿ?

ಈ ಚುನಾವಣೆಯಲ್ಲಿ ಎದುರಾಳಿಯನ್ನು ನಾನು ಕಟ್ಟಿಹಾಕುವುದಿಲ್ಲ ಜನರೇ ಕಟ್ಟಿಹಾಕಲಿದ್ದಾರೆ. ಮಹದೇವಪುರ ಕ್ಷೇತ್ರದಲ್ಲಿ ನಾನು ಕಾಂಗ್ರೆಸ್ ಅಭ್ಯರ್ಥಿ ಅಂಥ ಘೋಷಿಸಿದ ನಂತರ ಬಿಜೆಪಿ ಹೈಕಮಾಂಡ್ ಅಭ್ಯರ್ಥಿಯನ್ನೇ ಬದಲಾಯಿಸಿ, ಮಹಿಳಾ ಅಭ್ಯರ್ಥಿ ಹಾಕಿದೆ.

• ಮುಳಬಾಗಿಲು ಶಾಸಕರಾಗಿ ಮಾಡಿದ ಅನುಭವ ನೆರವಾಗುತ್ತವೆಯೇ?

ಮುಳಬಾಗಿಲು ಕ್ಷೇತ್ರದಲ್ಲಿ ಮಾಡಿರುವ ಕೆಲಸಗಳ ಬಗ್ಗೆ ಜನರು ಅರಿತಿದ್ದಾರೆ. ಒಳ್ಳೆಯ ರಸ್ತೆ, ಕುಡಿಯುವ ನೀರು, ಬೀದಿ ದೀಪ, ಪಾರ್ಕ್ ನಿರ್ಮಾಣ, ಶಾಲೆಗಳಿಗೆ ಹೆಚ್ಚುವರಿ ಕಟ್ಟಡ ನಿರ್ಮಾಣ, ದೇವಸ್ಥಾನ ಜೀರ್ಣೋದ್ಧಾರ, ಹಾಸ್ಟೆಲ್ ನಿರ್ಮಾಣ, ಆಟೊರಿಕ್ಷಾ ನಿಲ್ದಾಣ. ಹೀಗೆ ಸರ್ವತೋಮುಖ ಅಭಿವೃದ್ಧಿಗೆ ಜನ ಮೆಚ್ಚಿ-ಕೊಂಡಿದ್ದಾರೆ. ಅಂತಹ ಕೆಲಸ ಮಹದೇವಪುರ ಕ್ಷೇತ್ರದಲ್ಲೂ ಆಗಬೇಕು ಎನ್ನುವುದು ಜನರ ಅಭಿಲಾಷೆ.

ಮಂಜುಳಾ ಅರವಿಂದ ಲಿಂಬಾವಳಿ (ಬಿಜೆಪಿ)

ಸಾಮಾನ್ಯ ಗೃಹಿಣಿ ಜನರ ಧ್ವನಿ

• ಯಾವ ಕಾರಣಕ್ಕೆ ಮತದಾರರು ನಿಮ್ಮನ್ನು ಬೆಂಬಲಿಸಬೇಕು?

ನಾನು ಎಂದೂ ಅಧಿಕಾರಕ್ಕೆ ಹಂಬಲಿಸಿಲ್ಲ. ಒಬ್ಬ ಸಾಮಾನ್ಯ ಗೃಹಿಣಿಯಾಗಿಯೇ ಇದ್ದೆ. ನನ್ನಂತಹ ಮಹಿಳೆಯೂ ಶಾಸಕಿ ಆಗಬೇಕು ಎಂದು ಬಿಜೆಪಿ ವರಿಷ್ಠರು ನಿರ್ಧರಿಸಿದ್ದಾರೆ. ನನ್ನಂತಹ ಸಾಮಾನ್ಯರು ಶಾಸಕಿ ಆದ್ರೆ ಖಂಡಿತ ಜನರ ಧ್ವನಿಯಾಗಿ ಕೆಲಸ ಮಾಡಲು ಸಾಧ್ಯವಿದೆ.

• ನೀವು ಗೆಲ್ಲುತ್ತೀರಿ ಎನ್ನುವುದಕ್ಕೆ ನಿಮಗಿರುವ ಬೆಂಬಲ ಎಂತಹದ್ದು?

ಮೂರು ಸಲ ಈ ಕ್ಷೇತ್ರದ ಶಾಸಕರಾದ ನನ್ನ ಪತಿ ಅರವಿಂದ ಲಿಂಬಾವಳಿ ಅವರು ಮಹದೇವಪುರ ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದಾರೆ. ಕ್ಷೇತ್ರದ ಅಭಿವೃದ್ಧಿಗೆ ಪತಿ ಹಾಕಿಕೊಟ್ಟ ವಿಶಿಷ್ಟ ಮಾರ್ಗ ದೇಶಕ್ಕೇ ಮಾದರಿ. ಈ ಕ್ಷೇತ್ರದ ಮಹಿಳಾ ಶಕ್ತಿ, ಯುವ ಸಮುದಾಯ ನನ್ನನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಂಬಲಿಸುತ್ತದೆ ಎಂಬ ವಿಶ್ವಾಸವಿದೆ.

• ಮೊದಲ ಬಾರಿ ಸ್ಪರ್ಧಿಸಿದ್ದೀರಿ. ಹೇಗೆ ಎದುರಾಳಿ ಕಟ್ಟಿಹಾಕುವಿರಿ?

ಬಿಜೆಪಿಯಂತಹ ಕಟ್ಟುನಿಟ್ಟಿನ, ಕೇಡರ್ ಆಧಾರದ ಪಕ್ಷದಲ್ಲಿ ಮೊದಲ ಬಾರಿ ನಿಲ್ಲುವುದು ದೊಡ್ಡ ವಿಚಾರವೇ ಅಲ್ಲ. ನಾನೂ ಸೇರಿದಂತೆ 75 ಹೊಸ ಮುಖಗಳಿಗೆ ಟಿಕೆಟ್ ಕೊಟ್ಟು ಮೊದಲ ಬಾರಿ ಚುನಾವಣೆ ಎದುರಿಸಲು ಹುರಿದುಂಬಿಸಿದೆ. ಕೇಂದ್ರದಲ್ಲಿ ಮೋದಿಯವರ ಸರ್ಕಾರ, ರಾಜ್ಯ ಸರ್ಕಾರದ ಸಾಧನೆಗಳನ್ನು ಜನರ ಮುಂದಿಡುತ್ತೇನೆ.

• ಶಾಸಕರಾಗಿ ಲಿಂಬಾವಳಿ ಅವರು ಮಾಡಿದ ಕೆಲಸಗಳು ನೆರವಾಗುತ್ತವೆಯೇ?

ಶಾಸಕರಾಗಿ, ಸಚಿವರಾಗಿ ಹದಿನೈದು ವರ್ಷಗಳಿಂದ ಸಾರ್ವಜನಿಕ ಸೇವೆಯಲ್ಲಿದ್ದಾರೆ. ಮಹದೇವಪುರ 'ಟಾಸ್ಕ್‌ಫೋರ್ಸ್' ಎಂಬ ಜನರ ಕಾರ್ಯಪಡೆ ಮೂಲಕವೇ ಕಾಮಗಾರಿಗಳನ್ನು ಕೈಗೊಂಡಿದ್ದಾರೆ. ಸಾರ್ವಜನಿಕ ದೂರುಗಳನ್ನು ನಿರ್ವಹಿಸಲು ತಂತ್ರಜ್ಞಾನದ ಬಳಕೆ ಮಾಡಿದ್ದಾರೆ. ಮೂಲಸೌಕರ್ಯಗಳಿಗೆ ಒತ್ತು ನೀಡಿದ್ದಾರೆ. ಆ ಕಾರ್ಯಗಳನ್ನು ಮುಂದುವರಿಸುವೆ.

1.ಕೆಂಪೇಗೌಡ ನಗರದ ಫೈವ್‌ಲೈನ್ ರಸ್ತೆಯಲ್ಲಿ ವಾಹನದಟ್ಟಣೆಯಲ್ಲಿ ಆಂಬುಲೆನ್ಸ್ ಸಿಲುಕಿಕೊಂಡಿತ್ತು 2. ಯಶವಂತಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್‌ಟಿ.ಸೋಮಶೇಖರ್ ಅವರು ಜನರ ನಡುವೆ ನಿಂತು ಮೆರವಣಿಗೆ ವೀಕ್ಷಿಸಿದರು 3. ರೋಡ್ ಶೋಗೆ ಜನರನ್ನು ಟೆಂಪೋದಲ್ಲಿ ಕರೆದುಕೊಂಡು ಬಂದ ದೃಶ್ಯ 4. ಮಾಗಡಿ ಮುಖ್ಯರಸ್ತೆಯಲ್ಲಿ ಶನಿವಾರ ಬೆಳಿಗ್ಗೆಯಿಂದಲೇ ಬ್ಯಾರಿಕೇಡ್ ಹಾಕಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು

ಪ್ರಜಾವಾಣಿ ಚಿತ್ರಗಳು

ಪ್ರಧಾನಿಯತ್ತ ಪುಷ್ಪವೃಷ್ಟಿ, ಅಭಿಮಾನದ ಹೊಳೆ • ವೀಕ್ಷಣೆಗೆ ಬಂದ ಜನಸಾಗರ • ಕಾರ್ಯಕರ್ತರಿಗೆ ಹುರುಪು

ನಗರದಲ್ಲಿ ಮೋದಿ ರೋಡ್ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆ ರಂಗೇರಿರುವ ಕ್ಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ರಾಜಧಾನಿಯಲ್ಲಿ ಶನಿವಾರ ರೋಡ್ ಶೋ ನಡೆಸಿ ಬಿಜೆಪಿ ಕಾರ್ಯಕರ್ತರಲ್ಲಿ ಹೊಸ ರೋಮಾಂಚನ ಮೂಡಿಸಿದರು.

ಸಿಲಿಕಾನ್ ಸಿಟಿಯಲ್ಲಿ ಮಿಂಚಿನ ಸಂಚಾರ ನಡೆಸಿ ಪಕ್ಷದ ಅಭ್ಯರ್ಥಿಗಳು ಹಾಗೂ ಕಾರ್ಯಕರ್ತರಿಗೆ ಹುರುಪು ತುಂಬಿದರು. ನೀತಿ ಸಂಹಿತೆ ಘೋಷಣೆಯಾದ ಮೇಲೆ ಮೋದಿ ನಗರದಲ್ಲಿ ಮೊದಲ ರೋಡ್ ಶೋ ನಡೆಸಿ ಪಕ್ಷದ ಅಭ್ಯರ್ಥಿಗಳ ಪರವಾಗಿ ಮತಯಾಚಿಸಿದರು.

ರಾಜ್ಯದ ಬೇರೆ ಜಿಲ್ಲೆಗಳಲ್ಲಿ ಸಾರ್ವಜನಿಕ ಸಭೆ ನಡೆಸಿದ ಬಳಿಕ ಸಂಜೆ ವೇಳೆಗೆ ನಗರಕ್ಕೆ ಬಂದ ನರೇಂದ್ರ ಮೋದಿ ಅವರು, ರೋಡ್ ಶೋನಲ್ಲಿ ಜನರತ್ತ ಕೈಬೀಸುತ್ತಾ ಸಾಗಿದರು. ಅದಕ್ಕೆ ಪ್ರತಿಯಾಗಿ ಜನರೂ ಚಪ್ಪಾಳೆ, ಶಿಳ್ಳೆ ಹಾಕಿ ಪುಷ್ಪವೃಷ್ಟಿಗರೆದರು. ಕಾರ್ಯಕರ್ತರ ಉತ್ಸಾಹ ಕಂಡ ಮೋದಿ ಅವರೂ ತೆರೆದ ವಾಹನದಲ್ಲಿ ಬಿದ್ದಿದ್ದ ಹೂವಿನ ದಳಗಳನ್ನು ಜನರತ್ತ ಎಸೆದರು. ಕತ್ತಲು ಕವಿಯುತ್ತಿದ್ದಂತೆಯೇ ಕಾರ್ಯಕರ್ತರು ಒಮ್ಮೆಲೇ ಹರಿದು ಬಂದರು. ಇದರಿಂದ ರೋಡ್ ಶೋ ಅಂತಿಮಘಟ್ಟದಲ್ಲಿ ಜನಸಾಗರ ನೆರೆದಿತ್ತು.

ಮಾಗಡಿ ರಸ್ತೆಯ ನೈಸ್ ರಸ್ತೆ ಜಂಕ್ಷನ್‌ನಿಂದ ಆರಂಭವಾದ ರೋಡ್ ಶೋ ಸುಮನಹಳ್ಳಿ ಜಂಕ್ಷನ್‌ವರೆಗೆ ನಡೆಯಿತು. ಹೊಸಹಳ್ಳಿ ಗೊಲ್ಲರಪಾಳ್ಯ, ಬ್ಯಾಡರಹಳ್ಳಿ, ಅಂಜನಾನಗರ, ಹೇರೋಹಳ್ಳಿ, ಸುಂಕದಕಟ್ಟೆ, ಕೊಟ್ಟಿಗೆ ಪಾಳ್ಯದ ಮೂಲಕ 1 ಗಂಟೆ 20 ನಿಮಿಷ ಸುಮಾರು 5.5 ಕಿ.ಮೀ ರೋಡ್ ಶೋ ನಡೆಯಿತು.

ರಸ್ತೆಯ ಬಲಬದಿಯಲ್ಲಿ ಜನರಿಗೆ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿತ್ತು. ಕೇಸರಿ ಶಾಲು ಧರಿಸಿದ್ದ, ಕಾರ್ಯಕರ್ತರು ಪಕ್ಷದ ಬಾವುಟ ಹಿಡಿದು ರಸ್ತೆಯುದ್ದ-ಕ್ಕೂ ಸ್ವಾಗತಿಸಿದರು. ಇಡೀ ವಾತಾವರಣ ಕೇಸರಿಮಯವಾಗುವಂತೆ ಬಿಜೆಪಿ ಮುಖಂಡರು ವ್ಯವಸ್ಥೆಗೊಳಿಸಿದ್ದರು.

ತೆರೆದ ವಾಹನದಲ್ಲಿ ಸಂಸದ ಡಿ.ವಿ. ಸದಾನಂದಗೌಡ, ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಮೋದಿಗೆ ಸಾಥ್ ನೀಡಿದರು. ಬಿಜೆಪಿ ಅಭ್ಯರ್ಥಿಗಳು ಮಾತ್ರ ರಸ್ತೆಬದಿಯಲ್ಲೇ ನಿಂತು ಪ್ರಧಾನಿ ಅವರತ್ತ ಕೈಬೀಸಿದರು.

ಮಲ್ಲೇಶ್ವರದ ಬಿಜೆಪಿ ಅಭ್ಯರ್ಥಿ ಅಶ್ವತ್ಥ್ ನಾರಾಯಣ, ರಾಜರಾಜೇಶ್ವರಿ ನಗರ ಕ್ಷೇತ್ರದ ಅಭ್ಯರ್ಥಿ ಮುನಿರತ್ನ, ಯಶವಂತಪುರ ಕ್ಷೇತ್ರದ ಅಭ್ಯರ್ಥಿ ಎಸ್.ಟಿ. ಸೋಮಶೇಖರ್ ಅವರು ಕಾರ್ಯಕರ್ತರ ಜತೆಗೆ ಮೆರವಣಿಗೆಯಲ್ಲಿ ರೋಡ್ ಶೋ ಸ್ಥಳಕ್ಕೆ ಬಂದಿದ್ದರು.

'ಜೈ ಜೈ ಮೋದಿ...', 'ಭಾರತ್ ಮಾತಾಕೀ ಜೈ', 'ಜೈ ಶ್ರೀರಾಮ್...' 'ಬಿಜೆಪಿಗೆ ಜಯವಾಗಲಿ...' ಎಂಬ ಘೋಷಣೆಗಳು ಮಾರ್ಗದ ಉದ್ದಕ್ಕೂ ಅನುರಣಿಸಿದವು. ಅಭಿಮಾನದ ಹೊಳೆಯಲ್ಲಿ ಮೋದಿ ಮಿಂದೆದ್ದರು. ವೀರಗಾಸೆ, ಡೊಳ್ಳು ಸೇರಿದಂತೆ ಕಲಾ ತಂಡಗಳು ಮೆರುಗು ನೀಡಿದವು.

ಮಧ್ಯಾಹ್ನವೇ ಬಂದಿದ್ದ ಕಾರ್ಯಕರ್ತರು: ಸುಮನಹಳ್ಳಿ ಜಂಕ್ಷನ್ ವ್ಯಾಪ್ತಿಯಲ್ಲಿ ಮಧ್ಯಾಹ್ನ ಧಾರಾಕಾರ ಮಳೆ ಸುರಿದಿತ್ತು. ಮಳೆಗೂ ಮೊದಲೇ ಜನರು ರಸ್ತೆಯ ಬದಿಗೆ ಬಂದು ಜಮಾವಣೆಗೊಂಡಿದ್ದರು. ಸಂಜೆ ವೇಳೆ ರೋಡ್ ಶೋ ನಡೆದಿದ್ದರಿಂದ ಹೆಚ್ಚಿನ ಜನರು ಬಂದಿದ್ದರು

ಪೊಲೀಸ್ ಕಾವಲು: ಭದ್ರತೆಗಾಗಿ 3 ಸಾವಿರ ಪೊಲೀಸರನ್ನು ನಿಯೋಜಿಸಲಾಗಿತ್ತು. 5 ಡಿಸಿಪಿ, 20 ಎಸಿಪಿ, 64 ಇನ್‌ಸ್ಪೆಕ್ಟರ್, 180 ಪಿಎಸ್‌ಐ, ಹೆಡ್ ಕಾನ್‌ಸ್ಟೆಬಲ್‌ಗಳು, ಕಾನ್‌ಸ್ಟೆಬಲ್‌ಗಳು ಹಾಗೂ ಮೀಸಲು ಪಡೆಯ ಪೊಲೀಸರು ಭದ್ರತೆ ಕರ್ತವ್ಯದಲ್ಲಿ ನಿರತರಾಗಿದ್ದರು.

ಪ್ರಧಾನಿ ಮೋದಿ ರೋಡ್ ಶೋ ವೀಕ್ಷಣೆಗೆ ಮಾಗಡಿ ರಸ್ತೆಯ ಸುಮನಹಳ್ಳಿ ವೃತ್ತದ ಬಳಿ ಶನಿವಾರ ಸೇರಿದ್ದ ಜನಸ್ತೋಮ

– ಪ್ರಜಾವಾಣಿ ಚಿತ್ರಗಳು/ಎಂ.ಎಸ್‌ಮಂಜುನಾಥ್

ರೋಡ್ ಶೋಗಾಗಿ ಬಸ್ ಸಂಚಾರ ಸ್ಥಗಿತಗೊಳಿಸಿದ್ದರಿಂದ ಪ್ರಯಾಣಿಕರು ನಡೆದುಕೊಂಡು ಹೋಗುತ್ತಿರುವ ದೃಶ್ಯ ಕಂಡು ಬಂತು

ಬೆಳಿಗ್ಗೆಯಿಂದಲೇ ಸಂಚಾರ ನಿರ್ಬಂಧ

ರೋಡ್ ಶೋಗಾಗಿ ಬೆಳಿಗ್ಗೆಯಿಂದಲೇ ಮಾಗಡಿ ರಸ್ತೆಯಲ್ಲಿ ಸಾರ್ವಜನಿಕರ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ಇದರಿಂದ ಜನರು, ವಾಹನ ಸವಾರರು ಪರದಾಡಿದರು.

ಮೈಸೂರು ಹಾಗೂ ತುಮಕೂರು ಹೆದ್ದಾರಿ ಸಂಪರ್ಕಿಸುವ ರಸ್ತೆ ಇದಾಗಿದ್ದು, ವಾಹನ ಸವಾರರಿಗೆ ಸಂಕಷ್ಟ ಎದುರಾಗಿತ್ತು. ಸುಮನಹಳ್ಳಿ ಜಂಕ್ಷನ್ ಮೂಲಕ ಮನೆಗೆ ತೆರಳಬೇಕಿದ್ದವರು ಮಾರ್ಗ ಮಧ್ಯದಲ್ಲಿಯೇ ಸಿಲುಕಿದ್ದರು. ಮಾಗಡಿ ರಸ್ತೆಯಲ್ಲಿ ಸಂಪರ್ಕಿಸುವ ಸಣ್ಣಪುಟ್ಟ ರಸ್ತೆಗಳಲ್ಲೂ ಬ್ಯಾರಿಕೇಡ್ ಹಾಕಿ ಸಂಚಾರ ನಿರ್ಬಂಧಿಸಲಾಗಿತ್ತು.

ನಾಗರಬಾವಿಯಲ್ಲಿ ವಾಹನ ಹಾಗೂ ಜನರನ್ನು ರಸ್ತೆ ದಾಟಲು ಬಿಡದ ಕಾರಣಕ್ಕೆ ನಾಗರಬಾವಿಯಲ್ಲಿ ಪೊಲೀಸರ ವಿರುದ್ಧ ಜನರು ಆಕ್ರೋಶ ಹೊರಹಾಕಿದರು. ಜನರನ್ನು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದರು. ಗೊರಗುಂಟೆಪಾಳ್ಯ ವೃತ್ತದಿಂದ ನಾಯಂಡಹಳ್ಳಿ ಜಂಕ್ಷನ್ ವರೆಗಿನ ಹೊರವರ್ತುಲ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಕಾಮಾಕ್ಷಿಪಾಳ್ಯ, ನಾಗರಬಾವಿ, ನಂದಿನಿಲೇಔಟ್, ಲಗ್ಗೆರೆ, ಚಂದ್ರಾಲೇಔಟ್ ಹಾಗೂ ಸುತ್ತಮುತ್ತಲ ವಿಪರೀತ ವಾಹನ ದಟ್ಟಣೆಯಿತ್ತು. ವಾರಾಂತ್ಯದ ಕಾರಣಕ್ಕೆ ಮೈಸೂರು ರಸ್ತೆಯಲ್ಲೂ ವಾಹನ ಸವಾರರು ಪರದಾಡಿದರು.

ಪ್ರಧಾನಿ ಅವರು ರೋಡ್ ಶೋ ಮುಗಿದ ಬಳಿಕ ವಾಸ್ತವ್ಯಕ್ಕೆ ರಾಜ ಭವನಕ್ಕೆ ತೆರಳಿದರು. ಆ ಮಾರ್ಗದಲ್ಲೂ ವಾಹನ ಸಂಚಾರ ನಿರ್ಬಂಧ ಮಾಡಿದ್ದರಿಂದ ವಾಹನಗಳು ಸಾಲುಗಟ್ಟಿ ನಿಂತಿದ್ದವು. 'ಬೆಳಿಗ್ಗೆಯೇ ರಸ್ತೆ ಬಂದ್ ಮಾಡಿದ್ದೀರಿ. ನಾವೂ ಮನೆಗೆ, ಕೆಲಸಕ್ಕೆ ಹೋಗುವುದಾದರೂ ಹೇಗೆ' ಎಂದು ಸಾರ್ವಜನಿಕರು ಪೊಲೀಸರನ್ನು ಪ್ರಶ್ನಿಸಿದರು.

ದಟ್ಟಣೆಯಲ್ಲಿ ಸಿಲುಕಿದ ವಧು, ವರರು

ಮಾಗಡಿ ಮುಖ್ಯರಸ್ತೆ, ಸುಂಕದಕಟ್ಟೆ, ಬ್ಯಾಡರಹಳ್ಳಿ, ಅಂಜನಾನಗರದಲ್ಲಿ ಸಾಕಷ್ಟು ಕಲ್ಯಾಣ ಮಂಟಪಗಳಿದ್ದು, ಇಲ್ಲಿ ಶನಿವಾರ ರಾತ್ರಿ ಆರತಕ್ಷತೆ ಕಾರ್ಯಕ್ರಮ ನಿಗದಿಯಾಗಿದ್ದವು. ಆದರೆ, ಪ್ರಮುಖ ಮಾರ್ಗಗಳನ್ನೇ ಬಂದ್ ಮಾಡಿದ್ದರಿಂದ ವಧು- ವರರು ಹಾಗೂ ಅವರ ಸಂಬಂಧಿಕರು ಕಲ್ಯಾಣ ಮಂಟಪಕ್ಕೆ ತೆರಳಲು ಸಾಧ್ಯವಾಗಲಿಲ್ಲ.

'ಮದುವೆ ಕಾರ್ಯಕ್ರಮಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು' ಎಂದು ಮನವಿ ಮಾಡಿದ್ದರೂ ಪೊಲೀಸರು ಅಡ್ಡಿ ಪಡಿಸಿದರು ಎಂದು ಮಾಗಡಿಯ ರಮೇಶ್ ಹೇಳಿದರು.

ಕೊನೆಗೆ ಪರ್ಯಾಯ ಮಾರ್ಗದಲ್ಲಿ ವಧು–ವರರು ಕಲ್ಯಾಣ ಮಂಟಪಕ್ಕೆ ತೆರಳಿದರು.

ಅಂಗಡಿ ಬಂದ್

ರಸ್ತೆ ಎರಡೂ ಬದಿಯಲ್ಲೂ ಔಷಧ, ಹಣ್ಣು, ದಿನಸಿ, ಜವಳಿ ಅಂಗಡಿಗಳು ಹಾಗೂ ಹೋಟೆಲ್‌ಗಳನ್ನು ಮುಂಜಾಗ್ರತಾ ಕ್ರಮವಾಗಿ ಬಂದ್ ಮಾಡಲಾಗಿತ್ತು. ಇದರಿಂದ ವ್ಯಾಪಾರಸ್ಥರೂ ನಷ್ಟ ಅನುಭವಿಸಿದರು.

ಇನ್ನು ರೋಡ್ ಶೋಗಾಗಿ ವಿವಿಧ ಕ್ಷೇತ್ರಗಳಿಂದ ಲಾರಿ ಹಾಗೂ ಖಾಸಗಿ ಬಸ್‌ಗಳಲ್ಲಿ ಜನರನ್ನು ಕರೆತರಲಾಗಿತ್ತು. ಆ ವಾಹನಗಳು ಸುಮನಹಳ್ಳಿ ಜಂಕ್ಷನ್ ರಸ್ತೆಬ-ದಿಯಲ್ಲಿ ನಿಲುಗಡೆ ಮಾಡಲಾಗಿತ್ತು. ವಾಪಸ್ ತೆರಳುವಾಗ ಜನರನ್ನು ಕರೆತಂದವರು ದುಡ್ಡು ಕೊಟ್ಟಿಲ್ಲ. ಮುಖಂಡನಿಗಾಗಿ ಹುಡುಕಾಟ ನಡೆ-ಸುತ್ತಿದ್ದೇವೆ ಎಂದು ರೋಡ್ ಶೋಗೆ ಬಂದಿದ್ದ ವ್ಯಕ್ತಿಯೊಬ್ಬರು ತಿಳಿಸಿದರು.

ಮಾಗಡಿ ರಸ್ತೆಯಲ್ಲಿ ಔಷಧದ ಅಂಗಡಿ ಮುಚ್ಚಿಸಲಾಗಿತ್ತು

ಸುಮನಹಳ್ಳಿ ಬಳಿಯಲ್ಲಿ ಶನಿವಾರ ಸಂಜೆ ಸಂಚಾರ ದಟ್ಟಣೆ ಕಂಡು ಬಂತು

ಮಣಿಕಂಠಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಚಿತ್ತಾಪುರ (ಕಲಬುರಗಿ ಜಿಲ್ಲೆ): ಪಿಸ್ತೂಲ್ ಪ್ರದರ್ಶಿಸಿದ ವಿಡಿಯೊ ಸಾಮಾಹಿಕ ಜಾಲತಾಣದಲ್ಲಿ ಪ್ರಸಾ-ರವಾಗುತ್ತಿದ್ದಂತೆಯೇ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡಗೆ ಲಿಖಿತ ವರದಿ ಸಲ್ಲಿಸುವಂತೆ ಚುನಾವಣಾಧಿಕಾರಿ ನವೀನ್‌ಕುಮಾರ್ ಯು. ನೋಟಿಸ್ ಜಾರಿ ಮಾಡಿದ್ದಾರೆ.

'ಪಿಸ್ತೂಲ್ ಪ್ರದರ್ಶಿಸಿದ ಬಿಜೆಪಿ ಅಭ್ಯರ್ಥಿ ಮಣಿಕಂಠ' ಎಂಬ ಶೀರ್ಷಿಕೆಯಡಿ ಶನಿವಾರ 'ಪ್ರಜಾವಾಣಿ' ಪ್ರಕಟಿಸಿದ ವರದಿಯನ್ನು ಆಧರಿಸಿ ಮಾಹಿತಿ ಕೇಳಲಾಗಿದೆ.

'ಹೆಚ್ಚುವರಿ ಜಿಲ್ಲಾಧಿಕಾರಿಯವರ ಸೂಚನೆ ಮೇರೆಗೆ ಚಿತ್ತಾಪುರ ಕ್ಷೇತ್ರದಲ್ಲಿ ಚುನಾವಣೆ ಕರ್ತವ್ಯನಿರತ ಎಲ್ಲಾ ತಂಡಗಳಿಂದ ಸಮಗ್ರ ವರದಿ ಪಡೆದು ತಕ್ಷಣ ಕ್ರಮ ಕೈಗೊಂಡು, ವರದಿ ಸಲ್ಲಿಸ-ಲಾಗುವುದು. 24 ಗಂಟೆಯೊಳಗೆ ಲಿಖಿತ ಮಾಹಿತಿ ನೀಡುವಂತೆ ಮಣಿಕಂಠ ರಾಠೋಡ ಅವರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಅವರು ನೀಡುವ ಮಾಹಿತಿ ಆಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ನವೀನಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಶಿವಾಜಿನಗರ, ಯಶವಂತಪುರ ವಿಧಾನಸಭಾ ಕ್ಷೇತ್ರ: ಅಭ್ಯರ್ಥಿಗಳು ಏನಂತಾರೆ..?

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಸಂತೋಷ ಜಿಗಳಿಕೊಪ್ಪ, ವಿಜಯಕುಮಾರ್ ಎಸ್.ಕೆ.** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ.

ರಿಜ್ವಾನ್ ಅರ್ಷದ್ (ಕಾಂಗ್ರೆಸ್)

‘ಮತ್ತಷ್ಟು ಅಭಿವೃದ್ಧಿಗೆ ಬದ್ಧ’

• **ಕ್ಷೇತ್ರದ ಜನರು ನಿಮಗೆ ಏಕೆ ಮತ ಹಾಕಬೇಕು ?**

ಶಾಸಕನಾಗಿ ಮೂರು ವರ್ಷಗಳ ಅಲ್ಪ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಸುಸಜ್ಜಿತ ರಸ್ತೆ, ಒಳ ಚರಂಡಿ ವ್ಯವಸ್ಥೆ, ಕುಡಿಯುವ ನೀರು ಪೂರೈಕೆ, ಪ್ರಮುಖ ವೃತ್ತ ಹಾಗೂ ಪಾದಚಾರಿ ಮಾರ್ಗಗಳ ಅಭಿವೃದ್ಧಿ ಸೇರಿ ಮೂಲಸೌಕರ್ಯಕ್ಕೆ ಒತ್ತು ನೀಡಿದ್ದೇನೆ. ಕಸ ವಿಲೇವಾರಿ ಸಮಸ್ಯೆ ನಿವಾರಿಸಿದ್ದೇನೆ. ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲಾಗಿದ್ದು, ಮುಂಬರುವ ದಿನಗಳಲ್ಲಿ ಜನರ ಸೇವೆಗೆ ಲಭ್ಯವಾಗಲಿದೆ. ಸರ್ಕಾರಿ ಶಾಲೆಗಳ ಉನ್ನತೀಕರಣ, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಭವನ, ಕ್ರೀಡಾ ಕೇಂದ್ರಗಳು, ಫುಟ್‌ಬಾಲ್ ಕ್ರೀಡಾಂಗಣ ಮಾಡಲಾಗುತ್ತಿದೆ. ಮೂರು ವರ್ಷಗಳಲ್ಲಿ ಇಷ್ಟೆಲ್ಲ ಅಭಿವೃದ್ಧಿ ಮಾಡಿರುವ ನನಗೆ, ಮುಂದಿನ 5 ವರ್ಷ ಅವಕಾಶ ಸಿಕ್ಕರೆ ಮತ್ತಷ್ಟು ಕೆಲಸ ಮಾಡಿ ಮಾದರಿ ಕ್ಷೇತ್ರ ಮಾಡುತ್ತೇನೆ.

• **ಕ್ಷೇತ್ರದಲ್ಲಿ ನಿಮಗೆ ಜನರ ಬೆಂಬಲ ಹೇಗಿದೆ ?**

ತುಂಬಾ ಚೆನ್ನಾಗಿದೆ. ಮೂರು ವರ್ಷ ಜನರ ನಡುವೆ ಕೆಲಸ ಮಾಡಿದ್ದೇನೆ. ಎಲ್ಲರ ಪರಿಚಯ ನನಗಿದೆ. ಪ್ರಚಾರಕ್ಕೆ ತೆರಳಿದಾಗ ಆತ್ಮೀಯತೆಯಿಂದ ಸ್ವಾಗತಿಸುತ್ತಿದ್ದಾರೆ. ಸರ್ವ ಜನಾಂಗದ ಶಾಂತಿ ತೋಟದಂತಿರುವ ಶಿವಾಜಿನಗರದಲ್ಲಿ ಧರ್ಮ– ಜಾತಿ ಭೇದವಿಲ್ಲದೇ ಎಲ್ಲರ ಜೊತೆ ಸೇರಿ ಕ್ಷೇತ್ರದ ಸೇವೆ ಮಾಡುತ್ತಿದ್ದೇನೆ. ಇದು ನನ್ನ ರಾಜಕೀಯದ ಶಿಸ್ತು.

• **ನಿಮ್ಮ ನಿಜವಾದ ಪ್ರತಿಸ್ಪರ್ಧಿ ಯಾರು?**

ನನ್ನ ಕೆಲಸಗಳು ಜನರ ಕಣ್ಣಿಗೆ ಕಾಣುತ್ತಿವೆ. ಭಾರೀ ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದ್ದೇನೆ. ಬಿಜೆಪಿ ಅಭ್ಯರ್ಥಿ ಪ್ರತಿಸ್ಪರ್ಧಿ ಇರಬಹುದು



ಎನ್. ಚಂದ್ರ (ಬಿಜೆಪಿ)

‘ಜನರ ನಾಡಿಮಿಡಿತ ಗೊತ್ತು’

• **ಕ್ಷೇತ್ರದ ಜನರು ನಿಮಗೆ ಏಕೆ ಮತ ಹಾಕಬೇಕು ?**

ನಾನು ಹುಟ್ಟಿ ಬೆಳೆದ ಕ್ಷೇತ್ರವಿದು. ಇಲ್ಲಿಯ ಜನರ ನಾಡಿಮಿಡಿತ ನನಗೆ ಗೊತ್ತು. ಅವರ ಎಲ್ಲ ಕಷ್ಟಗಳಿಗೆ ಸ್ಪಂದಿಸುತ್ತ ಬಂದಿದ್ದೇನೆ. ಒಂಟಿ ಮನೆ ಯೋಜನೆಯಡಿ 503 ಮನೆ ನಿರ್ಮಿಸಲು ಶ್ರಮಿಸಿದ್ದೇನೆ. ಕುಡಿಯುವ ನೀರಿನ ಸಮಸ್ಯೆ ನಿವಾರಿಸಲಾಗಿದೆ. ಪ್ರತಿವರ್ಷ 500 ಮಹಿಳೆಯರಿಗೆ ಹೊಲಿಗೆ ಯಂತ್ರ, 800 ಮಕ್ಕಳ ವಿದ್ಯಾಭ್ಯಾಸಕ್ಕೆ ಆರ್ಥಿಕ ನೆರವು ನೀಡಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಜನರ ಜೊತೆ ನಿಂತಿದ್ದೇನೆ. ಈ ಬಾರಿ ನನಗೆ ಮತ ನೀಡಿದರೆ, ಜನರಿಗೆ ಹಾಗೂ ಕ್ಷೇತ್ರಕ್ಕೆ ಸರ್ಕಾರದ ಎಲ್ಲ ಯೋಜನೆಗಳ ಲಾಭ ತಲುಪಿಸುತ್ತೇನೆ

• **ಕ್ಷೇತ್ರದಲ್ಲಿ ನಿಮಗೆ ಜನರ ಬೆಂಬಲ ಹೇಗಿದೆ ?**

ಉತ್ತಮವಾಗಿದೆ. ಎಲ್ಲ ಧರ್ಮ–ಜಾತಿ ಜನ ನನ್ನ ಪರವಾಗಿದ್ದಾರೆ. ಮುಸ್ಲಿಂ, ಕ್ರೈಸ್ತ ಸಮುದಾಯದವರು ಈ ಬಾರಿ ನನಗೆ ಹೆಚ್ಚಿನ ಬೆಂಬಲ ನೀಡುತ್ತಿದ್ದಾರೆ.

• **ನಿಮ್ಮ ನಿಜವಾದ ಪ್ರತಿಸ್ಪರ್ಧಿ ಯಾರು?**

ಜನರ ಆಶೀರ್ವಾದ ನನ್ನ ಮೇಲಿದೆ. ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿರುದ್ಧ ಪ್ರಚಂಡ ಬಹುಮತ ನನ್ನದಾಗಲಿದೆ.

ಎಸ್.ಟಿ.ಸೋಮಶೇಖರ್ (ಬಿಜೆಪಿ)

‘ನನಗೆ ಎದುರಾಳಿಯೇ ಇಲ್ಲ’

• **ನೀವು ಏನು ಮಾಡುತ್ತೀರಿ ಎಂಬ ಕಾರಣಕ್ಕೆ ಜನ ನಿಮಗೆ ಮತ ಹಾಕಬೇಕು?**

ಜನರ ಕಷ್ಟ ಸುಖಗಳಿಗೆ ಸದಾ ಸ್ಪಂದಿಸಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಲಸಿಕೆ, ಆಹಾರ ಕಿಟ್, ಸತ್ತವರ ಕುಟುಂಬಕ್ಕೆ ₹1 ಲಕ್ಷ ಕೊಡಿಸಿದ್ದೇನೆ. ಎಲ್ಲಕ್ಕಿಂತ ಮುಖ್ಯವಾಗಿ ಕಷ್ಟ ಕಾಲದಲ್ಲಿ ಅವರ ಜೊತೆಯಲ್ಲಿದ್ದೆ.

• **ಮೂರು ಬಾರಿ ಶಾಸಕರಾಗಿ ಕ್ಷೇತ್ರದ ಅಭಿವೃದ್ಧಿಗೆ ನೀಡಿರುವ ಕೊಡುಗೆ ಏನು?**

ನಾನೇನು ಮಾಡಿದ್ದೀನಿ ಎಂಬುದು ಯಶವಂತಪುರ ಕ್ಷೇತ್ರದ ಜನರಿಗೆ ಗೊತ್ತಿದೆ. ₹ 209 ಕೋಟಿ ಮೊತ್ತದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ₹12 ಕೋಟಿ ಮೊತ್ತದ ಡಯಾಲಿಸಿಸ್ ಕೇಂದ್ರ ಮಂಜೂರು ಮಾಡಿಸಿದ್ದೇನೆ. 17 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಮನೆ –ಮನೆಗೆ ಕುಡಿಯುವ ನೀರು ತಲುಪಿಸಿದ್ದೇನೆ.

• **ನಿಮ್ಮ ನಿಜವಾದ ಎದುರಾಳಿ ಯಾರು, ಗೆಲ್ಲಲು ನಿಮಗಿರುವ ಬೆಂಬಲ ಎಂಥದ್ದು?**

ನನಗೆ ಎದುರಾಳಿಯೇ ಇಲ್ಲ. ಪ್ರತಿಸ್ಪರ್ಧಿ ಐದು ವರ್ಷಕ್ಕೊಮ್ಮೆ ಜನರ ಮುಂದೆ ಬರುತ್ತಾರೆ. ನಾನು ಸದಾ ಜನರೊಟ್ಟಿಗೆ ಇರುತ್ತೇನೆ. ಜನರೇ ಚುನಾವಣಾ ಪ್ರಚಾರ ಮಾಡುತ್ತಿದ್ದಾರೆ. ಗೆಲುವಿನ ಬಗ್ಗೆ ಸಂಶಯ ಬೇಡ.



ಟಿ.ಎನ್.ಜವರಾಯಿಗೌಡ (ಜೆಡಿಎಸ್)

‘ಬಿಜೆಪಿಯ ದುರಾಡಳಿತಕ್ಕೆ ಜನ ಬೇಸತ್ತಿದ್ದಾರೆ’

• **ನಾಲ್ಕನೇ ಬಾರಿಗೆ ಸ್ಪರ್ಧಿಸಿದ್ದೀರಿ, ಈ ಬಾರಿ ಜನರಿಂದ ಸ್ಪಂದನೆ ಇದೆಯೇ?**

ಮೂರು ಬಾರಿ ಸೋತಿರುವುದರಿಂದ ಈ ಬಾರಿ ಆಶೀರ್ವಾದ ಮಾಡಲೇಬೇಕೆಂದು ಜನ ನಿರ್ಣಯಿಸಿದ್ದಾರೆ. ಬಿಜೆಪಿಯ ದುರಾಡಳಿತ, ಸ್ವಜನ ಪಕ್ಷಪಾತ, ಶೇ 40ರಷ್ಟು ಕಮಿಷನ್ ಆಡಳಿತ ನೋಡಿ ಬೇಸತ್ತಿದ್ದಾರೆ. ಈಗಿರುವ ಶಾಸಕರನ್ನು ಮೂರು ಬಾರಿ ಗೆಲ್ಲಿಸಿದ್ದಾರೆ. ಉಪಚುನಾವಣೆಯಲ್ಲಿಯೇ ಅವರು ಸೋಲಬೇಕಿತ್ತು. ಮುಖ್ಯಮಂತ್ರಿಯಾಗಿದ್ದ ಬಿ.ಎಸ್. ಯಡಿಯೂರಪ್ಪ ಅವರ ಸರ್ಕಾರ ಉಳಿಯಬೇಕೆಂಬ ಕಾರಣಕ್ಕೆ ಜನ ಬೆಂಬಲಿಸಿದ್ದರು. ಈಗ ಪರಿಸ್ಥಿತಿ ಬದಲಾಗಿದೆ, ಜನರೇ ಸ್ವಯಂ ಪ್ರೇರಿತರಾಗಿ ನಮ್ಮ ಪರ ಪ್ರಚಾರ ಮಾಡುತ್ತಿದ್ದಾರೆ.

• **ಜನ ನಿಮಗೇ ಏಕೆ ಮತ ಹಾಕಬೇಕು?**

ಮೂರು ಬಾರಿ ಸೋತಿದ್ದೇನೆ. ನನಗೂ ಒಂದು ಅವಕಾಶ ನೀಡಬೇಕು ಎಂದು ಜನ ತೀರ್ಮಾನಿಸಿದ್ದಾರೆ. ಕ್ಷೇತ್ರದ ಅಭಿವೃದ್ಧಿ ಮಾಡಿ ತೋರಿಸುತ್ತೇನೆ.

• **ನಿಮಗೆ ನಿಜವಾದ ಎದುರಾಳಿ ಯಾರು, ಮೂರು ಬಾರಿ ಗೆದ್ದವರನ್ನು ಸೋಲಿಸಲು ಸಾಧ್ಯವೇ?**

ಎಸ್.ಟಿ.ಸೋಮಶೇಖರ್ ಅವರೇ ನೇರ ಎದುರಾಳಿ. ನಾನು ಪ್ರಚಾರಕ್ಕೆ ಹೋದಾಗ ಸಿಗುತ್ತಿರುವ ಜನರ ಪ್ರತಿಕ್ರಿಯೆ ನೋಡಿದರೆ ಗೆಲ್ಲುವ ವಿಶ್ವಾಸ ನೂರಕ್ಕೆ ನೂರರಷ್ಟಿದೆ.

ಪ್ರಕಾಶ್ ನೆಡುಂಗುಡಿ (ಆಮ್ ಆದ್ಮಿ ಪಾರ್ಟಿ)

‘ಬದಲಾವಣೆ ಬಯಸಿದ್ದಾರೆ’

• **ಕ್ಷೇತ್ರದ ಜನರು ನಿಮಗೆ ಏಕೆ ಮತ ಹಾಕಬೇಕು ?**

ದಿಢೀರ್ ಕ್ಷೇತ್ರಕ್ಕೆ ಬಂದು ಚುನಾವಣೆಗೆ ನಿಂತಿಲ್ಲ. ಇಲ್ಲಿಯೇ ನೆಲೆಸಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಜನರ ಕಷ್ಟಗಳಿಗೆ ಸ್ಪಂದಿಸಿದ್ದೇನೆ. ಜನರ ಬೇಡಿಕೆಗಳು ನನಗೆ ಗೊತ್ತಿದೆ. ಮಕ್ಕಳಿಗೆ ಗುಣಮಟ್ಟದ ಶಿಕ್ಷಣ, ಆರೋಗ್ಯ ವ್ಯವಸ್ಥೆ, ಮಹಿಳಾ ಸಬಲೀಕರಣ ಸೇರಿದಂತೆ ಎಲ್ಲ ಸೌಕರ್ಯ ಕಲ್ಪಿಸಿ, ಶಿವಾಜಿನಗರವನ್ನು ಇಡೀ ದೇಶಕ್ಕೆ ಮಾದರಿ ಕ್ಷೇತ್ರ ಮಾಡುವ ಪ್ರಣಾಳಿಕೆ ನನ್ನದು.

• **ಕ್ಷೇತ್ರದಲ್ಲಿ ನಿಮಗೆ ಜನರ ಬೆಂಬಲ ಹೇಗಿದೆ ?**

ಕ್ಷೇತ್ರದ ಜನ, ಧರ್ಮ ಹಾಗೂ ಜಾತಿ ಮೀರಿ ಬೆಂಬಲ ವ್ಯಕ್ತಪಡಿಸುತ್ತಿದ್ದಾರೆ. ಹೋದ ಕಡೆಗಳಲ್ಲಿ ಮತದಾರರ ಸ್ಪಂದನೆ ಉತ್ತಮವಾಗಿದೆ. ಈ ಬಾರಿ ಬದಲಾವಣೆ ಬಯಸಿರುವ ಜನ ನನಗೆ ಬೆಂಬಲ ನೀಡುವ ವಿಶ್ವಾಸವಿದೆ.

• **ನಿಮ್ಮ ನಿಜವಾದ ಪ್ರತಿಸ್ಪರ್ಧಿ ಯಾರು?**

ಕಾಂಗ್ರೆಸ್–ಬಿಜೆಪಿ ಅಭ್ಯರ್ಥಿಗಳೇ ನನ್ನ ಪ್ರತಿಸ್ಪರ್ಧಿಗಳು. ಎರಡೂ ಪಕ್ಷಗಳ ಭ್ರಷ್ಟಾಚಾರ ಹಾಗೂ ಸುಳ್ಳು ಆಶ್ವಾಸನೆಗಳಿಂದ ಬೇಸತ್ತಿರುವ ಜನ ನನ್ನ ಪರ ನಿಂತಿದ್ದಾರೆ. ಪಕ್ಷದಿಂದ ಪಕ್ಷಕ್ಕೆ ಜಿಗಿದು, ವೈಯಕ್ತಿಕ ಬೇಳೆ ಬೇಯಿಸಿಕೊಳ್ಳುತ್ತಿರುವ ಎರಡೂ ಪಕ್ಷದವರಿಗೆ ಚುನಾವಣೆ ಮೂಲಕ ತಕ್ಕ ಪಾಠ ಕಲಿಸಲಿದ್ದಾರೆ

ಎಸ್.ಬಾಲರಾಜ್‌ಗೌಡ (ಕಾಂಗ್ರೆಸ್)

ಕಾಂಗ್ರೆಸ್–ಜೆಡಿಎಸ್ ನಡುವೆಯಷ್ಟೇ ಸ್ಪರ್ಧೆ

• **ಮೊದಲ ಬಾರಿಗೆ ಸ್ಪರ್ಧಿಸಿದ್ದೀರಿ, ಜನ ಬೆಂಬಲ ಇದೆಯೇ?**

ಜನರ ಬೆಂಬಲದ ಜತೆಗೆ ನಾಯಕರ ಬೆಂಬಲವೂ ಇದೆ. ಒಂದೂವರೆ ವರ್ಷದಿಂದ ಕ್ಷೇತ್ರದಲ್ಲೇ ಇದ್ದೇನೆ. ಜನರಿಂದಲೂ ಉತ್ತಮ ಸ್ಪಂದನೆ ದೊರಕುತ್ತಿದೆ.

• **ಜನ ನಿಮಗೆ ಏಕೆ ಮತ ಹಾಕಬೇಕು?**

ನನ್ನನ್ನು ಗೆಲ್ಲಿಸಬೇಕೆಂದಲ್ಲ, ಕಾಂಗ್ರೆಸ್ ಪಕ್ಷವನ್ನು ಗೆಲ್ಲಿಸಲು ಜನ ತೀರ್ಮಾನಿಸಿದ್ದಾರೆ. ಉಚಿತ ಅಕ್ಕಿ, 300 ಯೂನಿಟ್ ಉಚಿತ ವಿದ್ಯುತ್, ನಿರುದ್ಯೋಗಿಗಳಿಗೆ ₹3 ಸಾವಿರ ಸಹಾಯಧನ, ಮಹಿಳೆಯರಿಗೆ ತಿಂಗಳಿಗೆ ₹2 ಸಾವಿರ, ಸರ್ಕಾರಿ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣಕ್ಕೆ ಅವಕಾಶ ನೀಡುವುದಾಗಿ ಕಾಂಗ್ರೆಸ್ ಘೋಷಿಸಿದೆ. ಈ ಎಲ್ಲಾ ಸವಲತ್ತು ಪಡೆಯಲು ಕಾಂಗ್ರೆಸ್ ಅಧಿಕಾರಕ್ಕೆ ತರಲು ಜನ ಹೊರಟಿದ್ದಾರೆ.

• **ಎದುರಾಳಿ ಯಾರು, ಅವರನ್ನು ಮಣಿಸುವ ಶಕ್ತಿ ಇದೆಯೇ?**

ತ್ರಿಕೋನ ಸ್ಪರ್ಧೆ ಇದ್ದಂತೆ ಕಂಡರೂ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆಯೇ ನೇರ ಸ್ಪರ್ಧೆ ಇದೆ. ಬಿಜೆಪಿ ಸರ್ಕಾರವನ್ನು ನೋಡಿ ಜನ ರೋಸಿದ್ದಾರೆ. ಬೇರೆ ಪಕ್ಷದವರು ಎಷ್ಟೇ ದುಡ್ಡುಕೊಟ್ಟರೂ ಮತ ಕಾಂಗ್ರೆಸ್‌ಗೆ ಬರಲಿವೆ. ಆದ್ದರಿಂದ ಗೆಲ್ಲುವ ವಿಶ್ವಾಸ ಇದೆ.

ಚುನಾವಣೆ ಬಳಿಕ ವಿಪಕ್ಷ ನಾಯಕರ ಸಭೆ: ನಿತೀಶ್

ಪಟ್ನಾ (ಪಿಟಿಐ): ಕರ್ನಾಟಕ ವಿಧಾನಸಭಾ ಚುನಾವಣೆ ಬಳಿಕ ಪಟ್ನಾದಲ್ಲಿ ವಿರೋಧ ಪಕ್ಷಗಳ ನಾಯಕರ ಸಭೆ ನಡೆಯಬಹುದು ಎಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಸುಳಿವು ನೀಡಿದ್ದಾರೆ.

ಪ್ರತಿಪಕ್ಷಗಳ ಒಗ್ಗಟ್ಟು ರೂಪಿಸುವ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸುವ ನಿರೀಕ್ಷೆಯಿದೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಎದುರಿಸಲು ವಿರೋಧ ಪಕ್ಷಗಳ ಮೈತ್ರಿಕೂಟ ರಚನೆಗೆ ಸಂಬಂಧಿಸಿದ ವಿಷಯವನ್ನು ಒಟ್ಟಿಗೆ ಕುಳಿತು ಚರ್ಚಿಸುತ್ತೇವೆ ಎಂದು ಅವರು ಹೇಳಿದರು.

ಪ್ರಸ್ತುತ ಹಲವು ನಾಯಕರು ಕರ್ನಾಟಕ ಚುನಾವಣೆ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಅದು ಮುಗಿದ ಬಳಿಕ ಸಭೆ ನಡೆಯುವ ಸ್ಥಳವನ್ನು ನಿರ್ಧರಿಸಲಾಗುವುದು. ಪಟ್ನಾದಲ್ಲಿಯೇ ನಡೆಸಲು ಸರ್ವಾನುಮತದ ನಿರ್ಣಯಕೈಗೊಂಡರೆ, ಇಲ್ಲಿಯೇ ನಡೆಸಲಾಗುವುದು. ನಾವು ಸಂತೋಷದಿಂದ ಸಭೆ ಆಯೋಜಿಸುತ್ತೇವೆ ಎಂದರು.

ಮತದಾರರ ದೂರವಾಣಿ ಸಂಖ್ಯೆ ಅಕ್ರಮ ಸಂಗ್ರಹ: ಆರೋಪ

ವಾಟ್ಸ್‌ಆ್ಯಪ್‌ಗೆ ಗುರುತಿನ ಚೀಟಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ ಕೆಲವು ಮತದಾರರ ವಾಟ್ಸ್‌ಆ್ಯಪ್ ಸಂಖ್ಯೆಗೆ ಮತದಾರರ ಗುರುತಿನ ಚೀಟಿಯ(ಐಡಿ) ವಿವರಗಳಿರುವ ಸಂದೇಶಗಳು ರವಾನೆಯಾಗುತ್ತಿದ್ದು, ದೂರವಾಣಿ ಸಂಖ್ಯೆ ಸಿಕ್ಕಿದ್ದು ಹೇಗೆ ಎಂಬ ಪ್ರಶ್ನೆ ನಿವಾಸಿಗಳಲ್ಲಿ ಉದ್ಭವವಾಗಿದೆ.

‘ಚಿತ್ರ ಸಹಿತ ಇರುವ ಮತದಾರರ ಪಟ್ಟಿಯನ್ನು ಪಡೆದುಕೊಂಡು ಅದರಲ್ಲಿನ ಮತದಾರರ ವಿವರವನ್ನು ಹುಡುಕಿ ಮತಗಟ್ಟೆ ಯಾವುದು ಎಂಬೆಲ್ಲ ವಿವರವನ್ನೂ ಕಳುಹಿಸಲಾಗುತ್ತಿದೆ. ಮತದಾರರ ಪಟ್ಟಿಯಲ್ಲಿ ದೂರವಾಣಿ ಸಂಖ್ಯೆ ಇಲ್ಲ. ಆದರೂ, ದೂರವಾಣಿ ಸಂಖ್ಯೆಯನ್ನು ಪಡೆದಿದ್ದು ಹೇಗೆ’ ಎಂದು ನಿವಾಸಿಗಳು ಪ್ರಶ್ನಿಸಿದ್ದಾರೆ.

‘ಶಾಸಕರು ನಮ್ಮ ದೂರವಾಣಿ ಸಂಖ್ಯೆಯನ್ನು ಅಕ್ರಮವಾಗಿ ಸಂಗ್ರಹಿಸಿದ್ದಾರೆ ಎಂದು ನಿವಾಸಿಗಳು ಟ್ವಿಟರ್‌ನಲ್ಲಿ ದೂರಿದ್ದಾರೆ. ಚುನಾವಣಾಧಿಕಾರಿಗಳಿಗೆ ದೂರು ನೀಡುವುದಾಗಿಯೂ’ ತಿಳಿಸಿದ್ದಾರೆ.

‘ಮಲ್ಲೇಶ್ವರದ ಶಾಸಕರೇ, ನಿಮ್ಮ ಹೆಸರಿನಲ್ಲಿ ನನ್ನ ಮತದಾರರ ವಿವರಗಳೊಂದಿಗೆ ಸಹಿ ಮಾಡಿದ ಎಸ್‌ಎಂಎಸ್ ಬಂದಿದೆ. ನನ್ನ ದೂರವಾಣಿ ಸಂಖ್ಯೆಯನ್ನು ಹೇಗೆ ಪಡೆದಿದ್ದೀರಿ ತಿಳಿಸಿ. ಇದನ್ನು ಪಡೆಯಲು ಎಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನೂ ವಿವರಿಸಿ’ ಎಂದು ವೇಣು ಮಾಧವ್ ಗೋವಿಂದ ಎಂಬುವರು ಟ್ವೀಟ್ ಮಾಡಿದ್ದಾರೆ.

ಸಿಟಿಜನ್ಸ್ ಫಾರ್ ಸ್ಯಾಂಕಿ ಕಲೆಕ್ಟಿವ್‌ನ ಸದಸ್ಯ ವಿನಯ್‌ಕುಮಾರ್, ‘ದೂರವಾಣಿ ಸಂಖ್ಯೆಗೆ ಸಂದೇಶಗಳು ಬರುತ್ತಿರುವುದು ಗೌಪ್ಯತೆಯ ಉಲ್ಲಂಘನೆಯಾಗಿದೆ. ಅಕ್ರಮವಾಗಿ ದತ್ತಾಂಶ ಪಡೆದಿರುವ ಶಂಕೆ ಇದೆ’ ಎಂದು ದೂರಿದ್ದಾರೆ.

ಚಿಲುಮೆ ಸಂಸ್ಥೆ ಚುನಾವಣಾ ಮಾಹಿತಿ ಕಳ್ಳತನದ ವಿವಾದವು ರಾಜ್ಯವನ್ನು ಬೆಚ್ಚಿಬೀಳಿಸಿದ ಬೆನ್ನಲ್ಲೇ ಈ ಬೆಳವಣಿಗೆ ಅಚ್ಚರಿ ಮೂಡಿಸಿದೆ.

‘ಈ ಹಿಂದೆ ತಾವಾಗಿಯೇ ಹಂಚಿಕೊಂಡಿದ್ದ ದೂರವಾಣಿ ಸಂಖ್ಯೆಗಳಿಗೆ ಮಾತ್ರ ಸಂದೇಶ ಕಳುಹಿಸಲಾಗಿದೆ’ ಎಂದು ಶಾಸಕರ ಕಚೇರಿ ಸ್ಪಷ್ಟಪಡಿಸಿದೆ.

₹ 300 ಕೋಟಿ ದಾಟಿದ ಸ್ವತ್ತುಗಳ ವಶ

ಬೆಂಗಳೂರು: ವಿಧಾನಸಭಾ ಚುನಾವಣೆಗೆ ನೀತಿಸಂಹಿತೆ ಜಾರಿಯಾದ ದಿನದಿಂದ ಜಾಗೃತ ದಳಗಳು ಮತ್ತು ತನಿಖಾ ಠಾಣೆಗಳಲ್ಲಿ ವಶಕ್ಕೆ ಪಡೆದಿರುವ ನಗದು ಮತ್ತು ಇತರ ಸ್ವತ್ತುಗಳ ಒಟ್ಟು ಮೌಲ್ಯ ಶುಕ್ರವಾರದ ಅಂತ್ಯಕ್ಕೆ ₹ 302.78 ಕೋಟಿ ತಲುಪಿದೆ.

2018ರ ಚುನಾವಣೆಯಲ್ಲಿ ನೀತಿಸಂಹಿತೆ ಜಾರಿಯಾದ ದಿನದಿಂದ ಚುನಾವಣಾ ಪ್ರಕ್ರಿಯೆ ಅಂತ್ಯಗೊಳ್ಳುವ ದಿನದವರೆಗೆ ಒಟ್ಟು ₹ 185.74 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಅದಕ್ಕೆ ಹೋಲಿಸಿದರೆ ಈ ಬಾರಿ ಸ್ವತ್ತುಗಳ ವಶದಲ್ಲಿ ಶೇಕಡ 68ರಷ್ಟು ಹೆಚ್ಚಳವಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಮಾರ್ಚ್ 29ರಿಂದ ಶುಕ್ರವಾರದವರೆಗೆ ₹ 109.14 ಕೋಟಿ ನಗದು, ₹ 22.14 ಕೋಟಿ ಮೌಲ್ಯದ ಉಚಿತ ಕೊಡುಗೆಗಳು, ₹ 72.70 ಕೋಟಿ ಮೌಲ್ಯದ 19.10 ಲಕ್ಷ ಲೀಟರ್ ಮದ್ಯ, ₹ 18.29 ಕೋಟಿ ಮೌಲ್ಯದ 1,438.66 ಕೆ.ಜಿ. ಮಾದಕ ವಸ್ತುಗಳು, ₹ 76.05 ಕೋಟಿ ಮೌಲ್ಯದ 149.42 ಕೆ.ಜಿ. ಚಿನ್ನ, ₹ 4.44 ಕೋಟಿ ಮೌಲ್ಯದ 637.94 ಕೆ.ಜಿ. ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಶುಕ್ರವಾರ ಒಂದೇ ದಿನ ₹ 6.24 ಕೋಟಿ ನಗದು, ₹ 1.61 ಲಕ್ಷ ಮೌಲ್ಯದ ಉಚಿತ ಕೊಡುಗೆಗಳು, ₹ 4 ಕೋಟಿ ಮೌಲ್ಯದ 94,239 ಲೀಟರ್ ಮದ್ಯ, ₹ 41.58 ಲಕ್ಷ ಮೌಲ್ಯದ 49.72 ಕೆ.ಜಿ. ಮಾದಕ ವಸ್ತು, ₹ 3.70 ಲಕ್ಷ ಮೌಲ್ಯದ 120 ಗ್ರಾಂ. ಚಿನ್ನ, ₹ 85,100 ಮೌಲ್ಯದ 1.48 ಕೆ.ಜಿ. ಬೆಳ್ಳಿ ಸೇರಿದಂತೆ ₹ 10.72 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚುನಾವಣಾ ಅಕ್ರಮದ ಆರೋಪದಡಿ ಈವರೆಗೆ 2,288 ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ. ಅಬಕಾರಿ ಕಾಯ್ದೆ ಉಲ್ಲಂಘನೆ ಆರೋಪದಡಿ 24,271 ಪ್ರಕರಣಗಳನ್ನು ದಾಖಲಿಸಲಾಗಿದೆ.

ರೋಡ್ ಶೋ ಶಿವಾಜಿನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಿಜ್ವಾನ್ ಅರ್ಷದ್ ಅವರು ಭಾರತೀನಗರದಲ್ಲಿ ಬೆಂಬಲಿಗರೊಂದಿಗೆ ರೋಡ್ ಶೋ ನಡೆಸಿದರು

3,773 ಮಂದಿ ಮನೆಯಿಂದ ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: 80 ವರ್ಷ ಮೇಲ್ಪಟ್ಟವರು ಮತ್ತು ಅಂಗವಿಕಲರ ಮನೆಗೇ ತೆರಳಿ ಮತ ಪಡೆಯುವ ಪ್ರಕ್ರಿಯೆಯನ್ನು ಚುನಾವಣಾಧಿಕಾರಿಗಳು ಆರಂಭಿಸಿದ್ದು, ನಗರದಲ್ಲಿ ಮೊದಲ ದಿನ 3,773 ಮಂದಿ ಮತ ಚಲಾಯಿಸಿದರು.

ನಗರದಲ್ಲಿ 80 ವರ್ಷ ಮೇಲ್ಪಟ್ಟವರು 2,35,140 ಮತದಾರರಿದ್ದು, 9,152 ಮಂದಿ ಮನೆಯಿಂದ ಮತದಾನ ಮಾಡಲು ನೋಂದಣಿ ಮಾಡಿಕೊಂಡಿದ್ದಾರೆ. 26,058 ಅಂಗವಿಕಲ ಮತದಾರರಿದ್ದು, ಈ ಪೈಕಿ 119 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಮೊದಲ ದಿನ 49 ಅಂಗವಿಕಲರು ಮನೆಯಿಂದ ಮತದಾನ ಮಾಡಿದರು.

ಮನೆಯಿಂದ ಗೌಪ್ಯ ಮತದಾನ ಮಾಡಲು ಮೇ 6ರವರೆಗೆ ಅವಕಾಶ ಕಲ್ಪಿಸಲಾಗಿದೆ. ಮತದಾರರ ಮನೆಗೆ ಇಬ್ಬರು ಮತಗಟ್ಟೆ ಅಧಿಕಾರಿಗಳು, ಭದ್ರತಾ ಸಿಬ್ಬಂದಿ ತೆರಳಿ ಗುರುತಿನ ಚೀಟಿ ಪರಿಶೀಲಿಸುತ್ತಾರೆ. ಅಂಚೆ ಮತಪತ್ರದಲ್ಲಿ ಗೌಪ್ಯವಾಗಿ ಮತ ಚಲಾಯಿಸಲು ಅವಕಾಶ ಕಲ್ಪಿಸಲಾಗುತ್ತದೆ. ಈ ಎಲ್ಲಾ ಪ್ರಕ್ರಿಯೆಯನ್ನೂ ವಿಡಿಯೊಗ್ರಫಿ ಮಾಡಲಾಗುತ್ತದೆ.

ಮಾಹಿತಿ ನೀಡಿ ಮತದಾರರ ಮನೆಗೆ ಅಧಿಕಾರಿಗಳು ಭೇಟಿ ನೀಡುತ್ತಾರೆ. ಮತದಾರರು ಸಿಗದಿದ್ದರೆ ಮತ್ತೊಂದು ದಿನ ಮನೆಗೆ ತೆರಳಿ ಎರಡನೇ ಅವಕಾಶ ನೀಡಲಾಗುತ್ತದೆ. ಆಗಲೂ ಮತದಾರರು ಮನೆಯಲ್ಲಿ ಇಲ್ಲದಿದ್ದರೆ ಮತ್ತೆ ಅವಕಾಶ ಇರುವುದಿಲ್ಲ. ಮನೆಯಿಂದ ಮತದಾನಕ್ಕೆ ನೋಂದಣಿ ಮಾಡಿಸಿಕೊಂಡಿದ್ದವರಿಗೆ ಮತಗಟ್ಟೆಗೆ ಬಂದು ಮತ ಚಲಾಯಿಸಲು ಕೂಡ ಅವಕಾಶ ಇರುವುದಿಲ್ಲ ಎಂದು ಚುನಾವಣಾ ಅಧಿಕಾರಿಗಳು ವಿವರಿಸಿದ್ದಾರೆ.

ಸಮಾಜ ಒಡೆಯುತ್ತಿರುವ ಬಿಜೆಪಿ: ಪವನ್ ಖೇರಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಮತ್ತು ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಜನರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಬದಲು, ಸಮಾಜ ಒಡೆದು ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದೆ’ ಎಂದು ಎಐಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪವನ್ ಖೇರಾ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ‘ಬೆಲೆ ಏರಿಕೆಯಿಂದ ಜನ ತತ್ತರಿಸಿದ್ದಾರೆ. ಈ ಬೆಲೆ ಏರಿಕೆ ಸಮಸ್ಯೆಗೆ ಪರಿಹಾರವಾಗಿ ಕಾಂಗ್ರೆಸ್ ಪಕ್ಷ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದೆ. ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ವ್ಯತ್ಯಾಸವಿದು’ ಎಂದರು.

‘ಚುನಾವಣೆಯಲ್ಲಿ ಬಿಜೆಪಿ ನಾಯಕರು ಭಾವನಾತ್ಮಕ ವಿಚಾರಗಳ ಮೂಲಕ ಜನರ ಗಮನ ಬೇರೆಡೆ ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ಬೆಲೆ ಏರಿಕೆ, ಮಹಿಳೆಯರ ಮೇಲಿನ ದೌರ್ಜನ್ಯ, ನಿರುದ್ಯೋಗ ಮುಂತಾದ ಗಂಭೀರ ವಿಚಾರಗಳ ಬಗ್ಗೆ ಪ್ರಸ್ತಾಪಿಸುತ್ತಿಲ್ಲ’ ಎಂದು ಟೀಕಿಸಿದರು.

‘2014ರಲ್ಲಿ ₹ 410 ಇದ್ದ ಅಡುಗೆ ಅನಿಲ ಬೆಲೆ ಈಗ ₹ 1,100 ಆಗಿದೆ. 2014ರಲ್ಲಿ ಒಂದು ಲೀಟರ್ ಪೆಟ್ರೋಲ್ ₹ 70ಕ್ಕೆ ಸಿಗುತ್ತಿತ್ತು. ಆದರೆ, ಕಚ್ಚಾ ತೈಲ ಬೆಲೆ ಕುಸಿದಿದ್ದರೂ ಈಗ ಒಂದು ಲೀಟರ್ ಪೆಟ್ರೋಲ್‌ಗೆ ₹ 101 ನೀಡಬೇಕಾಗಿದೆ. ಮನೆ ನಿರ್ಮಾಣದ ವಸ್ತುಗಳಾದ ಸಿಮೆಂಟ್ ₹ 230ರಿಂದ ₹ 430 ಆಗಿದೆ. ಕಬ್ಬಿಣ ಟನ್‌ಗೆ ₹ 51,438ಕ್ಕೆ ಸಿಗುತ್ತಿತ್ತು. ಈಗ ₹ 82,500 ಆಗಿದೆ. ಅಗತ್ಯ ವಸ್ತುಗಳ ಬೆಲೆ ವಿಪರೀತವಾಗಿ ಏರಿಕೆಯಾಗಿದೆ. ಈ ವಿಚಾರಗಳ ಬಗ್ಗೆ ಸರ್ಕಾರ ಚರ್ಚೆ ಮಾಡಲು ಸಿದ್ಧವಿಲ್ಲ’ ಎಂದು ಅವರು ದೂರಿದರು.

‘ಬಿಜೆಪಿ ಮತ್ತು ಮೋದಿ ಅವರಿಗೆ ಕಾಂಗ್ರೆಸ್ ವಿರುದ್ಧ ಸುಳ್ಳು ಆರೋಪ ಮಾಡುವುದು ಚಟವಾಗಿದೆ. ಅವರ ಸರ್ಕಾರದ ಸಾಧನೆ ಹೇಳಿಕೊಳ್ಳಲು ಅವರಿಗೆ ಯಾವುದೇ ವಿಷಯಗಳಿಲ್ಲ. ಹೀಗಾಗಿ, ಅವರು ಅಪಪ್ರಚಾರದ ಚಟಕ್ಕೆ ಸಿಲುಕಿದ್ದಾರೆ’ ಎಂದರು.

ಮಹಾಲಕ್ಷ್ಮೀಲೇಔಟ್ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್.ಕೇಶವಮೂರ್ತಿ ಅವರು ಮಹಾಲಕ್ಷ್ಮೀಪುರದಲ್ಲಿ ಮನೆ, ಮನೆಗೆ ತೆರಳಿ ಮತಯಾಚನೆ ಮಾಡಿದರು. ಯುವ ಕಾಂಗ್ರೆಸ್ ರಾಜ್ಯ ಘಟಕದ ಉಪಾಧ್ಯಕ್ಷ ಎಚ್.ಎಸ್.ಮಂಜುನಾಥಗೌಡ ಇದ್ದರು

ಬಸವನಗುಡಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರವಿ ಸುಬ್ರಹ್ಮಣ್ಯ ಪರವಾಗಿ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಹನುಮಂತನಗರದ 50 ಅಡಿ ರಸ್ತೆಯಲ್ಲಿ ಶನಿವಾರ ಪ್ರಚಾರ ನಡೆಸಿದರು –ಪ್ರಜಾವಾಣಿ ಚಿತ್ರ

ಚನ್ನಪಟ್ಟಣದಲ್ಲಿ ಬಿಜೆಪಿ- ಜೆಡಿಎಸ್ ಪ್ರಚಾರ ಕಾರ್ಯಕ್ರಮ

ಒಂದೇ ದಿನ ಹಾಲಿ–ಮಾಜಿ ಪ್ರಧಾನಿ ಪ್ರಚಾರ!

ಪ್ರಜಾವಾಣಿ ವಾರ್ತೆ

ರಾಮನಗರ: ಜಿಲ್ಲೆಯ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರವು ಭಾನುವಾರ ಹಾಲಿ ಮತ್ತು ಮಾಜಿ ಪ್ರಧಾನಿಗಳ ಪ್ರಚಾರ ಕಾರ್ಯಕ್ರಮಕ್ಕೆ ಸಾಕ್ಷಿ ಆಗಲಿದೆ.

ಚನ್ನಪಟ್ಟಣದಲ್ಲಿ ಮಧ್ಯಾಹ್ನ 1.30ಕ್ಕೆ ಬಿಜೆಪಿಯಿಂದ ಬೃಹತ್ ಸಮಾವೇಶ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಳ್ಳಲಿದ್ದಾರೆ. ರಾಮನಗರ, ಮಂಡ್ಯ ಜಿಲ್ಲೆಗಳ 11 ವಿಧಾನಸಭಾ ಕ್ಷೇತ್ರಗಳ 2 ಲಕ್ಷ ಜನರು ಈ ಕಾರ್ಯಕ್ರಮದಲ್ಲಿ ಭಾಗಿ ಆಗುವ ಸಾಧ್ಯತೆ ಇದೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಶಾಸಕರಾಗಿರುವ ಕ್ಷೇತ್ರದಲ್ಲಿಯೇ ಕಾರ್ಯಕ್ರಮ ಆಯೋಜಿಸುವ ಮೂಲಕ ಜೆಡಿಎಸ್ ಭದ್ರಕೋಟೆಯಲ್ಲಿ ಸಡ್ಡು ಹೊಡೆಯಲು ಬಿಜೆಪಿ ಪ್ರಯತ್ನ ನಡೆಸಿದೆ.

ಮುಖ್ಯಾಂಶಗಳು
- ಬಿಜೆಪಿಯಿಂದ ಬೃಹತ್ ಸಮಾವೇಶ
- ಜೆಡಿಎಸ್ ಕಾರ್ಯಕರ್ತರ ಸಮಾವೇಶದಲ್ಲಿ ಪಾಲ್ಗೊಳ್ಳಲಿರುವ ಎಚ್‌ಡಿಡಿ

ಬಿಜೆಪಿ ತಂತ್ರಕ್ಕೆ ಜೆಡಿಎಸ್ ಸಹ ಪ್ರತಿತಂತ್ರ ರೂಪಿಸಿದ್ದು, ಮಾಜಿ ಪ್ರಧಾನಿ ಹಾಗೂ ಮಾಜಿ ಮುಖ್ಯಮಂತ್ರಿ ಇಬ್ಬರೂ ಭಾನುವಾರವೇ ತಮ್ಮ ಪುತ್ರರ ಕ್ಷೇತ್ರಗಳಲ್ಲಿ ಪ್ರಚಾರ ಕೈಗೊಂಡಿದ್ದಾರೆ. ಈ ಮೂಲಕ ಕಾರ್ಯಕರ್ತರಲ್ಲಿ ಭರವಸೆ ತುಂಬುವ ಪ್ರಯತ್ನ ನಡೆಸಲಿದ್ದಾರೆ.

ಎಚ್.ಡಿ. ದೇವೇಗೌಡರು ತಮ್ಮ ಪುತ್ರ ಎಚ್.ಡಿ. ಕುಮಾರಸ್ವಾಮಿ ಪರವಾಗಿ ಚನ್ನಪಟ್ಟಣ ತಾಲ್ಲೂಕಿನಲ್ಲಿ ಮತಯಾಚನೆ ಕೈಗೊಳ್ಳಲಿದ್ದಾರೆ. ಬೆಳಿಗ್ಗೆ 10.30ಕ್ಕೆ ಹೆಲಿಕಾಪ್ಟರ್ ಮೂಲಕ ಇಗ್ಗಲೂರು ಗ್ರಾಮಕ್ಕೆ ಬಂದಿಳಿಯಲಿರುವ ಗೌಡರು ನಂತರ ಗ್ರಾಮದಲ್ಲಿ ನಡೆಯಲಿರುವ ಜೆಡಿಎಸ್ ಕಾರ್ಯಕರ್ತರ ಸಮಾವೇಶದಲ್ಲಿ ಭಾಗಿ ಆಗಲಿದ್ದಾರೆ.

ಮತ್ತೊಂದೆಡೆ ಎಚ್.ಡಿ. ಕುಮಾರಸ್ವಾಮಿ ರಾಮನಗರ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ಪುತ್ರ ನಿಖಿಲ್ ಪರವಾಗಿ ಭಾನುವಾರ ಮತಯಾಚನೆ ತೊಡಗಿಸಿಕೊಂಡಿದ್ದಾರೆ. ಹಾರೋಹಳ್ಳಿ ಹಾಗೂ ಮರಳವಾಡಿ ಭಾಗದಲ್ಲಿ ಅವರು ಮತಯಾಚನೆ ಮಾಡಲಿದ್ದಾರೆ.

ಜನ ಕಲ್ಯಾಣಕ್ಕಾಗಿ ಪಂಚರತ್ನ ಯೋಜನೆ: ದೇವೇಗೌಡ

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ದೇಶದ ಯಾವುದೇ ರಾಜ್ಯಗಳು ಜಾರಿಗೊಳಿಸದ ಪಂಚರತ್ನ ಯೋಜನೆಗಳನ್ನು ಜೆಡಿಎಸ್ ಅನುಷ್ಠಾನಗೊಳಿಸಲು ಮುಂದಾಗಿದೆ’ ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಹೇಳಿದರು.

ನಗರದ ಪವಾಡ ಬಸವಣ್ಣ ದೇವರ ಮಠದಲ್ಲಿ ಶನಿವಾರ ಆಯೋಜಿಸಿದ್ದ ಜೆಡಿಎಸ್ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಅವರು, ‘ಇಲ್ಲಿ ಯೋಗ್ಯ ಅಭ್ಯರ್ಥಿಯಾಗಿರುವ ಡಾ. ಕೆ. ಶ್ರೀನಿವಾಸಮೂರ್ತಿ ಅವರನ್ನು ಗೆಲ್ಲಿಸುವ ಮೂಲಕ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಲು ಕೊಡುಗೆ ನೀಡಬೇಕು’ ಎಂದು ಮನವಿ ಮಾಡಿದರು.

‘ಎಲ್ಲ ಕಾರ್ಯಕರ್ತರು, ಮುಖಂಡರು ಪಕ್ಷದ ಗೆಲುವಿಗೆ ಶ್ರಮಿಸಬೇಕು. ಕೆಲ ಪಕ್ಷ ವಿರೋಧಿಗಳ ಮಾತನ್ನು ತಿರಸ್ಕರಿಸಬೇಕು’ ಎಂದು ಕರೆ ನೀಡಿದರು.

ಶಾಸಕ ಡಾ. ಕೆ. ಶ್ರೀನಿವಾಸಮೂರ್ತಿ ಮಾತನಾಡಿ, ‘ಇತರ ಪಕ್ಷಗಳು ಅಧಿಕಾರ, ಹಣ, ಆಸೆ–ಆಮಿಷವೊಡ್ಡಿದರೂ ಪಕ್ಷಾಂತರ ಮಾಡಿಲ್ಲ. ಇದನ್ನು ಮನಗಂಡು ಜೆಡಿಎಸ್ ವರಿಷ್ಠರು, ಸತತ ನಾಲ್ಕನೇ ಬಾರಿಗೆ ಪಕ್ಷದ ಅಭ್ಯರ್ಥಿಯಾಗಿ ಮಾಡಿದ್ದಾರೆ. ಅಧಿಕಾರಾವಧಿಯಲ್ಲಿ ಯಾವುದೇ ಪಕ್ಷವನ್ನು ಟೀಕೆ ಮಾಡಿಲ್ಲ. ಕ್ಷೇತ್ರದ ಯಾವುದೇ ಜನಾಂಗದವರ ಮೇಲೆ ಜಾತಿ ನಿಂದನೆ ಮೊಕದ್ದಮೆ ಹಾಕಿಸಿಲ್ಲ. ಕೇವಲ ಅಭಿವೃದ್ಧಿಗೆ ಮಾತ್ರ ಗಮನ ನೀಡಿದ್ದೇನೆ. ಆದ್ದರಿಂದ ದಿನಬೆಳಗಾದರೆ ಕ್ಷೇತ್ರದಲ್ಲಿ ಲಭ್ಯವಿರುವ ಅಭ್ಯರ್ಥಿಯನ್ನು ಜನತೆ ಕೈಹಿಡಿಯಬೇಕು. ರಾಮನಗರ ಜಿಲ್ಲೆ, ಬೆಂಗಳೂರು ನಗರದ ಅಭ್ಯರ್ಥಿಗಳನ್ನಲ್ಲ’ ಎಂದರು.

ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ಟಿ.ತಿಮ್ಮರಾಯಪ್ಪ, ವಿಧಾನ ಪರಿಷತ್ ಮಾಜಿ ಸದಸ್ಯ ರಮೇಶ್‌ಗೌಡ, ಜೆಡಿಎಸ್ ರಾಜ್ಯ ಪ್ರಚಾರ ಸಮಿತಿ ಸದಸ್ಯ ಡಾ.ಎಲ್.ಕೃಷ್ಣಮೂರ್ತಿ ಇದ್ದರು.

ದುಡ್ಡು ಕೊಟ್ಟವರ ಪರ ಚುನಾವಣಾ ಸಮೀಕ್ಷೆ: ಕುಮಾರಸ್ವಾಮಿ ಟೀಕೆ

ಪ್ರಜಾವಾಣಿ ವಾರ್ತೆ

ಮಾಲೂರು (ಕೋಲಾರ ಜಿಲ್ಲೆ): ‘ಕೆಲ ಮಾಧ್ಯಮದವರು ಸಮೀಕ್ಷೆ ನಡೆಸಿ ಈ ಬಾರಿ ಜೆಡಿಎಸ್‌ಗೆ 29 ಸೀಟು ಬರಲಿದೆ ಎನ್ನುತ್ತಿದ್ದಾರೆ. ನಾನೂ ಖಾಸಗಿಯಾಗಿ ಸಮೀಕ್ಷೆ ನಡೆಸಿ ಅದನ್ನು ಯಾವುದಾದರೂ ಸುದ್ದಿವಾಹಿನಿಗೆ ಕೊಟ್ಟು, ಜೊತೆಗೆ ₹10 ಕೋಟಿ, ₹20 ಕೋಟಿ ನೀಡಿದರೆ 29 ಸ್ಥಾನ ಇದ್ದದ್ದು ನಾಳೆ 129 ಆಗುತ್ತದೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಪಟ್ಟಣದಲ್ಲಿ ಶನಿವಾರ ಜೆಡಿಎಸ್ ಸಮಾವೇಶ ಉದ್ದೇಶಿಸಿ ಮಾತನಾಡಿ, ‘ಈ ಸಮೀಕ್ಷೆಗಳನ್ನು ನಂಬಬೇಡಿ. ಜನಬಲ ಇದ್ದರೂ ನನಗೆ ಹಣದ ಕೊರತೆ ಇದೆ. ಬಿಜೆಪಿ, ಕಾಂಗ್ರೆಸ್ ರೀತಿ ಕಮಿಷನ್ ಪಡೆದಿದ್ದರೆ ಇವತ್ತು ದುಡ್ಡು ಚೆಲ್ಲಿ ಮತ ಪಡೆಯಬಹುದಿತ್ತು. ಆದರೆ, ಅಂಥ ಕುಟುಂಬದಿಂದ ನಾನು ಬಂದಿಲ್ಲ. ಭಿಕ್ಷೆ ಎತ್ತಿ ಚುನಾವಣೆ ಎದುರಿಸಬೇಕಾಗಿದೆ’ ಎಂದರು. ‘ಬಿಜೆಪಿ ಹಾಗೂ ಕಾಂಗ್ರೆಸ್‌ನ ಉತ್ತರ ಭಾರತದ ನಾಯಕರು ಈಗ ಕರ್ನಾಟಕ ಹಾಗೂ ಕನ್ನಡಿಗರನ್ನು ನೆನಪಿಸಿಕೊಂಡು ಬರುತ್ತಿದ್ದಾರೆ. ಮತ ಕೇಳಿ ವಾಪಸ್ ಹೋಗುತ್ತಾರೆ’ ಎಂದು ಲೇವಡಿ ಮಾಡಿದರು.

‘ರಾಜ್ಯದಲ್ಲಿ ಪ್ರವಾಹ ಉಂಟಾದಾಗ, ಕೋಲಾರದಲ್ಲಿ ಮಾವಿನ ಬೆಳೆ ಕುಸಿದಾಗ ಪ್ರಧಾನಿ ನರೇಂದ್ರ ಮೋದಿ ಬರಲಿಲ್ಲ. ಕೋಲಾರದ ಜನರಿಗೆ ಅವಶ್ಯವಾಗಿ ಬೇಕಿರುವ ನೀರಾವರಿ ಸೌಲಭ್ಯ ಕೊಡಲು ಬರಲಿಲ್ಲ. ಈಗ ಎಡಗೈನಲ್ಲಿ ಟಾಟಾ ಮಾಡಿ ಬಿಜೆಪಿ ಅಭ್ಯರ್ಥಿ ಗೆಲ್ಲಿಸಿ ಎಂದು ಮನವಿ ಮಾಡಲು ಕೋಲಾರಕ್ಕೆ ಭಾನುವಾರ ಭೇಟಿ ನೀಡಲಿದ್ದಾರೆ’ ಎಂದು ಟೀಕಿಸಿದರು.

‘ಕಾಂಗ್ರೆಸ್, ಬಿಜೆಪಿಗೆ ಮತ ಹಾಕಿದರೆ ದೆಹಲಿಯಿಂದ ಆಡಳಿತ ನಡೆಯುತ್ತದೆ. ದೆಹಲಿಯಿಂದ ಬರುವ ಸೂಚನೆಗೆ ಕಾಯಬೇಕಾಗುತ್ತದೆ. ಆದರೆ, ಜೆಡಿಎಸ್ ಆಡಳಿತ ರಾಜ್ಯದ ಹಳ್ಳಿಗಳಿಂದ ನಡೆಯುತ್ತದೆ. ನಿಮಗೆ ಯಾವ ರೀತಿಯ ಆಡಳಿತ ಬೇಕು ತೀರ್ಮಾನಿಸಿ’ ಎಂದರು.

‘ಜೆಡಿಎಸ್ ಸ್ವಂತ ಬಲದಲ್ಲಿ ಅಧಿಕಾರ ಹಿಡಿಯುವುದು ನಿಶ್ಚಿತ’

• ವಿ.ಎಸ್. ಸುಬ್ರಹ್ಮಣ್ಯ

ಪ್ರಜಾವಾಣಿ ಸಂದರ್ಶನ

ಎಚ್.ಡಿ. ದೇವೇಗೌಡ

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೆಂಗಳೂರು: ‘ಸ್ವಂತ ಬಲದ ಮೇಲೆ ಅಧಿಕಾರ ಹಿಡಿಯುತ್ತೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿರುವ ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರು, ಪಕ್ಷದ ಸಂಘಟನಾ ಬಲದ ಕುರಿತು ಭರವಸೆಯ ಮಾತುಗಳಾಡಿದ್ದಾರೆ. ‘ಪ್ರಜಾವಾಣಿ’ಗೆ ನೀಡಿದ ಸಂದರ್ಶನದಲ್ಲಿ, ‘ಮತ್ತೆ ಮೈತ್ರಿಯ ಪ್ರಶ್ನೆಯೇ ಇಲ್ಲ’ ಎಂದು ಬಲವಾಗಿ ಪ್ರತಿಪಾದಿಸಿರುವ ಅವರು, ಮೋದಿಯವರ ಜತೆಗಿನ ಬಾಂಧವ್ಯ ಕುರಿತು ಹೇಳಿಕೊಂಡಿದ್ದಾರೆ.

• ಚುನಾವಣೆಗೆ ಇನ್ನು ಹತ್ತು ದಿನ ಇದೆ. ನಿಮ್ಮ ಪಕ್ಷಕ್ಕೆ ಅನುಕೂಲಕಾರಿಯಾಗಿರುವ ಅಂಶಗಳೇನು?

ಎಚ್.ಡಿ. ಕುಮಾರಸ್ವಾಮಿ ರೂಪಿಸಿರುವ ಪಂಚರತ್ನ ಯೋಜನೆಗಳನ್ನು ಜನರು ಬಹುವಾಗಿ ಮೆಚ್ಚಿಕೊಂಡಿದ್ದು, ಎಲ್ಲೆಡೆ ಬೆಂಬಲಿಸುತ್ತಿದ್ದಾರೆ. ಎರಡೂ ರಾಷ್ಟ್ರೀಯ ಪಕ್ಷಗಳು ಜೆಡಿಎಸ್‌ನಂತಹ ಪ್ರಾದೇಶಿಕ ಪಕ್ಷಕ್ಕೆ ಬಹುಮತ ದೊರೆಯುವುದಿಲ್ಲ ಎನ್ನುತ್ತಿವೆ. ಅವರು ವಾಸ್ತವವನ್ನು ಮುಚ್ಚಿಡುತ್ತಿದ್ದಾರೆ ಎಂಬುದು ನನ್ನ ವಿನಮ್ರ ಅಭಿಪ್ರಾಯ. ಸರ್ಕಾರ ರಚನೆಗೆ ಅಗತ್ಯವಿರುವಷ್ಟು ಸ್ಥಾನಗಳನ್ನು ಜೆಡಿಎಸ್ ಪಡೆಯುವುದು ನಿಶ್ಚಿತ.

• ನರೇಂದ್ರ ಮೋದಿ ಅವರ ಪ್ರಚಾರ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುವುದೇ?

ಪ್ರಧಾನಿಯವರು ಬೀದರ್‌ನಿಂದ ಪ್ರಚಾರ ಆರಂಭಿಸಿದ್ದಾರೆ. ಮೇ 8ರವರೆಗೂ 40 ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ. ಅವರು ಬಿಜೆಪಿಯ ತಾರಾ ಪ್ರಚಾರಕ. ಅಮಿತ್ ಶಾ, ನಡ್ಡಾ ಸೇರಿದಂತೆ ಇತರ ನಾಯಕರನ್ನೂ ನಾನು ಕಡೆಗಣಿಸುವುದಿಲ್ಲ. ಆದರೆ, ಮೋದಿ ಅವರಿಗೆ ತಮ್ಮದೇ ಆದ ಚರಿಷ್ಮಾ ಇದೆ.

• ಎದುರಾಳಿಗಳ ಪೈಪೋಟಿಯ ಮಧ್ಯೆ ಜೆಡಿಎಸ್‌ಗೆ ಎಷ್ಟು ಸ್ಥಾನ ಸಿಗಲಿದೆ?

ನಾನೇ ಖುದ್ದಾಗಿ ಶುಕ್ರವಾರ ಏಳು ಕಡೆ ಪ್ರಚಾರ ನಡೆಸಿದ್ದೇನೆ. ಇನ್ನೂ 42 ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗಿಯಾಗುವೆ. ಸಿಪಿಎಂ, ಆರ್‌ಪಿಐ, ಸಿಪಿಐ ನಮ್ಮೊಂದಿಗೆ ಇವೆ. ಅವರು ಕೂಡ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುತ್ತಿದ್ದಾರೆ. ಇವರೆಲ್ಲರ ಒಗ್ಗಟ್ಟಿನಿಂದ ನಮಗೆ ಸರಳ ಬಹುಮತ ದೊರಕುವ ವಿಶ್ವಾಸವಿದೆ.

• ಅತಂತ್ರ ಫಲಿತಾಂಶ ಬಂದರೆ ಜೆಡಿಎಸ್ ಯಾರ ಜೊತೆ ಕೈ ಜೋಡಿಸಲಿದೆ?

ಆ ರೀತಿಯ ಫಲಿತಾಂಶ ಬರುವುದಿಲ್ಲ ಎಂಬ ಭರವಸೆ ಇದೆ. ಇಡೀ ಹಿಂದೂಸ್ತಾನದಲ್ಲಿ ಕೊಟ್ಟ ಮಾತನ್ನು ಕೃತಿಯಲ್ಲಿ ತೋರಿಸುವ ಏಕೈಕ ರಾಜಕಾರಣಿ ಎಚ್.ಡಿ. ಕುಮಾರಸ್ವಾಮಿ. ಆ ನಂಬಿಕೆಯೇ ನಮ್ಮ ಪಕ್ಷವನ್ನು ಬಹುಮತದ ಗುರಿಗೆ ತಲುಪಿಸಲಿದೆ.

• ಪ್ರಧಾನಿ ಮೋದಿ ಅವರು ನಿಮ್ಮ ಬಗೆಗೆ ಮೃದು ಧೋರಣೆ ಹೊಂದಿದ್ದಾರಲ್ಲ?

ವೈಯಕ್ತಿಕವಾಗಿ ನಮ್ಮಿಬ್ಬರಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಗೋಧ್ರಾ ಪ್ರಕರಣದಲ್ಲಿ ಮಾತ್ರ ನಾನು ಪ್ರಧಾನಿಯವರ ವಿರುದ್ಧ ಸದನದಲ್ಲಿ ವಾಗ್ದಾಳಿ ನಡೆಸಿದ್ದೆ. ಹಾಸನದಲ್ಲಿ ಐಐಟಿ ಸ್ಥಾಪಿಸಬೇಕೆಂಬ ನನ್ನ ಮನವಿಯನ್ನು ಅವರು ತಿರಸ್ಕರಿಸಿದ್ದಾರೆ. ಆ ವಿಚಾರದಲ್ಲಿ ನನಗೆ ಬೇಸರವಿದೆ. ಸದನಲ್ಲಿದ್ದಾಗ ಖರ್ಗೆ ಸೇರಿದಂತೆ ಎಲ್ಲರೂ ನನ್ನ ಬಳಿ ಬಂದು ಹೋಗುತ್ತಾರೆ. ಪ್ರಧಾನಿಯೂ ಹಾಗೆಯೇ ಬಂದು ಕುಶಲ ವಿಚಾರಿಸುತ್ತಾರೆ.

• ಸಮ್ಮಿಶ್ರ ಸರ್ಕಾರ ಉರುಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಎನ್.ಆರ್. ಸಂತೋಷ್ ಅವರನ್ನೇ ಅರಸೀಕೆರೆಯಲ್ಲಿ ಕಣಕ್ಕೆ ಇಳಿಸಿದ್ದೀರಿ?

ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನಗೊಳಿಸಲು ಯಡಿಯೂರಪ್ಪ ಅವರು ಸಂತೋಷ್ ಅವರನ್ನು ಬಳಕೆ ಮಾಡಿಕೊಂಡಿದ್ದರು ಎಂಬುದು ನಿಜ. ಅದರಲ್ಲಿ ಯಾವುದೇ ಮುಚ್ಚುಮರೆ ಇಲ್ಲ. ಅದೇ ಯಡಿಯೂರಪ್ಪ ಅವರು ಸಂತೋಷ್ ಅವರಿಗೆ ಟಿಕೆಟ್ ನೀಡಲಿಲ್ಲ. ತುಂಬಾ ನೋವಿನಿಂದ ಅವರು ಹೊರಬಂದರು. ಸಂತೋಷ್ ಪ್ರಬಲವಾದ ವ್ಯಕ್ತಿ. ಅವರ ಸಮಾಜವೂ ದೊಡ್ಡದಿದೆ. ಆರ್ಥಿಕವಾಗಿಯೂ ಶಕ್ತಿ ಇದೆ. ಅವರ ಜತೆ ಅಶೋಕ್ ಎಂಬ ಕುರುಬ ಸಮಾಜದ ಯುವಕ ಕೈಜೋಡಿಸಿದ್ದಾರೆ. ಈ ಬಾರಿ ಶಿವಲಿಂಗೇಗೌಡನನ್ನು ಅರಸೀಕೆರೆ ಕ್ಷೇತ್ರದಿಂದ ತೆಗೆಯಲೇಬೇಕು ಎಂಬ ಪಣ ತೊಟ್ಟಿದ್ದಾರೆ.



• 1994ರಲ್ಲಿ ನೀವು ಗೆದ್ದು ಮುಖ್ಯಮಂತ್ರಿ ಗಾದಿ ಏರಿದ ರಾಮನಗರ ಕ್ಷೇತ್ರದಿಂದಲೇ ಈಗ ಮೊಮ್ಮಗ ನಿಖಿಲ್ ಸ್ಪರ್ಧೆ ಮಾಡುತ್ತಿರುವ ಬಗ್ಗೆ ಏನು ಹೇಳುತ್ತೀರಿ?

ನಿಖಿಲ್ ಕುಮಾರಸ್ವಾಮಿ ನೂರಕ್ಕೆ ನೂರರಷ್ಟು ರಾಮನಗರದಲ್ಲಿ ಗೆಲ್ಲುತ್ತಾರೆ. ಯಾವ ಸಂಶಯವೂ ಇಲ್ಲ. ರಾಮನಗರ, ಚನ್ನಪಟ್ಟಣಕ್ಕೆ ನಾನೂ ಹೋಗುತ್ತೇನೆ. ಈ ಎರಡು ಕ್ಷೇತ್ರಗಳಿಗೆ ಏನೇನು ಕೆಲಸ ಮಾಡಿದ್ದೇನೆ ಎಂಬುದನ್ನು ಜನರ ಮುಂದಿಡುವೆ.

• ಹಾಸನ ಕ್ಷೇತ್ರದ ಟಿಕೆಟ್ ವಿಚಾರದಲ್ಲಿ ದೇವೇಗೌಡರ ಕುಟುಂಬದಲ್ಲಿ ಭಿನ್ನಾಭಿಪ್ರಾಯ ಬಂದದ್ದು ನಿಜವೇ?

ಇಲ್ಲ, ಆ ರೀತಿ ಏನೂ ಆಗಿಲ್ಲ. ಮಾಧ್ಯಮಗಳಲ್ಲಿ ಸೃಷ್ಟಿ ಮಾಡಿರುವಂಥದ್ದು. ನನ್ನ ಸೊಸೆ ಭವಾನಿ ರೇವಣ್ಣ ಅವರೇ ಮುಂದೆ ನಿಂತು ಸ್ವರೂಪ್ ಅವರನ್ನು ಗೆಲ್ಲಿಸಲು ಪಣತೊಟ್ಟು ಕೆಲಸ ಮಾಡುತ್ತಿದ್ದಾರೆ. ರೇವಣ್ಣ ಸೇರಿದಂತೆ ಯಾರಲ್ಲೂ ಭಿನ್ನಾಭಿಪ್ರಾಯವಿಲ್ಲ. ಹಾಸನದ ಏಳು ಕ್ಷೇತ್ರಗಳಲ್ಲೂ ಗೆಲುವು ಸಾಧಿಸುವ ಸಂಕಲ್ಪ ಮಾಡಿದ್ದಾರೆ.

• ಹಳೇ ಮೈಸೂರು ಭಾಗದಲ್ಲಿ, ಅದರಲ್ಲೂ ವಿಶೇಷವಾಗಿ ಮಂಡ್ಯದಲ್ಲಿ ಜೆಡಿಎಸ್ ಹಿಡಿತ ಸಡಿಲವಾಗುತ್ತಿದೆಯೇ?

ಮಂಡ್ಯದಲ್ಲಿ ಮಾಜಿ ಸಂಸದ ಕೆ.ವಿ. ಶಂಕರಗೌಡ ಅವರ ಮೊಮ್ಮಗ ವಿಜಯಾನಂದ್ ಸ್ವಲ್ಪ ಬಿಗಿ ನಿಲುವು ತಾಳಿದ್ದಾರೆ. ನಾನೇ ಖುದ್ದಾಗಿ ಹೋಗಿ ಸಭೆ ನಡೆಸುವೆ. ಅವರ ಅಜ್ಜನಿಗೆ ಹೇಗೆ ನೆರವಾಗಿದ್ದೆ ಎಂಬುದನ್ನು ವಿವರಿಸುವೆ. ವಿಜಯಾನಂದ್ ಅವರಿಗೂ ರಾಜಕೀಯ ಭವಿಷ್ಯ ರೂಪಿಸಿಕೊಳ್ಳಲು ನೆರವಾಗುವ ಭರವಸೆ ನೀಡುವೆ. ಅವರ ಮುನಿಸು ತಣ್ಣಗಾಗಬಹುದು ಎಂಬ ಭರವಸೆ ಇದೆ.

• ಬಿಜೆಪಿ ಮತ್ತು ಜೆಡಿಎಸ್ ನಡುವೆ ಚುನಾವಣಾ ಪೂರ್ವ ಮೈತ್ರಿ ನಡೆದಿದೆ ಎಂಬ ಹಾಸನ ಶಾಸಕ ಪ್ರೀತಂ ಗೌಡ ಹೇಳಿಕೆಯ ಮರ್ಮವೇನು?

ಅವರಿಗೆ ಹೇಳಲು ಬೇರೇನೂ ಅಸ್ತ್ರ ಇಲ್ಲ. ನನ್ನ ಮೊಮ್ಮಗ ಪ್ರಜ್ವಲ್ ಹಾಸನ ಕ್ಷೇತ್ರದ ಮುಸ್ಲಿಂ ಸಮುದಾಯದ ಎಲ್ಲ ಮತಗಳನ್ನೂ ಪಡೆಯಲು ಶ್ರಮಿಸುತ್ತಿದ್ದಾರೆ. ಭವಾನಿ ರೇವಣ್ಣ ಅವರು ಸ್ವರೂಪ್ ಅವರನ್ನು ತನ್ನ ಮಗನಂತೆ ಕಂಕುಳಲ್ಲಿ ಕಟ್ಟಿಕೊಂಡು ಹೋರಾಡುತ್ತಿದ್ದಾರೆ. ಸ್ವರೂಪ್‌ನನ್ನು ಗೆಲ್ಲಿಸಿ, ಪ್ರೀತಂ ಗೌಡನನ್ನು ಸೋಲಿಸಲು ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ.

ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಬಿಜೆಪಿ ಅಭ್ಯರ್ಥಿಗಳ ಪರ ಶನಿವಾರ ಮಂಗಳೂರಿನಲ್ಲಿ ರೋಡ್ ಶೋ ನಡೆಸಿದರು – ಪ್ರಜಾವಾಣಿ ಚಿತ್ರ

ಮೋದಿ ನೇತೃತ್ವದಲ್ಲೇ ಕರ್ನಾಟಕ ಅಭಿವೃದ್ಧಿ: ಅಮಿತ್ ಶಾ

ಪ್ರಜಾವಾಣಿ ವಾರ್ತೆ

ಮಡಿಕೇರಿ: ‘ಕರಾವಳಿ ಕರ್ನಾಟಕದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿ ಗೆಲ್ಲಲಿದ್ದು, ಪೂರ್ಣ ಬಹುಮತ ಸಿಗಲಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲೇ ಕರ್ನಾಟಕ ಮುಂದುವರೆಯುತ್ತದೆ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದರು.

ನಗರದಲ್ಲಿ ಶನಿವಾರ ರೋಡ್ ಶೋ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ‘ಮೋದಿ ಕುರಿತು ಕಾಂಗ್ರೆಸ್‌ನವರು ಎಷ್ಟೇ ಕೆಟ್ಟ ಶಬ್ದಗಳನ್ನು ಬಳಸಿದರೂ ಒಳ್ಳೆಯದೇ ಆಗುತ್ತದೆ. ನಮ್ಮ ಗೆಲುವು ತಡೆಯಲಾಗದು’ ಎಂದರು.

ಅವರು ಇಲ್ಲಿನ ಮಹದೇವಪೇಟೆಯ ಚೌಡೇಶ್ವರಿದೇಗುಲದಿಂದತೆರೆದವಾಹನದಲ್ಲಿ ಕೊಡಗಿನ ಪೇಟಾ ಧರಿಸಿ ಮೆರವಣಿಗೆ ಹೊರಟರು. ಸುಮಾರು 5 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು. ಜನರಲ್ ತಿಮ್ಮಯ್ಯ ವೃತ್ತದವರೆಗೂ ಮೆರವಣಿಗೆ ಸಾಗಬೇಕಿತ್ತು. ಆದರೆ, ದಟ್ಟ ಮೋಡ ಕವಿದು ಮಳೆ ಸೂಚನೆ ಕಂಡಿದ್ದರಿಂದ ಹೆಲಿಕಾಪ್ಟರ್ ಪ್ರಯಾಣಕ್ಕೆ ಅಡ್ಡಿಯಾಗುತ್ತದೆಂದು ರೋಡ್ ಶೋ ಅನ್ನು ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬಿ.ದೇವಯ್ಯ ವೃತ್ತದಲ್ಲೇ ಮೊಟಕುಗೊಳಿಸಿ ಹೊರಟರು. ಕೆಲಹೊತ್ತಿನಲ್ಲೇ ಧಾರಾಕಾರ ಮಳೆ ಸುರಿಯಿತು.

ಮಂಗಳೂರು, ಉಡುಪಿಯಲ್ಲೂ ಶಾ ಅವರು ರೋಡ್ ಶೋ ನಡೆಸಿದರು.

ಉರಿಗೌಡ–ನಂಜೇಗೌಡ ಸ್ಮರಿಸಿದ ರಾಜನಾಥ ಸಿಂಗ್

ಪ್ರಜಾವಾಣಿ ವಾರ್ತೆ

ಮೈಸೂರು/ಮಂಡ್ಯ: ಮೈಸೂರಿನ ವಿವೇಕಾನಂದ ವೃತ್ತ ಹಾಗೂ ಮಂಡ್ಯ ತಾಲ್ಲೂಕಿನ ಕೊತ್ತತ್ತಿ ಗ್ರಾಮದಲ್ಲಿ ಶನಿವಾರ ನಡೆದ ಬಿಜೆಪಿ ಪ್ರಚಾರ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ವಿವಾದಿತ ಉರಿಗೌಡ, ದೊಡ್ಡನಂಜೇಗೌಡರನ್ನು ಸ್ಮರಿಸಿ ಅಚ್ಚರಿ ಮೂಡಿಸಿದರು.

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಮಧ್ಯಪ್ರವೇಶದ ನಂತರ ಉರಿಗೌಡ–ನಂಜೇಗೌಡ ವಿಚಾರ ತಣ್ಣಗಾಗಿತ್ತು. ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚನೆಗೆ ಬಂದಿದ್ದ ರಾಜನಾಥ ಸಿಂಗ್ ನಾಡಿಗೆ ಕೊಡುಗೆ ನೀಡಿರುವ ವ್ಯಕ್ತಿಗಳನ್ನು ಸ್ಮರಿಸಿದರು.

‘ನಾಲ್ವಡಿ ಕೃಷ್ಣರಾಜ ಒಡೆಯರ್, ಸರ್ ಎಂ.ವಿಶ್ವೇಶ್ವರಯ್ಯ, ಉರಿಗೌಡ, ದೊಡ್ಡನಂಜೇಗೌಡ, ಅಂಬರೀಷ್ ಮುಂತಾದವರು ಮಂಡ್ಯ ಜಿಲ್ಲೆಗೆ ಅಪಾರ ಕೊಡುಗೆ ನೀಡಿದ್ದಾರೆ’ ಎಂದು ಉಲ್ಲೇಖಿಸಿದರು.

‘ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಷ ಸರ್ಪಕ್ಕೆ ಹೋಲಿಸಿದ್ದಾರೆ. ಆದರೆ, ಪ್ರಧಾನಿ ಎಂದಿಗೂ ಯಾರ ಬಗ್ಗೆಯೂ ಕೀಳಾಗಿ ಮಾತನಾಡಿಲ್ಲ. ಮೋದಿ ಜನಪ್ರಿಯತೆಯನ್ನು ಕಂಡು ಹತಾಶರಾಗಿರುವ ಕಾಂಗ್ರೆಸ್‌ನವರಿಗೆ ದೇವರು ಹೊಟ್ಟೆಕಿಚ್ಚು ತಡೆದುಕೊಳ್ಳುವ ಶಕ್ತಿ ಕೊಡಲಿ’ ಎಂದರು.

‘ನಮ್ಮದು ನುಡಿದಂತೆ ನಡೆಯುವ ಪಕ್ಷ. ನುಡಿದಂತೆಯೇ ಸಂವಿಧಾನದ 370ನೇ ವಿಧಿ ರದ್ದು ಮಾಡಿದ್ದೇವೆ. ಕಾಶ್ಮೀರವನ್ನು ಭಾರತದಲ್ಲೇ ಉಳಿಸಿದ್ದೇವೆ. ಪಿಎಫ್‌ಐ ಸಂಘಟನೆಯನ್ನು ನಿಷೇಧಿಸಿದ್ದೇವೆ. ಆತ್ಮನಿರ್ಭರ ಭಾರತ ಯೋಜನೆಯಡಿ ಶಸ್ತ್ರಾಸ್ತ್ರಗಳನ್ನು ದೇಶದಲ್ಲೇ ತಯಾರಿಸುತ್ತಿದ್ದೇವೆ’ ಎಂದು ಹೇಳಿದರು.

‘ವಿಶ್ವದೆಲ್ಲೆಡೆ ಭಾರತಕ್ಕೆ ಗೌರವ ಸಿಗುತ್ತಿದೆ. ನರೇಂದ್ರ ಮೋದಿ ಮಾತಿಗಾಗಿ ವಿಶ್ವವೇ ಕಾಯುತ್ತದೆ. ರಷ್ಯಾ, ಉಕ್ರೇನ್ ಕದನದಲ್ಲಿ ಸಿಲುಕಿದವರನ್ನು ರಕ್ಷಿಸಲಾಯಿತು. ಸುಡಾನ್‌ನಲ್ಲಿ ಸಿಲುಕಿದವರನ್ನೂ ಆಪರೇಷನ್ ಕಾವೇರಿ ಹೆಸರಿನಲ್ಲಿ ರಕ್ಷಿಸಲಾಗುತ್ತಿದೆ’ ಎಂದರು.

ಮಸೀದಿ ಕೆಡವಿ, ಮಂದಿರ ನಿರ್ಮಿಸಿ: ಮನವಿ

ಶ್ರೀರಂಗಪಟ್ಟಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಸಚ್ಚಿದಾನಂದ ಮಾತನಾಡಿ ‘ಮತಾಂಧ ಟಿಪ್ಪು ಶ್ರೀರಂಗಪಟ್ಟಣದಲ್ಲಿ ಮೂಡಲಬಾಗಿಲು ಆಂಜನೇಯ ದೇವಾಲಯ ಕೆಡವಿ ಮಸೀದಿ ನಿರ್ಮಿಸಿದ್ದ. ಮಸೀದಿ ಕೆಡವಿ ಆ ಜಾಗದಲ್ಲಿ ಮತ್ತೆ ಆಂಜನೇಯ ದೇವಾಲಯ ನಿರ್ಮಿಸಿಕೊಡಿ’ ಎಂದು ರಾಜನಾಥ ಸಿಂಗ್ ಅವರಿಗೆ ಮನವಿ ಮಾಡಿದರು. ಇದಕ್ಕೆ ರಾಜನಾಥ ಸಿಂಗ್ ಪ್ರತಿಕ್ರಿಯೆ ನೀಡಲಿಲ್ಲ.

ಮೈಸೂರಿನಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾತನಾಡಿದರು

ರೊಟ್ಟಿ ಊಟ ಕೊಪ್ಪಳ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಂಜುಳಾ ಅಮರೇಶ ಕರಡಿ ಪರ ಪ್ರಚಾರಕ್ಕೆ ಶನಿವಾರ ಕೊಪ್ಪಳಕ್ಕೆ ಬಂದಿದ್ದ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಉದ್ಯಮಿ ಹೇಮರಾಜ್ ಶರ್ಮಾ ಅವರ ಮನೆಯಲ್ಲಿ ಸಜ್ಜೆ ರೊಟ್ಟಿ, ಜೋಳದ ರೊಟ್ಟಿ, ಚಪಾತಿ ಊಟ ಸವಿದರು

ಕುಸಿದ ಸಿದ್ದರಾಮಯ್ಯ; ರಕ್ಷಿಸಿದ ಅಂಗರಕ್ಷಕ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರು ಕಾರಿನ ಬಾಗಿಲ ಬಳಿ ಕುಸಿದು ಬಿದ್ದಾಗ ಅದನ್ನು ಗಮನಿಸಿದ ಅವರ ಅಂಗರಕ್ಷಕ ತಕ್ಷಣವೇ ಅವರ ನೆರವಿಗೆ ಧಾವಿಸಿ ರಕ್ಷಿಸಿದ ಘಟನೆ ಜಿಲ್ಲೆಯ ಕೂಡ್ಲಿಗಿ ಪಟ್ಟಣದಲ್ಲಿ ಶನಿವಾರ ನಡೆದಿದೆ.

ಕೂಡ್ಲಿಗಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಎನ್.ಟಿ. ಶ್ರೀನಿವಾಸ್ ಪರ ಪಟ್ಟಣದಲ್ಲಿ ಪ್ರಚಾರ ಕೈಗೊಳ್ಳಲು ಸಿದ್ದರಾಮಯ್ಯನವರು ಪಟ್ಟಣ ಹೊರವಲಯದ ಹೆಲಿಪ್ಯಾಡ್‌ಗೆ ಬಂದಿಳಿದಿದ್ದರು. ಹೆಲಿಕಾಪ್ಟರ್‌ನಿಂದ ಕೆಳಗಿಳಿದ ನಂತರ ಮೊಬೈಲ್‌ನಲ್ಲಿ ಮಾತನಾಡಿದರು. ಹೆಲಿಪ್ಯಾಡ್‌ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಕಾರ್ಯಕರ್ತರನ್ನು ಕಂಡ ಅವರು, ಕಾರಿನ ಒಂದು ಬದಿಯಲ್ಲಿ ನಿಂತು ಜನರತ್ತ ಕೈಬೀಸಿದರು. ಬಳಿಕ ಕಾರೊಳಗೆ ಕುಳಿತುಕೊಳ್ಳುವಾಗ ಆಯತಪ್ಪಿ ಕುಸಿದರು. ತಕ್ಷಣವೇ ಅಂಗರಕ್ಷಕ ಅವರ ನೆರವಿಗೆ ಧಾವಿಸಿ, ಒಳಗೆ ಕೂರಿಸಲು ನೆರವಾದರು.

ಕಾರಿನೊಳಗೆ ನೀರು, ಗ್ಲುಕೋಸ್ ಕೊಟ್ಟು ಉಪಚರಿಸಲಾಯಿತು. ಸುಧಾರಿಸಿಕೊಂಡ ಸಿದ್ದರಾಮಯ್ಯನವರು ಡಾ.ಎನ್.ಟಿ. ಶ್ರೀನಿವಾಸ್ ಅವರ ಮನೆಗೆ ತೆರಳಿ, ಕೆಲಕಾಲ ವಿಶ್ರಾಂತಿ ಪಡೆದು ವೇದಿಕೆ ಕಾರ್ಯಕ್ರಮದತ್ತ ಮುಖ ಮಾಡಿದರು.

‘ಗಾಬರಿ ಪಡುವಂತಹದ್ದೇನಿಲ್ಲ, ಗಟ್ಟಿಮುಟ್ಟಾಗಿದ್ದೇನೆ. ನಿತ್ಯ ಅಡ್ಡಾಡುವ ಕಾರು ಬದಲಾಗಿರುವ ಕಾರಣ ಸೈಡ್ ಸ್ಟೆಪ್ ಇಲ್ಲದ ಕಾರಿನಲ್ಲಿ ಕಾಲು ಜಾರಿ ಹಿಂದಕ್ಕೆ ಮುಗ್ಗರಿಸಿದ್ದೆ. ಈಗ ಆರಾಮಾಗಿದ್ದೇನೆ’ ಎಂದು ಸಿದ್ದರಾಮಯ್ಯ ಟ್ವೀಟ್ ಮಾಡಿದ್ದಾರೆ.

‘ಸಿದ್ದರಾಮಯ್ಯನವರ ಆರೋಗ್ಯದಲ್ಲಿ ಯಾವುದೇ ಸಮಸ್ಯೆ ಇಲ್ಲ. ಬಿಸಿಲು ಹೆಚ್ಚಾಗಿರುವುದರಿಂದ ಸ್ವಲ್ಪ ಬಸವಳಿದಿದ್ದರು. ವೈದ್ಯನಾಗಿ ಅವರ ಆರೋಗ್ಯ ವಿಚಾರಿಸಿದ್ದೇನೆ. ಆರೋಗ್ಯವಾಗಿದ್ದೇನೆ ಎಂದು ಹೇಳಿದ್ದಾರೆ. ನಿತ್ಯ ಮೂರ್‍ನಾಲ್ಕು ಕ್ಷೇತ್ರಗಳಲ್ಲಿ ಬಿಡುವಿಲ್ಲದೆ ಪ್ರಚಾರ ಮಾಡುತ್ತಿದ್ದಾರೆ. ಅವರ ಕೈಗೆ ಸಣ್ಣ ಇನ್‌ಫೆಕ್ಷನ್ ಆಗಿರುವುದು ಬಿಟ್ಟರೆ ಬೇರೇನೂ ಆಗಿಲ್ಲ’ ಎಂದು ಕೂಡ್ಲಿಗಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ, ವೃತ್ತಿಯಿಂದ ವೈದ್ಯರಾಗಿರುವ ಡಾ.ಎನ್.ಟಿ. ಶ್ರೀನಿವಾಸ್ ಹೇಳಿದರು.

ಜನರತ್ತ ಕೈಬೀಸಿದ ನಂತರ ಕಾರಿನೊಳಗೆ ಕೂರುವಾಗ ಕುಸಿದ ಸಿದ್ದರಾಮಯ್ಯ

> **ಸಿದ್ದರಾಮಯ್ಯ ಅವರು ಕುಸಿದು ಬಿದ್ದಿರುವುದಕ್ಕೆ ವ್ಯಂಗ್ಯ ಮಾಡುವುದು ಸರಿಯಲ್ಲ. ಅವರು ಚೇತರಿಸಿಕೊಂಡು ಬೇಗನೇ ಪ್ರಚಾರಕ್ಕೆ ಬರಲಿ ಎಂದು ಆಶಿಸುವೆ**
> **ಬಿ.ಎಸ್.ಯಡಿಯೂರಪ್ಪ**
> ಸದಸ್ಯ, ಬಿಜೆಪಿ ಸಂಸದೀಯ ಮಂಡಳಿ

ಮನೆಗಳೇ ಮತಗಟ್ಟೆಗಳಾದವು

ಪ್ರಜಾವಾಣಿ ವಾರ್ತೆ

ಬೆಂಗಳೂರು: 80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಿನ ಹಿರಿಯ ನಾಗರಿಕರು ಹಾಗೂ ಅಂಗವಿಕಲರಿರುವ ಸಾವಿರಾರು ಮನೆಗಳು ಶನಿವಾರ ಕೆಲಕಾಲ ಮತಗಟ್ಟೆಗಳಾಗಿ ಪರಿವರ್ತನೆಯಾಗಿದ್ದವು. 33,036 ಮಂದಿ ಮನೆಯಿಂದಲೇ ಹಕ್ಕು ಚಲಾಯಿಸುವ ಮೂಲಕ ಜನತಂತ್ರದ ಹಬ್ಬದಲ್ಲಿ ಭಾಗಿಯಾದರು.

ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಹಿರಿಯ ನಾಗರಿಕರು ಮತ್ತು ಅಂಗವಿಕಲರು ಮತ ಚಲಾಯಿಸಲು ಮತಗಟ್ಟೆಯವರೆಗೂ ಬರುವುದನ್ನು ತಪ್ಪಿಸುವುದಕ್ಕಾಗಿ ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಮನೆಯಿಂದಲೇ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ. ಶನಿವಾರ ಆರಂಭವಾದ ಈ ಪ್ರಕ್ರಿಯೆ ಮೇ 6ರವರೆಗೂ ನಡೆಯಲಿದೆ.

ಮನೆಯಿಂದ ಮತದಾನಕ್ಕೆ ಅವಕಾಶ ಕೋರಿದ್ದ ಅರ್ಹ ಮತದಾರರ ಮನೆಗಳಿಗೆ ಮತಗಟ್ಟೆ ಅಧಿಕಾರಿ, ಸಹಾಯಕ ಸಿಬ್ಬಂದಿ, ಪೊಲೀಸರು ಸೇರಿದಂತೆ ಭದ್ರತಾ ಸಿಬ್ಬಂದಿಯೊಂದಿಗೆ ತೆರಳಿದರು. ಮತಪತ್ರ, ಮೊಹರು ಮಾಡಿರುವ ಮತಪೆಟ್ಟಿಗೆ, ಮತ ಚಲಾಯಿಸುವಾಗ ಗೋಪ್ಯತೆ ಕಾಯ್ದುಕೊಳ್ಳಲು ರಟ್ಟಿನ ತಡೆಗೋಡೆ ಎಲ್ಲವನ್ನೂ ತಂದಿದ್ದರು. ಕೆಲಕಾಲ ಮನೆಯ ಕೊಠಡಿಗಳನ್ನೇ ಮತಗಟ್ಟೆಗಳನ್ನಾಗಿ ಪರಿವರ್ತಿಸಿ ಮತ ಚಲಾವಣೆಗೆ ಅವಕಾಶ ಕಲ್ಪಿಸಲಾಯಿತು.

‘ಮೊದಲ ದಿನ 22 ಚುನಾವಣಾ ಜಿಲ್ಲೆಗಳ ಮನೆಯಲ್ಲಿ ಮತದಾನ ಪ್ರಕ್ರಿಯೆ ಆರಂಭವಾಗಿದೆ. ಉಳಿದ 12 ಚುನಾವಣಾ ಜಿಲ್ಲೆಗಳಲ್ಲಿ ಒಂದೆರಡು ದಿನಗಳಲ್ಲಿ ಈ ಪ್ರಕ್ರಿಯೆ ಆರಂಭವಾಗಲಿದೆ’ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

‘ರಾಜ್ಯದಲ್ಲಿ 80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದ 80,250 ಮಂದಿ ಹಾಗೂ 19,279 ಅಂಗವಿಕಲರು ಮನೆಯಿಂದ ಮತದಾನಕ್ಕೆ ಹೆಸರು ನೋಂದಣಿ ಮಾಡಿಸಿಕೊಂಡಿದ್ದಾರೆ. ಮೊದಲ ದಿನ 2,542 ತಂಡಗಳನ್ನು 2,706 ಮಾರ್ಗಗಳಲ್ಲಿ ನಿಯೋಜಿಸಲಾಗಿತ್ತು. 1,627 ತಂಡಗಳ 1,627 ಮಾರ್ಗಗಳಲ್ಲಿ ಪ್ರಕ್ರಿಯೆಯನ್ನು ಕೈಗೊಂಡಿದ್ದು, ಬೆಳಿಗ್ಗೆ 9ರಿಂದ ಸಂಜೆ 5ರ ಅವಧಿಯಲ್ಲಿ 33,036 ಮಂದಿ ಮತ ಚಲಾಯಿಸಿದ್ದಾರೆ’ ಎಂದು ವಿವರ ನೀಡಿದ್ದಾರೆ.

ಭೋವಿ ಶ್ರೀ ವಾಪಸ್ ಕಳುಹಿಸಿದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಬಿಜೆಪಿ ಅಭ್ಯರ್ಥಿ ಬಿ.ವೈ.ವಿಜಯೇಂದ್ರ ಪರ ಮತ ಕೇಳಲು ಚಿತ್ರದುರ್ಗದ ಭೋವಿ ಗುರು ಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಅವರು ಶಿಕಾರಿಪುರ ತಾಲ್ಲೂಕಿನ ಅಂಬರಗೊಪ್ಪ ಶಾಂತಿವನ ಗ್ರಾಮಕ್ಕೆ ಬಂದಿದ್ದಾರೆ ಎಂದು ಆರೋಪಿಸಿ ಗ್ರಾಮಸ್ಥರು ಅವರನ್ನು ಶನಿವಾರ ವಾಪಸ್ ಕಳುಹಿಸಿದ್ದಾರೆ.

ಶಾಂತಿವನದಲ್ಲಿರುವ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಚಿನ್ನಪ್ಪ ಅವರ ಮನೆಗೆ ಭೋವಿ ಪೀಠದ ಶ್ರೀಗಳು ತೆರಳಿದ್ದರು. ಗುಂಪೊಂದು ಶ್ರೀಗಳ ಕಾರನ್ನು ತಡೆದು, ಧಿಕ್ಕಾರ ಕೂಗಿದ್ದಾರೆ. ಈ ವೇಳೆ ಗುಂಪಿನಲ್ಲಿದ್ದವರೊಂದಿಗೆ ಚರ್ಚಿಸಲು ಸ್ವಾಮೀಜಿ ಮುಂದಾಗುತ್ತಾರೆ. ಆಗ ಕಾರಿನ ಚಾಲಕ ಏಕಾಏಕಿ ಕಾರನ್ನು ಜೋರಾಗಿ ಓಡಿಸಿಕೊಂಡು ಹೋಗುತ್ತಾರೆ. ಗುಂಪಿನಲ್ಲಿದ್ದವರು ಘೋಷಣೆ ಮೂಲಕ ಆಕ್ರೋಶ ಮುಂದುವರಿಸುತ್ತಾರೆ. ಈ ದೃಶ್ಯವಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

‘ನಾನು ವಿಜಯೇಂದ್ರ ಪರ ಚುನಾವಣೆ ಪ್ರಚಾರಕ್ಕೆ ಹೋಗಿರಲಿಲ್ಲ. ಅಂಬಾರಕೊಪ್ಪ ಮಾರ್ಗದಲ್ಲಿ ಯಾವಾಗ ಬಂದರೂ ಮಠದ ಭಕ್ತರಾದ ಚಿನ್ನಪ್ಪ ಅವರ ಶಾಂತಿವನದ ಮನೆಗೆ ಪೂಜೆ, ಪ್ರಸಾದಕ್ಕೆ ಹೋಗುವುದು ವಾಡಿಕೆ. ಹೀಗಾಗಿ ಅಲ್ಲಿಗೆ ಹೋಗಿದ್ದೆನು. ಅಲ್ಲಿ ಯಾವುದೇ ಸಭೆ ಮಾಡಿಲ್ಲ. ಹೀಗಿದ್ದರೂ ನನ್ನನ್ನು ತಡೆದ ಗುಂಪು ಕಾರಿನ ಮೇಲೆ ಕಲ್ಲು ತೂರಲು ಸಿದ್ಧತೆ ನಡೆಸಿತ್ತು. ಅದನ್ನು ಗಮನಿಸಿದ ಚಾಲಕ ಸಮಯಪ್ರಜ್ಞೆಯಿಂದ ಕಾರನ್ನು ವೇಗವಾಗಿ ಓಡಿಸಿಕೊಂಡು ಸುರಕ್ಷಿತವಾಗಿ ಕರೆತಂದರು’ ಎಂದು ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಭೋವಿ ಗುರುಪೀಠದ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ ಇದ್ದ ಕಾರನ್ನು ಗ್ರಾಮಸ್ಥರು ತಡೆದು ಆಕ್ರೋಶ ವ್ಯಕ್ತಪಡಿಸಿದರು

‘ಹದ್ದು ಹಾರಿದರೆ, ಕೋಣ ಹಾರುತ್ತಿದೆ ಎನ್ನುತ್ತಾರೆ’

ಪ್ರಜಾವಾಣಿ ವಾರ್ತೆ

ಹಾಸನ: ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದೇಶದಲ್ಲಿ ದಂಗೆಯಾಗಲಿದೆ’ ಎಂದು ಕೇಂದ್ರ ಗೃಹ ಸಚಿವರು ಹೇಳಿದ್ದಾರೆ. 70 ವರ್ಷ ಪಕ್ಷ ಅಧಿಕಾರ ನಡೆಸಿದ್ದು, ಎಲ್ಲಿ ದಂಗೆಗಳಾಗಿವೆ ಎಂಬುದನ್ನು ಹೇಳಲಿ. ಆಕಾಶದಲ್ಲಿ ಹದ್ದು ಹಾರುತ್ತಿದ್ದರೆ, ಪ್ರಧಾನಿ ಮೋದಿ ಹಾಗೂ ಅಮಿತ್ ಶಾ ಅವರು, ಕೋಣ ಹಾರುತ್ತಿದೆ ಎನ್ನುತ್ತಾರೆ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಲೇವಡಿ ಮಾಡಿದರು.

ಸಕಲೇಶಪುರ ತಾಲ್ಲೂಕಿನ ಬಾಳ್ಳುಪೇಟೆಯಲ್ಲಿ ಪ್ರಚಾರ ನಡೆಸಿದ ಅವರು, ‘ರೈತರ ಆದಾಯ ದ್ವಿಗುಣಗೊಳಿಸುವುದು, ಪ್ರತಿಯೊಬ್ಬರ ಖಾತೆಗೆ ₹ 15 ಲಕ್ಷ ಹಾಕುವುದು, ವರ್ಷಕ್ಕೆ 2 ಕೋಟಿ ಉದ್ಯೋಗ ಕಲ್ಪಿಸುವುದು, ನಾ ಖಾವುಂಗಾ ನಾ ಖಾನೆ ದುಂಗಾ ಎಂದು ಹೇಳಿದ್ದೆಲ್ಲ ಏನಾಯಿತು’ ಎಂದು ಪ್ರಶ್ನಿಸಿದರು.

ಸೋಮಣ್ಣ ಗ್ರಾಮ ಪ್ರವೇಶಕ್ಕೆ ವಿರೋಧ

ನಂಜನಗೂಡು (ಮೈಸೂರು): ತಾಲ್ಲೂಕಿನ ಬಿಳಗಲಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಪ್ರಚಾರಕ್ಕೆ ವಿರೋಧ ವ್ಯಕ್ತಪಡಿಸಿದ ಯುವಕರ ತಂಡ, ಇಲ್ಲಿನ ಅಂಬೇಡ್ಕರ್ ಪ್ರತಿಮೆ ಬಳಿ ಜಮಾಯಿಸಿ ಗ್ರಾಮಕ್ಕೆ ಬರದಂತೆ ಪ್ರತಿರೋಧ ತೋರಿ ಪ್ರತಿಭಟಿಸಿದರು.

ಬಿಜೆಪಿ ಕಾರ್ಯಕರ್ತರೊಂದಿಗೆ ವಿ.ಸೋಮಣ್ಣ ಗ್ರಾಮಕ್ಕೆ ಬಂದು ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಪ್ರಚಾರ ನಡೆಸಬೇಕಾಗಿತ್ತು. ಆದರೆ, ಯುವಕರು ವಿರೋಧ ವ್ಯಕ್ತಪಡಿಸಿ, ‘ಅಂಬೇಡ್ಕರ್ ರಚಿಸಿರುವ ಸಂವಿಧಾನವನ್ನು ಬದಲಾಯಿಸುವುದಾಗಿ ಹೇಳುವ ಬಿಜೆಪಿ ನಾಯಕರು ನಮ್ಮ ಗ್ರಾಮಕ್ಕೆ ಬರುವುದು ಬೇಡ. ಸಂವಿಧಾನದಿಂದ ಅಧಿಕಾರಕ್ಕೆ ಬಂದ ಇವರು, ಅದನ್ನೇ ವಿರೋಧಿಸುತ್ತಾರೆ. ಚುನಾವಣೆಯಲ್ಲಿ ಯಾರು ಬೇಕಾದರೂ ಗೆಲ್ಲಲಿ, ಆದರೆ ಸೋಮಣ್ಣ ಗ್ರಾಮಕ್ಕೆ ಬರುವುದು ಬೇಡ’ ಎಂದು ಹೇಳಿ ಅಂಬೇಡ್ಕರ್‌ಗೆ ಜೈಕಾರ ಕೂಗಿದರು.

‘ಜನರೆದುರು ತನ್ನ ಕಷ್ಟ ಹೇಳುವ ಪ್ರಧಾನಿ’

ಒಂದನೇ ಪುಟದಿಂದ...

‘ಕರ್ನಾಟಕದ ಸ್ಥಿತಿ ನೋಡಿ ದುಃಖವಾಗುತ್ತದೆ. ಹಿಂದಿನ ಚುನಾವಣೆಯಲ್ಲಿ ನೀವು ಭರವಸೆ ಇಟ್ಟು ಸರ್ಕಾರವೊಂದನ್ನು ರಚಿಸಿದ್ದೀರಿ. ಅದನ್ನು ಒಡೆದು ಬೇರೊಂದು ಸರ್ಕಾರ ರಚನೆಯಾಯಿತು. ಜನಾದೇಶಕ್ಕೆ ಗೌರವ ಕೊಡಲಿಲ್ಲ. ನಿಮ್ಮ ಮತಕ್ಕೂ ಗೌರವ ನೀಡಲಿಲ್ಲ. ಜಗದೀಶ ಶೆಟ್ಟರ್, ಲಿಂಗಾಯತ ಸಮಾಜಕ್ಕೂ ಗೌರವ ಕೊಡಲಿಲ್ಲ’ ಎಂದು ಟೀಕಿಸಿದರು.

‘ಮುಕ್ತವಾಗಿ ಭ್ರಷ್ಟಾಚಾರ ಮಾಡುವವರಿಗೆ ಗೌರವ ನೀಡಿದರು. ಭ್ರಷ್ಟರಿಗೆ ಟಿಕೆಟ್ ನೀಡಿದರು. ಇದಲ್ಲದೇ, ಭ್ರಷ್ಟರಿಗೆ ದೂರವಾಣಿ ಕರೆಮಾಡಿ ಪ್ರಧಾನಿಯವರು ಮಾತನಾಡಿದರು’ ಎಂದು ಟೀಕಿಸಿದರು.

‘ಎಲ್ಲೆಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಎಷ್ಟರ ಮಟ್ಟಿಗೆ ಜನರು ರೋಸಿ ಹೋಗಿದ್ದಾರೆ ಎಂದರೆ ಶಿಗ್ಗಾವಿಯಲ್ಲಿ ರೈತನೊಬ್ಬ ಲಂಚವಾಗಿ ನೀಡಲು ತನ್ನ ಎರಡು ಎತ್ತುಗಳನ್ನು ಸರ್ಕಾರಿ ಕಚೇರಿಗೆ ತಂದಿದ್ದ. ಶೇ 40ರಷ್ಟು ಕಮಿಷನ್ ಪಡೆಯುತ್ತಿದ್ದಾರೆಂದು ಪ್ರಧಾನಿಗೆ ಪತ್ರ ಬರೆದರೂ ಏನೂ ಕ್ರಮಕೈಗೊಂಡಿಲ್ಲ’ ಎಂದು ಹರಿಹಾಯ್ದರು. ಸಭೆಯಲ್ಲಿ ಜಗದೀಶ ಶೆಟ್ಟರ್ ಪಾಲ್ಗೊಂಡು ಗಮನ ಸೆಳೆದರು.

ಕುಂದಗೋಳದಲ್ಲಿ ರೋಡ್ ಶೋ: ಪ್ರಿಯಾಂಕಾ ಗಾಂಧಿ ಕುಂದಗೋಳದಲ್ಲಿ ಅದ್ದೂರಿ ರೋಡ್ ಶೋ ನಡೆಸಿ, ಕ್ಷೇತ್ರದ ಅಭ್ಯರ್ಥಿ ಕುಸುಮಾವತಿ ಶಿವಳ್ಳಿ ಪರ ಪ್ರಚಾರ ನಡೆಸಿದರು.

ಮೋದಿ ಪ್ರಚಾರ; ‘ಕಮಲ’ ಸಡಗರ

ಒಂದನೇ ಪುಟದಿಂದ...

‘ಕರ್ನಾಟಕದಲ್ಲಿ ಪೂರ್ಣ ಬಹುಮತದ ಸರ್ಕಾರವನ್ನು ಆಯ್ಕೆ ಮಾಡಬೇಕು. ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿಯ ಡಬಲ್ ಎಂಜಿನ್ ಸರ್ಕಾರವಿದ್ದಲ್ಲಿ ದೇಶ ಅಭಿವೃದ್ಧಿ ಆಗುತ್ತದೆ. ಎರಡೂ ಸರ್ಕಾರಗಳು ಜೊತೆಗೂಡಿ ಕೆಲಸ ಮಾಡಿದಲ್ಲಿ, ಕರ್ನಾಟಕವು ನಿಶ್ಚಿತವಾಗಿ ಮೊದಲನೇ ಸ್ಥಾನಕ್ಕೆ ಏರುತ್ತದೆ. ಇದನ್ನು ಯಾರಿಂದಲೂ ತಡೆಯಲು ಆಗದು’ ಎಂದು ಅವರು ಭಾಷಣದ ವೇಳೆ ಪ್ರತಿಪಾದಿಸಿದರು.

ನೇತಾಜಿ ಪ್ರತಿರೂಪ ಮೋದಿ: (ವಿಜಯಪುರ ವರದಿ) ‘ನರೇಂದ್ರ ಮೋದಿ, ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಪ್ರತಿರೂಪವಾಗಿದ್ದಾರೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಶ್ಲಾಘಿಸಿದರು.

ವಿಜಯಪುರದಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿದರು.

‘ಅಂಬೇಡ್ಕರರನ್ನು ಅಸುರ ಎಂದವರೇ ನನ್ನನ್ನೂ ಬೈಯ್ಯುತ್ತಿದ್ದಾರೆ’

‘ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಕಾಂಗ್ರೆಸ್ಸಿಗರು ಅಸುರ, ದೇಶದ್ರೋಹಿ, ಬ್ರಿಟಿಷರ ಕೈಗೊಂಬೆ ಎಂದೆಲ್ಲ ಇದೇ ಬೆಳಗಾವಿ ನೆಲದಲ್ಲಿ ಬೈದಿದ್ದರು. ಈಗ ನರೇಂದ್ರ ಮೋದಿಯನ್ನು ಬೈಯ್ಯುತ್ತಿದ್ದಾರೆ. ಜನಕಲ್ಯಾಣ ಕೆಲಸ ಮಾಡುವವರನ್ನು ಬೈಯ್ಯುವುದೇ ಕಾಂಗ್ರೆಸ್ಸಿಗರ ಕೆಲಸ’ ಎಂದು ಪ್ರಧಾನಿ ಮೋದಿ ಹೇಳಿದರು. ಬೆಳಗಾವಿ ಮತ್ತು ಬೀದರ್‌ನಲ್ಲಿ ನಡೆದ ಪ್ರತ್ಯೇಕ ಪ್ರಚಾರ ಸಭೆಗಳಲ್ಲಿ ಅವರು ಮಾತನಾಡಿದರು.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಬಳಸಿದ ‘ವಿಷ ಸರ್ಪ’ ಪದಕ್ಕೆ ಪ್ರತಿಯಾಗಿ ಮಾತನಾಡಿದ ಅವರು, ‘ದೇಶಕ್ಕಾಗಿ ಕೆಲಸ ಮಾಡುವವರನ್ನು ಕಾಂಗ್ರೆಸ್ಸಿಗರು ಆಗಲೂ ಬೈಯ್ಯುತ್ತಿದ್ದರು. ಈಗಲೂ ಬೈಯ್ಯುತ್ತಿದ್ದಾರೆ. ಅವರ ಬಾಯಲ್ಲಿ ಬಾರದ ಬೈಗುಳಗಳು ಯಾವ ಶಬ್ದಕೋಶದಲ್ಲೂ ಉಳಿದಿಲ್ಲ’ ಎಂದೂ ಟೀಕಿಸಿದರು. ‘ವೀರ ಸಾವರ್ಕರ್, ಡಾ.ಬಿ.ಆರ್.ಅಂಬೇಡ್ಕರ್ ಅವರಂತಹ ಮಹಾಪುರುಷರನ್ನು ನಿಂದಿಸಿದ ಕಾಂಗ್ರೆಸ್‌ನವರು ಈಗ ನನ್ನನ್ನು ಬೈಯ್ಯುತ್ತಿದ್ದಾರೆ. ಚೌಕಿದಾರ್ ಚೋರ್, ಒಬಿಸಿ ಚೋರ್, ಮೋದಿ ಚೋರ್, ಈಗ ಲಿಂಗಾಯತ ಚೋರ್ ಎನ್ನುತ್ತಿದ್ದಾರೆ. ಕಾಂಗ್ರೆಸ್‌ನವರು ನನಗೆ ಎಷ್ಟೇ ಬಯ್ದರೂ ನಾನು ಜನಸೇವೆ ಮುಂದುವರೆಸುವೆ’ ಎಂದರು.

ಸ್ವಚ್ಛ ವಿಧಾನಸಭೆ ಪಾರದರ್ಶಕ ಆಡಳಿತ ಘೋಷಣೆ

ಪಕ್ಷೇತರ ಅಭ್ಯರ್ಥಿಯ ಕಾಲ್ನಡಿಗೆ ಪ್ರಚಾರ

• ಬಸವರಾಜ ಹವಾಲ್ದಾರ

ಬಾಗಲಕೋಟೆ: ವಿಧಾನಸಭಾ ಚುನಾವಣಾ ಕಣಕ್ಕಿಳಿದ ಅಭ್ಯರ್ಥಿಗಳು ವಾಹನಗಳಲ್ಲೇ ಕ್ಷೇತ್ರ ಸುತ್ತುತ್ತಾರೆ. ರೋಡ್ ಶೋ ನಡೆಸುತ್ತಾರೆ. ಆದರೆ, ಬಾಗಲಕೋಟೆ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ನಾಗರಾಜ ಕಲಗುಟಕರ ಇಡೀ ಕ್ಷೇತ್ರವನ್ನು ಪಾದಯಾತ್ರೆ ಮೂಲಕವೇ ಸಂಚರಿಸಿ ಮತ ಯಾಚಿಸುತ್ತಿದ್ದಾರೆ.

ನಾಮಪತ್ರ ಸಲ್ಲಿಕೆಗಿಂತ ನಾಲ್ಕು ತಿಂಗಳ ಮೊದಲೇ ಕ್ಷೇತ್ರದಲ್ಲಿ ಸಂಚಾರ ಆರಂಭಿಸಿದ್ದಾರೆ. ಇವರಿಗೆ ಜೋಡಿ ಚಪ್ಪಲಿಯ ಗುರುತು ಸಿಕ್ಕಿದ್ದು, ಗುರುತು ತೋರಿಸಿ ಮತ್ತೊಂದು ಸುತ್ತು ಮತ ಕೇಳುತ್ತಿದ್ದಾರೆ.

ಜಿಯೋಸ್ಪೇಶಿಯಲ್ ಎಂಜಿನಿಯರಿಂಗ್‌ನಲ್ಲಿ ಎಂ.ಟೆಕ್ ಮಾಡಿರುವ ಇವರು, ಖಾಸಗಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಅದನ್ನು ಕೆಲ ವರ್ಷಗಳ ಹಿಂದೆಯೇ ಬಿಟ್ಟಿದ್ದು, ಈಗ ಚುನಾವಣೆಗೆ ಸ್ಪರ್ಧಿಸಿದ್ದಾರೆ.

ಪ್ರಚಾರಕ್ಕಾಗಿ ಪೋಸ್ಟರ್ ಹಚ್ಚಿರುವ ಬ್ಯಾರಿಕೇಡ್ ಮಾದರಿಯ ಟ್ರಾಲಿಯೊಂದನ್ನು ಸಿದ್ಧಪಡಿಸಿದ್ದಾರೆ. ಅದಕ್ಕೆ ನಾಲ್ಕು ಸೈಕಲ್ ಗಾಲಿಗಳನ್ನು ಅಳವಡಿಸಿದ್ದಾರೆ. ಅದನ್ನು ತಳ್ಳಿಕೊಂಡು ಕ್ಷೇತ್ರದಲ್ಲಿ ಸಂಚರಿಸುತ್ತಿದ್ದಾರೆ. ಇಲ್ಲಿಯವರೆಗೆ ಬಾಗಲಕೋಟೆ ನಗರ ಸೇರಿದಂತೆ 1,400 ಕಿ.ಮೀ.ಗೂ ಹೆಚ್ಚು ದೂರವನ್ನು ಪಾದಯಾತ್ರೆಯಲ್ಲಿಯೇ ಸಂಚರಿಸಿದ್ದಾರೆ.

ಸ್ವಚ್ಛ ವಿಧಾನಸಭೆ, ಪಾರದರ್ಶಕ ಆಡಳಿತ ಎಂಬ ಘೋಷಣೆಯೊಂದಿಗೆ ಬೆಳಿಗ್ಗೆಯಿಂದ ರಾತ್ರಿಯವರೆಗೆ ಪ್ರಚಾರ ಮಾಡುತ್ತಾರೆ. ಸಾಕಷ್ಟು ಸಲ ಅದೇ ಗ್ರಾಮಗಳಲ್ಲಿನ ದೇವಸ್ಥಾನ, ಅಭಿಮಾನಿಗಳ ಮನೆಯಲ್ಲಿ ಉಳಿದುಕೊಳ್ಳುತ್ತಾರೆ.

ಪಾದಯಾತ್ರೆ ಹೊಸದಲ್ಲ: 2021ರಲ್ಲಿ ಕೇಂದ್ರ ಸರ್ಕಾರದ ಕೃಷಿ ಕಾನೂನು ವಿರೋಧಿಸಿ ದೆಹಲಿಯಲ್ಲಿ ನಡೆದಿದ್ದ ಹೋರಾಟ ಬೆಂಬಲಿಸಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸಂಚರಿಸಿದ್ದಾರೆ. ದೆಹಲಿಯವರೆಗೆ ನಡೆದುಕೊಂಡೇ ಹೋಗಿದ್ದರು.

2022ರಲ್ಲಿ ಸ್ವಚ್ಛ ವಿಧಾನಸಭೆ ಘೋಷಣೆಯೊಂದಿಗೆ ಬಾಗಲಕೋಟೆಯಿಂದ ಆರಂಭಿಸಿ ಎಲ್ಲ ವಿಧಾನಸಭಾ ಕ್ಷೇತ್ರಗಳ ಮೂಲಕ ಹಾದು ಬೆಂಗಳೂರುವರೆಗೆ ಪಾದಯಾತ್ರೆ ಮಾಡಿದ್ದರು.

ಕಾಲ್ನಡಿಗೆಯಲ್ಲಿಯೇ ಕ್ಷೇತ್ರ ಸುತ್ತುತ್ತಿರುವ ಬಾಗಲಕೋಟೆ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ನಾಗರಾಜ ಕಲಗುಟಕರ

> **ಭ್ರಷ್ಟಾಚಾರ ಮುಕ್ತ, ಪಾರದರ್ಶಕ ಆಡಳಿತ ಬರಬೇಕು ಎಂಬ ಕಾರಣಕ್ಕೆ ಸ್ಪರ್ಧಿಸಿದ್ದೇನೆ. ಕಾಲ್ನಡಿಗೆಯ ಮೂಲಕ ಕ್ಷೇತ್ರ ಸಂಚರಿಸಿ ಪ್ರಚಾರ ಮಾಡುತ್ತಿದ್ದೇನೆ**
> **ನಾಗರಾಜ ಕಲಗುಟಕರ**
> ಪಕ್ಷೇತರ ಅಭ್ಯರ್ಥಿ

ದಕ್ಷಿಣ ಕನ್ನಡ ಫಲಿಸಲಿದೆಯೇ 'ಹೊಸಮುಖ' ಪ್ರಯೋಗ

'ಹದ'ವಾಗಿರುವ ಭೂಮಿಯ ಫಸಲು ಯಾರಿಗೆ?

ರಮಾನಾಥ್ ರೈ, ರಾಜೇಶ್ ನಾಯ್ಕ್, ಜಿ.ಕೃಷ್ಣಪ್ಪ, ಯು.ಟಿ. ಖಾದರ್, ಉಮಾನಾಥ ಕೋಟ್ಯಾನ್, ಮಿಥುನ್ ರೈ, ಡಾ ಭರತ್ ಶೆಟ್ಟಿ, ಇನಾಯತ್ ಅಲಿ, ಮೊಯಿದ್ದೀನ್ ಬಾವಾ, ಸತೀಶ್ ಕುಂಪಲ, ವೇದವ್ಯಾಸ ಕಾಮತ್, ಭಾಗೀರಥಿ ಮುರುಳ್ಯ

ದಕ್ಷಿಣ ಕನ್ನಡ ಹಿಂದಿನ ಚುನಾವಣೆಯ ಬಲಾಬಲ		
ಕ್ಷೇತ್ರ	2013	2018
ಬೆಳ್ತಂಗಡಿ	ಕಾಂಗ್ರೆಸ್	ಬಿಜೆಪಿ
ಮೂಡುಬಿದಿರೆ	ಕಾಂಗ್ರೆಸ್	ಬಿಜೆಪಿ
ಮಂಗಳೂರು ನಗರ ಉತ್ತರ	ಕಾಂಗ್ರೆಸ್	ಬಿಜೆಪಿ
ಮಂಗಳೂರು ನಗರ ದಕ್ಷಿಣ	ಕಾಂಗ್ರೆಸ್	ಬಿಜೆಪಿ
ಮಂಗಳೂರು(ಉಳ್ಳಾಲ)	ಕಾಂಗ್ರೆಸ್	ಕಾಂಗ್ರೆಸ್
ಬಂಟ್ವಾಳ	ಕಾಂಗ್ರೆಸ್	ಬಿಜೆಪಿ
ಪುತ್ತೂರು	ಕಾಂಗ್ರೆಸ್	ಬಿಜೆಪಿ
ಸುಳ್ಯ	ಬಿಜೆಪಿ	ಬಿಜೆಪಿ

• ಗಣೇಶ ಚಂದನಶಿವ

ಮಂಗಳೂರು: ದಕ್ಷಿಣ ಕನ್ನಡ 'ಹಿಂದುತ್ವದ ಪ್ರಯೋಗಶಾಲೆ' ಎಂದೇ ಗುರುತಿಸಿಕೊಳ್ಳುತ್ತಿದೆ. ಬಿತ್ತನೆಗೂ ಮುನ್ನ ರೈತರು ಭೂಮಿ ಹದಗೊಳಿಸುವಂತೆ, ಚುನಾವಣೆಗೆ ಸಾಕಷ್ಟು ಸಮಯ ಇರುವಾಗಲೇ ಬಿಜೆಪಿ ಮತ ಧ್ರುವೀಕರಣದ ಕೆಲಸವನ್ನು ವ್ಯವಸ್ಥಿತವಾಗಿ ಮಾಡಿದ್ದು, 'ಉತ್ತಮ ಇಳುವರಿ'ಯ ನಿರೀಕ್ಷೆಯಲ್ಲಿದೆ. ಕಾಂಗ್ರೆಸ್ ಸಹ ಹೆಚ್ಚಿನ ಸೀಟು ಗೆಲ್ಲಲೇಬೇಕು ಎಂಬ ಹಟಕ್ಕೆ ಬಿದ್ದಿದೆ.

ಎರಡೂ ಪಕ್ಷಗಳು 'ಹೊಸಮುಖ'ಗಳ ಪ್ರಯೋಗ ಮಾಡಿವೆ. ಬಿಜೆಪಿ ಸುಳ್ಯ, ಪುತ್ತೂರಿನಲ್ಲಿ ಇಬ್ಬರು ಶಾಸಕರ ಬದಲು ಮಹಿಳಾ ಅಭ್ಯರ್ಥಿಗಳಿಗೆ ಮಣೆ ಹಾಕಿದೆ. ಕಾಂಗ್ರೆಸ್ ಐದು ಕ್ಷೇತ್ರಗಳಲ್ಲಿ ಹೊಸಬರಿಗೆ ಅವಕಾಶ ಕಲ್ಪಿಸಿದೆ.

ಹಿಜಾಬ್, ಆಝಾನ್, ಹಲಾಲ್ ಕಟ್ ಮಾಂಸ ಬಹಿಷ್ಕಾರ, ಲವ್ ಜಿಹಾದ್, ದೇವಸ್ಥಾನಗಳ ಜಾತ್ರೆಗಳಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧದಂತಹ ವಿವಾದಗಳು ಹೆಚ್ಚು ಸದ್ದು ಮಾಡಿದ್ದವು. ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಹಿಂದುತ್ವವಾದಿ ಕಾರ್ಯಕರ್ತರ ಆಕ್ರೋಶದ ಕಟ್ಟೆಯೊಡೆಯುವಂತೆ ಮಾಡಿತ್ತು. 'ಇವು ಈಗ ಚುನಾವಣೆ ವಿಷಯಗಳೇ ಅಲ್ಲ; ಆದರೆ, ಈ ಎಲ್ಲ ವಿದ್ಯಮಾನಗಳು ನಮ್ಮ ಮತಬ್ಯಾಂಕ್ ಭದ್ರವಾಗಿಸಿವೆ' ಎಂದು ಪಕ್ಷಗಳವರು ಒಪ್ಪಿಕೊಳ್ಳುತ್ತಾರೆ. ಇದಕ್ಕೆ ಪೂರಕ ಎಂಬಂತೆ 'ಕೋಮುವಾದವನ್ನು ಮತದಾನದಿಂದ ಸೋಲಿಸೋಣ' ಎಂದು ಕೆಲ ಮುಸ್ಲಿಂ ಸಂಘಟನೆಗಳು ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನ ಆರಂಭಿಸಿವೆ. ಇನ್ನೊಂದೆಡೆ ಸುಳ್ಯ ಹೊರತುಪಡಿಸಿ ಉಳಿದ ಕ್ಷೇತ್ರಗಳಲ್ಲಿ ಎಸ್‌ಡಿಪಿಐ ಸ್ಪರ್ಧಿಸಿದ್ದು, ಕಾಂಗ್ರೆಸ್‌ಗೆ ಮಗ್ಗಲು ಮುಳ್ಳಿನಂತಾಗಿದೆ.

ಬಿಲ್ಲವ, ಬಂಟ ಮುಂತಾದ ಜಾತಿ ಪ್ರಾತಿನಿಧ್ಯದ ವಿಷಯ ಈ ಬಾರಿ ಮುನ್ನೆಲೆಗೆ ಬಂದಿದೆ. ಬಂಟ ಸಮುದಾಯದವರಿಗೆ ಎರಡೂ ಪಕ್ಷಗಳು ತಲಾ 3 ಕ್ಷೇತ್ರಗಳಲ್ಲಿ ಟಿಕೆಟ್ ನೀಡಿವೆ. ಬಿಲ್ಲವರಿಗೆ ಎರಡು ಟಿಕೆಟ್ (ಮೂಡುಬಿದಿರೆ, ಮಂಗಳೂರು) ನೀಡಿರುವ ಬಿಜೆಪಿ, ಜಿಲ್ಲೆಯಲ್ಲಿ ಬಿಲ್ಲವರ ಓಲೈಕೆಯಲ್ಲಿ ತೊಡಗಿದೆ. ಬಿಜೆಪಿ, ಜಿಎಸ್‌ಬಿ, ಗೌಡ, ಆದಿ ದ್ರಾವಿಡರಿಗೆ ತಲಾ ಒಂದು ಹಾಗೂ ಕಾಂಗ್ರೆಸ್ ಮುಸ್ಲಿಂ 2, ಕ್ರಿಶ್ಚಿಯನ್, ಬಿಲ್ಲವ, ಬೋವಿ ಸಮುದಾಯದವರಿಗೆ ತಲಾ ಒಂದು ಟಿಕೆಟ್ ನೀಡಿದೆ.



ಜಿಲ್ಲೆಯ ಎಂಟು ಕ್ಷೇತ್ರಗಳ ಪೈಕಿ 2013ರಲ್ಲಿ ಕಾಂಗ್ರೆಸ್ ಏಳು ಸ್ಥಾನ ಗೆದ್ದಿತ್ತು. 2018ರಲ್ಲಿ ಬಿಜೆಪಿ ಏಳು ಸ್ಥಾನ ಬಾಚಿಕೊಂಡಿತ್ತು. ಈಗ ಅಂತಹ ಸ್ಥಿತಿ ಇಲ್ಲ. ಧರ್ಮಾಧಾರಿತ ಒಲವು ಬಿಟ್ಟರೆ ಪಕ್ಷಗಳ ಪರ ಅಲೆ ಕಾಣಿಸುತ್ತಿಲ್ಲ. ಬೆಲೆ ಏರಿಕೆ, ಭ್ರಷ್ಟಾಚಾರದ ವಿಷಯಗಳ ಬಗ್ಗೆ ಜನ ಅಲ್ಲಲ್ಲಿ ಚರ್ಚಿಸುತ್ತಿದ್ದಾರೆ.

ಬಿಜೆಪಿಯಲ್ಲಿಯ ಬಂಡಾಯದ ಕಾರಣದಿಂದ ಪುತ್ತೂರು ಕ್ಷೇತ್ರ ಗಮನ ಸೆಳೆದಿದೆ. ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಆಶಾ ತಿಮ್ಮಪ್ಪ ಗೌಡ ಬಿಜೆಪಿ ಅಭ್ಯರ್ಥಿ. ಪ್ರಖರ ಹಿಂದುತ್ವವಾದಿ ಅರುಣಕುಮಾರ್ ಪುತ್ತಿಲ ಪಕ್ಷೇತರರಾಗಿ ಕಣಕ್ಕಿಳಿದಿದ್ದಾರೆ. ಕೆಲ ತಿಂಗಳ ಹಿಂದಷ್ಟೇ ಬಿಜೆಪಿಯಿಂದ ಕಾಂಗ್ರೆಸ್ ಸೇರಿರುವ ಅಶೋಕ ಕುಮಾರ್ ರೈ ಕಾಂಗ್ರೆಸ್ ಹುರಿಯಾಳು. ಬಿಜೆಪಿ ಮತ್ತು 'ಹಿಂದುತ್ವವಾದಿ'ಗಳ ಮಧ್ಯೆ ಮಾತಿನ ಸಮರವೇ ನಡೆಯುತ್ತಿದೆ. ಕಾಂಗ್ರೆಸ್ ಇದರ ಲಾಭದ ನಿರೀಕ್ಷೆಯಲ್ಲಿದ್ದು, ಅಭ್ಯರ್ಥಿಯೂ 'ಶ್ರಮ' ಹಾಕುತ್ತಿದ್ದಾರೆ. ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆಯ ಪ್ರಮುಖ ಆರೋಪಿ, ಸದ್ಯ ಜೈಲಿನಲ್ಲಿರುವ ಇಸ್ಮಾಯಿಲ್ ಶಾಫಿ ಕೆ. ಇಲ್ಲಿ ಎಸ್‌ಡಿಪಿಐ ಅಭ್ಯರ್ಥಿ. ಅರುಣಕುಮಾರ್ ಪುತ್ತಿಲ ಪಡೆಯುವ ಮತಗಳು ಫಲಿತಾಂಶದಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ.

ಬಂಟ್ವಾಳದಲ್ಲಿ ಶಾಸಕ ಬಿಜೆಪಿಯ ರಾಜೇಶ್ ನಾಯ್ಕ್ ಮತ್ತು ಕಾಂಗ್ರೆಸ್‌ನ ರಮಾನಾಥ ರೈ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ. ರಮಾನಾಥ ರೈ ಅವರು ಇದು ತಮ್ಮ ಕೊನೆಯ ಚುನಾವಣೆ ಎಂದು ಹೇಳುತ್ತಿದ್ದಾರೆ. ಭಾಷಣದಲ್ಲಿಯೂ 'ಜಾಣ ನಡೆ' ಅನುಸರಿಸುತ್ತಿದ್ದಾರೆ. ತಮ್ಮ ಹಿಂದಿನ ಸಾಧನೆ ಮತ್ತು ಅನುಕಂಪದ ಕಾರಣ ಮತದಾರರು ಈ ಬಾರಿ ತಮ್ಮ ಕೈಹಿಡಿಯುವ ನಿರೀಕ್ಷೆ ಅವರದ್ದು.

ಮಂಗಳೂರು ನಗರ ಉತ್ತರ ಕ್ಷೇತ್ರದಲ್ಲಿ ಶಾಸಕ, ಬಿಜೆಪಿಯ ಡಾ.ವೈ. ಭರತ್ ಶೆಟ್ಟಿ ಮತ್ತೆ ಕಣದಲ್ಲಿದ್ದಾರೆ. ಆಡಳಿತ ವಿರೋಧಿ ಅಲೆ ಇದೆ. ಇನಾಯತ್ ಅಲಿಗೆ ಟಿಕೆಟ್ ನೀಡಿದ್ದರಿಂದ ಮಾಜಿ ಶಾಸಕ ಬಿ.ಎ. ಮೊಯಿದ್ದೀನ್ ಬಾವ ಕಾಂಗ್ರೆಸ್ ತ್ಯಜಿಸಿ ಜೆಡಿಎಸ್‌ನಿಂದ ಕಣಕ್ಕಿಳಿದಿದ್ದು, ಇಲ್ಲಿ ಕಾಂಗ್ರೆಸ್‌ಗೆ ದುಬಾರಿಯಾಗಿ ಪರಿಣಮಿಸುವ ಸಾಧ್ಯತೆ ಇದೆ.

ಬೆಳ್ತಂಗಡಿ ಕ್ಷೇತ್ರದಲ್ಲಿ ಶಾಸಕ ಬಿಜೆಪಿಯ ಹರೀಶ್ ಪೂಂಜಾ ಮತ್ತು ರಕ್ಷಿತ್ ಶಿವರಾಂ (ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರ ಸಹೋದರ, ನಿವೃತ್ತ ಪೊಲೀಸ್ ಅಧಿಕಾರಿ ಶಿವರಾಂ ಅವರ ಪುತ್ರ), ಮೂಡುಬಿದಿರೆಯಲ್ಲಿ ಶಾಸಕ ಬಿಜೆಪಿಯ ಉಮಾನಾಥ ಕೋಟ್ಯಾನ್ ಮತ್ತು ಕಾಂಗ್ರೆಸ್‌ನ ಮಿಥುನ್ ರೈ, ಮಂಗಳೂರು ದಕ್ಷಿಣದಲ್ಲಿ ಶಾಸಕ, ಬಿಜೆಪಿಯ ಡಿ.ವೇದವ್ಯಾಸ ಕಾಮತ್ ಮತ್ತು ಕಾಂಗ್ರೆಸ್‌ನ ಮಾಜಿ ಶಾಸಕ ಜೆ.ಆರ್. ಲೋಬೊ ಮಧ್ಯೆ ನೇರ ಸ್ಪರ್ಧೆ ಇದೆ.

ಮುಸ್ಲಿಂ v/s ಮುಸ್ಲಿಂ: ಮುಸ್ಲಿಂ ಮತದಾರರ ಪ್ರಾಬಲ್ಯದ ಮಂಗಳೂರು (ಉಳ್ಳಾಲ) ಕ್ಷೇತ್ರದಿಂದ ಕಾಂಗ್ರೆಸ್‌ನ ಯು.ಟಿ. ಖಾದರ್ ಸತತ ನಾಲ್ಕು ಬಾರಿ ಗೆದ್ದಿದ್ದು, ಐದನೇ ಬಾರಿ ಸ್ಪರ್ಧಿಸಿದ್ದಾರೆ. ಎಸ್‌ಡಿಪಿಐ ತನ್ನ ಫೈರ್‌ಬ್ರ್ಯಾಂಡ್, ಬಂಟ್ವಾಳ ಕ್ಷೇತ್ರದ ಮಹಮ್ಮದ್ ರಿಯಾಜ್ ಅವರನ್ನು ಕಣಕ್ಕಿಳಿಸಿದೆ. ಮೇಲ್ನೋಟಕ್ಕೆ ಇಲ್ಲಿ ಮುಸ್ಲಿಂ v/s ಮುಸ್ಲಿಂ ಹೋರಾಟ ಎಂಬಂತೆ ಕಂಡುಬರುತ್ತಿದೆ. ಖಾದರ್ ಹಿಜಾಬ್ ವಿವಾದದಲ್ಲಿ ಸಮುದಾಯದ ಪರವಾಗಿ ಗಟ್ಟಿಯಾಗಿ ನಿಲ್ಲಲಿಲ್ಲ ಎಂಬಿತ್ಯಾದಿ ಆರೋಪಗಳ ಮೂಲಕ ಮುಸ್ಲಿಂ ಮತ ವಿಭಜನೆಯ ಯತ್ನ ನಡೆದಿದೆ. ಬಿಜೆಪಿ ಅಭ್ಯರ್ಥಿ ಸತೀಶ್ ಕುಂಪಲ ಅವರ ರಾಜಕೀಯ ಭವಿಷ್ಯ ಸಹ ಎಸ್‌ಡಿಪಿಐ ಅಭ್ಯರ್ಥಿ ಪಡೆಯುವ ಮತಗಳನ್ನೇ ಅವಲಂಬಿಸಿದೆ. ಈ ಕ್ಷೇತ್ರದಲ್ಲಿ ಪ್ರಭಾವ ಹೊಂದಿರುವ ಸುನ್ನಿ ಸ್ಟುಡೆಂಟ್ಸ್ ಫೆಡರೇಷನ್‌ನಲ್ಲಿ (ಎಸ್‌ಎಸ್‌ಎಫ್) ಕೆಲಸ ಮಾಡಿದ್ದ, ಜೆಡಿಎಸ್‌ನ ಅಲ್ತಾಫ್ ಕುಂಪಲ ನಾಮಪತ್ರ ವಾಪಸ್ ಪಡೆದಿದ್ದು, ಕಾಂಗ್ರೆಸ್‌ಗೆ ನಿರಾಳ ಭಾವ ಮೂಡಿಸಿದೆ.

ಗಮನ ಸೆಳೆಯುತ್ತಿರುವ ಸುಳ್ಯ: ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಸುಳ್ಯ ಕ್ಷೇತ್ರದಲ್ಲಿ ಬಿಜೆಪಿಯ ಎಸ್. ಅಂಗಾರ ಸತತ ಆರು ಬಾರಿ ಗೆಲುವು ಸಾಧಿಸಿದ್ದರು. ಅವರ ಬದಲು ಬಿಜೆಪಿ, ಸಾಮಾನ್ಯ ಕಾರ್ಯಕರ್ತೆ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಭಾಗೀರಥಿ ಮುರುಳ್ಯ ಅವರನ್ನು ಕಣಕ್ಕಿಳಿಸಿ ಆಡಳಿತ ವಿರೋಧಿ ಅಲೆಯಿಂದ ತಪ್ಪಿಸಿಕೊಳ್ಳಲು ಯತ್ನಿಸಿದೆ. ಪ್ರಚಾರದಲ್ಲಿ 'ಸಾಮಾನ್ಯ' ಪದವನ್ನೇ ಪ್ರಧಾನವಾಗಿಸಿದೆ. ಪ್ರಚಾರದಲ್ಲಿ ಅಂಗಾರ ಅಷ್ಟಾಗಿ ಕ್ರಿಯಾಶೀಲರಾಗಿಲ್ಲ. ಅಂಗಾರರನ್ನು ವಿರೋಧಿಸಿದ್ದ ಬಿಜೆಪಿಯ 'ಸ್ವಾಭಿಮಾನಿ ವೇದಿಕೆ' ಭಾಗೀರಥಿ ಬೆನ್ನಿಗೆ ನಿಂತಿದೆ.

ಐವರ್ನಾಡು ಗ್ರಾಮದಲ್ಲಿ ಮಾತಿಗೆ ಸಿಕ್ಕ ಗ್ರಾಮ ಪಂಚಾಯಿತಿ ಸದಸ್ಯೆ ಶರ್ಮಿಳಾ, 'ಬಿಜೆಪಿ ಮಹಿಳೆಗೆ ಅವಕಾಶ ನೀಡಿರುವುದು ನಮ್ಮಲ್ಲಿಯ ಹುಮ್ಮಸ್ಸು ಇಮ್ಮಡಿಗೊಳಿಸಿದೆ. ಮಹಿಳೆಯರ ಹೆಚ್ಚು ಮತಗಳು ಭಾಗೀರಥಿಗೇ ಬೀಳಲಿವೆ' ಎಂದು ಪ್ರತಿಪಾದಿಸುತ್ತಾರೆ.

ಕಾಂಗ್ರೆಸ್ ಟಿಕೆಟ್‌ಗೆ ನಂದಕುಮಾರ್ ಮತ್ತು ಜಿ.ಕೃಷ್ಣಪ್ಪ ತೀವ್ರ ಪೈಪೋಟಿ ನಡೆಸಿದ್ದರು. ಟಿಕೆಟ್ ಗಿಟ್ಟಿಸುವಲ್ಲಿ ಜಿ.ಕೃಷ್ಣಪ್ಪ ಯಶಸ್ವಿಯಾಗಿದ್ದಾರೆ. ಆದರೆ, ಅಭ್ಯರ್ಥಿ ಬದಲಿಸಬೇಕು ಎಂದು ನಂದಕುಮಾರ ಬಣ ಕೊನೆಯವರೆಗೂ ಹೋರಾಟ ನಡೆಸಿತ್ತು. ಈಗ ಅವರನ್ನು ಪಕ್ಷದ ಕೊಡಗಿಗೆ ಪಕ್ಷದ ಉಸ್ತುವಾರಿಯನ್ನಾಗಿ ನೇಮಿಸಲಾಗಿದೆ. ಇಲ್ಲಿಯ ಬಣ ರಾಜಕೀಯ ಸಂಪೂರ್ಣ ಶಮನವಾಗಿಲ್ಲ. ಪಕ್ಷದಲ್ಲಿ ಸಮನ್ವಯ ಸಾಧಿಸಿ, ಮತದಾರರ ಮನಗೆಲ್ಲುವ ಸವಾಲನ್ನು ಜಿ.ಕೃಷ್ಣಪ್ಪ ಎದುರಿಸುತ್ತಿದ್ದಾರೆ. ಇವರು ಹಾಸನ ಜಿಲ್ಲೆ ಸಕಲೇಶಪುರ ಮೂಲದವರು ಎಂದು ಕೆಲವರು ಹೇಳುತ್ತಿದ್ದರೆ, ಪತ್ನಿ ತವರು ಕಡಬ ತಾಲ್ಲೂಕಿನ ರಾಮಕುಂಜ. ಐದು ವರ್ಷದಿಂದ ಕೃಷ್ಣಪ್ಪ ಕ್ಷೇತ್ರದಲ್ಲೇ ಇದ್ದು ಸಮಾಜ ಸೇವೆಯಲ್ಲಿ ತೊಡಗಿದ್ದಾರೆ ಎಂದು ಕಾಂಗ್ರೆಸ್ಸಿಗರು ಮತದಾರರ ಮನವೊಲಿಸುತ್ತಿದ್ದಾರೆ.

ಸಾಕ್ಷಾತ್ ಸಮೀಕ್ಷೆ

ಕೈ – ತೆನೆಗೆ 'ಕಮಲ' ಸವಾಲು

ಕೋಲಾರ ಎರಡರಲ್ಲಿ ಕಾಂಗ್ರೆಸ್–ಜೆಡಿಎಸ್; ಒಂದರಲ್ಲಿ ಚತುಷ್ಕೋನ, ಇನ್ನುಳಿದೆಡೆ ತ್ರಿಕೋನ ಸ್ಪರ್ಧೆ

• ಕೆ.ಓಂಕಾರ ಮೂರ್ತಿ

ಕೆ.ಆರ್.ರಮೇಶ್ ಕುಮಾರ್, ಜಿ.ಕೆ.ವೆಂಕಟಶಿವಾರೆಡ್ಡಿ, ವರ್ತೂರು ಪ್ರಕಾಶ್, ಕೊತ್ತೂರು ಮಂಜುನಾಥ್, ಸಿ.ಎಂ.ಆರ್ ಶ್ರೀನಾಥ್, ರೂಪಕಲಾ ಎಂ., ಅಶ್ವಿನಿ ಸಂಪಂಗಿ

ಕೋಲಾರ: ಬಯಲುಸೀಮೆ ಜಿಲ್ಲೆಯಲ್ಲಿ ತಮ್ಮ ಮಧ್ಯೆ ಮಾತ್ರ ಸ್ಪರ್ಧೆ ಎಂದು ಕಾಂಗ್ರೆಸ್ ಮತ್ತು ಜೆಡಿಎಸ್ ದಶಕಗಳಿಂದ ಭಾವಿಸಿಕೊಂಡು ಬಂದಿವೆ. ಆದರೆ, ಈ ಬಾರಿ ಈ ಎರಡೂ ಪಕ್ಷಗಳಿಗೆ ಸವಾಲು ಎಸೆಯಲು ಬಿಜೆಪಿ ಮೈಕೊಡವಿಕೊಂಡು ಎದ್ದು ನಿಂತಿದೆ.

ರಾಜ್ಯಕ್ಕೆ ಮೊದಲ ಮುಖ್ಯಮಂತ್ರಿ ಕೆ.ಸಿ.ರೆಡ್ಡಿ ಅವರನ್ನು ನೀಡಿದ್ದ ಜಿಲ್ಲೆಯ ಆರು ಕ್ಷೇತ್ರಗಳ ಪೈಕಿ ಕೋಲಾರ, ಬಂಗಾರಪೇಟೆ, ಕೆಜಿಎಫ್‌ನಲ್ಲಿ ತ್ರಿಕೋನ ಸ್ಪರ್ಧೆ ಏರ್ಪಟ್ಟರೆ, ಶ್ರೀನಿವಾಸಪುರ ಹಾಗೂ ಮುಳಬಾಗಿಲಿನಲ್ಲಿ ಕಾಂಗ್ರೆಸ್– ಜೆಡಿಎಸ್ ನಡುವೆ ನೇರ ಪೈಪೋಟಿ. ಬಿಜೆಪಿಯಲ್ಲಿನ ಬಂಡಾಯದ ಕಾರಣ ಮಾಲೂರಿನಲ್ಲಿ ಚತುಷ್ಕೋನ ಸ್ಪರ್ಧೆ ಇದೆ.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕೋಲಾರ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ ಎಂಬ ಕಾರಣಕ್ಕೆ ಜಿಲ್ಲೆಯಲ್ಲಿ ಸೃಷ್ಟಿಯಾಗಿದ್ದ ಹವಾ ತಗ್ಗಿದಂತೆ ಕಾಣುತ್ತಿಲ್ಲ. ಕಾಂಗ್ರೆಸ್ ಪಕ್ಷದವರು, ಪ್ರತಿಸ್ಪರ್ಧಿಗಳು ನಿತ್ಯ ಅದೇ ವಿಚಾರ ಚರ್ಚಿಸುತ್ತಾ, ಪರಸ್ಪರ ಕಾಲೆಳೆಯುತ್ತಾ ಪ್ರಚಾರದಲ್ಲಿ ತೊಡಗಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು 'ಮೋದಿ ಉಪನಾಮ'ದ ಕುರಿತು ನೀಡಿದ್ದ ಹೇಳಿಕೆ ಸೃಷ್ಟಿಸಿದ ವಿವಾದ, ನಂತರ ಅವರು ಕೋಲಾರಕ್ಕೆ ಬಂದು ಎಬ್ಬಿಸಿದ ದೂಳು ಅಲ್ಲಲ್ಲಿ ಚದುರಿಕೊಂಡಿದೆ. ಇದು ಕಾಂಗ್ರೆಸ್ ಪಾಲಿಗೆ 'ಪ್ಲಸ್ ಪಾಯಿಂಟ್' ಕೂಡ.

ಶಾಸಕ ಕೆ.ಆರ್.ರಮೇಶ್ ಕುಮಾರ್ ಹಾಗೂ ಮಾಜಿ ಸಂಸದ ಕೆ.ಎಚ್.ಮುನಿಯಪ್ಪ ಬೆಂಬಲಿಗರ ನಡುವಣ ಭಿನ್ನಾಭಿಪ್ರಾಯ ಬೂದಿಮುಚ್ಚಿದ ಕೆಂಡದಂತಿದೆ. ಮುನಿಯಪ್ಪ ದೇವನಹಳ್ಳಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು, ಕೋಲಾರದಿಂದ ದೂರವೇ ಉಳಿದಿದ್ದಾರೆ. ಕೋಲಾರದ ಕಾಂಗ್ರೆಸ್ ಅಭ್ಯರ್ಥಿ ಕೊತ್ತೂರು ಮಂಜುನಾಥ್, '2019ರ ಲೋಕಸಭೆ ಚುನಾವಣೆಯಲ್ಲಿ ನಾನು ಮುನಿಯಪ್ಪ ಅವರನ್ನು ವಿರೋಧಿಸಿದ್ದೂ ನಿಜ, ಬಿಜೆಪಿಗೆ ಬೆಂಬಲ ನೀಡಿದ್ದೂ ನಿಜ' ಎಂದು ಬಹಿರಂಗವಾಗಿ ಹೇಳಿರುವುದು ಉರಿವ ಬೆಂಕಿಗೆ ತುಪ್ಪ ಸುರಿದಂತಾಗಿದೆ. ಜೊತೆಗೆ ಕೋಲಾರ, ಮುಳಬಾಗಿಲು ಅಭ್ಯರ್ಥಿ ಆಯ್ಕೆ ವಿಚಾರದಲ್ಲಿ ರಾದ್ಧಾಂತವೇ ನಡೆದಿತ್ತು.

ಜಿಲ್ಲೆಯಲ್ಲಿ ಬಹು ಚರ್ಚಿತ ವಿಷಯವಾಗಿರುವ ಕೆ.ಸಿ. ವ್ಯಾಲಿಯ ಮೂರನೇ ಹಂತದ ಶುದ್ಧೀಕರಣ ಮಾಡುವುದಾಗಿ ಭರವಸೆ ಕೊಟ್ಟಿರುವುದು ಬಿಜೆಪಿಗೆ 'ಪ್ಲಸ್ ಪಾಯಿಂಟ್' ಆಗಲಿದೆ. ಆದರೆ, ಬಜೆಟ್‌ನಲ್ಲಿ ಜಿಲ್ಲೆಗೆ ಏನೂ ನೀಡಿಲ್ಲ ಎಂಬ ಕೋಪ ಜನರಲ್ಲಿದೆ.

ಜೆಡಿಎಸ್ ಪಾಲಿಗೆ ಪಂಚರತ್ನ ಯಾತ್ರೆ ವೇಳೆ ಸಿಕ್ಕ ಯಶಸ್ಸು ಅನುಕೂಲಕರ. ಆದರೆ ಈ ಪಕ್ಷದಲ್ಲಿ ಇತ್ತೀಚಿನ ದಿನಗಳಲ್ಲಿ ಸಂಘಟನೆ ಕೊರತೆಯೂ ಎದ್ದು ಕಾಡುತ್ತಿದೆ.

ಕೋಲಾರ ಸೇರಿದಂತೆ ಜಿಲ್ಲೆಯ ಬಹುತೇಕ ಕ್ಷೇತ್ರಗಳಲ್ಲಿ ಅಹಿಂದ (ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ದಲಿತ) ಮತದಾರರೇ ನಿರ್ಣಾಯಕ. ಹೀಗಾಗಿ, ಆರೂ ಕ್ಷೇತ್ರಗಳಲ್ಲಿ ಅಭಿವೃದ್ಧಿ ಹಿಂದೆ ಸರಿದು ಜಾತಿ ಲೆಕ್ಕಾಚಾರವೇ ಮುನ್ನೆಲೆಗೆ ಬಂದಿದೆ. ಜತೆಗೆ ಜನರ ನಡುವೆ ಚರ್ಚೆಗೆ ಗ್ರಾಸ ಒದಗಿಸುವಷ್ಟು 'ಕಾಂಚಾಣ'ವೂ ಸದ್ದು ಮಾಡುತ್ತಿದೆ.

ಹೆಚ್ಚು ಕುತೂಹಲ ಮೂಡಿಸಿರುವ ಕೋಲಾರ ಕ್ಷೇತ್ರದಲ್ಲಿ ತ್ರಿಕೋನ ಪೈಪೋಟಿ. ಪಕ್ಷೇತರರಾಗಿ ಗೆದ್ದು 2008ರಿಂದ 2018ರವರೆಗೆ ಎರಡು ಅವಧಿಗೆ ಶಾಸಕರಾಗಿದ್ದ ವರ್ತೂರು ಪ್ರಕಾಶ್ ಬಿಜೆಪಿಯಿಂದ ಕಣಕ್ಕಿಳಿದಿದ್ದಾರೆ. ಜೆಡಿಎಸ್ ಅಭ್ಯರ್ಥಿ ಟೊಮೆಟೊ ಮಂಡಿ ಮಾಲೀಕ ಸಿ.ಎಂ.ಆರ್ ಶ್ರೀನಾಥ್ ಪೈಪೋಟಿ ಒಡ್ಡಿದ್ದಾರೆ.

ಕೊನೆ ಕ್ಷಣದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಕೊತ್ತೂರು ಮಂಜುನಾಥ್, 'ಮುಳಬಾಗಿಲು ಕ್ಷೇತ್ರಕ್ಕೆ ಪರಿಚಯವೇ ಇಲ್ಲದ ಪಕ್ಷೇತರ ಅಭ್ಯರ್ಥಿ ಎಚ್. ನಾಗೇಶ್ ಅವರನ್ನು 2018ರಲ್ಲಿ ಏಳು ದಿನಗಳಲ್ಲಿ ಗೆಲ್ಲಿಸಿದ್ದೆ. ಕೋಲಾರದಲ್ಲಿ ನನಗೆ ಐದೇ ದಿನ ಸಾಕು' ಎಂದು ಪ್ರಚಾರ ಶುರುವಿಟ್ಟುಕೊಂಡಿದ್ದಾರೆ. ಸಿದ್ದರಾಮಯ್ಯ ಸ್ಪರ್ಧಿಸದಿರುವುದಕ್ಕೆ ಮುಸ್ಲಿಮರ ಒಂದು ಗುಂಪು ಮುನಿಸಿಕೊಂಡಿದೆ.

ಕೊತ್ತೂರು ಮಂಜುನಾಥ್ ಮುಳಬಾಗಿಲು ಮೀಸಲು ಕ್ಷೇತ್ರದಲ್ಲಿ ಜಾತಿ ಪ್ರಮಾಣಪತ್ರ ವಿವಾದ ಕಾರಣ ಸ್ಪರ್ಧಿಸಲು ಸಾಧ್ಯವಾಗದೆ ತಮ್ಮ ಬೆಂಬಲಿಗ ವಿ.ಆದಿನಾರಾಯಣ ಅವರನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿಸಿದ್ದು, ಗೆಲ್ಲಿಸುವ ಹೊಣೆ ಹೊತ್ತಿದ್ದಾರೆ.

ಶ್ರೀನಿವಾಸಪುರ ಕ್ಷೇತ್ರದಲ್ಲಿ 40 ವರ್ಷಗಳಿಂದ ಕಾಂಗ್ರೆಸ್‌ನ ಕೆ.ಆರ್.ರಮೇಶ್ ಕುಮಾರ್ ಹಾಗೂ ಜೆಡಿಎಸ್‌ನ ಜಿ.ಕೆ.ವೆಂಕಟಶಿವಾರೆಡ್ಡಿ ನಡುವೆಯೇ ಜಿದ್ದಾಜಿದ್ದಿನ ಪೈಪೋಟಿ. 1983ರಿಂದ ಅವರೊಮ್ಮೆ ಇವರೊಮ್ಮೆ ಗೆಲ್ಲುತ್ತಿದ್ದರು. 2013 ಹಾಗೂ 2018ರಲ್ಲಿ ರಮೇಶ್ ಕುಮಾರ್ ಗೆದ್ದಿದ್ದಾರೆ.

ಕೋಲಾರ, ಮುಳಬಾಗಿಲು ಹಾಗೂ ಶ್ರೀನಿವಾಸಪುರ ಕ್ಷೇತ್ರದಲ್ಲಿ ಒಮ್ಮೆಯೂ 'ಕಮಲ' ಅರಳಿಲ್ಲ. ಆದರೆ, 2019ರ ಲೋಕಸಭೆ ಚುನಾವಣೆಯಲ್ಲಿ ಕೋಲಾರ ಕ್ಷೇತ್ರದಲ್ಲಿ ಮೊದಲ ಬಾರಿ ಗೆದ್ದಿರುವುದು ಬಿಜೆಪಿ ವಿಶ್ವಾಸ ಹೆಚ್ಚಿಸಿದೆ.

ಕೆಜಿಎಫ್ ಮೀಸಲು ಕ್ಷೇತ್ರದಲ್ಲಿ ಮಹಿಳೆಯರ ನಡುವೆಯೇ ಹಣಾಹಣಿ. ಕಾಂಗ್ರೆಸ್‌ನ ರೂಪಕಲಾ ಎಂ. ಪುನರಾಯ್ಕೆ ಬಯಸಿದ್ದರೆ, ಬಿಜೆಪಿಯ ಅಶ್ವಿನಿ ಸಂಪಂಗಿ ಮತ್ತೆ ಅಖಾಡಕ್ಕೆ ಇಳಿದಿದ್ದಾರೆ. 2011ರಲ್ಲಿ 'ಆಪರೇಷನ್ ಕಮಲ'ಕ್ಕೆ ಒಳಗಾಗಿದ್ದ ಬಂಗಾರಪೇಟೆ ಕ್ಷೇತ್ರದಲ್ಲೂ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ಆಗಿನ ಉಪಚುನಾವಣೆಯಲ್ಲಿ ಗೆದ್ದಿದ್ದ ಎಂ.ನಾರಾಯಣಸ್ವಾಮಿ ಅವರೇ ಬಿಜೆಪಿ ಅಭ್ಯರ್ಥಿ.

ಜಿಲ್ಲೆಯಲ್ಲಿ ಪಕ್ಷಗಳ ಬಲಾಬಲ		
ಕ್ಷೇತ್ರ	2013	2018
ಶ್ರೀನಿವಾಸಪುರ	ಕಾಂಗ್ರೆಸ್	ಕಾಂಗ್ರೆಸ್
ಮುಳಬಾಗಿಲು	ಪಕ್ಷೇತರ	ಪಕ್ಷೇತರ
ಕೆಜಿಎಫ್	ಬಿಜೆಪಿ	ಕಾಂಗ್ರೆಸ್
ಬಂಗಾರಪೇಟೆ	ಕಾಂಗ್ರೆಸ್	ಕಾಂಗ್ರೆಸ್
ಕೋಲಾರ	ಪಕ್ಷೇತರ	ಜೆಡಿಎಸ್
ಮಾಲೂರು	ಜೆಡಿಎಸ್	ಕಾಂಗ್ರೆಸ್



ನಾಲ್ವರು ಗೆದ್ದರು, ಇಬ್ಬರು ಬಂದರು!

2018ರ ಚುನಾವಣೆಯಲ್ಲಿ ಜಿಲ್ಲೆಯ ಆರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ನಾಲ್ಕರಲ್ಲಿ ಗೆದ್ದಿತ್ತು. ಇನ್ನುಳಿದ ಎರಡು ಕ್ಷೇತ್ರಗಳ ಶಾಸಕರೂ ಕೊನೆಯಲ್ಲಿ ಕಾಂಗ್ರೆಸ್ ಸೇರಿದರು. ಮುಳಬಾಗಿಲು ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಗೆದ್ದಿದ್ದ ಎಚ್.ನಾಗೇಶ್, ಕೋಲಾರ ಕ್ಷೇತ್ರದಲ್ಲಿ ಜೆಡಿಎಸ್‌ನಿಂದ ಗೆದ್ದಿದ್ದ ಕೆ. ಶ್ರೀನಿವಾಸಗೌಡ ಈಗ ಕಾಂಗ್ರೆಸ್‌ನಲ್ಲಿದ್ದಾರೆ. ನಾಗೇಶ್ ಮಹದೇವಪುರ ಕ್ಷೇತ್ರಕ್ಕೆ ಸ್ಥಳಾಂತರಗೊಂಡಿದ್ದರೆ, ಶ್ರೀನಿವಾಸಗೌಡ ಸಿದ್ದರಾಮಯ್ಯ ಅವರಿಗಾಗಿ 'ತ್ಯಾಗ' ಮಾಡಿದರೂ ಸಿದ್ದರಾಮಯ್ಯ ಬಾರದ ಕಾರಣ ಅವರ ಉದ್ದೇಶ ಈಡೇರಲಿಲ್ಲ.

ಹಾವೇರಿ ನಾಲ್ಕು ಕ್ಷೇತ್ರಗಳಲ್ಲಿ ನೇರ ಹಣಾಹಣಿ, ಎರಡರಲ್ಲಿ ಜೆಡಿಎಸ್ ಪೈಪೋಟಿ

ಕಾಂಗ್ರೆಸ್–ಬಿಜೆಪಿ ಜಂಗೀಕುಸ್ತಿ

• ಸಿದ್ದು ಆರ್.ಜಿ.ಹಳ್ಳಿ



ಬಸವರಾಜ ಬೊಮ್ಮಾಯಿ, ಬಿ.ಸಿ.ಪಾಟೀಲ, ರುದ್ರಪ್ಪ ಲಮಾಣಿ, ಶ್ರೀನಿವಾಸ ಮಾನೆ

ಹಾವೇರಿ: ಆರು ವಿಧಾನಸಭಾ ಕ್ಷೇತ್ರಗಳನ್ನು ಹೊಂದಿರುವ ಹಾವೇರಿ ಜಿಲ್ಲೆಯ ಚುನಾವಣಾ ಕಣದಲ್ಲಿ ಕೈ–ಕೇಸರಿ ಕಲಿಗಳ ಜಂಗೀಕುಸ್ತಿ ನಡೆಯುತ್ತಿದೆ. ಕ್ಷೇತ್ರಗಳನ್ನು ಉಳಿಸಿಕೊಳ್ಳಲು ಬಿಜೆಪಿಯ ಅಭ್ಯರ್ಥಿಗಳು ಪಟ್ಟುಗಳನ್ನು ಹಾಕುತ್ತಿದ್ದರೆ, 'ಕೈ'ವಶ ಮಾಡಿಕೊಳ್ಳುವುದಾಗಿ ಕಾಂಗ್ರೆಸ್ ಅಭ್ಯರ್ಥಿಗಳು ಸವಾಲು ಹಾಕುತ್ತಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರತಿನಿಧಿಸುವ ಶಿಗ್ಗಾವಿ ಸೇರಿದಂತೆ 5 ಕ್ಷೇತ್ರಗಳು ಬಿಜೆಪಿಯ ತೆಕ್ಕೆಯಲ್ಲಿವೆ. ಹಾನಗಲ್ ಶಾಸಕರಾಗಿದ್ದ ಸಿ.ಎಂ. ಉದಾಸಿ ನಿಧನದಿಂದ ತೆರವಾದ ಸ್ಥಾನಕ್ಕೆ 2021ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಈ ಗೆಲುವಿನಿಂದಾಗಿ ಒಂದು ಕ್ಷೇತ್ರ 'ಕೈ'ವಶವಾಗಿದ್ದು, ಕಾಂಗ್ರೆಸ್ ನಾಯಕರಲ್ಲಿ ಹುರುಪು ತಂದಿದೆ.

ಕಾಂಗ್ರೆಸ್‌ಮುಕ್ತ ಜಿಲ್ಲೆ: 2018ರ ಚುನಾವಣೆಯಲ್ಲಿ 4 ಕ್ಷೇತ್ರಗಳನ್ನು ಗೆದ್ದಿದ್ದ ಬಿಜೆಪಿ, 2019ರಲ್ಲಿ ಹಿರೇಕೆರೂರು, ರಾಣೆಬೆನ್ನೂರು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಎರಡೂ ಕ್ಷೇತ್ರಗಳನ್ನು ಗೆದ್ದು, ಇಡೀ ಜಿಲ್ಲೆ 'ಕೇಸರಿ ಕೋಟೆ'ಯಾಗಿ, ಕಾಂಗ್ರೆಸ್‌ಮುಕ್ತ ಎನಿಸಿತ್ತು.

ಈಗ ಹಾವೇರಿ, ಬ್ಯಾಡಗಿ, ಹಿರೇಕೆರೂರು, ಶಿಗ್ಗಾವಿ ಕ್ಷೇತ್ರಗಳಲ್ಲಿ ಬಿಜೆಪಿ–ಕಾಂಗ್ರೆಸ್ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ರಾಣೆಬೆನ್ನೂರು ಮತ್ತು ಹಾನಗಲ್‌ನಲ್ಲಿ ಜೆಡಿಎಸ್ ಮತ್ತು ಪಕ್ಷೇತರ ಅಭ್ಯರ್ಥಿಗಳ ಸ್ಪರ್ಧೆಯೂ ಜೋರಾಗಿದೆ. ಹಾನಗಲ್, ಶಿಗ್ಗಾವಿ ಹಾಗೂ ರಾಣೆಬೆನ್ನೂರಿನ ಫಲಿತಾಂಶದ ಮೇಲೆ ಜೆಡಿಎಸ್ ಪಡೆಯುವ ಮತಗಳು ಪರಿಣಾಮ ಬೀರುವುದು ನಿಚ್ಚಳ.

'ಡಬಲ್ ಎಂಜಿನ್' ಸರ್ಕಾರದ ಸಾಧನೆ, ಮೋದಿ ಅಲೆ, ತವರುಜಿಲ್ಲೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿದ ಹಲವು ಯೋಜನೆ ಮುಂದಿಟ್ಟುಕೊಂಡು ಬಿಜೆಪಿ ಅಭ್ಯರ್ಥಿಗಳು ಮತ ಕೇಳುತ್ತಿದ್ದಾರೆ. ಕಾಂಗ್ರೆಸ್‌ನವರು ಕೂಡ ಬಿಜೆಪಿ ಸರ್ಕಾರದ ಆಡಳಿತ ವೈಫಲ್ಯ, ಬೆಲೆ ಏರಿಕೆ, ಶೇ 40 ಕಮಿಷನ್ ಆರೋಪಗಳ ಅಸ್ತ್ರಗಳನ್ನು ಝಳಪಿಸುತ್ತಾ, ಗ್ಯಾರಂಟಿ ಕಾರ್ಡ್‌ಗಳ ಆಶ್ವಾಸನೆ ನೀಡುತ್ತಾ ಮತ ಯಾಚಿಸುತ್ತಿದ್ದಾರೆ. ರೈತರ ಸಾಲ ಮನ್ನಾ ಮತ್ತು ಕುಮಾರಸ್ವಾಮಿ ಸರ್ಕಾರದ ಸಾಧನೆಗಳು ನಮಗೆ ಶ್ರೀರಕ್ಷೆಯಾಗಲಿವೆ ಎಂಬುದು ಜೆಡಿಎಸ್ ಅಭ್ಯರ್ಥಿಗಳು ಅಚಲ ವಿಶ್ವಾಸ.

ನಾಲ್ಕನೇ ಬಾರಿ ಬೊಮ್ಮಾಯಿ ಸ್ಪರ್ಧೆ: ಶಿಗ್ಗಾವಿ ಕ್ಷೇತ್ರದಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿರುವ ಬಸವರಾಜ ಬೊಮ್ಮಾಯಿ ಅವರು ನಾಲ್ಕನೇ ಬಾರಿಗೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ. ಬೊಮ್ಮಾಯಿ ಅವರನ್ನು ಈ ಬಾರಿ ಕಟ್ಟಿಹಾಕಲು ಮಾಜಿ ಸಚಿವ ವಿನಯ ಕುಲಕರ್ಣಿಯನ್ನು ಕಾಂಗ್ರೆಸ್ ಕಣಕ್ಕಿಳಿಸಲಿದೆ ಎಂಬ ಮಾತುಗಳು ಕೇಳಿಬಂದರೂ, ಕೊನೇ ಕ್ಷಣದಲ್ಲಿ ಸ್ಥಳೀಯ ಅಭ್ಯರ್ಥಿ ಯಾಸಿರ್ ಖಾನ್ ಪಠಾಣ್‌ಗೆ ಮಣೆಹಾಕಿದೆ. ಇಲ್ಲಿ ಮುಸ್ಲಿಮರು ಪ್ರಬಲ ಸಮುದಾಯವಾದ ಕಾರಣ, ಅಲ್ಪಸಂಖ್ಯಾತರ ಓಟುಗಳನ್ನು ಕಾಂಗ್ರೆಸ್ ಸೆಳೆಯಲು ಯತ್ನಿಸುತ್ತಿದೆ.

ಬೊಮ್ಮಾಯಿ ಅವರು ಬಿಜೆಪಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷರೂ ಆಗಿರುವ ಕಾರಣ, ಕ್ಷೇತ್ರದಲ್ಲೇ ಸದಾ ಇರಲು ಸಾಧ್ಯವಾಗುತ್ತಿಲ್ಲ. ಅವರ ಪತ್ನಿ ಚನ್ನಮ್ಮ, ಪುತ್ರ ಭರತ್ ಮನೆ– ಮನೆ ಪ್ರಚಾರದಲ್ಲಿ ನಿರತರಾಗಿದ್ದಾರೆ.

ಪಂಚಮಸಾಲಿ ಸಮುದಾಯದ ಶಶಿಧರ ಯಲಿಗಾರ ಅವರಿಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿದ ಕಾರಣ ಜೆಡಿಎಸ್‌ನಿಂದ ಕಣಕ್ಕಿಳಿದಿದ್ದಾರೆ. ಪಂಚಮ ಸಾಲಿ ಓಟುಗಳನ್ನು ಹೆಚ್ಚು ಸೆಳೆದರೆ, ಫಲಿತಾಂಶ ಬದಲಾಗಬಹುದು ಎಂಬ ಲೆಕ್ಕಾಚಾರ ಕ್ಷೇತ್ರದ ಜನರದ್ದು.

ಅದಲು– ಬದಲು: 2018ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದ ಯು.ಬಿ. ಬಣಕಾರ ವಿರುದ್ಧ ಕಾಂಗ್ರೆಸ್‌ನಿಂದ ಗೆದ್ದಿದ್ದ ಬಿ.ಸಿ.ಪಾಟೀಲ ಅವರು, ನಂತರ ಕಾಂಗ್ರೆಸ್‌ಗೆ ರಾಜೀನಾಮೆ ನೀಡಿ, 2019ರ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದರು. ಈ ಉಪ ಚುನಾವಣೆಯಲ್ಲಿ ಬಿ.ಸಿ.ಪಾಟೀಲ ಮತ್ತು ಯು.ಬಿ. ಬಣಕಾರ ಇಬ್ಬರೂ ಜೋಡೆತ್ತುಗಳಂತೆ ಚುನಾವಣಾ ಪ್ರಚಾರ ಮಾಡಿದ್ದರು. ನಂತರ 2022ರ ನವೆಂಬರ್‌ನಲ್ಲಿ ಯು.ಬಿ.ಬಣಕಾರ ಅವರು ಬಿಜೆಪಿ ತೊರೆದು, ಕಾಂಗ್ರೆಸ್ ಸೇರ್ಪಡೆಯಾದರು.

ಈ ಬಾರಿಯ ಚುನಾವಣೆಯಲ್ಲಿ ಮತ್ತೆ ಪಾಟೀಲ–ಬಣಕಾರ ಪರಸ್ಪರ ಎದುರಾಳಿಗಳಾಗಿದ್ದಾರೆ. ಆದರೆ, ಪಕ್ಷಗಳು ಅದಲು ಬದಲಾಗಿವೆ.

ತಪ್ಪಿದ ಟಿಕೆಟ್: ಹಾವೇರಿ ಶಾಸಕ ನೆಹರು ಓಲೇಕಾರಗೆ ಈ ಬಾರಿ ಬಿಜೆಪಿ ಟಿಕೆಟ್ ಕೈತಪ್ಪಿದೆ. ನಂತರ ಜೆಡಿಎಸ್ ಟಿಕೆಟ್ ನಿರೀಕ್ಷಿಸಿದ್ದ ಅವರಿಗೆ ಅಲ್ಲಿಯೂ ನಿರಾಸೆಯಾಗಿದೆ. ಕಾಂಗ್ರೆಸ್‌ನಿಂದ ಮಾಜಿ ಸಚಿವ ರುದ್ರಪ್ಪ ಲಮಾಣಿ ಹಾಗೂ ಬಿಜೆಪಿಯಿಂದ ನಿವೃತ್ತ ಸರ್ಕಾರಿ ನೌಕರ ಗವಿಸಿದ್ದಪ್ಪ ದ್ಯಾಮಣ್ಣನವರ ಮೀಸಲು ಕ್ಷೇತ್ರದಲ್ಲಿ ಕಣಕ್ಕಿಳಿದಿದ್ದಾರೆ.

ಸೇಡು ತೀರಿಸಿಕೊಳ್ಳಲು ತವಕ: ಹಾನಗಲ್ ಕ್ಷೇತ್ರದಲ್ಲಿ ಬಿಜೆಪಿಯಿಂದ ಶಿವರಾಜ ಸಜ್ಜನರ ಹಾಗೂ ಕಾಂಗ್ರೆಸ್‌ನಿಂದ ಶಾಸಕ ಶ್ರೀನಿವಾಸ ಮಾನೆ ಕಣದಲ್ಲಿದ್ದಾರೆ. ಉಪ ಚುನಾವಣೆ ಸೋಲಿನ ಸೇಡು ತೀರಿಸಿಕೊಳ್ಳಲು ಶಿವರಾಜ ಸಜ್ಜನರಗೆ ಬಿಜೆಪಿ ಮತ್ತೊಂದು ಅವಕಾಶ ನೀಡಿದೆ.

ಬ್ಯಾಡಗಿ ಕ್ಷೇತ್ರದಲ್ಲಿ ಬಿಜೆಪಿಯಿಂದ ಶಾಸಕ ವಿರೂಪಾಕ್ಷಪ್ಪ ಬಳ್ಳಾರಿ, ಕಾಂಗ್ರೆಸ್‌ನಿಂದ ಬಸವರಾಜ ಶಿವಣ್ಣನವರ ಕಣಕ್ಕಿಳಿದಿದ್ದಾರೆ. ಎರಡೂ ಪಕ್ಷಗಳಲ್ಲಿ ಮೇಲ್ನೋಟಕ್ಕೆ ಭಿನ್ನಮತ ಶಮನವಾದಂತೆ ಕಾಣುತ್ತಿದೆ. ಒಗ್ಗಟ್ಟಿನಿಂದ ಚುನಾವಣೆ ಎದುರಿಸುವ ಪಕ್ಷಕ್ಕೆ ಗೆಲುವು ಸುಲಭವಾಗಲಿದೆ.

ರಾಣೆಬೆನ್ನೂರಿನಲ್ಲಿ ಬಹುಕೋನ ಸ್ಪರ್ಧೆ: ರಾಣೆಬೆನ್ನೂರು ಕ್ಷೇತ್ರದಲ್ಲಿ ಈ ಸಲ ಬಹುಕೋನ ಸ್ಪರ್ಧೆ ಕಂಡು ಬರುತ್ತಿದೆ. ಬಿಜೆಪಿಯಿಂದ ಶಾಸಕ ಅರುಣಕುಮಾರ ಪೂಜಾರ, ಕಾಂಗ್ರೆಸ್‌ನಿಂದ ಕೆ.ಬಿ. ಕೋಳಿವಾಡರ ಪುತ್ರ ಪ್ರಕಾಶ ಕೋಳಿವಾಡಗೆ ಟಿಕೆಟ್ ಸಿಕ್ಕಿದೆ. 2018ರ ಚುನಾವಣೆಯಲ್ಲಿ ಕೆಪಿಜೆಪಿಯಿಂದ ಸ್ಪರ್ಧಿಸಿ ಗೆದ್ದಿದ್ದ ಆರ್.ಶಂಕರ್ ಎನ್‌ಸಿಪಿಯಿಂದ ಕಣಕ್ಕಿಳಿದಿದ್ದಾರೆ. ಬಿಜೆಪಿ ಟಿಕೆಟ್‌ಗಾಗಿ ಪ್ರಯತ್ನಿಸಿದ್ದ ಸಂತೋಷಕುಮಾರ ಪಾಟೀಲ ಪಕ್ಷೇತರರಾಗಿ ಸಾಮರ್ಥ್ಯ ಸಾಬೀತಿಗೆ ಇಳಿದಿದ್ದರೆ, ಜೆಡಿಎಸ್ ಅಭ್ಯರ್ಥಿ ಮಂಜುನಾಥ ಗೌಡಶಿವಣ್ಣವರ ಕೂಡ ಅಬ್ಬರದ ಪ್ರಚಾರ ನಡೆಸಿದ್ದಾರೆ. ಇವರಲ್ಲಿ ಗೆಲುವು ಯಾರ ಪಾಲಾಗಲಿದೆ ಎಂಬ ಗುಟ್ಟು ಮತದಾರ ಬಿಟ್ಟುಕೊಡುತ್ತಿಲ್ಲ.

ಜಿಲ್ಲೆಯಲ್ಲಿ ಪಕ್ಷಗಳ ಬಲಾಬಲ		
ಕ್ಷೇತ್ರ	2013	2018
ಹಾವೇರಿ	ಕಾಂಗ್ರೆಸ್	ಬಿಜೆಪಿ
ರಾಣೆಬೆನ್ನೂರು	ಕಾಂಗ್ರೆಸ್	ಕೆಪಿಜೆಪಿ
ಶಿಗ್ಗಾವಿ	ಬಿಜೆಪಿ	ಬಿಜೆಪಿ
ಬ್ಯಾಡಗಿ	ಕಾಂಗ್ರೆಸ್	ಬಿಜೆಪಿ
ಹಿರೇಕೆರೂರು	ಕೆಜೆಪಿ	ಕಾಂಗ್ರೆಸ್
ಹಾನಗಲ್	ಕಾಂಗ್ರೆಸ್	ಬಿಜೆಪಿ



ಕಲ್ಲೇಟು: ಹೆದರಿ ಓಡಿ ಹೋಗಲ್ಲ– ಪರಮೇಶ್ವರ

ಪ್ರಜಾವಾಣಿ ವಾರ್ತೆ

ತುಮಕೂರು: 'ಯಾರು ಏನೇ ತೊಂದರೆ ಕೊಟ್ಟರೂ, ತಲೆ ಮೇಲೆ ಕಲ್ಲು ಎತ್ತಿ ಹಾಕಿದರೂ ಹೆದರಿ ರಾಜಕೀಯದಿಂದ ಓಡಿ ಹೋಗುವುದಿಲ್ಲ. ಹೆಚ್ಚಿನ ಭದ್ರತೆಯ ಅಗತ್ಯವೂ ಇಲ್ಲ. ಒಂದೆರಡು ದಿನಗಳಲ್ಲಿ ಮತ್ತೆ ಪ್ರಚಾರಕ್ಕೆ ಹೋಗುತ್ತೇನೆ' ಎಂದು ಕೊರಟಗೆರೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಾ.ಜಿ.ಪರಮೇಶ್ವರ ಹೇಳಿದರು.

'ಕೊರಟಗೆರೆ ಕ್ಷೇತ್ರದ ಬೈರೇನಹಳ್ಳಿಯಲ್ಲಿ ಶುಕ್ರವಾರ ಪ್ರಚಾರ ನಡೆಸುತ್ತಿದ್ದ ವೇಳೆ ದುಷ್ಕರ್ಮಿಗಳು ಹೂವಿನ ಜತೆ

ಗಾಯ ತೋರಿಸಿದ ಡಾ.ಜಿ.ಪರಮೇಶ್ವರ

ತಲೆ ಮೇಲೆ ಕಲ್ಲು ಹಾಕಿದ್ದಾರೆ. ಇದು ಉದ್ದೇಶಪೂರ್ವಕ ಕೃತ್ಯ. ದುಷ್ಕರ್ಮಿಗಳ ಉದ್ದೇಶ ಗೊತ್ತಿಲ್ಲ. ಈ ಬಗ್ಗೆ ಸಮಗ್ರ ತನಿಖೆ ನಡೆಸುವಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಒತ್ತಾಯಿಸಿದ್ದೇನೆ' ಎಂದು ತಿಳಿಸಿದರು.

'ಪರಮೇಶ್ವರ ನಾಟಕ ಮಾಡುತ್ತಿದ್ದಾರೆ' ಎಂದು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಶನಿವಾರ ಗೊಲ್ಲಹಳ್ಳಿಯಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಅವರಿಗೆ ನಾಟಕ ಮಾಡಿ ಅಭ್ಯಾಸವಿದೆ. ಅವರಂತೆ ಕಣ್ಣಲ್ಲಿ ನೀರು ಹಾಕಿ, ಅತ್ತು, ಕರೆಯುವುದಿಲ್ಲ' ಎಂದು ತಿರುಗೇಟು ನೀಡಿದರು.

'ಏಟು ತಿಂದವನು ನಾನು. ಅದರ ನೋವೆಷ್ಟಿದೆ ಎಂಬುದು ನನಗೆ ಗೊತ್ತು. ನಾಟಕ ಮಾಡುವ ಅಗತ್ಯವಿಲ್ಲ. ಜನರ ಮುಂದೆ ಹೋಗುತ್ತೇನೆ. ಮತದಾರರೇ ತೀರ್ಪು ಕೊಡುತ್ತಾರೆ' ಎಂದು ಹೇಳಿದರು.

'ನನ್ನ ಮೇಲೆ ಹಲ್ಲೆಗೆ ಯತ್ನಿಸಿರುವುದು ಇದೇ ಮೊದಲಲ್ಲ. 1999ರಲ್ಲಿ ವಿಜಯೋತ್ಸವ ಸಮಯದಲ್ಲಿ ಚಾಕುವಿನಿಂದ ತಿವಿಯಲು ಯತ್ನಿಸಲಾಗಿತ್ತು. ಈ ಬಾರಿ ನಾಮಪತ್ರ ಸಲ್ಲಿಸುವ ವೇಳೆ ಕಲ್ಲು ತೂರಾಟ ನಡೆದಿದೆ. ನನ್ನನ್ನೇ ಗುರಿ ಮಾಡಿಕೊಂಡು ಪದೇಪದೇ ಇಂತಹ ದಾಳಿ ನಡೆಯುತ್ತಿವೆ. ದ್ವೇಷ ತೀರಿಸಲು ಸಾರ್ವಜನಿಕ ಜೀವನ ಬಳಸಿಕೊಳ್ಳಬಾರದು' ಎಂದರು.

'ಪ್ರತಾಪ ಸಿಂಹ, ನಿನ್ನನ್ನು ಬೆತ್ತಲೆಗೊಳಿಸುವೆ'

ಮೈಸೂರು: 'ಸಂಸದ ಪ್ರತಾಪಸಿಂಹ, ಮಾಧ್ಯಮಗಳಿಗೆ ಧಮ್ಕಿ ಹಾಕುತ್ತೀಯ. ನೀನು ಬೆತ್ತಲೆ ಪ್ರಪಂಚ ಬರೆದಿರಬಹುದು. ಆದರೆ, ಇನ್ನೂ ಸ್ವಲ್ಪ ದಿನದಲ್ಲಿ ನಾನೇ ನಿನ್ನನ್ನು ಬೆತ್ತಲೆ ಮಾಡುತ್ತೇನೆ. ಎಲ್ಲ ಮಾಹಿತಿ ನನ್ನ ಬಳಿ ಇದೆ' ಎಂದು ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಹೇಳಿದರು. ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಸೋಮಣ್ಣ ಮತ್ತು ಸಿದ್ದರಾಮಯ್ಯ ಕೆಳಹಂತದಿಂದ ರಾಜಕೀಯಕ್ಕೆ ಬಂದವರು. ಅವರು ತಮ್ಮ ಪ್ರಚಾರವನ್ನು ತಾವೇ ಮಾಡಿಕೊಳ್ಳಲು ಸಮರ್ಥರು. ಸುಳ್ಳು ಹೇಳಿ ಸೈಟ್ ತೆಗೆದುಕೊಂಡ ನಿನಗೆ ಅಲ್ಲೇನು ಕೆಲಸ? ಎಂದು ಹರಿಹಾಯ್ದರು.

'ಮೋದಿ ರೋಡ್ ಶೋಗೆ ₹3 ಕೋಟಿ ಪ್ರಚಾರ ಸಾಮಗ್ರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾಗಡಿ ರಸ್ತೆಯಲ್ಲಿ ಪ್ರಧಾನಿ ಮೋದಿ ಅವರು ನಡೆಸಿದ ರೋಡ್ ಶೋಗೆ ಸುಮಾರು ₹ 3 ಕೋಟಿ ವೆಚ್ಚದಲ್ಲಿ ಚುನಾವಣಾ ಪ್ರಚಾರ ಸಾಮಗ್ರಿಗಳನ್ನು ಬಳಸಲಾಗಿದೆ. ಇದಕ್ಕೆ ಯಾವುದೇ ಅನುಮತಿಯನ್ನೂ ಪಡೆದಿಲ್ಲ. ಚುನಾವಣಾ ಆಯೋಗದ ನಿಯಮಗಳಿಗೆ ವಿರುದ್ಧವಾಗಿ ಬಿಬಿಎಂಪಿ ನಡೆದುಕೊಂಡಿದೆ' ಎಂದು ಕಾಂಗ್ರೆಸ್ ದೂರಿದೆ.

ಈ ಕುರಿತು ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಕೆಪಿಸಿಸಿ ಉಪಾಧ್ಯಕ್ಷ ಪಿ.ಆರ್. ರಮೇಶ್ ಮತ್ತು ವಕ್ತಾರ ರಮೇಶ್ ಬಾಬು ದೂರು ನೀಡಿದ್ದಾರೆ.

ರೋಡ್ ಶೋ ವ್ಯವಸ್ಥೆಗೆ ಬಿಬಿಎಂಪಿ ಮತ್ತು ಇತರ ಸರ್ಕಾರಿ ಸಂಸ್ಥೆಗಳ ಸೇವೆಯನ್ನು ಬಳಸಿಕೊಳ್ಳಲಾಗಿದೆ. ಅನಧಿಕೃತವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಅನುಮತಿ ಇಲ್ಲದೆ ದೊಡ್ಡ ಪ್ರಮಾಣದಲ್ಲಿ ಪ್ರಚಾರ ಸಾಮಗ್ರಿ ಬಳಸುವುದರ ಮೂಲಕ ಬಿಜೆಪಿಯು ಬಿಬಿಎಂಪಿಗೆ ಪಾವತಿಸಬೇಕಿದ್ದ ಅನುಮತಿ ಶುಲ್ಕವನ್ನು ಪಾವತಿಸದೆ ವಂಚಿಸಿದೆ' ಎಂದೂ ಆರೋಪಿಸಿದ್ದಾರೆ.

'ಮೋದಿ ಅವರು ಭಾಗವಹಿಸುವ ಕಾರ್ಯಕ್ರಮಗಳಲ್ಲಿ ಆಯೋಗದ ಅನುಮತಿ ಇಲ್ಲದೆ ಬಿಜೆಪಿ ನಡೆಸುವ ಕಾನೂನುಬಾಹಿರ ಕ್ರಮಗಳನ್ನು ನಿಯಂತ್ರಿಸಬೇಕು. ತಪ್ಪಿತಸ್ಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು' ಎಂದೂ ಆಗ್ರಹಿಸಿದ್ದಾರೆ.

'ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಸರ್ಕಾರಿ ವೆಚ್ಚದಲ್ಲಿ ಯಾವುದೇ ಸರ್ಕಾರಿ ಕಾರ್ಯಕ್ರಮವನ್ನು ನಡೆಸಲು ಅವಕಾಶ ಇಲ್ಲ. ಕಾರ್ಯಕ್ರಮ ನಡೆಸುವುದಾದರೆ ಚುನಾವಣಾ ಆಯೋಗದಿಂದ ಪೂರ್ವಾನುಮತಿ ಪಡೆಯಬೇಕು. ಆದರೆ, ಮೋದಿ ಕಾರ್ಯಕ್ರಮಕ್ಕೆ ಯಾವುದೇ ಅನುಮತಿ ಪಡೆದಿಲ್ಲ' ಎಂದು ದೂರಿದ್ದಾರೆ.

ನೆಲೆ ಕಸಿದ ನೀರಾವರಿ

ಒಂದನೇ ಪುಟದಿಂದ..

ಕೃಷ್ಣಾ ಮೇಲ್ದಂಡೆ ಯೋಜನೆ, ಹೇಮಾವತಿ ಜಲಾಶಯ, ಶರಾವತಿ ಯೋಜನೆ.. ಹೀಗೆ ಸಾಲುಸಾಲು ಯೋಜನೆಗಳಿಂದ ನೀರಾವರಿ ಸೌಲಭ್ಯ ಕಲ್ಪಿಸಿರುವುದಾಗಿ ಸರ್ಕಾರಗಳು ಹೇಳಿಕೊಳ್ಳುತ್ತಿವೆ. ಆದರೆ, ಈ ಯೋಜನೆಗಳ ಸಂತ್ರಸ್ತರ ಬದುಕು ಮಾತ್ರ ನೀರಿನಲ್ಲಿ ಮುಳುಗಿದಂತಾಗಿದೆ. ಸರ್ಕಾರದಿಂದ ಹಂಚಿಕೆಯಾಗಿರುವ ನಿವೇಶನ, ಜಮೀನುಗಳು ಸಂತ್ರಸ್ತರ ಸ್ವಾಧೀನದಲ್ಲಿದ್ದು, ಹಲವರು ಮನೆ ನಿರ್ಮಿಸಿಕೊಂಡಿದ್ದಾರೆ. ಸಾಗುವಳಿ ಮಾಡುತ್ತಿದ್ದು, ಬೆಳೆಗಳನ್ನೂ ಬೆಳೆಯುತ್ತಿದ್ದಾರೆ. ಆದರೆ, ಆ ಜಮೀನು, ನಿವೇಶನಗಳ ಮಾಲೀಕತ್ವ ಇಂದಿಗೂ ಅವರ ಹೆಸರಿನಲ್ಲಿಲ್ಲ.

‘ಸಾಗುವಳಿ ಮಾಡಿದರೂ, ಮನೆ ಕಟ್ಟಿಕೊಂಡಿದ್ದರೂ ಜಮೀನು, ನಿವೇಶನ ಅವರದ್ದಲ್ಲ. ತೆರವುಗೊಳಿಸುವಂತೆ ಆದೇಶಿಸಿದರೆ ಹೊರಗೆ ಹೋಗಲೇಬೇಕು. ಕೋರ್ಟ್‌ಗೆ ಮೊರೆ ಹೋಗಬೇಕೆಂದರೆ, ದಾಖಲೆಗಳೇ ಅವರ ಹೆಸರಿನಲ್ಲಿಲ್ಲ’ ಎನ್ನುತ್ತಾರೆ ಹೇಮಾವತಿ ಅಣೆಕಟ್ಟೆ ಸಂತ್ರಸ್ತರ ಹೋರಾಟ ಸಮಿತಿ ಅಧ್ಯಕ್ಷ ಎಸ್‌.ಕೃಷ್ಣ.

ಸಂತ್ರಸ್ತರು ಬೀದಿ ಪಾಲು: 1960ರಿಂದ 1980ರವರೆಗಿನ ಎರಡು ದಶಕಗಳಲ್ಲಿ ವಿವಿಧ ಯೋಜನೆಗಳಿಗಾಗಿ ಸಾವಿರಾರು ಜನ ನೆಲೆ ಕಳೆದುಕೊಂಡಿದ್ದಾರೆ. ಅಂತಹ ಸಂತ್ರಸ್ತ ಕುಟುಂಬ ಗಳನ್ನು ಸರ್ಕಾರಿ ಜಾಗಗಳಿಗೆ ಸ್ಥಳಾಂತರಿಸಲಾಗಿದೆ. ಆದರೆ, ತೋಟ, ಗದ್ದೆ, ಜಮೀನು, ಮನೆಗಳ ದಾಖಲೆ ಇದ್ದವರಿಗೆ ಮಾತ್ರ ಪರಿಹಾರ ಹಾಗೂ ಬದಲಿ ಜಮೀನಿನ ಹಕ್ಕುಪತ್ರ ಸಿಕ್ಕಿದೆ.

ಜಲ ವಿದ್ಯುತ್ ಯೋಜನೆಗಳಿಂದ ಸಂತ್ರಸ್ತರಾದವರಲ್ಲಿ ಶೇ 90ರಷ್ಟು ಮಂದಿಗೆ ಭೂಮಿಯ ಹಕ್ಕು ಇರಲಿಲ್ಲ. ಶರಾವತಿ ಕಣಿವೆ ಯೋಜನೆಗಳು ಅನುಷ್ಠಾನಗೊಳ್ಳುವಾಗ ಭೂ ಒಡೆತನದ ಹಕ್ಕು ಬೆರಳೆಣಿಕೆಯಷ್ಟು ಜನರಲ್ಲಿತ್ತು. ತಮ್ಮ ಹೆಸರಿನಲ್ಲಿ ಭೂ ದಾಖಲೆ ಇದ್ದವರಿಗೆ ಮಾತ್ರ ಭೂಮಿ ದೊರೆಕಿದೆ. ತಲೆಮಾರುಗಳಿಂದ ಉಳುಮೆ ಮಾಡಿಕೊಂಡು ಬಂದ ಗೇಣಿದಾರರಿಗೆ ಇದುವರೆಗೂ ನಯಾಪೈಸೆ ಸಿಕ್ಕಿಲ್ಲ.

ಮಲೆನಾಡಿನ ತವರು ಶಿವಮೊಗ್ಗ ಜಿಲ್ಲೆಯ ಸಾಗರ, ಹೊಸನಗರ ಹಾಗೂ ತೀರ್ಥಹಳ್ಳಿ ತಾಲ್ಲೂಕಿನ ಮೂಲ ನಿವಾಸಿಗಳು ಜಲಾಶಯಗಳಿಗಾಗಿ ಮೂಲನೆಲೆ ಕಳೆದುಕೊಂಡಿದ್ದು, ಕಾಡುಗಳ ನಡುವೆ ಅಲೆದಾಡುತ್ತಲೇ ಇದ್ದಾರೆ. ಒಂದೇ ಕಡೆ ಕೂಡು ಕುಟುಂಬದೊಂದಿಗೆ ಸುಖ ಜೀವನ ನಡೆಸಿದ್ದ ಸಂತ್ರಸ್ತರು, ಈಗ ಬದುಕಿನ ಭದ್ರತೆಗಾಗಿ ಚಡಪಡಿಸುವಂತಾಗಿದೆ. ನೆಂಟರಿಷ್ಟರು ಎಲ್ಲೆಲ್ಲೋ ನೆಲೆಕಂಡಿದ್ದಾರೆ. ಹೊಸ ಪೀಳಿಗೆಗೆ ರಕ್ತಸಂಬಂಧಿಗಳನ್ನು ಮದುವೆ ಸಮಾರಂಭಗಳಲ್ಲಿ ಪರಿಚಯ ಮಾಡಿಕೊಡಬೇಕಾದ ಸ್ಥಿತಿಯಿದೆ. ಇದು ಹಳೆಯ ಪೀಳಿಗೆಯನ್ನು ಆಗಾಗ ಕಸಿವಿಸಿಗೆ ಕೆಡವುತ್ತದೆ.

ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಹಲವರ ಜಮೀನು ಮುಳುಗಡೆಯಾಗಿವೆ. ಆಗ ದಾಖಲೆ ಗಳಲ್ಲಿ ನಮೂದಾಗಿದ್ದ ಹಲವು ಮಾಲೀಕರು, ಈಗ ಇಲ್ಲ. ಸತ್ತವರ ಮರಣ ಪ್ರಮಾಣಪತ್ರ, ವಾರಸುದಾರ ಪತ್ರ ಹಿಡಿದುಕೊಂಡು ಮಕ್ಕಳು ಹಕ್ಕುಪತ್ರಕ್ಕಾಗಿ ಅಲೆದಾಡುತ್ತಿದ್ದಾರೆ.

ಜಮೀನಿನ ಹಕ್ಕುಪತ್ರಕ್ಕಾಗಿ ಹಲವು ಹೋರಾಟಗಳು ನಡೆದಿವೆ. ಪ್ರತಿಭಟನೆ, ಮನವಿಗಳಿಗೆ ಲೆಕ್ಕವೇ ಇಲ್ಲ. ಈ ವಿಚಾರವಾಗಿ ಈಚೆಗೆ ಬಾಗಲಕೋಟೆ ಜಿಲ್ಲೆಯ ಕಲಾದಗಿಯಲ್ಲಿ ನಡೆದ ಕಂದಾಯ ಸಚಿವ ಆರ್. ಅಶೋಕ್ ಅವರ ಗ್ರಾಮ ವಾಸ್ತವ್ಯದ ಸಂದರ್ಭದಲ್ಲೂ ಸಂತ್ರಸ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೂ ಅವರ ಬೇಡಿಕೆ ಅರಣ್ಯರೋದನವಾಗಿ ಉಳಿದಿದೆ.

ನಾರಾಯಣಪುರ ಅಣೆಕಟ್ಟೆಯಲ್ಲಿ 40 ಗ್ರಾಮ, ಆಲಮಟ್ಟಿ ಅಣೆಕಟ್ಟನಲ್ಲಿ 136 ಗ್ರಾಮಗಳು ಮುಳುಗಡೆಯಾಗಿವೆ. ಮೂರನೇ ಹಂತದಲ್ಲಿ 20 ಗ್ರಾಮಗಳು ಮುಳುಗಡೆಯಾಗುತ್ತಿವೆ. ಇಲ್ಲಿಯವರೆಗೆ 4.06 ಲಕ್ಷ ಎಕರೆ ಭೂಮಿ, 1,04,404 ಕಟ್ಟಡಗಳನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಲಕ್ಷಕ್ಕೂ ಹೆಚ್ಚು ಕುಟುಂಬಗಳು ಬಾಧಿತವಾಗಿವೆ.

ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆಯ ಸಂತ್ರಸ್ತರ ಪೈಕಿ ಬೀಳಗಿ ತಾಲ್ಲೂಕಿನ ಎಷ್ಟೋ ಮಂದಿ ಈಗಲೂ ಹಕ್ಕುಪತ್ರಕ್ಕೆ ಪರದಾಡುತ್ತಿದ್ದಾರೆ. ಹದಿನೆಂಟು ವರ್ಷಗಳ ಹಿಂದೆ ಪಡಿತರ ಚೀಟಿಯಲ್ಲಿ ಎಷ್ಟು ಜನರ ಹೆಸರುಗಳಿದ್ದವೋ ಅವರನ್ನಷ್ಟೇ ಸಂತ್ರಸ್ತರ ಪಟ್ಟಿಗೆ ಸೇರಿಸಲಾಗಿದೆ. ಇಷ್ಟು ದೀರ್ಘ ಕಾಲದ ನಂತರ, ಆಗ ಬಾಲಕರಾಗಿದ್ದವರು ಯುವಕರಾಗಿ, ಸಂಸಾರಗಳನ್ನು ಕಟ್ಟಿಕೊಂಡಿದ್ದಾರೆ. ಕುಟುಂಬ ವಿಸ್ತರಣೆ ಬಳಿಕ ಹೊಸ ಸದಸ್ಯರ ಹೆಸರು ಪಟ್ಟಿಯಲ್ಲಿಲ್ಲ. ಆದರೆ, ಮುಳುಗಡೆಯ ಬಿಸಿ ಅವರಿಗೂ ತಟ್ಟುತ್ತಿದೆ.

ಕಲಾದಗಿ ಪುನರ್ ವಸತಿ ಕೇಂದ್ರದಲ್ಲಿ ನಿರ್ಮಿಸಿದ್ದ ಶಿಕ್ಷಕರ ವಸತಿ ಗೃಹಗಳು ಪಾಳು ಬಿದ್ದಿವೆ

ಕಲಾದಗಿಯ 4,037 ಮಂದಿ ಪೈಕಿ ಸಾವಿರ ಜನರಿಗಷ್ಟೇ ಹಕ್ಕುಪತ್ರ ನೀಡಲಾಗಿದೆ. ಉಳಿದವರ ಹೋರಾಟ ಮುಂದುವರೆದಿದೆ. ಬೆಣ್ಣೂರ, ತಳಗಿಹಾಳ, ಇಲಾಳ, ಹಿರೇಹೊದ್ಲೂರ, ಚಿಕ್ಕಹೊದ್ಲೂರ ಗ್ರಾಮಗಳಲ್ಲಿ ಹಕ್ಕುಪತ್ರಗಳನ್ನು ಗ್ರಾಮದ ಮುಖಂಡರ ಕೈಯಲ್ಲಿ ನೀಡಲಾಗಿತ್ತು ಎಂದು ಹೇಳಲಾಗುತ್ತಿದೆ. ಆದರೆ, ಅವು ಫಲಾನುಭವಿಯನ್ನು ತಲುಪದ್ದರಿಂದ ಹಲವರು ಈಗಲೂ ಅಲೆದಾಡುತ್ತಿದ್ದಾರೆ.

‘2010ರಲ್ಲಿ ಪ್ರತಿ ಇಟ್ಟಿಗೆಗೆ ₹1.40, ಪ್ರತಿ ಚೀಲ ಸಿಮೆಂಟಿಗೆ ₹145 ದರದಂತೆ ಕಟ್ಟಡದ ಸವಕಳಿ ತೆಗೆದು ಪರಿಹಾರ ನೀಡಲಾಗಿದೆ. ಹಕ್ಕು ಪತ್ರ, ಮೂಲಸೌಲಭ್ಯಗಳು ಇಲ್ಲದ್ದರಿಂದ ಸ್ಥಳಾಂತರಗೊಂಡಿಲ್ಲ. ಪರಿಹಾರದ ಹಣವು ಮದುವೆ, ಆಸ್ಪತ್ರೆ ವೆಚ್ಚ ಇತ್ಯಾದಿಗಳಿಗೆ ಖರ್ಚಾಗಿ ಹೋಗಿದೆ. ಈಗ ಪ್ರತಿ ಇಟ್ಟಿಗೆಗೆ ₹ 6, ಚೀಲಕ್ಕೆ ಸಿಮೆಂಟ್ ₹350ಕ್ಕೆ ಹೆಚ್ಚಾಗಿದೆ. ಹೊಸ ಮನೆ ಕಟ್ಟಿಸಲು ಸಾಲ ಮಾಡಬೇಕಾಗಿದೆ’ ಎನ್ನುತ್ತಾರೆ ಸಂತ್ರಸ್ತರು.

ಹಲವು ಗ್ರಾಮಗಳ ಜನ ಇನ್ನೂ ಸ್ಥಳಾಂತರವಾಗಿಲ್ಲ. ಆದರೂ ಅಧಿಕಾರಿಗಳೂ ತಲೆಕೆಡಿಸಿಕೊಂಡಿಲ್ಲ. ಪರಿಣಾಮ, ಗ್ರಾಮದಲ್ಲಿ ನಿರ್ಮಿಸಿದ್ದ ಸಮುದಾಯ ಭವನ, ಪ್ರಾಥಮಿಕ ಪಶುಚಿಕಿತ್ಸಾಲಯ, ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗನವಾಡಿ, ಶಾಲಾ ಕಟ್ಟಡಗಳು ಪಾಳು ಬಿದ್ದಿವೆ. ಕಿಟಕಿ, ಬಾಗಿಲು ಕಿತ್ತು ಹೋಗಿವೆ.

1971ರಲ್ಲಿ ಹೇಮಾವತಿ ಅಣೆಕಟ್ಟು ನಿರ್ಮಿಸಲಾಗಿದ್ದು, ಮುಳುಗಡೆ ಸಂತ್ರಸ್ತರಿಗೆ ಸರ್ಕಾರವು ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಕಸಬಾ ಬ್ಯಾಬ ಅರಣ್ಯ ಪ್ರದೇಶದ 1,500 ಎಕರೆ ಪ್ರದೇಶವನ್ನು 52 ವರ್ಷಗಳ ಹಿಂದೆಯೇ ಮೀಸಲಾಗಿಡಲಾಗಿತ್ತು. ಬ್ಯಾಬ ಫಾರೆಸ್ಟ್, ಬ್ಯಾಬ ಫಾರೆಸ್ಟ್ 1ಪಿ, 2ಪಿ, 3ಪಿ ಎಂದು ನಾಲ್ಕು ವಿಭಾಗಗಳನ್ನಾಗಿ ಮಾಡಿದ್ದು, ಸಂತ್ರಸ್ತರಿಗೆ ತಲಾ ನಾಲ್ಕು ಎಕರೆಯಂತೆ ಹಂಚಿಕೆ ಮಾಡಲು 320 ಬ್ಲಾಕ್‌ಗಳನ್ನು ವಿಂಗಡಿಸಲಾಗಿದೆ. ಸಂತ್ರಸ್ತರಲ್ಲಿ ಸಾಗುವಳಿ ಚೀಟಿಗಳು ಮಾತ್ರವಿದ್ದು, ಜಮೀನಿನ ದಾಖಲೆಗಳನ್ನು ಇನ್ನೂ ಸರಿಪಡಿಸಿಲ್ಲ. ಪೋಡಿ ಆಗದೇ ಫಲಾನುಭವಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

‘ಹೇಮಾವತಿ ಮುಳುಗಡೆ ಪ್ರದೇಶದ ನಿವಾಸಿಗಳಿಗೆ ಬ್ಯಾಬ ಫಾರೆಸ್ಟ್‌ನಲ್ಲಿ ಕೊಟ್ಟಿರುವ ಜಮೀನಿನ ದಾಖಲೆಗಳು ಅರ್ಧ ಶತಮಾನ ಕಳೆದರೂ ಸರಿಯಾಗಿಲ್ಲ. ಇದು ಸರ್ಕಾರದ ವೈಫಲ್ಯವೋ, ಅಸಹಾಯಕತೆಯೋ ಗೊತ್ತಾಗುತ್ತಿಲ್ಲ. ಆದರೆ ಇದು ನಾಚಿಕೆಗೇಡು. ಈ ಬಗ್ಗೆ ವಿಧಾನಸಭೆಯಲ್ಲೂ ಮಾತಾಡಿದ್ದೇನೆ. ಕುಂದೂರು ಗ್ರಾಮದಲ್ಲಿ ನಡೆದ ‘ಜಿಲ್ಲಾಧಿಕಾರಿಗಳ ನಡೆ ಗ್ರಾಮದ ಕಡೆ’ ಕಾರ್ಯಕ್ರಮದಲ್ಲೂ ಜಿಲ್ಲಾಧಿಕಾರಿ ಗಮನಕ್ಕೆ ತಂದಿದ್ದೇನೆ’ ಎಂದು ಶಾಸಕ ಎಚ್‌.ಕೆ. ಕುಮಾರಸ್ವಾಮಿ ಹೇಳುತ್ತಾರೆ.

‘ಬ್ಯಾಬ ನಂ. 1 ಅನ್ನು ಒಟ್ಟುಗೂಡಿಸಿದ್ದೇವೆ. ಆದರೆ ದಾಖಲೆಗಳು ತಾಳೆ ಆಗುತ್ತಿಲ್ಲ. ಒಂದು ಸಾವಿರ ಎಕರೆ ಜಮೀನಿದೆ. 1,500 ಎಕರೆ ಆರ್‌ಟಿಸಿ ಬರುತ್ತಿದೆ. ಸಂಬಂಧಿಸಿದ ಎಲ್ಲ ಇಲಾಖೆ ಅಧಿಕಾರಿಗಳು, ಗ್ರಾಮಸ್ಥರು, ಜನಪ್ರತಿನಿಧಿಗಳು ಗ್ರಾಮದಲ್ಲಿ ಒಟ್ಟಾಗಿ ಸೇರಿ ದಾಖಲೆಗಳನ್ನು ಸರಿಪಡಿಸಬೇಕು’ ಎನ್ನುವುದು ಭೂ ದಾಖಲೆಗಳ ಇಲಾಖೆ ಅಧಿಕಾರಿಗಳ ಸಮಜಾಯಿಷಿ.

ಸಂತ್ರಸ್ತರ ಬದುಕು ಮತ್ತೆ ಅತಂತ್ರ: ಶರಾವತಿ ಮುಳುಗಡೆ ಸಂತ್ರಸ್ತರಿಗೆ ಪುನರ್ವಸತಿ ಕಲ್ಪಿಸಲು ಅರಣ್ಯಭೂಮಿ ಹಂಚಿಕೆ ಮಾಡಿ ಹೊರಡಿಸಿದ್ದ 56 ಅಧಿಸೂಚನೆಗಳನ್ನು ರದ್ದುಗೊಳಿಸುವಂತೆ ಹೈಕೋರ್ಟ್ ಈಚೆಗೆ ಆದೇಶ ಹೊರಡಿಸಿದೆ. ಕೋರ್ಟ್ ಆದೇಶದ ಕಾರಣ 6,458 ಎಕರೆ ಪ್ರದೇಶದ ಭೂಮಿಯ ಪಹಣಿಯಲ್ಲಿ ಅರಣ್ಯ ಇಲಾಖೆಯ ಹೆಸರು ನಮೂದಾಗಲಿದೆ. ಇದರಿಂದ ಸಾವಿರಾರು ಕುಟುಂಬಗಳು ನೆಲೆ ಕಳೆದುಕೊಳ್ಳುವ ಆತಂಕ ಎದುರಾಗಿದೆ.

ಮಲೆನಾಡಿನಲ್ಲಿ 1950ರ ದಶಕದ ಮಧ್ಯ ಭಾಗ, 1960ರ ದಶಕದ ಆರಂಭದಲ್ಲಿ ಮಡೆನೂರು, ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣಕ್ಕಾಗಿ ಈ ಭಾಗದ ಜನರನ್ನು ನಿರ್ವಸತಿಗರನ್ನಾಗಿ ಮಾಡಲಾಗಿತ್ತು. ‘ಕೂಡಲೇ ಗ್ರಾಮಗಳನ್ನು ಬಿಡಬೇಕು. ಶೀಘ್ರ ಜಲಾಶಯದ ನೀರು ನಿಮ್ಮ ಗ್ರಾಮಗಳನ್ನು ಮುಳುಗಿಸಲಿದೆ’ ಎಂದು 1959-60ರಲ್ಲಿ ಕೆಪಿಸಿಯಿಂದ ಗ್ರಾಮಸ್ಥರಿಗೆ ನೋಟಿಸ್ ನೀಡಲಾಗಿತ್ತು.

ಗ್ರಾಮಸ್ಥರು ಹುಟ್ಟಿ ಬೆಳೆದ ಊರನ್ನು ಬಿಟ್ಟರು. ಅವರಿಗೆ ಸಾಗರ, ಸೊರಬ, ಹೊಸನಗರ, ಶಿವಮೊಗ್ಗ, ಭದ್ರಾವತಿ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರಣ್ಯ ಭೂಮಿ ನೀಡಿ ಪುನರ್ವಸತಿ ಕಲ್ಪಿಸಲಾಯಿತು. ಅವರಿಗೆ ಭೂಮಿಯ ಹಕ್ಕು ನೀಡಲು 1961ರಿಂದ 1967ರವರೆಗೆ 13,800 ಎಕರೆ ಭೂಮಿಯನ್ನು ಅರಣ್ಯ ಇಲಾಖೆ ತನ್ನ ಸುಪರ್ದಿಯಿಂದ ಬಿಡುಗಡೆ ಮಾಡಿ, ‘ಮುಳುಗಡೆ ಸಂತ್ರಸ್ತರಿಗಾಗಿ ಕಾಯ್ದಿರಿಸಿದ ಜಾಗ’ ಎಂದು ಘೋಷಿಸಿದೆ. ಆದರೆ ಈವರೆಗೂ ಸಂತ್ರಸ್ತರಿಗೆ ಭೂಮಿಯ ಹಕ್ಕು ದೊರೆತಿಲ್ಲ.

ರಾಜ್ಯದಲ್ಲಿ ಅರಣ್ಯ ಕಾಯ್ದೆ ಜಾರಿಗೆ ಬಂದಿದ್ದು 1969ರಲ್ಲಿ. ಅರಣ್ಯ ಸಂರಕ್ಷಣಾ ಕಾಯ್ದೆ 1980ರಲ್ಲಿ ಜಾರಿಯಾಗಿದೆ. ಅಲ್ಲಿಯವರೆಗೆ ಅರಣ್ಯ ಭೂಮಿಯನ್ನು ಕಂದಾಯ ಭೂಮಿಯನ್ನಾಗಿ ಪರಿವರ್ತಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗೆ ಇತ್ತು. ಕರ್ನಾಟಕದಲ್ಲಿ ಮುಳುಗಡೆ ಸಂತ್ರಸ್ತರಿಗೆ ಅರಣ್ಯ ಇಲಾಖೆ ಭೂಮಿಯನ್ನು 1959ರಿಂದ 1964ರ ಅವಧಿಯಲ್ಲಿ ಬಿಡುಗಡೆ ಮಾಡಿದ್ದರಿಂದ ಡಿನೋಟಿಫಿಕೇಷನ್‌ಗೆ ಕೇಂದ್ರ ಸರ್ಕಾರದ ಅನುಮತಿ ಪಡೆಯುವ ಅವಶ್ಯಕತೆ ಇಲ್ಲ ಎಂಬುದು ಹಿಂದಿನ ಸರ್ಕಾರದ ನಿಲುವಾಗಿತ್ತು.

ಆದರೆ, ‘ಕೇಂದ್ರ ಸರ್ಕಾರದ ಅನುಮತಿ ಪಡೆಯದೇ ಡಿನೋಟಿಫಿಕೇಷನ್ ಮಾಡಿರುವ ಕ್ರಮ ಸರಿಯಲ್ಲ’ ಎಂದು ಹೊಸನಗರ ತಾಲ್ಲೂಕಿನ ಬ್ರಹ್ಮೇಶ್ವರದ ಗಿರೀಶ್ ಆಚಾರ್ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. 2021ರ ಮಾರ್ಚ್ 3ರಂದು ಹೈಕೋರ್ಟ್ ಈ ಅರ್ಜಿ ಮಾನ್ಯ ಮಾಡಿ ಡಿನೋಟಿಫಿಕೇಷನ್ ರದ್ದುಗೊಳಿಸಿದೆ.

‘1000 ಜನರಿಗೆ ಹಕ್ಕು ಪತ್ರ ನೀಡಲಾಗಿತ್ತು. ಆದರೆ ಹೈಕೋರ್ಟ್ ಆದೇಶದ ಕಾರಣ ರಾಜ್ಯ ಸರ್ಕಾರ ಭೂಮಿಯ ಹಕ್ಕನ್ನು ರದ್ದುಪಡಿಸಿದೆ. ಅರಣ್ಯ ಇಲಾಖೆಯವರೇ ಸಂತ್ರಸ್ತರಿಗೆ ಭೂಮಿ ನೀಡಿದ್ದರು. ಆದರೆ ಈ ಆದೇಶದಿಂದ ಸಂತ್ರಸ್ತರು ಅತಂತ್ರರಾಗಿದ್ದಾರೆ. ಆಗ ಮೂರು ಸಾವಿರ ಇದ್ದ ಕುಟುಂಬಗಳ ಜನಸಂಖ್ಯೆ ಹೆಚ್ಚಿದೆ. ಭೂಮಿ ಹೋದರೆ ಶಿವಮೊಗ್ಗ ಜಿಲ್ಲೆಯ ಸುಮಾರು 25 ಸಾವಿರಕ್ಕೂ ಹೆಚ್ಚು ರೈತ ಕುಟುಂಬಗಳು ಮತ್ತೆ ಮೊದಲಿನಂತೆ ಬೀದಿಗೆ ಬೀಳಲಿವೆ’ ಎಂದು ಮಲೆನಾಡು ಭೂ ಹೋರಾಟ ಸಮಿತಿ ಜಿಲ್ಲಾ ಸಂಚಾಲಕ ತೀ.ನ. ಶ್ರೀನಿವಾಸ್ ಆತಂಕ ವ್ಯಕ್ತಪಡಿಸಿದರು.

‘ಆದೇಶದ ಹಿನ್ನೆಲೆಯಲ್ಲಿ 2021ರ ಸೆಪ್ಟೆಂಬರ್‌ನಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ ಶಿವಮೊಗ್ಗ ಜಿಲ್ಲೆಯ ಶಾಸಕರು, ಸಚಿವರ ಸಭೆ ನಡೆದಿತ್ತು. ಈ ಬಗ್ಗೆ ಕೇಂದ್ರದ ಅನುಮತಿ ಪಡೆಯುವುದಾಗಿ ಮುಖ್ಯಮಂತ್ರಿ ತಿಳಿಸಿದ್ದರು. 2022ರಲ್ಲಿ ಮತ್ತೆ ಹಕ್ಕುಪತ್ರ ನೀಡುವುದಾಗಿ ಘೋಷಿಸಿದ್ದರು. ಆದರೆ ಮತ್ತೆ ಅದು ಕಾರ್ಯರೂಪಕ್ಕೆ ಬರಲೇ ಇಲ್ಲ’ ಎಂದು ಅವರು ಆರೋಪಿಸುವರು.

‘ಸದ್ಯ ಅರಣ್ಯ ಇಲಾಖೆಯಿಂದ ಸರ್ವೆ ನಡೆದು 9,600 ಎಕರೆ ಪ್ರದೇಶದ ದಾಖಲೆಗಳು ನವದೆಹಲಿಗೆ ತಲುಪಿವೆ. ಆದರೆ ಕುಟುಂಬಗಳ ವಿಸ್ತಾರದ ಕಾರಣ ಈ ಪ್ರದೇಶ ಇನ್ನಷ್ಟು ವಿಸ್ತಾರಗೊಂಡಿದೆ. ಮುಂದಿನ ದಿನಗಳಲ್ಲಿ ಇದು ಮತ್ತೊಂದು ಸಮಸ್ಯೆ ಸೃಷ್ಟಿಸುವ ಆತಂಕ ಇದೆ’ ಎಂದು ಅವರು ಕಳವಳ ವ್ಯಕ್ತಪಡಿಸಿದರು.

ಹೈಕೋರ್ಟ್ ಆದೇಶದ ಅನ್ವಯ ಇದೀಗ ಪಹಣಿಯಲ್ಲಿ ಅರಣ್ಯ ಭೂಮಿ ಎಂದು ನಮೂದಿಸುವ ಕೆಲಸ ಶುರುವಾಗಿದೆ. ಶರಾವತಿ ಸಂತ್ರಸ್ತರಿಗೆ ನೀಡಿದ್ದ ಭೂಮಿಯ ಮೇಲೆ ಈಗ ಅರಣ್ಯ ಇಲಾಖೆಯ ಹಕ್ಕು ಸ್ಥಾಪನೆಯಾಗಲಿದೆ. 1 ಸಾವಿರ ಜನರಿಗೆ ನೀಡಿರುವ ಹಕ್ಕುಪತ್ರಗಳೂ ರದ್ದಾಗಲಿದ್ದು, ಆ ಭೂಮಿಯೂ ಅರಣ್ಯ ಇಲಾಖೆಗೆ ಸೇರಲಿದೆ. 9,900 ಎಕರೆ ಪ್ರದೇಶದಲ್ಲಿ ಇದುವರೆಗೆ ಸಾಗುವಳಿ ಮಾಡುತ್ತಿರುವ ಹಾಗೂ ಮನೆ ನಿರ್ಮಿಸಿಕೊಂಡಿರುವ ಸಂತ್ರಸ್ತರು, ಇಲಾಖೆಗೆ ಭೂಮಿಯನ್ನು ಬಿಟ್ಟುಕೊಡುವ ಅನಿವಾರ್ಯ ಎದುರಾಗಿದೆ. ಇದ್ದ ಭೂಮಿಯನ್ನೂ ಯೋಜನೆಗೆ ಬಿಟ್ಟುಕೊಟ್ಟು, ಪರ್ಯಾಯ ಭೂಮಿಯನ್ನೂ ಕಳೆದುಕೊಳ್ಳುವಂತಾಗಿದೆ.

ಶರಾವತಿ, ಹೇಮಾವತಿ, ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ಸೇರಿದಂತೆ ಎಲ್ಲ ಯೋಜನೆಗಳ ಸಂತ್ರಸ್ತರನ್ನು ಸ್ಥಳಾಂತರಿಸುವಾಗ, ಅವರು ಕಳೆದುಕೊಂಡ ಭೂಮಿಯ ಎರಡು ಪಟ್ಟು ನೀಡುವುದಾಗಿ ಸರ್ಕಾರ ಭರವಸೆ ನೀಡಿತ್ತು. ಆದರೆ, ಕೊಟ್ಟದ್ದು ಅಲ್ಪ ಪ್ರಮಾಣದ ಭೂಮಿ ಮಾತ್ರ. ಕೊಟ್ಟ ಭೂಮಿಯನ್ನು ಅನುಭವಿಸುತ್ತಿದ್ದರೂ ದಾಖಲೆಗಳು ಮಾತ್ರ ಫಲಾನುಭವಿಗಳಿಗೆ ದೊರಕಿಲ್ಲ.

ಸಂತ್ರಸ್ತರು ನೆಲೆ ನಿಂತ ಭೂಮಿಯನ್ನು ಕಂದಾಯ ಭೂಮಿ ಎಂದು ಪರಿಗಣಿಸಿ ಭೂ ಕಂದಾಯ ಕಾಯ್ದೆ 4 (1)ರ ಅಡಿ ಅಧಿಸೂಚನೆಯನ್ನೂ ಹೊರಡಿಸಲಾಗಿತ್ತು. ಆದರೆ, ಅದನ್ನು ಅರಣ್ಯ ಇಲಾಖೆ ದಾಖಲೆಗಳಿಂದ ಬಿಡುಗಡೆ ಮಾಡದ ಪರಿಣಾಮ ಕಂದಾಯ ದಾಖಲೆಗಳಲ್ಲಿ ಆ ಪ್ರದೇಶ ಕಂದಾಯ ಭೂಮಿ ಎಂದು, ಅರಣ್ಯ ದಾಖಲೆಗಳಲ್ಲಿ ಅರಣ್ಯ ಭೂಮಿ ಎಂದೇ ಉಳಿದುಕೊಂಡಿದೆ. ಇದೀಗ ಸರ್ಕಾರ ಅರಣ್ಯ ಭೂಮಿಯಿಂದ 6 ಲಕ್ಷ ಎಕರೆ ಭೂಮಿಯನ್ನು ಹಿಂಪಡೆದಿದೆ. ಆದರೆ, ದಾಖಲೆಗಳಲ್ಲಿ ಮಾತ್ರ ಇದು ಇನ್ನೂ ಸರಿಯಾಗುತ್ತಿಲ್ಲ. ಹೀಗಾಗಿ ಸಂತ್ರಸ್ತರು ತಾವು ನೆಲೆ ನಿಂತಿರುವ ಭೂಮಿ ಹಕ್ಕು ಪಡೆಯಲು ಹೋರಾಟ ಮುಂದುವರಿಸಲೇಬೇಕಾದ ಸನ್ನಿವೇಶದಲ್ಲಿದ್ದಾರೆ.

ಪೂರಕ ಮಾಹಿತಿ: **ಬಸವರಾಜ ಹವಾಲ್ದಾರ್, ಚಂದ್ರಶೇಖರ್ ಆರ್.**

ಸಂತ್ರಸ್ತರ ಜಮೀನಿನಲ್ಲೂ ಅಕ್ರಮ

ಹೇಮಾವತಿ ಪುನರ್ವಸತಿ ಯೋಜನೆಯಲ್ಲಿ ಸಂತ್ರಸ್ತರಿಗೆ ಮೀಸಲಿದ್ದ ಜಮೀನನ್ನು ಬೇರೆಯವರಿಗೆ ಅಕ್ರಮ ಭೂ ಮಂಜೂರಾತಿ ಮಾಡಲಾಗಿದೆ.

‘ಹಾಸನ ಜಿಲ್ಲೆಯಲ್ಲಿ 2015 ರಿಂದ 2019 ರವರೆಗೆ ಪತ್ತೆಯಾದ 977 ಪ್ರಕರಣಗಳ ಮಂಜೂರಾತಿ ರದ್ದು ಮಾಡಲಾಗಿದೆ. ಅದರಲ್ಲಿ 135 ಪ್ರಕರಣಗಳ ಮ್ಯುಟೇಶನ್ ಕೂಡ ರದ್ದುಗೊಳಿಸಲಾಗಿದೆ. ಉಳಿದವುಗಳ ರದ್ದತಿ ಪ್ರಗತಿಯಲ್ಲಿದೆ. 2005 ರಿಂದ 2015 ರವರೆಗಿನ 288 ಪ್ರಕರಣಗಳಲ್ಲಿ ಸಂಬಂಧಿಸಿದವರಿಗೆ ನೋಟಿಸ್ ಜಾರಿ ಮಾಡಲಾಗಿದೆ’ ಎಂದು ಅಧಿಕಾರಿಗಳು ಹೇಳುತ್ತಾರೆ. ‘ಅಕ್ರಮ ಮಂಜೂರಾತಿ ಮಾಡಿದ ಅಧಿಕಾರಿಗಳ ಪಟ್ಟಿ ಸರ್ಕಾರಕ್ಕೆ ಸಲ್ಲಿಕೆಯಾಗಿದೆ. ಅವರ ವಿರುದ್ಧ ಕ್ರಮದ ಬಗ್ಗೆ ಸರ್ಕಾರದಿಂದ ಇದುವರೆಗೆ ಯಾವುದೇ ಆದೇಶ ಬಂದಿಲ್ಲ’ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.

ವಿಜಯಪುರ ಜಿಲ್ಲೆಯ ಕೊಲ್ಹಾರ ಪುನರ್ವಸತಿ ಕೇಂದ್ರದಲ್ಲಿ ಸುಳ್ಳು ಮಾಹಿತಿ ನೀಡಿ ನಿವೇಶನ ಪಡೆದ 1,117 ಸಂತ್ರಸ್ತರು ಹಾಗೂ ಅಕ್ರಮದಲ್ಲಿ ಭಾಗಿಯಾದ ಅಧಿಕಾರಿಗಳ ವಿರುದ್ಧ ಕೊಲ್ಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಿಜವಾದ ಸಂತ್ರಸ್ತರಿಗೆ ಸಿಗದ ಸೌಲಭ್ಯಗಳು ನಕಲಿ ಸಂತ್ರಸ್ತರಿಗೆ ಸಿಗುತ್ತಿವೆ ಎಂದು ಕೂಗು ಜೋರಾಗಿದೆ.

‘ಸರ್ಕಾರದ ಯಾವುದೇ ಸೌಲಭ್ಯ ಸಿಗುತ್ತಿಲ್ಲ’

‘ಜಮೀನಿಗೆ ಪಹಣಿ ಮಾಡದೇ, ಸರ್ಕಾರ ಹಾಗೂ ಬ್ಯಾಂಕ್‌ನಿಂದ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ. ಅಂದು ಐದು ನೂರು ಕುಟುಂಬಗಳಿದ್ದವು. ವಿಭಜನೆ ನಂತರ 600 ಕುಟುಂಬಗಳಾಗಿವೆ. ಕೆಲ ಪ್ರಕರಣಗಳು ಹೈಕೋರ್ಟ್‌ವರೆಗೆ ಹೋಗಿವೆ. ಕೂಡಲೇ ಪೋಡಿ ಆಗಬೇಕು’ ಎಂಬುದು ಹೇಮಾವತಿ ಜಲಾಶಯ ಯೋಜನೆ ಸಂತ್ರಸ್ತ ಕೃಷ್ಣೇಗೌಡರ ಆಗ್ರಹ.

ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್, ಸಾಲ ಮನ್ನಾ, ಅಲ್ಪಾವಧಿ, ದೀರ್ಘಾವಧಿ ಬೆಳೆ ಸಾಲ, ಬೆಂಬಲ ಬೆಲೆಯಲ್ಲಿ ಉತ್ಪನ್ನಗಳ ಮಾರಾಟದಂತಹ ಸೌಲಭ್ಯಗಳಿಂದಲೂ ಸಂತ್ರಸ್ತರು ವಂಚಿತರಾಗಿದ್ದಾರೆ. ಯೋಜನೆಗಳಿಗೆ ಬೇಕಾದ ಪಹಣಿಯೇ ಅವರ ಹೆಸರಿನಲ್ಲಿ ಇನ್ನೂ ಸಿದ್ಧವಾಗಿಲ್ಲ.

ಕಲಾದಗಿಯಲ್ಲಿ ನಿರ್ಮಿಸಿದ್ದ ರಸ್ತೆ, ಚರಂಡಿ ಹಾಳಾಗಿವೆ. ಮತ್ತೊಮ್ಮೆ ಸೌಲಭ್ಯ ಒದಗಿಸಲಾಗುವುದು. ಚುನಾವಣೆ ಬಳಿಕ ಹಂಚಿಕೆ ಮಾಡಲಾಗುವುದು.

ಸೋಮಲಿಂಗ ಗೆಣ್ಣೂರ, ಯುಕೆಪಿ ಭೂಸ್ವಾಧೀನ ಮತ್ತು ಪುನರ್ವಸತಿ ಕೇಂದ್ರದ ವಿಶೇಷ ಜಿಲ್ಲಾಧಿಕಾರಿ

ಹಾಸನ ತಾಲ್ಲೂಕಿನ ಮಂಚನಹಳ್ಳಿ ಮುಳುಗಿತು. ಊರು ಬಿಡಿಸಿ ಬ್ಯಾಬ ಅರಣ್ಯ ಪ್ರದೇಶದಲ್ಲಿ ಜಮೀನು ಕೊಟ್ಟರು. ಈವರೆಗೂ ದಾಖಲೆ ಸರಿಯಾಗಿಲ್ಲ. ಕಚೇರಿಗೆ ಅಲೆದು ಕಾಲು ಬಿದ್ದುಹೋಗಿವೆ.

ಸ್ವಾಮಿಗೌಡ, ಆಲೂರು ತಾಲ್ಲೂಕು ಮಣಿಪುರ ಬ್ಯಾಬ ಫಾರೆಸ್ಟ್ ನಿವಾಸಿ

ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಕಸಬಾ ಮಣಿಪುರ ಗ್ರಾಮದಲ್ಲಿ ಮುಳುಗಡೆ ಸಂತ್ರಸ್ತರಿಗೆ ನೀಡಿರುವ ಜಮೀನು ಆಟಕ್ಕುಂಟು, ಲೆಕ್ಕಕ್ಕಿಲ್ಲ ಎನ್ನುವಂತಾಗಿದೆ

ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದಲ್ಲಿ ಕೃಷ್ಣಾ ಹಿನ್ನೀರಿನಿಂದ ಹಾನಿಗೆ ಒಳಗಾಗಿರುವ ಮನೆ

ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನ ಬ್ಯಾಬ ಅರಣ್ಯ ಪ್ರದೇಶದಲ್ಲಿ ಮನೆ ನಿರ್ಮಿಸಿಕೊಂಡಿರುವ ಹೇಮಾವತಿ ಯೋಜನೆ ಸಂತ್ರಸ್ತರು

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 30-4-1998

● **ದಳ ಜತೆ ಮೈತ್ರಿಗೆ ಕಾಂಗ್ರೆಸ್ ನಕಾರ**

ಬೆಂಗಳೂರು, ಏ. 29– ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಡೆಯುತ್ತಿರುವ ಚುನಾವಣೆ ಹಾಗೂ ಮುಂಬರಲಿರುವ ಯಾವುದೇ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಆಡಳಿತಾರೂಢ ಜನತಾದಳದ ಜತೆಗೆ ಹೊಂದಾಣಿಕೆ ಮಾಡಿಕೊಳ್ಳುವ ಸಾಧ್ಯತೆಯನ್ನು ಕೆಪಿಸಿಸಿ ಅಧ್ಯಕ್ಷ ಧರ್ಮಸಿಂಗ್ ತಳ್ಳಿಹಾಕಿದ್ದಾರೆ.

ವಿಧಾನಪರಿಷತ್ತಿನ ಏಳು ಸ್ಥಾನಗಳನ್ನು ತುಂಬಲು ಈ ತಿಂಗಳ 8ರಂದು ನಡೆಯಲಿರುವ ಚುನಾವಣೆಯಲ್ಲಿ ಕಣಕ್ಕಿಳಿಸಿರುವ ಪಕ್ಷದ ಎರಡನೇ ಅಭ್ಯರ್ಥಿಯನ್ನೂ ಗೆಲ್ಲಿಸಲು ಗಂಭೀರವಾಗಿ ಪ್ರಯತ್ನಿಸಲಾಗುವುದು ಎಂದು ಸುದ್ದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ — ಸೋಮವಾರ, 30-4-1973

● **ರಾಜ್ಯಗಳಿಂದ ಕಾವೇರಿ ಬಳಕೆ ಪ್ರಮಾಣದ ಪುನರ್ ವಿಮರ್ಶೆ ನಿರ್ಧಾರ**

ನವದೆಹಲಿ, ಏ. 29– ಕಾವೇರಿಯಿಂದ ಒಟ್ಟು 240 ಸಾವಿರ ಘನಲಕ್ಷ ಅಡಿ (ಟಿಎಂಸಿ) ನೀರು ದೊರಕುವುದೆಂಬ ಒಮ್ಮತಕ್ಕೆ ಮೈಸೂರು, ತಮಿಳುನಾಡು ಮತ್ತು ಕೇರಳ ಮುಖ್ಯಮಂತ್ರಿಗಳು ಇಂದು ಬಂದ ನಂತರ, ಈ ರಾಜ್ಯಗಳು ಎಷ್ಟೆಷ್ಟು ನೀರನ್ನು ಬಳಸುತ್ತಿವೆಯೆಂಬ ಬಗೆಗೆ ಮತ್ತೆ ವಿಮರ್ಶಿಸುವಂತೆ ಈ ಅಂಕಿಅಂಶ ಒದಗಿಸಿದ ಅಧಿಕೃತ ವಸ್ತುಸ್ಥಿತಿ ಪರಿಶೀಲಕ ಸಮಿತಿಯನ್ನು ಕೇಳಲು ನಿರ್ಧರಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಏಪ್ರಿಲ್ 30, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ದಶಮಿ ಗಂ. 20-29 ನಕ್ಷತ್ರ: ಮಘ ಗಂ. 15.30 ಯೋಗ: ವೃದ್ಧಿ ಗಂ. 11-16, ಕರಣ: ತೈತಿಲ ಗಂ. 07-29 ನಂತರ ಗರ ಗಂ. 20-29, ಮೇಷ ಮಾಸದ 16 ನೇ ದಿನ, ಮಳೆನಕ್ಷತ್ರ: ಭರಣಿ 1. ರಾಹುಕಾಲ : ಸಾಯಂಕಾಲ 04-30 – 06-00,
ಸೂರ್ಯೋದಯ : 06-13 ಸೂರ್ಯಾಸ್ತ : 06-42,
ಮುಸ್ಲಿಂ ದಿನಾಂಕ : 09 ಶವ್ವಾಲ್, ದಿನ ವಿಶೇಷ : ತ್ರಿಚೂರ್ ಪೂರಮ್ (ಕೇರಳ)
ಅದೃಷ್ಟ ಸಂಖ್ಯೆ : 2, 4

ಮೇಷ: ಸ್ವಪ್ನಸದೃಶ್ಯ ಘಟನೆಗಳನ್ನು ನೋಡುವ ಸಾಧ್ಯತೆ. ಉತ್ತಮವಾದ ಗುರುವಿನ ಪ್ರಾಪ್ತಿಯಿಂದ ನಿಮ್ಮ ಮನಸ್ಸಿನ ಆಧ್ಯಾತ್ಮಿಕ ಪ್ರಶ್ನೆಗಳಿಗೆ ಉತ್ತರ ಸಿಗಬಹುದು. ಆದರ ಭಾವದಿಂದ ನಿಮ್ಮ ಸಂಬಂಧಿಗಳಲ್ಲಿ ನಡೆದುಕೊಳ್ಳುವಿರಿ.

ವೃಷಭ: ಹತ್ತಿರದ ಬಂಧುಗಳ ಅನಿರೀಕ್ಷಿತ ಭೇಟಿಯಿಂದ ನಿಮಗೆ ಹರ್ಷವಾಗುತ್ತದೆ. ನಿಮ್ಮಿಂದ ಉಂಟಾಗಬೇಕಾದ ಧರ್ಮಕಾರ್ಯಗಳನ್ನು ಮಾಡುವಲ್ಲಿ ವಿಳಂಬವನ್ನು ಮಾಡದಿರಿ. ದೇವರ ದರ್ಶನ ಮಾಡುವಿರಿ.

ಮಿಥುನ: ಕಳೆದು ಹೋದ ವಸ್ತುವನ್ನು ಸಮಾಧಾನಯುತ ಶೋಧನೆಯಿಂದ ಪಡೆದುಕೊಳ್ಳುವಿರಿ. ನಿಮ್ಮ ಸ್ಥಾನಮಾನದ ಕುರಿತು ಬೇರೆಯವರು ಪಡುವ ಈರ್ಷ್ಯೆಯನ್ನು ಕಳೆದುಕೊಳ್ಳಲು ಉತ್ತಮ ಸನ್ನಿವೇಶ ಒದಗುವುದು.

ಕರ್ಕಾಟಕ: ಮೌಕಿಕವಾಗಿ ಬೆಳೆದ ಮಾತಿನಲ್ಲಿ ನಿಮ್ಮ ತರ್ಕಬದ್ಧ ಉತ್ತರಗಳಿಗೆ ಎಲ್ಲರೂ ಮಾರುಹೋಗುವರು. ನಿಮ್ಮ ಉತ್ತಮ ಧ್ಯೇಯೋದ್ದೇಶಕ್ಕೆ ಇಂದಿನಿಂದ ಹೆಚ್ಚಿನ ಶ್ರಮ ಪಡುವಿರಿ. ನಿಮ್ಮ ಕ್ಷೇತ್ರದ ಹಿರಿಯರ ದರ್ಶನ ಪಡೆಯುವಿರಿ.

ಸಿಂಹ: ನಿಮ್ಮ ಮಾತನ್ನು ತಿರಸ್ಕರಿಸಿ ಬೇರೆ ಮಾರ್ಗ ಹಿಡಿದ ಮಕ್ಕಳು ಪಶ್ಚಾತ್ತಾಪ ಪಡುವುದನ್ನು ಕಾಣುವಿರಿ. ಮಕ್ಕಳ ಮೇಲಿನ ಅತಿಯಾದ ಮೋಹವು ಅವರ ಶ್ರೇಯೋಭಿವೃದ್ಧಿಗೆ ಹೆಚ್ಚಿನ ತೊಡಕನ್ನು ಉಂಟುಮಾಡುವ ಸಾಧ್ಯತೆ ಇದೆ.

ಕನ್ಯಾ: ಮಹತ್ತರ ಕಾರ್ಯ ಶುರು ಮಾಡುವ ಮೊದಲು ಗುರು ಹಾಗೂ ಗಣಪತಿಯನ್ನು ಸ್ಮರಿಸಿ ಮುಂದುವರೆಯಿರಿ. ನಿಮ್ಮ ಗುಪ್ತ ವಿಷಯಗಳನ್ನು ತಿಳಿಯಲು ನಿಮ್ಮೊಡನೆ ಕಪಟ ಸ್ನೇಹವನ್ನು ಮಾಡುವವರನ್ನು ಕಂಡುಕೊಳ್ಳಿರಿ.

ತುಲಾ: ಮಾರಣಾಂತಿಕ ಕಾಯಿಲೆಗಳಿಗೆ ಒಳಗಾಗುವ ಆಹಾರ ಪದಾರ್ಥಗಳು ನಿಮ್ಮ ಜೀವನ ಕ್ರಮದಲ್ಲಿ ಇದೆಯೇ ಎಂದು ಕಂಡುಕೊಳ್ಳಿರಿ. ಗೃಹಸ್ಥಾಶ್ರಮದಲ್ಲಿನ ನಿಮ್ಮ ವಿರಕ್ತತೆ ಅನ್ಯರಿಗೆ ಬೇಜವಾಬ್ದಾರಿ ಎಂದೆನಿಸಬಹುದು.

ವೃಶ್ಚಿಕ: ನಿಮ್ಮ ಸಹಿಯನ್ನು ನಕಲು ಪಡಿಸುವವರಿದ್ದಾರೆ. ಮುಕ್ತ ಮಾತುಕತೆಯಿಂದ ಮಾತ್ರ ನಿಮ್ಮ ಮನೋಭಿಲಾಶೆಯ ಸ್ಥಾನ ನಿಮಗೆ ದೊರೆಯುತ್ತದೆ. ಮನೆಯಲ್ಲಿ ಮಾತಿನಿಂದಾಗಿ ಯುದ್ಧದ ವಾತಾವರಣ ನಿರ್ಮಿಸಿಕೊಳ್ಳದಿರಿ.

ಧನು: ಸಾಕುಪ್ರಾಣಿಯ ತೀವ್ರ ಅನಾರೋಗ್ಯ ನಿಮ್ಮ ದಿನವನ್ನು ದುಃಖಕರವನ್ನಾಗಿ ಮಾಡಬಹುದು. ಕೊಟ್ಟ ಮಾತಿನಂತೆ ನಡೆದುಕೊಳ್ಳಲು ಶ್ರಮ ಪಡುವಂತಾಗಬಹುದು. ವ್ಯಾಪಾರದಲ್ಲಿ ಮೋಸ ಹೋಗದೆ ಬುದ್ಧಿವಂತಿಕೆ ತೋರಿ.

ಮಕರ: ಮುಗ್ಧ ಮಕ್ಕಳ ಆಟೋಪಚಾರ ಕಂಡು ಹರ್ಷತುಲಿತರಾಗುತ್ತೀರಿ. ದೇಶಭಕ್ತಿ ಹೆಸರಿನಲ್ಲಿ ನೀವು ನಡೆಸಿರುವ ಹಾಗೂ ನಡೆಸುವ ಕಾರ್ಯಗಳು ಜನಮಾನ್ಯವಾಗುತ್ತವೆ. ಕಾರ್ಯನಿಮಿತ್ತದ ಪ್ರಯಾಣವನ್ನು ಮಾಡಬಹುದು.

ಕುಂಭ: ಮನೆ ಶುಚಿಗೊಳಿಸುವ ಕೆಲಸವನ್ನು ಮುಂದೆ ಹಾಕುವುದು ಸೂಕ್ತವಲ್ಲ. ನಿಮ್ಮದೇ ಕ್ಷೇತ್ರದಲ್ಲಿನ ಸವಾಲುಗಳನ್ನು ಇತರರಿಗಿಂತ ವಿಭಿನ್ನವಾಗಿ, ಪರಿಣಿತರಾದ ನೀವು ಲೀಲಾಜಾಲವಾಗಿ ಎದುರಿಸುವಿರಿ.

ಮೀನ: ವಿವಾಹ ವಿಚಾರದ ಸಂಬಂಧಗಳು ಮುರಿದು ಬೀಳಬಹುದು. ನಿಮ್ಮ ಸ್ವಪ್ರಯತ್ನದಿಂದ ಗಳಿಸಿದ ಸ್ಥಾನ ಬೇರೆ ಯವರ ಸಹಾಯದಿಂದ ಪಡೆದದ್ದೆಂಬ ಜನರ ಮಾತು ನಿಮ್ಮ ಕೋಪಕ್ಕೆ ಕಾರಣವಾಗಬಹುದು.

ಪದಬಂಧ 5304 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಿಶ್ಚಿತವಾದ ಉದ್ದೇಶ (4)
3.ಹರನ ಮುಂದಿರುವ ಕೊಡದಂತಹ ಪಾತ್ರೆ (3)
5.ಕಪಿ ಇಲ್ಲಿದೆ (4)
7.ನಕ್ಷೆ ಅಥವಾ ಚಿತ್ರವನ್ನು ಹೀಗೆ ಹೇಳುವರು (3)
8.ಬೇರೆ ಬೇರೆ ದೇಶಗಳಿಗೆ ಪರಸ್ಪರ ಸಂಬಂಧಿಸಿದ್ದು (5)
11.ಬಲಾಢ್ಯ ಇಲ್ಲಿದ್ದಾನೆ (3)
12.ಆನಂದಾನುಭವಕ್ಕೆ ಉಂಟಾದ ಅಡ್ಡಿ (4)
14.ಕುದುರೆಯನ್ನೇರುವ ಬಳೆ (3)
15.ಕೊನೆಗೆ ಯೋಗವಿದ್ದರೆ ಇದು ಪ್ರಯೋಜನ (4)

ಮೇಲಿಂದ ಕೆಳಕ್ಕೆ
1.ನಿರ್ಣಯ ಅಥವಾ ಠರಾವು (4)
2.ವಸ್ತುಗಳನ್ನು ಸಂಗ್ರಹಿಸುವ ಮಳಿಗೆ (3)
4.ಸರಸದ ವಿರುದ್ಧ ಪದ (3)
6.ಉಚಿತವೆಂದರೂ ಇದು ನಿಶ್ಚಿತ! (3)
7.ಗೆಲುವು ಈ ರೀತಿ ಬಂದಿದೆ (3)
8.ಹೆಬ್ಬೆರಳು ಇಲ್ಲಿದೆ (3)
9.ಕರವನ್ನು ಕೊನೆಗಿಟ್ಟು ಸಿಡಿಸಿದ ತುಂತುರು! (3)
10.ಅಂಗದಲ್ಲಿ ಸುಗಂಧಲೇಪನ (4)
11.ಕೋಟೆಯ ಮೇಲುಭಾಗ (3)
13.ಹತ್ತಿರಕ್ಕೊಂದು ಪರ್ಯಾಯ ಪದ (3)



5303ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮಗ್ಗಿ 4.ವಾಸನೆ 5.ಅಂಗಾರಕ 6.ವಾಚ್ಯಾತೀತ 7.ನರ 9.ಗವಿ 13.ಮನ್ವಂತರ 14.ಅಪವ್ಯಯ 15.ವಂಚನೆ 16.ಹಂ

ಮೇಲಿಂದ ಕೆಳಕ್ಕೆ:
1.ಜವಾಹಿರಿ 2.ಮನೆವಾಳ್ತನ 3.ಮರವು 5.ಅಂತರಂಗ 8.ರಸಮಯ 10.ವಿಚಾರವಂತ 11.ಕುಂಟುನೆಪ 12.ಚಪಲ

ಸುಡೊಕು 5690

		1		7		6		2
			2		9			
2	8			1			9	5
	5		7		4	8		
				8		5		9
8		6	5					4
6				5		9		7
	7		1	3			5	
5		3		6		1		8

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5689 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಾಸವಿ: ಸ್ತ್ರೀಸ್ವಾಭಿಮಾನದ ಸಂಕೇತ

• ಸೌಜನ್ಯ ದತ್ತರಾಜ

ಇಂದು ಜಯಂತಿ

ಹನ್ನೊಂದನೆಯ ಶತಮಾನದಲ್ಲಿ ಆಂಧ್ರ ಪ್ರದೇಶದ ಪಶ್ಚಿಮ ಗೋದಾವರಿ ಜಿಲ್ಲೆಯ ತಣಕು ತಾಲ್ಲೂಕಿನ ಪೆನುಗೊಂಡೆಯನ್ನು ಕುಸುಮಶ್ರೇಷ್ಠಿ ಎಂಬ ಸಾಮಂತ ರಾಜ ಆಳುತ್ತಿದ್ದ. ಆತನ ಪತ್ನಿಯ ಹೆಸರು ಕುಸುಮಾಂಬೆ. ಆತ ತನ್ನ ಚಕ್ರವರ್ತಿ ವಿಮಲಾದಿತ್ಯ- ನಿಗೆ (ಏಳನೆಯ ವಿಷ್ಣುವರ್ಧನ) ವಿಧೇಯನಾಗಿಯೂ ತನ್ನ ಪ್ರಜೆಗಳಿಗೆ ಮೆಚ್ಚಿನ ರಾಜನಾಗಿಯೂ ರಾಜ್ಯಭಾರ ಮಾಡುತ್ತಿದ್ದ. ಜನಾದರ, ಅಧಿಕಾರ, ಹಣ, ಐಶ್ವರ್ಯಗಳೆಲ್ಲಾ ಇದ್ದರೂ ಮಕ್ಕಳಿಲ್ಲದ ಕೊರಗು ರಾಜ-ರಾಣಿಯರನ್ನು ಕಾಡುತ್ತಿತ್ತು. ಅವರ ನೋವನ್ನು ಅರಿತ ಕುಲಗುರುಗಳಾದ ಭಾಸ್ಕರಾಚಾರ್ಯರು ಪುತ್ರಕಾಮೇಷ್ಟಿಯಾಗ- ವನ್ನು ಮಾಡುವ ಸಲಹೆಯನ್ನಿತ್ತರು. ಅವರ ಸಲಹೆಯಂತೆ ಯಾಗವನ್ನು ಮಾಡಿದ ದಂಪತಿಗೆ ವೈಶಾಖ ಶುದ್ಧ ದಶಮಿಯಂದು ಅವಳಿ ಮಕ್ಕಳ ಜನನವಾಯಿತು. ಮಗ - ವಿರೂಪಾಕ್ಷ, ಮಗಳು - ವಾಸವಿ.

ದಿನಗಳೆದಂತೆ ವಿರೂಪಾಕ್ಷ ಯುದ್ಧ- ಕಲೆಯಲ್ಲಿ ಪಾರಂಗತನಾದ; ವಾಸವಿ ಸಂಗೀತ, ನೃತ್ಯಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಳು. ಹರೆಯಕ್ಕೆ ಕಾಲಿಡುವ ಹೊತ್ತಿಗೆ ಚೆಲುವೆ ವಾಸವಿ ಲೌಕಿಕಕ್ಕೆ ಅಂಟಿಯೂ ಅಂಟದವಳಂತೆ ಇರುತ್ತಾ ಆಧ್ಯಾತ್ಮದೆಡೆಗೆ ಹೆಚ್ಚು ಆಕರ್ಷಿತಳಾಗತೊಡಗಿದ್ದಳು. ತನ್ನ ಕುಲದೈವವಾದ ನಗರೇಶ್ವರನ ಆರಾಧನೆಯಲ್ಲಿ ಸಂಪೂರ್ಣವಾಗಿ ತಲ್ಲೀನಳಾಗುತ್ತಿದ್ದಳು. ಮಗಳ ಜಪತಪಾದಿ ಪೂಜಾ ಕೈಂಕರ್ಯಗಳಿಗೆ ಅನುಕೂಲವಾಗಲೆಂದು, ಕುಸುಮಶ್ರೇಷ್ಠಿಯು ಏಕಾಂತ ಸ್ಥಳವೊಂದರಲ್ಲಿ ಪುಟ್ಟ ನಗರೇಶ್ವರ ದೇಗುಲವನ್ನು ಕಟ್ಟಿಸಿಕೊಟ್ಟಿದ್ದ.

ಹೀಗಿರುವಾಗ ಒಂದು ಮುಂಜಾನೆ ಕೊಳದಲ್ಲಿ ಮಿಂದು ಶ್ವೇತವಸ್ತ್ರವನುಟ್ಟು ನಗರೇಶ್ವರ ದೇಗುಲಕ್ಕೆ ಹೋಗುತ್ತಿದ್ದ ವಾಸವಿಯು ವಿಷ್ಣುವರ್ಧನನ ಕಣ್ಣಿಗೆ ಬಿದ್ದಳು. ಅವಳಲ್ಲಿ ಮೋಹಗೊಂಡ ವಿಷ್ಣುವರ್ಧನ ಅವಳನ್ನು ಪಡೆಯಲೇಬೇಕೆಂದು ನಿರ್ಧರಿಸಿದ. ಆದಾಗ ತಾನೇ ಯುದ್ಧದಲ್ಲಿ ಗೆದ್ದು ಜೈತ್ರಯಾತ್ರೆ ಮುಗಿಸಿ ವಿಶ್ರಾಂತಿಗಾಗಿ ಪೆನುಗೊಂಡೆಯ ಕಡೆಗೆ ಬಂದಿದ್ದ ಚಕ್ರವರ್ತಿಯ ಕೀರ್ತಿ ಎಲ್ಲೆಡೆ ಹಬ್ಬಿತ್ತು. ತನ್ನ ಮಾತಿಗೆ ಯಾರೂ ಎದುರಾಡರು ಎಂಬ ಅಹಂ ಕೂಡ ಅವನಲ್ಲಿ ತುಂಬಿತ್ತು. ಆ ಕ್ಷಣವೇ ತಾನು ಕಂಡ ಹುಡುಗಿ ಯಾರೆಂದು ವಿಚಾರಿಸಿ, ಮದುವೆಯ ಪ್ರಸ್ತಾಪವನ್ನು ಕಳುಹಿಸಿದ.

ಇಂಥದ್ದೊಂದು ಅನಿರೀಕ್ಷಿತ ಪ್ರಸ್ತಾಪವನ್ನು ನಿರೀಕ್ಷಿಸಿರದ ಪೆನುಗೊಂಡೆಯ ಜನರು ಅಚ್ಚರಿಗೊಂಡರು. ಅದಾಗಲೇ ವಿವಾಹಿತನಾಗಿದ್ದ ಚಕ್ರವರ್ತಿ ಇನ್ನೊಂದು ಮದುವೆಯ ಪ್ರಸ್ತಾಪ ಕಳುಹಿಸಿರುವುದನ್ನು ಒಪ್ಪಿಕೊಳ್ಳುವುದು ಕುಸುಮಶ್ರೇಷ್ಠಿ ದಂಪತಿಗೂ ಸರಿ- ಯೆನಿಸಲಿಲ್ಲ. ಮಗಳ ಅಭಿಪ್ರಾಯವನ್ನು ಕೇಳಿದಾಗ ವಾಸವಿ ತನಗೆ ಈ ಮದುವೆ ಸ್ವಲ್ಪವೂ ಇಷ್ಟವಿಲ್ಲವೆಂದೂ ನಗರೇಶ್ವರನೇ ತನ್ನ ಪತಿಯೆಂದು ಹೇಳಿಬಿಟ್ಟಳು. ವಿರೂಪಾಕ್ಷನೂ ತನ್ನ ಸೋದರಿಯ ಪರವಾಗಿ ನಿಂತನು. ವಿಷಯ ತಿಳಿದ ವಿಷ್ಣುವರ್ಧನನು ಅತ್ಯಂತ ಕ್ರುದ್ಧನಾಗಿ, ವಾಸವಿಯನ್ನು ತನಗೆ ಕೊಟ್ಟು ಮದುವೆ ಮಾಡದಿದ್ದರೆ, ರಾಜ್ಯದ ಮೇಲೆ ಆಕ್ರಮಣ ಮಾಡಿಯಾದರೂ ಅವಳನ್ನು ಪಡೆದೇ ತಿರುವೆನೆಂದು ಪ್ರತಿಜ್ಞೆ ಮಾಡಿದ.

ಇದರಿಂದ ವಿಚಲಿತನಾದ ಪ್ರಜಾಪಾಲಕ ಕುಸುಮಶ್ರೇಷ್ಠಿಯು ಈ ಸಂಗತಿಯನ್ನು ನಿಭಾಯಿಸುವ ಬಗೆ ಹೇಗೆಂದು ಚರ್ಚಿಸಲು ಪುರಪ್ರಮುಖರ ಸಭೆಯನ್ನು ಕರೆದನು. ಸಭೆಯಲ್ಲಿದ್ದ 714 ಗೋತ್ರದವರಲ್ಲಿ 612 ಗೋತ್ರದವರು ವಾಸವಿಯನ್ನು ವಿಷ್ಣುವರ್ಧನ ನಿಗೆ ಮದುವೆ ಮಾಡಿಕೊಟ್ಟು ಯುದ್ಧವನ್ನು ತಪ್ಪಿಸಬೇಕೆಂದರು. ಉಳಿದ 102 ಗೋತ್ರ ದವರು ವಾಸವಿಯ ನಿರ್ಧಾರವನ್ನು ಗೌರವಿಸ ಬೇಕೆಂದು ಹೇಳಿದರು. ವಿಷ್ಣುವರ್ಧನನ ಬಲಾ ತ್ಕಾರಕ್ಕೆ ಮಣಿಯಬಾರದೆಂದು ಹೇಳಿದರು.

ರಕ್ತಪಾತವಾಗದೆಯೇ, ಕಾಮಾಂಧ ವಿಷ್ಣುವರ್ಧನನಿಗೆ ಪಾಠ ಕಲಿಸಬೇಕೆಂದು ವಾಸವಿ ನಿರ್ಧರಿಸಿದಳು. ಅಗಾಧ ಸೈನ್ಯದೊಂದಿಗೆ ಪೆನುಗೊಂಡೆಯ ಮೇಲೆ ಆಕ್ರಮಣ ಮಾಡಲು ಚಕ್ರವರ್ತಿ ವಿಷ್ಣುವರ್ಧ- ನನು ಬಂದನು. ಅಷ್ಟರಲ್ಲಿ ಗೋದಾವರೀತೀ- ರದಲ್ಲಿ ಅಗ್ನಿಕುಂಡಗಳು ಹೊತ್ತಿದ್ದವು. ತನ್ನ ಬೆಂಬಲಕ್ಕೆ ನಿಂತ 102 ಗೋತ್ರದ ಹಿರಿಯ ದಂಪತಿಗಳೊಂದಿಗೆ ವಾಸವಿಯು ಪ್ರಾಣಾರ್ಪಣೆ ಮಾಡಿಕೊಂಡಿದ್ದಳು. ತನ್ನ ಬಲ-ಪರಾಕ್ರ- ಮಗಳಿಂದ ಹೇಗಾದರೂ ವಾಸವಿಯನ್ನು ಪಡೆದೇ ತೀರುವೆನೆಂದು ಬಂದಿದ್ದ ವಿಷ್ಣುವರ್ಧನ ವಿಷಯ ತಿಳಿದು ದಾರಿಯಲ್ಲಿಯೇ ಎದೆಯೊಡೆದು ಸತ್ತ.

ಅಂದಿನಿಂದ ವಾಸವಿಯು ಶ್ರೀ ಕನ್ಯಕಾ ಪರಮೇಶ್ವರಿಯೆಂಬ ಹೆಸರಿನಿಂದ ಸ್ವಾಭಿಮಾನದ ಪ್ರತೀಕವಾಗಿ, ಆರ್ಯವೈಶ್ಯ ಸಮುದಾಯದ ಕುಲದೇವತೆಯಾಗಿ ಪೂಜಿಸಲ್ಪಡುತ್ತಿದ್ದಾಳೆ. ವಾಸವಿ ಜಯಂತಿ ಯಂದು ವಿಶೇಷವಾಗಿ ಕನ್ಯೆ ಯರನ್ನು ಪೂಜಿಸ- ಲಾಗುತ್ತದೆ. ಕನ್ಯೆಯರ ಪಾದಗಳನ್ನು ತೊಳೆದು, ಆರತಿ ಬೆಳಗಿ ದಕ್ಷಿಣೆ ತಾಂಬೂಲಗಳನ್ನು ನೀಡುತ್ತಾರೆ. ಕೆಲವೆಡೆ ಚಿಮ್ಮಿ ಮತ್ತು ಅಕ್ಕಿ-ಬೆಲ್ಲ- ವನ್ನು ಸೇರಿಸಿ ಮಾಡಿದ ಉಂಡೆಗಳನ್ನು ಅವರಿಗೆ ತಾಂಬೂಲದೊಡನೆ ನೀಡಿ, ಎಗಚಿಹಣ್ಣುಗಳನ್ನು ಮಕ್ಕಳ ತಲೆಯ ಮೇಲೆ ಸುರಿದು ನಂತರ ಆರತಿ ಮಾಡಲಾಗುತ್ತದೆ. ❖

ಪುರಸಭೆ ಸದಸ್ಯರ ಮನೆಯಲ್ಲಿ ಐ.ಟಿ ಶೋಧ

ಪ್ರಜಾವಾಣಿ ವಾರ್ತೆ

ಆನೇಕಲ್: ಬೊಮ್ಮಸಂದ್ರ ಪುರಸಭೆ ಸದಸ್ಯರಾದ ಛಲಪತಿ ಮತ್ತು ಪ್ರಸಾದ್ ಅವರ ಮನೆಗಳಲ್ಲಿ ಶನಿವಾರ ಬೆಳಗಿನಿಂದ ಸಂಜೆಯವರೆಗೂ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ವಿವಿಧ ದಾಖಲೆಗಳ ಪರಿಶೀಲನೆ ನಡೆಸಿದರು.

ಎರಡು ಕಾರುಗಳಲ್ಲಿ ಬಂದ 13 ಅಧಿಕಾರಿಗಳ ತಂಡ ಛಲಪತಿ ಮತ್ತು ಪ್ರಸಾದ್ ಅವರಿಗೆ ಸೇರಿದ ತೋಟದ ಮನೆ, ಕಂಪನಿ ಸೇರಿದಂತೆ ವಿವಿಧೆಡೆ ಪರಿಶೀಲನೆ ನಡೆಸಿತು.

ಬೊಮ್ಮಸಂದ್ರ ಪುರಸಭೆಯ ಸದಸ್ಯರಾಗಿರುವ ಎ.ಪ್ರಸಾದ್ ಮತ್ತು ಎ.ಛಲಪತಿ ಅವರು ಸಹೋದರರಾಗಿದ್ದು ಬಿಜೆಪಿ ಚುನಾಯಿತರಾಗಿದ್ದರು. ಆದರೆ, ಇತ್ತೀಚಿನ ಕೆಲವು ವರ್ಷಗಳಲ್ಲಿ ಕಾಂಗ್ರೆಸ್‌ನೊಂದಿಗೆ ಹೆಚ್ಚಿನ ಒಡನಾಟ ಹೊಂದಿದ್ದರು. ಎ.ಪ್ರಸಾದ್ ಅವರು ಬೊಮ್ಮಸಂದ್ರ ಕೈಗಾರಿಕ ಸಂಘದ ಅಧ್ಯಕ್ಷ ರಾಗಿ ಕಾರ್ಯನಿರ್ವ ಹಿಸುತ್ತಿದ್ದಾರೆ. ಅವರ ಮನೆಯ ಮುಂದೆ ಬೆಂಬಲಿಗರು ಜಮಾಯಿಸಿದ್ದರು.

ವಿಧಾನಸಭೆ ಚುನಾವಣೆ ಪ್ರಚಾರದಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕರು

ನರೇಗಾ ಕೆಲಸಕ್ಕೆ ಕಾರ್ಮಿಕರ ಕೊರತೆ!

• ಇಮಾಮ್‌ಹುಸೇನ್ ಗೂಡುನವರ

ಪ್ರಜಾವಾಣಿ ವಿಶೇಷ

ಬೆಳಗಾವಿ: ಒಂದೆಡೆ ಹಳ್ಳಿಗಳಲ್ಲಿ ವಿಧಾನಸಭೆ ಚುನಾವಣೆ ಅಖಾಡ ರಂಗೇರುತ್ತಿದ್ದರೆ, ಮತ್ತೊಂದೆಡೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ನರೇಗಾ) ಯೋಜನೆಯಡಿ ಕಾಮಗಾರಿ ಕೈಗೊಳ್ಳಲು ಕೆಲ ಜಿಲ್ಲೆಗಳಲ್ಲಿ ಕಾರ್ಮಿಕರ ಕೊರತೆ ಎದುರಾಗುತ್ತಿದೆ!

ಬೆಳಗಾವಿ ಜಿಲ್ಲೆಯಲ್ಲಿ ನರೇಗಾ ಯೋಜನೆಯಡಿ ಕೆಲಸಕ್ಕೆ ನೋಂದಾಯಿಸಿಕೊಂಡ 15,74,807 ಕಾರ್ಮಿಕರ ಪೈಕಿ 1,12,227 ಜನರಿಗೆ (ಏ. 1ರಿಂದ 29ರ ವರೆಗೆ) ಕೆಲಸ ನೀಡಿ 9,16,393 ಮಾನವ ದಿನ ಸೃಜಿಸಲಾಗಿದೆ. ಗದಗದಲ್ಲಿ 3,99,299 ಜನರ ಪೈಕಿ 1,08,120, ಕೊಪ್ಪಳದಲ್ಲಿ 8,05,133 ಮಂದಿ ಪೈಕಿ 1,01,263 ಜನರಿಗೆ ಕೆಲಸ ಕೊಡಲಾಗಿದ್ದು, ಬೆಳಗಾವಿ ನಂತರದ ಸ್ಥಾನದಲ್ಲಿವೆ.

ಆದರೆ, ದಕ್ಷಿಣ ಕನ್ನಡ, ಉಡುಪಿ, ಚಿತ್ರದುರ್ಗ, ಕೊಡಗಿನಲ್ಲಿ 10 ಸಾವಿರ ಮಂದಿಗೂ ಕೆಲಸ ಸಿಕ್ಕಿಲ್ಲ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 319 ಮಂದಿಗಷ್ಟೇ ಕೆಲಸ ಕೊಡಲಾಗಿದ್ದು, 2,364 ಮಾನವ ದಿನಗಳಷ್ಟೇ ಸೃಜನೆಯಾಗಿವೆ.

ಬೆಳಗಾವಿ ತಾಲ್ಲೂಕಿನ ಕಡೋಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶನಿವಾರ ನರೇಗಾ ಯೋಜನೆಯಡಿ ನಡೆಯುತ್ತಿರುವ ಕಾಮಗಾರಿಯಲ್ಲಿ ನಿರತವಾಗಿರುವ ಮಹಿಳೆಯರು –ಪ್ರಜಾವಾಣಿ ಚಿತ್ರ:ಏಕನಾಥ ಅಗಸಿಮನಿ

‘ನರೇಗಾ ಯೋಜನೆಯಡಿ ಕೆಲಸ ಮಾಡುವವರಿಗೆ ನಿತ್ಯ ₹316 ಕೂಲಿ ನೀಡುತ್ತಿದ್ದೇವೆ. ಕಾರ್ಮಿಕರು ನಿಯಮಿತವಾಗಿ ಕೆಲಸಕ್ಕೆ ಬರುತ್ತಿದ್ದಾರೆ. ಚುನಾವಣೆ ಪ್ರಚಾರ, ಬಿಸಿಲಿನ ಆರ್ಭಟ, ವೈಯಕ್ತಿಕ ಸಮಾರಂಭಗಳ ಕಾರಣಕ್ಕೆ, ಹಲವು ಕಾರ್ಮಿಕರು ಬರುತ್ತಿಲ್ಲ’ ಎಂದು ಜಿಲ್ಲಾ ಪಂಚಾಯಿತಿ ನರೇಗಾ ವಿಭಾಗದ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿವಿಧ ಪಕ್ಷಗಳ ಅಭ್ಯರ್ಥಿಗಳು ತಮ್ಮ ಪರವಾಗಿ ಪ್ರಚಾರಕ್ಕೆ ಹಾಗೂ ಸಾರ್ವಜನಿಕ ಸಭೆಗಳಿಗೆ ಬಂದವರಿಗೆ ನಿತ್ಯ ₹200ರಿಂದ ₹300 ಕೊಡುತ್ತಿದ್ದಾರೆ. ಇನ್ನೂ ಕೆಲವರು ₹500 ನೀಡುತ್ತಿದ್ದಾರೆ. ಇದರೊಂದಿಗೆ ಊಟಕ್ಕೆ ವ್ಯವಸ್ಥೆ ಮಾಡುತ್ತಾರೆ. ಕೆಲವರು ಮದ್ಯ ಕೊಡುತ್ತಾರೆ. ಹಾಗಾಗಿ ಹೆಚ್ಚಿನ ಕಾರ್ಮಿಕರು ನರೇಗಾ ಕೆಲಸದತ್ತ ಸುಳಿಯುತ್ತಿಲ್ಲ ಎಂದು ಮೂಲಗಳು ಹೇಳಿವೆ.

10 ಲಕ್ಷ ಮಂದಿಗೆ ಉದ್ಯೋಗ: ‘2023–24ನೇ ಸಾಲಿನಲ್ಲಿ ರಾಜ್ಯದಲ್ಲಿ 79,01,554 ಕುಟುಂಬಗಳ 1,79,47,704 ಜನರು ನರೇಗಾ ದಡಿ ಕೆಲಸಕ್ಕೆ ನೋಂದಣಿ ಮಾಡಿ ಕೊಂಡಿದ್ದಾರೆ. ಆ ಪೈಕಿ ಏಪ್ರಿಲ್ 29ರ ವರೆಗೆ 6,59,084 ಕುಟುಂಬಗಳ 10,89,759 ಮಂದಿಗೆ ಕೆಲಸ ಕೊಡಲಾಗಿದ್ದು, 82,33,884 ಮಾನವ ದಿನ ಸೃಜಿಸಲಾಗಿದೆ. 2024ರ ಮಾರ್ಚ್ 31ರವರೆಗೆ ವಿವಿಧ ಹಂತಗಳಲ್ಲಿ ಕಾಮಗಾರಿ ನಡೆಯುತ್ತದೆ. ಈಗ ಕೈಗೆತ್ತಿಕೊಂಡ ಕಾಮಗಾರಿಗಳಿಗೆ ಕೆಲ ಜಿಲ್ಲೆಗಳಲ್ಲಿ ಶೇ 30ರಿಂದ 40ರಷ್ಟು ಕಾರ್ಮಿಕರ ಅಭಾವ ಸೃಷ್ಟಿಯಾಗಿದೆ’ ಎಂದು ಮೂಲಗಳು ತಿಳಿಸಿವೆ.

ಚುನಾವಣೆ ಹಿನ್ನೆಲೆಯಲ್ಲಿ ನಮಗೆ ಆಸಕ್ತಿಯಿರುವ ಪಕ್ಷದವರ ಪರವಾಗಿ ಪ್ರಚಾರಕ್ಕೆ ಹೋಗುತ್ತಿರುವುದಾಗಿ ಕೆಲ ಕಾರ್ಮಿಕರು ಹೇಳಿದರೆ, ‘ಬೆಳಿಗ್ಗೆ ನರೇಗಾ ಕೆಲಸ ಮಾಡುತ್ತೇವೆ. ಸಂಜೆ ಪ್ರಚಾರಕ್ಕೆ ಹೋಗುತ್ತಿದ್ದೇವೆ’ ಎಂದು ಇನ್ನೂ ಕೆಲವರು ತಿಳಿಸಿದರು.

> ನರೇಗಾದಡಿ ನೋಂದಣಿ ಮಾಡಿಕೊಂಡ ಎಲ್ಲ ಕಾರ್ಮಿಕರಿಗೆ ಕೆಲಸ ಕೊಡುತ್ತಿದ್ದೇವೆ. ನಿಯಮಿತವಾಗಿ ಕೆಲಸಕ್ಕೆ ಬರುವಂತೆ ಅರಿವು ಮೂಡಿಸುತ್ತಿದ್ದೇವೆ
>
> **ರವಿ ಬಂಗಾರೆಪ್ಪನವರ,** ಯೋಜನಾ ನಿರ್ದೇಶಕ, ಜಿ.ಪಂ(ನರೇಗಾ), ಬೆಳಗಾವಿ

> ನರೇಗಾದಡಿ ಕೆಲಸ ಮಾಡುವ ಕಾರ್ಮಿಕರು ಚುನಾವಣೆ ಪ್ರಚಾರಕ್ಕೆ ಹೋಗುತ್ತಿರಬಹುದು. ಆದರೆ, ಈ ಬಾರಿ ಬೆಳಗಾವಿಯಲ್ಲಿ ಮಾನವ ದಿನಗಳ ಸೃಜನೆ ಹೆಚ್ಚಿದೆ
>
> **ಹರ್ಷಲ್ ಭೊಯರ್**, ಸಿಇಒ, ಬೆಳಗಾವಿ ಜಿ.ಪಂ

‘ತಿಳಿವಳಿಕೆ ಮೂಡಿಸುತ್ತಿದ್ದೇವೆ’

‘ನಮ್ಮಲ್ಲಿ ಕೆರೆ ಮತ್ತು ನಾಲೆಗಳನ್ನು ಹೂಳೆತ್ತುವುದು, ಶಾಲೆಗಳಲ್ಲಿ ಆಟದ ಮೈದಾನ ನಿರ್ಮಾಣ, ಬದು ನಿರ್ಮಾಣ ಮತ್ತಿತರ ಕಾಮಗಾರಿ ನಡೆದಿವೆ. ಬೇಸಿಗೆ ಹಿನ್ನೆಲೆಯಲ್ಲಿ ಕೆರೆಗಳು ಬತ್ತಿದ್ದು, ಈಗ ನಿರೀಕ್ಷೆಯಂತೆ ಕಾರ್ಮಿಕರು ಬಂದರೆ ಹೂಳೆತ್ತಲು ಅನುಕೂಲವಾಗುತ್ತದೆ. ಮಳೆಗಾಲದಲ್ಲಿ ಕಾಮಗಾರಿ ಕೈಗೊಳ್ಳಲು ತೊಡಕಾಗಲಿದ್ದು, ಕಾರ್ಮಿಕರ ಮನೆಗೇ ತೆರಳಿ ಕೆಲಸಕ್ಕೆ ಬರುವಂತೆಯೂ ತಿಳಿವಳಿಕೆ ಮೂಡಿಸುತ್ತಿದ್ದೇವೆ’ ಎಂದು ಜಿಲ್ಲಾ ನರೇಗಾ ಐಇಸಿ ಸಂಯೋಜಕ ಪ್ರಮೋದ ಗೋಡೆಕರ್ ಹೇಳಿದರು.

‘ಪ್ರತಿ ಕುಟುಂಬಕ್ಕೆ ನರೇಗಾದಡಿ 100 ಮಾನವ ದಿನ ಕೆಲಸ ಕೊಡಲಾಗುತ್ತದೆ. ಹಾಗಾಗಿ ಚುನಾವಣೆ ನಂತರ ಕೆಲಸಕ್ಕೆ ಹೋದರಾಯಿತು ಎಂದು ಹಲವರು ಹಿಂದೇಟು ಹಾಕುತ್ತಿದ್ದಾರೆ’ ಎಂದು ಹೇಳಿದರು.

ಜೆಇಇ: ಶಶಾಂಕ್‌ಗೆ 2ನೇ ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಶಶಾಂಕ್

ಬೆಂಗಳೂರು: ದೇಶದಾದ್ಯಂತ ನಡೆದ ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಮುಖ್ಯ ಪರೀಕ್ಷೆಯ ಫಲಿತಾಂಶ ಶನಿವಾರ ಪ್ರಕಟವಾಗಿದ್ದು, ರಾಜ್ಯದ ವಿದ್ಯಾರ್ಥಿಗಳು ಉತ್ತಮ ಸಾಧನೆ ತೋರಿದ್ದಾರೆ.

ನಗರದ ಎಚ್‌ಎಸ್‌ಆರ್ ಲೇಔಟ್‌ನ ನಾರಾಯಣ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿ ಶಶಾಂಕ್ ಎರಡನೇ ರ‍್ಯಾಂಕ್ ಗಳಿಸಿದ್ದಾರೆ. ಜತೆಗೆ, ಸೂರಜ್ ಗುರುನಾಥ್ 7ನೇ ರ‍್ಯಾಂಕ್, ವೆಂಕಟ್ ಪ್ರಣಯ್ 71ನೇ ರ‍್ಯಾಂಕ್, ಅಚಿಂತ್ಯ ಮಥುರ 85ನೇ ರ‍್ಯಾಂಕ್ ಪಡೆದಿದ್ದಾರೆ.

ಐಐಟಿ ಸೇರಿದಂತೆ ಪ್ರತಿಷ್ಠಿತ ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ನ್ಯಾಷನಲ್ ಟೆಸ್ಟಿಂಗ್ ಏಜೆನ್ಸಿ (ಎನ್‌ಟಿಎ) ಈ ಪರೀಕ್ಷೆ ನಡೆಸಿತ್ತು.

43 ಅಭ್ಯರ್ಥಿಗಳಿಗೆ 100ಕ್ಕೆ 100

ನವದೆಹಲಿ: ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆ ಜೆಇಇ ಮೇನ್‌ನ ಎರಡನೇ ಆವೃತ್ತಿಯಲ್ಲಿ 43 ಅಭ್ಯರ್ಥಿಗಳು ನೂರಕ್ಕೆ ನೂರು ಅಂಕಗಳನ್ನು ಪಡೆದಿದ್ದಾರೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ತಿಳಿಸಿದೆ.

‘15 ಅಭ್ಯರ್ಥಿಗಳ ಅಂಕಗಳು ಪರಿಶೀಲನೆಯಲ್ಲಿರುವುದರಿಂದ ಅವರ ಫಲಿತಾಂಶವನ್ನು ತಡೆಹಿ- ಡಿಯಲಾಗಿದೆ’ ಎಂದು ಎನ್‌ಟಿಎ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚೈತನ್ಯ ವಿದ್ಯಾರ್ಥಿಗಳ ಸಾಧನೆ: ನಗರದ ಚೈತನ್ಯ ಸಂಸ್ಥೆಯ ವಿದ್ಯಾರ್ಥಿಗಳು ರಾಷ್ಟ್ರಮಟ್ಟದಲ್ಲಿ 51 ರ‍್ಯಾಂಕ್‌ಗಳನ್ನು ಪಡೆದಿದ್ದಾರೆ. ಒಂಬತ್ತು ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದಿದ್ದಾರೆ.

ಧಾರಾಕಾರ ಮಳೆ, ಮನೆಗೆ ಹಾನಿ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯದಲ್ಲಿ ಶನಿವಾರ ಗುಡುಗು ಸಿಡಿಲಿನೊಂದಿಗೆ ಧಾರಾಕಾರ ಮಳೆಯಾಯಿತು.

ಒಂದು ಗಂಟೆ ನಿರಂತರವಾಗಿ ಸುರಿದ ಮಳೆಯಿಂದಾಗಿ ರಸ್ತೆಗಳ ತಗ್ಗು ಪ್ರದೇಶಗಳಲ್ಲಿ ನೀರು ತುಂಬಿ ವಾಹನಗಳ ಸಂಚಾರಕ್ಕೆ ಅಡಚಣೆ ಉಂಟಾಯಿತು. ಕುಮಾರಧಾರದ ಬಳಿ ಮುಖ್ಯರಸ್ತೆಗೆ ಅಡ್ಡಲಾಗಿ ಮರವೊಂದು ಬಿದ್ದು, ಕೆಲಕಾಲ ವಾಹನ ಸಂಚಾರ ಸ್ಥ- ಗಿತವಾಗಿತ್ತು. ಬಳಿಕ ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಲಾಯಿತು.

ಗಾಳಿಯಿಂದಾಗಿ ಕೆಲ ಮನೆಗಳ ಚಾವಣಿಗೆ ಹಾಕಿದ ಶೀಟುಗಳು ನೆಲಕ್ಕುರುಳಿವೆ. ಕೆಲವೆಡೆ ವಿದ್ಯುತ್ ತಂತಿ ಮೇಲೆ ಮರದ ಕೊಂಬೆ ಬಿದ್ದು ಹಾನಿಯಾಗಿವೆ. ಹೀಗಾಗಿ, ವಿದ್ಯುತ್ ವ್ಯತ್ಯಯ ಉಂಟಾಗಿದೆ. ಕುಮಾರಪರ್ವತ ಭಾಗದಲ್ಲಿ ಹಾಗೂ ಸುತಮುತ್ತಲ ಪ್ರದೇ- ಶಗಳಲ್ಲಿಯೂ ಗಾಳಿಯೊಂದಿಗೆ ಮಳೆ ಸುರಿಯಿತು. ಸುಳ್ಯದಲ್ಲೂ ಉತ್ತಮ ಮಳೆಯಾಗಿದೆ. ರಸ್ತೆ, ಚರಂಡಿಯಲ್ಲಿ ನೀರು ತುಂಬಿ ಹರಿದಿದೆ. ಬೆಳ್ತಂಗಡಿ ನಗರ, ಉಜಿರೆ ಸುತ್ತಮುತ್ತ ಸಾಧಾರಣ ಮಳೆಯಾಗಿದೆ.

ಮೈಸೂರು ವರದಿ: ಮಡಿಕೇರಿ ನಗರ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಲ್ಲಿ ಧಾರಾಕಾರ ಮಳೆ ಸುರಿಯಿತು. ಗುಡುಗಿನಿಂದ ಕೂಡಿದ ಬಿರುಸಿನ ಮಳೆಗೆ ರಸ್ತೆಗಳಲ್ಲಿ ನೀರು ರಭಸವಾಗಿ ಹರಿಯಿತು. ಸೋಮವಾರಪೇಟೆಯಲ್ಲೂ ಬಿರುಸಿನಿಂದ ಮಳೆಯಾಯಿತು.

ಮೈಸೂರು ನಗರ, ಹುಣಸೂರು ನಗರ, ಸುತ್ತಮುತ್ತ ಶನಿವಾರ ಮಧ್ಯಾಹ್ನ 2.30ಕ್ಕೆ ಆರಂಭ ವಾದ ಮಳೆ ಒಂದು ತಾಸು ಸುರಿಯಿತು. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಬಿಂಡಿಗನವಿಲೆ ಹೋಬಳಿಯ ವ್ಯಾಪ್ತಿಯಲ್ಲೂ ಉತ್ತಮ ಮಳೆಯಾಯಿತು. ಮಧ್ಯಾಹ್ನ ಜೋರು ಗಾಳಿಯೊಂದಿಗೆ ಪ್ರಾರಂಭವಾಗಿ ಒಂದು ಗಂಟೆಗೂ ಹೆಚ್ಚು ಕಾಲ ಸುರಿಯಿತು. ತಾಲ್ಲೂಕಿನ ದೇವಲಾಪುರ, ಬೆಳ್ಳೂರು ಮತ್ತು ಕಸಬಾ ಹೋಬಳಿಯ ವ್ಯಾಪ್ತಿಯಲ್ಲಿ ಶುಕ್ರವಾರ ರಾತ್ರಿಯೂ ಮಳೆಯಾಯಿತು. ಕೊಪ್ಪಳದಲ್ಲಿ ಅರ್ಧ ತಾಸು ಮಳೆ ಸುರಿಯಿತು.

ಇಂದು ರಾಜ್ಯದ ಹಲವೆಡೆ ಭಾರಿ ಮಳೆ

ಬೆಂಗಳೂರು: ರಾಜ್ಯದ ಹಲವೆಡೆ ಭಾನುವಾರ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, 5 ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಹಾಗೂ 14 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಬೀದರ್, ಕಲಬುರಗಿ, ರಾಯಚೂರು, ಮಂಡ್ಯ ಹಾಗೂ ಕೊಡಗು ಜಿಲ್ಲೆಗೆ ‘ಆರೆಂಜ್ ಅಲರ್ಟ್’ ನೀಡಲಾಗಿದೆ. ವಿಜಯಪುರ, ಯಾದಗಿರಿ, ಕೊಪ್ಪಳ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ತುಮಕೂರು, ಮೈಸೂರು, ಚಾಮರಾಜನಗರ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದ್ದು, ಈ ಜಿಲ್ಲೆಗಳಲ್ಲಿ ಗುಡುಗು ಸಹಿತ ಅಧಿಕ ಪ್ರಮಾಣದಲ್ಲಿ ಮಳೆಯಾಗುವ ಸಾಧ್ಯತೆಯಿದೆ.

ಸೋಮವಾರವೂ ರಾಜ್ಯದ ಹಲವೆಡೆ ಭಾರಿ ಮಳೆಯಾಗಬಹುದು. ಮುಂದಿನ ಐದು ದಿನಗಳು ಮಳೆ ಮುಂದುವರಿಯುವ ಸಾಧ್ಯತೆಯಿದೆ. ಬೆಂಗಳೂರು ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಕೆಲವೊಮ್ಮೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ಹೇಳಿದೆ.

ಬರಿದಾದ ನದಿ ಉಡುಪಿ ಜಿಲ್ಲೆಯ ಹೆಬ್ರಿ ಬಳಿ ಸೀತಾನದಿ ಬರಿದಾಗಿದ್ದು, ಬಂಡೆಗಳು ತೆರೆದುಕೊಂಡಿವೆ. ಉಳಿದ ಅಲ್ಪಸ್ವಲ್ಪ ನೀರನ್ನು ಮಹಿಳೆಯರು ಬಟ್ಟೆ ತೊಳೆಯಲು ಬಳಸುತ್ತಿದ್ದಾರೆ –ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್.

ಕನ್ನಡ ಶಾಲೆಗೆ ‘ಮರಿದೇವರು ಪ್ರತಿಷ್ಠಾನ ದತ್ತಿ’ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತ್ಯ, ಶಿಕ್ಷಣ ಸೇರಿ ವಿವಿಧ ಕ್ಷೇತ್ರಗಳ ಸಾಧನೆಗೆ ನೀಡುವ ‘ಪ್ರೊ.ಸಿ.ಎಚ್. ಮರಿದೇವರು ಪ್ರತಿಷ್ಠಾನ ದತ್ತಿ’ ಪ್ರಶಸ್ತಿಯನ್ನು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಘೋಷಿಸಿದ್ದು, ಶಿಕ್ಷಣ ಕ್ಷೇತ್ರದ ಸಾಧನೆಗೆ ಧಾರವಾಡದ ಕೆ.ಇ. ಬೋರ್ಡ್ ಕನ್ನಡ ಶಾಲೆ ಆಯ್ಕೆಯಾಗಿದೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಆಯ್ಕೆ ಸಮಿತಿ ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡಿದೆ. ಸಾಹಿತ್ಯ ಕ್ಷೇತ್ರದಲ್ಲಿ ಹಾಸನದ ಡಿ.ಎಚ್. ಯೋಗೀಶ್ವರಪ್ಪ, ಕೃಷಿ ಹಾಗೂ ನೀರಾವರಿ ಕ್ಷೇತ್ರದಲ್ಲಿ ಮಂಡ್ಯದ ಎಚ್.ಎಸ್. ಬಾಲಸುಬ್ರಹ್ಮಣ್ಯ, ಕನ್ನಡ ಸೇವೆಗೆ ತುಮಕೂರಿನ ಸುಶೀಲಾ ಸದಾಶಿವಯ್ಯ ಹಾಗೂ ಕ್ರೀಡಾ ಕ್ಷೇತ್ರದಲ್ಲಿ ಚಿಕ್ಕನಾಯಕನಹಳ್ಳಿಯ ಸಾಗರ್ ಎಂ. ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ತಲಾ ₹ 15 ಸಾವಿರ ನಗದು ಒಳಗೊಂಡಿದೆ ಎಂದು ಕಸಾಪ ಪ್ರಕಟಣೆಯಲ್ಲಿ ತಿಳಿಸಿದೆ.



ಯೋಗೀಶ್ವರಪ್ಪ



ಬಾಲಸುಬ್ರಹ್ಮಣ್ಯ

ಸುಶೀಲಾ

ಸಾಗರ್ ಎಂ.

ಗಂಟಲಲ್ಲಿ ಪ್ಲಾಸ್ಟಿಕ್ ಮುಚ್ಚಳ ಸಿಲುಕಿ ಬಾಲಕ ಸಾವು

ಅಹ್ಮದ್ ಬಾಗೇವಾಡಿ

ಕುಷ್ಟಗಿ (ಕೊಪ್ಪಳ ಜಿಲ್ಲೆ): ಸಿಹಿ ತಿನಿಸಿನ ಜೊತೆ ಬಂದ ಚಿಕ್ಕ ಬಾಟಲಿಯ ಪ್ಲಾಸ್ಟಿಕ್ ಮುಚ್ಚಳ ಗಂಟಲಲ್ಲಿ ಸಿಲುಕಿ ಇಲ್ಲಿನ ಮಹಮ್ಮದ್ ಅಹಮದ್ ರಬ್ಬಾನಿ ಬಾಗೇವಾಡಿ ಎಂಬ ಮೂರು ವರ್ಷದ ಬಾಲಕ ಮೃತಪಟ್ಟಿದ್ದಾನೆ.

‘ಅಂಗಡಿಯಿಂದ ತಂದಿದ್ದ ಸಣ್ಣ ಗೋಲಿ ಆಕಾರದ ಸಿಹಿ ತಿನಿಸನ್ನು ಅಹಮದ್ ತಿನ್ನುತ್ತಿದ್ದ. ನಂತರ ಬಾಟ ಲಿಯ ಪ್ಲಾಸ್ಟಿಕ್ ಮುಚ್ಚಳ ಗಂಟಲಿನಲ್ಲಿ ಸಿಲುಕಿ ಒದ್ದಾಡುತ್ತಿರುವುದು ಕಾಣಿಸಿತು. ಮನೆಯವರು ತಕ್ಷಣವೇ ತೆಗೆಯಲು ಪ್ರ- ಯತ್ನಿಸಿದರು. ಆಸ್ಪತ್ರೆಗೆ ಕರೆದೊಯ್ಯುವ ಮೊದಲೇ ಆತ ಸಾವನ್ನಪ್ಪಿದ’ ಎಂದು ಸ್ಥಳೀಯರು ತಿಳಿಸಿದರು.

ಕಾಡುಹಂದಿ ದಾಳಿ: ಸಾವು

ಕಾಳಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ತೇಗಲತಿಪ್ಪಿ ಗ್ರಾಮದ ಹೊಲದಲ್ಲಿ ರೈತ ಗುರುನಂಜೇಶ್ವರ ಶರಣಪ್ಪ ಮೋತಕಪಲ್ಲಿ (46) ಎಂಬವರು ಕಾಡುಹಂದಿಯ ದಾಳಿಯಿಂದ ಶನಿವಾರ ಸಾವನ್ನಪ್ಪಿದ್ದಾರೆ.

ಗಾಯಗೊಂಡ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಕೊನೆಯುಸಿರೆ- ಳೆದರು. ಅವರಿಗೆ ಪತ್ನಿ ಮತ್ತು ನಾಲ್ವರು ಪುತ್ರಿಯರು ಇದ್ದಾರೆ. ಅರಣ್ಯಾಧಿಕಾರಿಗ- ಳು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ಸ್ನಾನದ ಮನೆಯಲ್ಲಿ ಅಡಗಿದ್ದ ಚಿರತೆ ರಕ್ಷಣೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಸೊರಬ ತಾಲ್ಲೂಕಿನ ಕುಪ್ಪೆ ಗ್ರಾಮದಲ್ಲಿ ಮನೆಯ ಸ್ನಾನದ ಕೋಣೆಯಲ್ಲಿ ಅಡಗಿದ್ದ ಗಂಡು ಚಿರತೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಶನಿವಾರ ಕಾರ್ಯಾಚರಣೆ ನಡೆಸಿ ರಕ್ಷಿಸಿದ್ದಾರೆ.

ಉಳವಿ ಅರಣ್ಯ ವ್ಯಾಪ್ತಿಯ ಕುಪ್ಪೆ ಗ್ರಾಮದ ಶಿವಕುಮಾರ್ ಮನೆಯ ಸ್ನಾನದ ಕೋಣೆಯೊಳಗೆ ನಸುಕಿನಲ್ಲಿ ಬಂದ ಚಿರತೆ ಅಲ್ಲಿಯೇ ಆಶ್ರಯ ಪಡೆದಿತ್ತು. ಬೆಳಿಗ್ಗೆ ಗಮನಿಸಿದ ಮನೆಯವರು, ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು.

ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ–ಸಿಂಹಧಾಮದ ವೈದ್ಯ ಡಾ.ಮುರಳಿ ಮನೋಹರ್ ನೇತೃತ್ವದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ, ಸ್ನಾನದ ಕೋಣೆಯ ಹೆಂಚು ತೆಗೆದು ಮೇಲಿನಿಂದ ಅರವಳಿಕೆ ಮದ್ದು ನೀಡಿ ಚಿರತೆಯನ್ನು ಹಿಡಿಯಲಾಯಿತು.

‘ನಾಲ್ಕು ದಿನದ ಹಿಂದೆ ಉರುಳಿಗೆ ಸಿಲುಕಿ 4 ವರ್ಷದ ಚಿರತೆ ಗಾಯಗೊಂಡಿದೆ. ಹೀಗಾಗಿ ಅದು ಗ್ರಾಮದೊಳಗೆ ಬಂದಿದೆ. ಚಿಕಿತ್ಸೆಯ ಅಗತ್ಯ ಇರುವುದರಿಂದ ವಿಜಯನಗರ ಜಿಲ್ಲೆಯ ಹಂಪಿಯ ಮೃಗಾಲಯಕ್ಕೆ ಕಳುಹಿಸಿಕೊಟ್ಟಿದ್ದೇವೆ’ ಎಂದು ಡಾ.ಮುರಳಿ ಮನೋಹರ್ ‘ಪ್ರಜಾವಾಣಿ’ಗೆ ತಿಳಿಸಿದರು.



ಕುಪ್ಪೆ ಗ್ರಾಮದಲ್ಲಿ ಸ್ನಾನದ ಕೋಣೆಯಲ್ಲಿ ಆಶ್ರಯ ಪಡೆದಿದ್ದ ಚಿರತೆ

ಬಹು ಮಾಧ್ಯಮ ಪ್ರಜಾವಾಣಿ @75
www.prajavani.net
ಇಂದು
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ
ಸೆಲೆಬ್ರಿಟಿ PREMIERE
ಬೆಳಿಗ್ಗೆ 10 ಕ್ಕೆ
ಶ್ವೇತಾ ಶ್ರೀವಾತ್ಸವ್
ನಟಿ

ಸಿಂಪಲ್ ಹುಡುಗಿಯ ಸ್ಪೆಷಲ್ ಮಾತು
Prajavani.net Prajavani Prajavani
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಚುನಾವಣಾ ಪ್ರಚಾರ ಸಭೆಗಳು
30 ಏಪ್ರಿಲ್ 2023 | ಭಾನುವಾರ



ಶ್ರೀ ಜಗತ್ ಪ್ರಕಾಶ್ ನಡ್ಡಾ
ಮಾನ್ಯ ರಾಷ್ಟ್ರಾಧ್ಯಕ್ಷರು, ಬಿಜೆಪಿ
ಬೆ. 11:00 ಹೊನ್ನಾಳಿ
ಮ. 1:30 ಕುಂದಾಪುರ
ಸಂ. 5:00 ಸುಳ್ಯ

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಸಂಸದೀಯ ಮಂಡಳಿಯ ಸದಸ್ಯರು, ಬಿಜೆಪಿ ಹಾಗೂ ಮಾಜಿ ಮುಖ್ಯಮಂತ್ರಿಗಳು
ಬೆ. 9:30 ಹೊಸನಗರ
ಬೆ. 11:30 ಬಾದಾಮಿ
ಮ. 2:00 ಸಾವಳಗಿ
ಸಂ. 4:00 ಬೀಳಗಿ
ಸಂ. 5:30 ಉಪ್ಪಿನ ಬೆಟಗೇರಿ, ಧಾರವಾಡ



ಶ್ರೀ ಯೋಗಿ ಆದಿತ್ಯನಾಥ್
ಮಾನ್ಯ ಮುಖ್ಯಮಂತ್ರಿಗಳು, ಉತ್ತರ ಪ್ರದೇಶ
ಬೆ. 11:00 ಗಂಗಾವತಿ
ಮ. 12:30 ರಾಯಚೂರು ನಗರ
ಮ. 2:30 ವಾಡಿ, ಚಿತ್ತಾಪುರ
ಮ. 3:30 ಆಳಂದ

ಶ್ರೀ ನಳಿನ್ ಕುಮಾರ್ ಕಟೀಲ್
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ
ಬೆ. 9:30 ಸುಳ್ಯ

ಶ್ರೀ ಪ್ರಹ್ಲಾದ್ ಜೋಶಿ
ಮಾನ್ಯ ಕೇಂದ್ರ ಸಂಸದೀಯ ವ್ಯವಹಾರಗಳು, ಗಣಿ ಮತ್ತು ಕಲ್ಲಿದ್ದಲು ಖಾತೆ ಸಚಿವರು
ಬೆ. 10:30 ಮಲ್ಲೇಶ್ವರಂ, ಬೆಂಗಳೂರು
ಮ. 3:30 ಆನೇಕಲ್-ರೋಡ್ ಶೋ
ಸಂ. 5:00 ಜಯನಗರ-ರೋಡ್ ಶೋ

ಶ್ರೀ ಎ. ನಾರಾಯಣಸ್ವಾಮಿ
ಮಾನ್ಯ ಕೇಂದ್ರ ಸಹಾಯಕ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ಸಚಿವರು
ಬೆ. 10:00 ಬಿಜಾಪುರ ನಗರ
ಮ. 2:30 ನಾಗಠಾಣಾ



ಶ್ರೀ ಎಲ್. ಮುರುಗನ್
ಮಾನ್ಯ ಕೇಂದ್ರ ಸಹಾಯಕ ಮೀನುಗಾರಿಕೆ, ಹೈನುಗಾರಿಕೆ ಮತ್ತು ಡೈರಿ ಖಾತೆ ಸಚಿವರು
ಮ. 12:00 ಶಂಕರಪುರ, ಚಿಕ್ಕಮಗಳೂರು
ಸಂ. 4:30 ಹುಕ್ಕುಂದ, ಚಿಕ್ಕಮಗಳೂರು

ಶ್ರೀ ಬಿ. ಶ್ರೀರಾಮುಲು
ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಬೆ. 10:00 ಸಿಂಧನೂರು

ಶ್ರೀ ಬಸನಗೌಡ ಪಾಟೀಲ್ ಯತ್ನಾಳ್
ಮಾನ್ಯ ಶಾಸಕರು
ರೋಡ್ ಶೋ:
ಬೆ. 10:00 ಬೈಲಹೊಂಗಲ
ಮ. 12:00 ರಾಮದುರ್ಗ
ಸಂ. 4:00 ಯಮಕನಮರಡಿ

ಶ್ರೀ ಕೆ. ಅಣ್ಣಾಮಲೈ
ರಾಜ್ಯಾಧ್ಯಕ್ಷರು, ಬಿಜೆಪಿ, ತಮಿಳುನಾಡು ಹಾಗೂ ಕರ್ನಾಟಕ ಸಹ ಉಸ್ತುವಾರಿ
ಸಂ. 5:30 ಬ್ಯಾಟರಾಯನಪುರ
ರಾ. 7:30 ಹೆಬ್ಬಾಳ

ಶ್ರೀ ಪ್ರಮೋದ್ ಮಧ್ವರಾಜ್
ಮಾಜಿ ಮಂತ್ರಿಗಳು
ಬೆ. 8:30 ಕಾಪು

ಶ್ರೀಮತಿ ಶ್ರುತಿ
ಖ್ಯಾತ ಚಲನಚಿತ್ರ ನಟಿ
ರೋಡ್ ಶೋ:
ಬೆ. 10:30 ಹಾನಗಲ್
ಮ. 3:30 ಹುಬ್ಬಳ್ಳಿ-ಧಾರವಾಡ ಪೂರ್ವ

ಶ್ರೀಮತಿ ತಾರಾ ಅನುರಾಧ
ಖ್ಯಾತ ಚಲನಚಿತ್ರ ನಟಿ
ಮ. 3:30 ಮೇಲುಕೋಟೆ
(ಮಹಿಳಾ ಸಮಾವೇಶ)

ಬನ್ನಿ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ
ಕಮಲದ ಬಟನ್ ಒತ್ತಿ ಬಿಜೆಪಿ ಗೆಲ್ಲಿಸಿ
ಪ್ರಕಟಣೆ : ಬಿಜೆಪಿ ಕರ್ನಾಟಕ

ಪ್ರಜಾವಾಣಿ ಭಾನುವಾರದ ಪುರವಣಿ
ಭಾನುವಾರ, 30 ಏಪ್ರಿಲ್ 2023

ಬುದ್ಧ-ನಮ್ಮೊಳಗೇ ಇರುವ ಬೆಳಕು 9

ಮತ್ತೆ ಮತ್ತೆ 'ಅಣ್ಣನ ನೆನಪು' 10

ನೀರಾನೆ...ಎಲ್ಲಿ ನಿಮ್ಮನೆ? 11

ಇರುವುದೆಲ್ಲವ ಬಿಟ್ಟು ಇರದುದರೆಡೆಗೆ...

ಜೀವಪರಿಸರದ ನಾಡಿಮಿಡಿತ ಬೌದ್ಧಿಕ ಚತುರತೆಗೆ ಸುಲಭವಾಗಿ ದಕ್ಕದು. ನಮೀಬಿಯಾದಿಂದ ಬಂದ ಚೀತಾಗಳನ್ನು ಕುನೊದಲ್ಲಿ ಇರಿಸಿದ ಪ್ರಸಂಗ ಕೂಡ ಇದನ್ನು ಪುಷ್ಟೀಕರಿಸಿದೆ.

ಕೃಪಾಕರ-ಸೇನಾನಿ

ಸೆಪ್ಟೆಂಬರ್ 17, 2022ನೇ ಇಸವಿ. ನಮೀಬಿಯಾದಿಂದ ಬಂದ ಚೀತಾಗಳನ್ನು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಪ್ರಧಾನಿ ದೇಶಕ್ಕೆ ಅರ್ಪಿಸಿದರು. ಹಿಂದೊಮ್ಮೆ ಭಾರತದ ಕಾಡುಗಳಲ್ಲಿ ನೆಲೆಸಿ ವಿನಾಶಗೊಂಡಿತು ಎಂದು ನಂಬಿರುವ ಜೀವಿಯನ್ನು ಕಾಡಿಗೆ ಮರು ಪರಿಚಯಿಸುವುದು ಈ ಯೋಜನೆಯ ಉದ್ದೇಶ. ಪ್ರಧಾನಿ ಕಚೇರಿ ಈ ಯೋಜನೆಯನ್ನು ರೂಪಿಸಿತ್ತು.

ಆ ಸಮಾರಂಭದಲ್ಲಿ ಹಾಜರಿದ್ದ ಮಧ್ಯಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್, 'ಭಾರತದ ವನ್ಯಜೀವಿ ಸಂರಕ್ಷಣೆಯಲ್ಲಿ ಹೊಸ ಶಕೆ ಆರಂಭ, ಶತಮಾನದ ಅದ್ಭುತ ಚಿಂತನೆ, ಅಲ್ಲದೇ ರಾಜ್ಯದ ಪ್ರವಾಸೋದ್ಯಮ ಇದರಿಂದ ಇನ್ನಷ್ಟು ವೃದ್ಧಿಯಾಗಲಿದೆ' ಎಂದರು.



ಚಿತ್ರಗಳು: ಲೇಖಕರು

ಮಾಧ್ಯಮಗಳಲ್ಲಿ ಪ್ರಕಟಗೊಂಡ, ಪ್ರಸಾರಗೊಂಡ ಈ ವರದಿ ಪ್ರಾಣಿಪ್ರಿಯರಲ್ಲಿ ಸಂಚಲನ ಉಂಟು ಮಾಡಿದ್ದರೆ ಅಚ್ಚರಿ ಇಲ್ಲ. ಆದರೆ ಹೆಚ್ಚಿನ ಜೀವ ವಿಜ್ಞಾನಿಗಳಿಗೆ ಈ ಯೋಜನೆಯ ಉದ್ದೇಶ, ಪರಿಕಲ್ಪನೆ, ವಿನ್ಯಾಸ ಯಾವುದೂ ಒಪ್ಪಿಗೆಯಾಗಿರಲಿಲ್ಲ. ಅಪಸ್ವರವಿದ್ದರೂ ಮೌನವಾದರು. ರವಿ ಚಲಂ ಎಂಬ ವಿಜ್ಞಾನಿ ಮಾತ್ರ ಇದೊಂದು ಒಳನೋಟಗಳಿಲ್ಲದ, ಅವೈಜ್ಞಾನಿಕ ಯೋಜನೆ ಎಂದು ಜರಿದರು.

ಹಾಗೆ ನೋಡಿದರೆ ಚೀತಾಗಳನ್ನು ಭಾರತಕ್ಕೆ ಮತ್ತೆ ಪರಿಚಯಿಸಬೇಕೆಂಬ ಚಿಂತನೆ ಹೊಸದೇನಲ್ಲ. ಇದು ವನ್ಯಜೀವಿ ವಲಯದಲ್ಲಿ ಸುಮಾರು ಮೂವತ್ತು ವರ್ಷಗಳಿಂದ ಚರ್ಚೆಯಲ್ಲಿದ್ದ ವಿಷಯ. 2009ರಲ್ಲಿ ಕೇಂದ್ರ ಸರ್ಕಾರ ಇದಕ್ಕಾಗಿ ಯೋಜನೆಯನ್ನು ಸಿದ್ಧಪಡಿಸಿತ್ತು. ಆದರೆ ಪ್ರಯೋಗಕ್ಕೆ ಆಯ್ಕೆ ಮಾಡಿಕೊಳ್ಳಬೇಕಾದ ಪ್ರದೇಶ ಹಾಗೂ ಮತ್ತಿತರ ಸಾಧಕ-ಬಾಧಕಗಳನ್ನು ವಿಶ್ಲೇಷಿಸಿ ಈ ಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು.

ಇದೇನೇ ಇರಲಿ, ಚಿಮ್ಮುವ ವೇಗಕ್ಕೆ ಹೆಸರಾದ ಅದ್ಭುತ ಜೀವಿಯೊಂದನ್ನು ಮರಳಿ ನಮ್ಮ ಕಾಡಿಗೆ ಬಿಡುವುದಾದಲ್ಲಿ ಏನು ತಪ್ಪು; ಇದು ದೇಶವೇ ಹೆಮ್ಮೆ ಪಡುವ ವಿಷಯವಲ್ಲವೇ ಎಂಬ ಪ್ರಶ್ನೆ ಮೂಡುವುದು ಸಹಜ. ಆದರೆ ಜೀವಪರಿಸರವೆಂಬುದು ಅತ್ಯಂತ ಸಂಕೀರ್ಣವಾದದ್ದು.

ಭೂಮಿಯಲ್ಲಿ ಜೀವಿಗಳ ವಿಸ್ತರಣೆಗೆ ಭೌಗೋಳಿಕ ವೈವಿಧ್ಯ ಕಾರಣವಾಗಿರುತ್ತದೆ. ಯಾವುದೇ ಅಪರಿಚಿತ ನೆಲೆಗೆ ಜೀವಿಯೊಂದನ್ನು ಪರಿಚಯಿಸಿದಾಗ ಅವು ತಬ್ಬಿಬ್ಬಾಗುತ್ತವೆ. ಆ ನೆಲೆಯ ಭಾಷೆ ಅರ್ಥವಾಗದೆ ತತ್ತರಿಸುತ್ತವೆ. ಕ್ರಮೇಣ ಮಾನಸಿಕವಾಗಿ ಕುಸಿಯುವ ಸಾಧ್ಯತೆಗಳಿರುತ್ತವೆ. ಜೀವಪರಿಸರದ ನಾಡಿಮಿಡಿತ ಎಂದಿಗೂ ಮಾನವನ ಬೌದ್ಧಿಕ ಚತುರತೆಗೆ ಸುಲಭವಾಗಿ ದಕ್ಕುವ ವಿಷಯವಲ್ಲ.

ಈ ಹಿನ್ನೆಲೆಯಲ್ಲಿ ಜೀವಪರಿಸರದ ವಿಷಯಗಳಲ್ಲಿ ತೀರ್ಮಾನ ತೆಗೆದುಕೊಳ್ಳುವ ಮುನ್ನ ಸುದೀರ್ಘ ಅಧ್ಯಯನ ಅತ್ಯವಶ್ಯಕ. ಇಲ್ಲಿ ಕೇವಲ ಎದೆಗಾರಿಕೆ ಅಥವಾ ಭಾವನಾತ್ಮಕ ತೀರ್ಮಾನಗಳು ನೆರವಿಗೆ ಬರುವುದಿಲ್ಲ.

ಮೊದಲಿಗೆ ಚೀತಾಗಳು ನಮ್ಮ ದೇಶದ ಕಾಡುಗಳಲ್ಲಿ ಅಥವಾ ಹುಲ್ಲುಗಾವಲುಗಳಲ್ಲಿ ಸಹಜವಾಗಿ ಬದುಕಿ ಬಾಳಿದ ಪ್ರಾಣಿಗಳೇ ಎಂದು ಅರಿಯುವುದು ಮುಖ್ಯವಾಗುತ್ತದೆ.

1947ರಲ್ಲಿ ಛತ್ತೀಸಗಡದ ಮಹಾರಾಜ ಭಾರತ ದೇಶದ ಕಡೆಯ ಚೀತಾಗಳನ್ನು ಬೇಟೆಯಾಡಿ ಕೊಂದನೆಂಬ ದಾಖಲೆಗಳಿವೆ. ಆದರೆ ಅವು ನಮ್ಮ ದೇಶದ ಜೀವಪರಿಸರದಲ್ಲಿ ಸಹಜವಾದ ಭಾಗವಾಗಿ ಸಾವಿರಾರು ವರ್ಷಗಳಿಂದ ಜೀವಿಸಿದ್ದ ಪ್ರಾಣಿಗಳು ಎನ್ನುವುದೇ ಚರ್ಚಾಸ್ಪದ.

ಏಕೆಂದರೆ ನಮ್ಮ ದೇಶದ ಎಲ್ಲೆಡೆ ಕಂಡುಬರುವ ಬಂಡೆಗಳ ಮೇಲೆ ಬಿಡಿಸಿರುವ ಪುರಾತನ ಚಿತ್ರಗಳಲ್ಲಾಗಲೀ, ಹರಪ್ಪ ಮೊಹೆಂಜೋದಾರೊ ಕಾಲದ ಕಲೆಗಳಲ್ಲಾಗಲಿ ಅಥವಾ ನಮ್ಮ ಸಾಹಿತ್ಯ, ಪುರಾಣಗಳಲ್ಲಾಗಲಿ ಚೀತಾಗಳು ದಾಖಲಾಗಿಲ್ಲ.

ಆದರೆ, ಮೊಗಲರ ಅವಧಿಯಲ್ಲಿ ಬಿಡಿಸಿದ ಹಲವು ಮಿನಿಯೇಚರ್ ಚಿತ್ರಕಲೆಗಳಲ್ಲಿ ಚೀತಾ ಪ್ರತ್ಯಕ್ಷಗೊಳ್ಳುತ್ತವೆ. ಅದರ ನಂತರ ನಮ್ಮ ರಾಜ ಮಹಾರಾಜರ ಬಳಿ ಚೀತಾಗಳಿದ್ದ ಹಲವಾರು ದಾಖಲೆಗಳು ದೊರೆಯುತ್ತವೆ. ಹಾಗಾದರೆ ಈ ಚೀತಾಗಳು ಎಲ್ಲಿಂದ ಬಂದವು ಎಂಬ ಪ್ರಶ್ನೆ ಹುಟ್ಟಿಕೊಳ್ಳುತ್ತದೆ.

ಇರಾನ್‌ನ ಶ್ರೀಮಂತರು ಹಿಂದಿನ ಕಾಲದಲ್ಲಿ ತಮ್ಮ ದೇಶದ ಕುರುಚಲು ಕಾಡುಗಳಲ್ಲಿ ಜೀವಿಸಿದ್ದ ಚೀತಾಗಳನ್ನು ಪಳಗಿಸಿ ಅವುಗಳಿಂದ ಬೇಟೆಯಾಡಿಸುವ ಹವ್ಯಾಸ ಬೆಳೆಸಿಕೊಂಡಿದ್ದರು. ಈ ರೀತಿ ಪಳಗಿದ ಚೀತಾಗಳನ್ನು 15ನೇ ಶತಮಾನದಲ್ಲಿ ಮೊಗಲರು ನಮ್ಮ ದೇಶಕ್ಕೆ ತಂದಿರಬಹುದು. ನಮ್ಮ ದೇಶದ ಮಹಾರಾಜರುಗಳಿಗೆ ಉಡುಗೊರೆಯಾಗಿ ಕೂಡ ಬಂದಿರಲು ಸಾಧ್ಯ. ಆನಂತರದ ಅವಧಿಯಲ್ಲಿ ಕೆಲವು ಚೀತಾಗಳು ನಮ್ಮ ಕುರುಚಲು ಕಾಡು ಮತ್ತು ಹುಲ್ಲುಗಾವಲುಗಳಲ್ಲಿ ಮರೆಯಾಗಿ ಸ್ವಲ್ಪ ಕಾಲ ಜೀವಿಸಿರಬಹುದೆಂಬುದು ಹಲವಾರು ವಿಜ್ಞಾನಿಗಳ ಅನಿಸಿಕೆ.

ಹಾಗಾದಲ್ಲಿ, ನಮ್ಮ ಜೀವಪರಿಸರದ್ದಲ್ಲದ ಜೀವಿಯೊಂದನ್ನು ತಂದು ನಮ್ಮ ಕಾಡಿಗೆ ಬಿಡುವ ಪ್ರಯತ್ನ ವೈಜ್ಞಾನಿಕವಾಗಿ ಅರ್ಥ ಕಳೆದುಕೊಳ್ಳುತ್ತದೆ.

ಇದಲ್ಲದೇ ಈ ಯೋಜನೆಯು ಜೀವವಿಜ್ಞಾನಿಗಳಲ್ಲಿ ಹಲವಾರು ಸಂಶಯಗಳನ್ನು ಬಿತ್ತಿರಬಹುದು. ಇದರಲ್ಲಿ ಕಾಡಿನ ವಿಸ್ತೀರ್ಣವೂ ಒಂದು. 'ಕುನೊ' ಉದ್ಯಾನದ ವಿಸ್ತೀರ್ಣ ಕೇವಲ 750 ಚ.ಕಿ.ಮೀ. ಇದು ಚೀತಾಗಳ ಅವಶ್ಯಕತೆಯನ್ನು ಪೂರೈಸುವುದಿಲ್ಲ. ಜೊತೆಗೆ ಜೀವಿಗಳು ಅಪರಿಚಿತ ನೆಲೆಗೆ ಸುಲಭವಾಗಿ ಒಗ್ಗಿಕೊಳ್ಳಲಾರವು ಹಾಗೂ ಅವುಗಳಿಗೆ ಆ ಪ್ರದೇಶದ ನಕ್ಷೆಯ ಬಗ್ಗೆ ಅರಿವಿರುವುದಿಲ್ಲ. ಅದೇ ರೀತಿ ಅಲ್ಲಿ ಜೀವಿಸಿರುವ ಉಳಿದ ಜೀವಿಗಳ ಕುರಿತೂ ಅರಿವು ಇರಲಾರದು. ಬದಲಾಗುವ ಋತುಮಾನ, ಹರಿಯುವ ಝರಿ, ಚಿಗುರುವ ಹುಲ್ಲು, ನೆಲೆಸಿರುವ ಪ್ರಾಣಿ ಸಂಕುಲಗಳ ಬಗ್ಗೆ ತಿಳಿವಳಿಕೆಯು ಅಗತ್ಯ. ಕಾಡು ಜೀವಿಗಳು ಬಲಶಾಲಿಯಾಗಿ ಕಂಡರೂ ಅತ್ಯಂತ ಸೂಕ್ಷ್ಮವಾಗಿರುತ್ತವೆ.

ಒಮ್ಮೆ ಚಲನಚಿತ್ರ ಚಿತ್ರೀಕರಣಕ್ಕೆಂದು ಮುದುಮಲೈ ಅರಣ್ಯಕ್ಕೆ ಎರಡು ಬಿಳಿಯ ಕುದುರೆಗಳು ಬಂದಿದ್ದವು. ಅವುಗಳನ್ನು ಗಮನಿಸಿದ ಜಿಂಕೆ, ಕಡವೆಗಳೆಲ್ಲ ದಿಕ್ಕಾಪಾಲಾಗಿ ಓಡಿದ್ದನ್ನು ನಾವು ಕಂಡಿದ್ದೇವೆ. ಬಹುಶಃ ಪೊದೆಗಳ ಮರೆಯಲ್ಲಿ ಕುಳಿತಿದ್ದ ಹುಲಿ ಸಹ ಅಂಜಿರಬಹುದು. ಭಗವಂತ ತನ್ನ ಪರಮಶೌರ್ಯವನ್ನು ಕುಂದಿಸಲು ದೇವಲೋಕದಿಂದ ಈ ಭಯಾನಕ ಪ್ರಾಣಿಗಳನ್ನು ಕಳಿಸಿರಬಹುದೆಂದು ಭಾವಿಸಿರಬಹುದು. ಇದು ಉತ್ಪ್ರೇಕ್ಷೆಯ ಕಲ್ಪನೆ ಎನಿಸಿದರೂ, ಅಪರಿಚಿತ ಜೀವಿಗಳನ್ನು ಕಂಡಾಗ ಕಾಡು ಬೆಚ್ಚುತ್ತದೆ.

9ನೇ ಪುಟಕ್ಕೆ...

ಹಕ್ಕಿಪಿಕ್ಕಿಗಳ ಹಕೀಕತ್ತು

ಮೈಸೂರಿನ ಪಕ್ಷಿರಾಜಪುರದಿಂದ ಸುಡಾನ್ ತರಹದ ದೇಶಕ್ಕೆ ಹಕ್ಕಿ-ಪಿಕ್ಕಿಗಳು ಹೋಗುವುದೀಗ ಸಹಜ ಎನ್ನುವಂತಾಗಿದೆ. ಹಸನಾದ ಬದುಕು ಕಟ್ಟಿಕೊಳ್ಳುವ ಕನಸು ಹೊತ್ತು ಹೋಗುವವರಲ್ಲಿ ಅನೇಕರು ಲುಕ್ಸಾನು ಮಾಡಿಕೊಂಡು ವಾಪಸ್ಸಾಗಿ, ಲೇವಾದೇವಿದಾರರತ್ತ ಕೈಚಾಚುವ ಪರಿಸ್ಥಿತಿ ಇದೆ.

ಸುಡಾನ್ ದೇಶಕ್ಕೆ ತೆರಳಿರುವ ತಮ್ಮ ಕುಟುಂಬದವರ ಬರುವಿಕೆಯ ನಿರೀಕ್ಷೆಯಲ್ಲಿರುವ ಕಾಶೀನಾಥ ಅವರ ಕುಟುಂಬ

ಕೆ.ಎಸ್.ಗಿರೀಶ

'ಒಂದು ಕಾಲದಲ್ಲಿ ನಾವು ಕಾಡಿಗೆ ರಾಜರಾಗಿದ್ದೆವು. ಪಕ್ಷಿಸಂಕುಲಕ್ಕೆಲ್ಲ ನಾವೇ ಒಡೆಯರು. ಆಗ ಸಿಕ್ಕಸಿಕ್ಕ ಪಕ್ಷಿಗಳನ್ನು ಮಾತ್ರವಲ್ಲ ಕಾಡುಪ್ರಾಣಿಗಳನ್ನು ಒಂದೇ ಏಟಿಗೆ ಹೊಡೆದುರುಳಿಸಿ ತಿಂದು ತೇಗುತ್ತಿದ್ದೆವು. ಅವುಗಳ ಚರ್ಮವನ್ನೇ ಉಟ್ಟುಕೊಂಡು ನೆಮ್ಮದಿಯ ಬದುಕು ಸಾಗಿಸುತ್ತಿದ್ದೆವು. ಆದರೆ, ಅರಣ್ಯ ರಕ್ಷಣೆಯ ಕಾನೂನುಗಳು ನಮ್ಮನ್ನು ಅಲೆಮಾರಿಯನ್ನಾಗಿಸಿತು. ಮನೆ ಮನೆಯ ಮುಂದೆ ಭಿಕ್ಷೆ ಬೇಡುವಂತಹ ದೈನೇಸಿ ಬದುಕನ್ನು ನೀಡಿತು' ಎಂದು ಇಲ್ಲಿನ ಬೀರಪ್ಪ ವಿಷಾದದ ಉಸಿರು ಹೊರಹಾಕುತ್ತಾ ನಿಂತರು.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಪಕ್ಷಿರಾಜಪುರ ಮತ್ತೊಮ್ಮೆ ಸುದ್ದಿಯಲ್ಲಿದೆ. ತುತ್ತಿನಚೀಲವನ್ನು ತುಂಬಿಸಿಕೊಳ್ಳಲು ಸುಡಾನ್ ದೇಶಕ್ಕೆ ಹೋದವರು ಅಲ್ಲಿ ಸಿಲುಕಿದ್ದು, ಸರ್ಕಾರ ರಕ್ಷಣೆಗೆ ಕ್ರಮ ತೆಗೆದುಕೊಳ್ಳುತ್ತಿದೆ. ಆದರೆ, ಈ ಹಕ್ಕಿಪಿಕ್ಕಿಗಳ ಅಲೆಮಾರಿ ಬದುಕಿನ ಸಿಕ್ಕುಗಳನ್ನು ಶಾಶ್ವತವಾಗಿ ಬಿಡಿಸಲು ಆಗುತ್ತಿಲ್ಲ. ವಿದೇಶಕ್ಕೆ ಹಾರಿದರೂ ಪಕ್ಷಿರಾಜಪುರದ ಹಕ್ಕಿಪಿಕ್ಕಿಗಳ ಬದುಕಿನ ಸ್ವರೂಪವಾಗಲಿ, ಅವರ ಬವಣೆಯಾಗಲಿ ಬದಲಾಗಿಲ್ಲ. ಈಗಲೂ ಲೇವಾದೇವಿಗಾರರ ಕಪಿಮುಷ್ಟಿಗೆ ಸಿಲುಕುವುದು ಇವರಿಗೆ ಅನಿವಾರ್ಯ.

ಹಕ್ಕಿಗಳ ಪಿಕ್ಕೆಗಳನ್ನು ಅರಸುತ್ತ ಕಾಡಿನಿಂದ ನಾಡಿಗೆ ಬಂದ ಈ ಹಕ್ಕಿಪಿಕ್ಕಿ ಸಮುದಾಯದವರನ್ನು ಒಪ್ಪಿಕೊಳ್ಳದೇ ಕಳ್ಳರೆಂದು ಭಾವಿಸಿ ಸಮಾಜ ದೂರ ಇಟ್ಟಿದ್ದೇ ಹೆಚ್ಚು. ಇದರಿಂದ ಇಂದಿಗೂ ಇವರದ್ದು ಅಲೆಮಾರಿ ಬದುಕೇ. ಹಿಂದೆ ಇಲ್ಲಿಯೇ ಒಂದೂರಿನಿಂದ ಮತ್ತೊಂದೂರಿಗೆ ಅಲೆದಾಡುತ್ತಿದ್ದವರು ಈಗ ದೇಶದಿಂದ ದೇಶಕ್ಕೆ ಅಲೆದಾಡುತ್ತಿದ್ದಾರೆನ್ನುವುದಷ್ಟೆ ಬದಲಾವಣೆ.

ಪಕ್ಷಿರಾಜಪುರದಲ್ಲಿ ಶ್ರೀಮಂತರಿಂದ ಬಡವರವರೆಗೆ ಎಲ್ಲರೂ ಇದ್ದಾರೆ. ಐಷಾರಾಮಿ ಬೈಕು-ಕಾರುಗಳೊಂದಿಗೆ ಇರುವವರು, ಏನೂ ಇಲ್ಲದೇ ತುತ್ತು ಅನ್ನಕ್ಕಾಗಿ ಪರಿತಪಿಸುವವರು ಎರಡೂ ಬಗೆಯವರು ಸಿಗುತ್ತಾರೆ. ಮಾಟ, ಮಂತ್ರಗಳಂತಹ ಮೂಢನಂಬಿಕೆ ಪೋಷಿಸುವವರಿಂದ ಹಿಡಿದು ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯಗಳಂತಹ ಆಧ್ಯಾತ್ಮಿಕ ಕೇಂದ್ರಗಳೂ ಇಲ್ಲಿವೆ.

1958ರಲ್ಲಿ ಗುಜರಾತ್‌ನಿಂದ ಊರೂರು ಅಲೆಯುತ್ತಾ ಬಂದ ಹಕ್ಕಿಪಿಕ್ಕಿಗಳು ಹುಣಸೂರು ತಾಲ್ಲೂಕಿನಲ್ಲಿ ಟೆಂಟ್ ಹಾಕಿಕೊಂಡಿದ್ದರು. ಬಿರುಗಾಳಿಯೊಂದು ಇವರು ಹಾಕಿಕೊಂಡಿದ್ದ ಟೆಂಟ್ ಹಾಗೂ ಅದರೊಳಗಿದ್ದ ಸಾಮಾನು ಸರಂಜಾಮುಗಳನ್ನೆಲ್ಲ ಕಿ.ಮೀಗಟ್ಟಲೆ ದೂರಕ್ಕೆ ತೆಗೆದುಕೊಂಡು ಹೋಯಿತು. ಬಟ್ಟೆಯೂ ಇಲ್ಲದೇ ನಿಂತ ಇವರ ಬದುಕನ್ನು ಆಗ ಕಂಡಿದ್ದ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದ ನಿಜಲಿಂಗಪ್ಪನವರ ಗಮನಕ್ಕೆ ತಂದರು. ಅವರಿಬ್ಬರ ಪರಿಶ್ರಮದ ಫಲವಾಗಿ ಅಂದು 40 ಕುಟುಂಬದವರಿಗೆ ಶಾಶ್ವತ ಸೂರನ್ನು ಕಲ್ಪಿಸಿಕೊಡಲಾಯಿತು. ಈಗ ಪಕ್ಷಿರಾಜಪುರಗಳ ಸಂಖ್ಯೆಯೇ ಮೂರಕ್ಕೇರಿದೆ. ಪಕ್ಕದಲ್ಲೇ ಇರುವ ಶಂಕರಪುರವೂ ಸೇರಿದಂತೆ ಹುಣಸೂರು ತಾಲ್ಲೂಕಿನಲ್ಲಿ 479 ಕುಟುಂಬಗಳು ಜೀವನ ಸಾಗಿಸುತ್ತಿವೆ.

ಇಂದಿಗೂ ಅರಸು, ನಿಜಲಿಂಗಪ್ಪ ಇವರಿಬ್ಬರ ಹೆಸರುಗಳೇ ಇಲ್ಲಿನ ಜನರ ಬಾಯಲ್ಲಿವೆಯೇ ಹೊರತು ಉಳಿದ್ಯಾವ ರಾಜಕಾರಣಿಗಳನ್ನೂ ನೆನೆಯುವುದಿಲ್ಲ.

'ದೇವರಾಜ ಅರಸು ಇಲ್ಲಿ ನೆಲೆಯೂರಲು ಅವಕಾಶ ನೀಡಿದರೂ ಇಲ್ಲಿನ ಜನರು ನಮ್ಮನ್ನು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ಕಳ್ಳರೆಂಬ ದೃಷ್ಟಿಯಿಂದಲೇ ನೋಡತೊಡಗಿದರು. ಕೆಲಸಕ್ಕೂ ಕರೆಯುತ್ತಿರಲಿಲ್ಲ. ಮದುವೆ ಮೊದಲಾದ ಸಮಾರಂಭಗಳು ನಡೆದಾಗ ಎಲ್ಲರೂ ತಿಂದು ಮುಗಿಸಿದ ಬಳಿಕ ಹೋಗಿ, ಅವರ ಎಲೆ ಎತ್ತೆಸೆದು ಉಳಿದುದನ್ನು ನಾವು ತಿನ್ನಬೇಕಿತ್ತು. ಹೋಟೆಲ್‌ಗಳಲ್ಲೂ ನಮಗೆಂದೇ ಪ್ರತ್ಯೇಕ ಲೋಟ, ತಟ್ಟೆಗಳನ್ನು ಇರಿಸಿದ್ದರು. ಇಂತಹ ಪರಿಸ್ಥಿತಿಯಲ್ಲಿ ನಮಗೆ ಅಲೆಮಾರಿ ಬದುಕು ಬಿಟ್ಟರೆ ಬೇರೇನೂ ದಾರಿ ಕಾಣಲಿಲ್ಲ' ಎಂದು ಸಮುದಾಯದ ಮುಖಂಡ ನಂಜುಂಡಸ್ವಾಮಿ ಅನುಭವ ಹಂಚಿಕೊಂಡರು.

ಸರ್ಕಾರದಿಂದ ಭೂಮಿ ಪಡೆದವರು ಕೃಷಿ ಮಾಡುವಷ್ಟು ಕಸುಬುದಾರರಾಗಿರಲಿಲ್ಲ. ಸುತ್ತಮುತ್ತಲಿನ ಲೇವಾದೇವಿದಾರರು ಭೂಮಿ ಒತ್ತೆ ಇಟ್ಟು ಹಣ ಪಡೆಯುವಂತೆ ಆಮಿಷ ಒಡ್ಡಿದರು. ಶಾಲೆಗಳಲ್ಲಿ ಹಕ್ಕಿಪಿಕ್ಕಿಗಳ ಮಕ್ಕಳನ್ನು ಬೇರೆ ಸಮುದಾಯದ ಮಕ್ಕಳು ಹತ್ತಿರವೂ ಬಿಟ್ಟುಕೊಳ್ಳಲಿಲ್ಲ. ಇದರಿಂದಾಗಿಯೇ ಕೆಲವರು ಓದನ್ನು ಅರ್ಧಕ್ಕೇ ಬಿಟ್ಟರು.

ಪಾರಂಪರಿಕವಾಗಿ ಬಂದಿದ್ದ ಔಷಧ ಗಿಡಮೂಲಿಕೆಗಳ ಮಾರಾಟವನ್ನೇ ತಮ್ಮ ಗೌರವಯುತ ಬದುಕಿಗೆ ಆಧಾರವೆಂದು ಆಯ್ಕೆ ಮಾಡಿಕೊಂಡರು. ದಾಸವಾಳದ ಹೂವು, ನೆಲನೆಲ್ಲಿ, ತುಳಸಿ ಸೇರಿ ಹಲವು ಬಗೆಯ ಬೇರು, ಎಲೆ, ಹೂವು, ಕಾಯಿ ಹೀಗೆ ಕಾಡಿನಲ್ಲಿ ಸಿಗುವ ಕಿರು ಉತ್ಪನ್ನಗಳನ್ನು ಹೆಕ್ಕಿ, ಮನೆಗಳಲ್ಲಿಯೇ ಕಟ್ಟಿಗೆ ಒಲೆಗಳನ್ನು ಬಳಸಿಕೊಂಡು ತಲೆಕೂದಲು ಬೆಳೆಯುವ ಎಣ್ಣೆ, ನೋವು ನಿವಾರಕ ಎಣ್ಣೆ ಮತ್ತು ಮಸಾಜ್ ಎಣ್ಣೆಗಳನ್ನು ತಯಾರಿಸಿದರು. ಅವನ್ನು ತಮಿಳುನಾಡು, ಕೇರಳಗಳಲ್ಲಿ ಮಾರಾಟ ಮಾಡುತ್ತಿದ್ದರು. ನಂತರ, ಕೆಲವರು ವಿದೇಶಕ್ಕೂ ಹೋಗಿ ಮಾರಾಟ ಮಾಡಿ ಬಂದು ಬೆರಗಾಗುವಂತಹ ಮನೆಗಳನ್ನು, ಬದುಕನ್ನು ಕಟ್ಟಿಕೊಂಡರು. ಇದಕ್ಕೆ ಮಾರುಹೋದ ಇಲ್ಲಿನ ಜನರು ಹಣ ಇಲ್ಲದಿದ್ದರೂ ಲೇವಾದೇವಿಗಾರರ ಬಳಿ ಹೆಚ್ಚಿನ ಬಡ್ಡಿಗೆ ಸಾಲ ಮಾಡಿ ವಿದೇಶಕ್ಕೆ ಹೋಗಲಾರಂಭಿಸಿದರು.

10ನೇ ಪುಟಕ್ಕೆ...

ನನೆಗುದಿಗೆ ಬಿದ್ದ ಯೋಜನೆ

ಬುಡಕಟ್ಟು ಸಮುದಾಯದವರ ಪಾರಂಪರಿಕ ವೈದ್ಯ ಪದ್ಧತಿಯನ್ನು ಉಳಿಸುವ ದೃಷ್ಟಿಯಿಂದ ಕೇಂದ್ರ ಬುಡಕಟ್ಟು ವ್ಯವಹಾರಗಳ ಇಲಾಖೆ ಇಲ್ಲಿ ಒಂದು ಔಷಧ ಸಂಸ್ಕರಣಾ ಘಟಕ ಸ್ಥಾಪನೆಗೆ ಯೋಜನೆ ರೂಪಿಸಿತ್ತು. ಆದರೆ, ಅದು ಇನ್ನೂ ಜಾರಿಯಾಗದೇ ನನೆಗುದಿಗೆ ಬಿದ್ದಿದೆ. ಆಯುಷ್ ಇಲಾಖೆ ಹಾಗೂ ಉಪ ಔಷಧ ನಿಯಂತ್ರಕರ ಕಚೇರಿ ಸಹಯೋಗದಲ್ಲಿ ಔಷಧ ಗುಣವುಳ್ಳ ವಿವಿಧ ಬಗೆಯ ಎಣ್ಣೆಗಳ ತಯಾರಿಕೆ ಮತ್ತು ಸಂಸ್ಕರಣಾ ಘಟಕ ಸ್ಥಾಪಿಸುವ ಯೋಜನೆ ಒಂದು ವೇಳೆ ಕಾರ್ಯಗತವಾದರೆ, ಇವರ ಎಣ್ಣೆಗಳಿಗೆ ಪ್ರತ್ಯೇಕ ಬ್ರಾಂಡ್‌ವೊಂದು ಸೃಷ್ಟಿಯಾಗಿ, ವಿಶ್ವಾಸಾರ್ಹತೆ ವೃದ್ಧಿಸಿ, ವಿದೇಶದಿಂದಲೇ ಇಲ್ಲಿಗೆ ಎಣ್ಣೆ ಹುಡುಕಿಕೊಂಡು ಬರುವಂತಾಗಬಹುದು ಎಂಬ ನಿರೀಕ್ಷೆ ಇವರಲ್ಲಿದೆ. ಆಗಲಾದರೂ ಅಲೆಮಾರಿ ಬದುಕು ಕೊನೆಯಾಗಬಹುದು ಎಂಬ ಲೆಕ್ಕಾಚಾರ ಇವರದು.

ಇಗೋ... ಇ-ಗೋ ಮಾರಾಟ

ದೇಶದ 140 ಕೋಟಿ ಜನಸಂಖ್ಯೆಗೆ ಹಾಲುಣಿಸಿದರೂ ವಿದೇಶಕ್ಕೆ ರಫ್ತು ಮಾಡುವಷ್ಟು ಭಾರತದ ಹೈನು ಉದ್ಯಮ ಬೆಳೆದು ನಿಂತಿದೆ. ಕೇವಲ ರೈತರಿಗಷ್ಟೇ ಸೀಮಿತ ಎಂದು ನಂಬಿದ್ದ ಈ ಕ್ಷೇತ್ರದಲ್ಲಿ ಈಗ ಟೆಕ್ಕಿಗಳು, ಉದ್ಯಮಿಗಳೂ ಕಾಲಿಡುತ್ತಿರುವುದರಿಂದ ಇಡೀ ಕ್ಷೇತ್ರಕ್ಕೆ ಹೈಟೆಕ್ ಸ್ಪರ್ಶ ದೊರೆತಿದೆ.

ಇ.ಎಸ್.ಸುಧೀಂದ್ರ ಪ್ರಸಾದ್

ಹಸು ಎಂದಿಗೂ ಅಮೃತವನ್ನೇ ನೀಡಲಿದೆ ಎಂದು ನಂಬಿರುವ ನೆಲವಿದು. ಆದರೆ ಆ ಹಾಲಿನಲ್ಲಿ ಎ1, ಎ2, ಎ3, ಬಿ ಮತ್ತು ಸಿ ಎಂಬ ಬಗೆಗಳಿವೆ. ಅವುಗಳಲ್ಲಿ ಏಷ್ಯಾ ತಳಿಯನ್ನು ಹೊರತುಪಡಿಸಿ ಇತರ ಖಂಡಗಳ ತಳಿಗಳ ಹಾಲಿನಲ್ಲಿ ಬಿಟಾ ಕ್ಯಾಸೀನ್ ಎಂಬ ಕ್ಯಾನ್ಸರ್‌ಕಾರಕ ಪ್ರೊಟೀನ್ ಇರುತ್ತದೆ. ಭಾರತ ಹಾಗೂ ಇತರ ಏಷ್ಯಾ ಖಂಡದ ಹಸುಗಳು ಆರೋಗ್ಯವಂತ ಎ2 ಹಾಲನ್ನೇ ಕೊಡುತ್ತವೆ. ಈ ಅಂಶವನ್ನು 'ಡೆವಿಲ್ಸ್ ಇನ್ ದಿ ಮಿಲ್ಕ್: ಇಲ್‌ನೆಸ್, ಹೆಲ್ತ್ ಅಂಡ್ ಪಾಲಿಟಿಕ್ಸ್- ಎ1 ಅಂಡ್ ಎ2 ಮಿಲ್ಕ್' ಪುಸ್ತಕದಲ್ಲಿ ಲೇಖಕ ಕೀತ್ ವುಡ್‌ಫೋರ್ಡ್ ದಾಖಲಿಸಿದ್ದು, ದೇಶದ ರಾಸುಗಳ ಮಾರಾಟದ ದಿಸೆಯನ್ನೇ ಬದಲಿಸಿತು.

ಭಾರತದಲ್ಲೂ ಸಂಚಲನ ಮೂಡಿಸಿದ ಎ1 ಮತ್ತು ಎ2 ಹಾಲಿನ ಸುದ್ದಿಯಿಂದಾಗಿ ಬಹುತೇಕ ಡೇರಿ ಆಸಕ್ತರು ಗುಜರಾತ್‌ನತ್ತ ಮುಖ ಮಾಡಿದರು. ₹25 ಸಾವಿರಕ್ಕೆ ಲಭ್ಯವಿದ್ದ ಗೀರ್ ಹಸುವಿನ ಬೆಲೆ ಒಮ್ಮೆಲೆ ಲಕ್ಷ ದಾಟಿತು. ಲೀಟರ್‌ಗೆ ₹25 ರಿಂದ ₹30ಕ್ಕೆ ಇದ್ದ ಹಾಲಿನ ದರ ಒಮ್ಮಿಂದೊಮ್ಮೆಲೆ ₹100ಕ್ಕೆ ನೆಗೆಯಿತು. ಗುಜರಾತ್ ಗೀರ್ ಮಾರಾಟಕ್ಕೆ ಸುಂಕ ವಿಧಿಸಿತು. ತಳಿ ಅಭಿವೃದ್ಧಿ ಮಾಡುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿ ಗುಜರಾತ್‌ಗೆ ಹೇರಳ ಆದಾಯ ತಂದುಕೊಟ್ಟಿತು. ಆದರೆ ಅಷ್ಟೇ ಶ್ರೇಷ್ಠವಾದ ಕರ್ನಾಟಕದ ಮಲೆನಾಡು ಗಿಡ್ಡಕ್ಕೆ ಈ ಭಾಗ್ಯ ಸಿಗಲಿಲ್ಲ.

ರೈತ ದೇಶದ ಬೆನ್ನೆಲುಬಾದರೆ, ಜಾನುವಾರು ರೈತನ ಬೆನ್ನೆಲುಬು. ಬರಗಾಲ, ಅನಿಯಮಿತ ಮಳೆ, ಸೋಂಕು ಇತ್ಯಾದಿಯಿಂದ ಕಂಗೆಟ್ಟಿರುವ ರೈತರು ಜಾನುವಾರಿನಿಂದ ವಿಮುಖರಾಗುತ್ತಿದ್ದರೆ, ಹೈಟೆಕ್ ಡೇರಿ ಆರಂಭಿಸುವ ತರುಣ, ತರುಣಿಯರು ಆಧುನಿಕ ಮಾರ್ಗದಲ್ಲಿ ಸಾಗುತ್ತಿರುವುದು ಸೋಜಿಗ. ಇವರಿಗೆ ನೆರವಾಗುತ್ತಿರುವುದು ಜಾನುವಾರುಗಳು, ಹೈನು ಮಾರಾಟದ ಆ್ಯಪ್ ಹಾಗೂ ಅಂತರ್ಜಾಲ ತಾಣಗಳು.

ಹಿಂದೆ ಜಾನುವಾರು ಖರೀದಿಗೆ ವಾರದ ನಿರ್ದಿಷ್ಟ ದಿನ ದೂರದ ಸಂತೆಗೆ ಹೋಗಬೇಕಿತ್ತು. ಮಧ್ಯವರ್ತಿಯನ್ನು ಸಂಪರ್ಕಿಸಿ ಜಾನುವಾರು ಮಾರಾಟ ನಡೆಸಬೇಕಾಗಿತ್ತು. ಖರೀದಿಸುವ ಹಸುವಿನ ಹಲ್ಲು ಎಣಿಸಿ, ಕೆಚ್ಚಲು ಪರಿಶೀಲಿಸಿ ಒಪ್ಪಿದ ಮೇಲೆ, ಮಧ್ಯವರ್ತಿಗಳು ಪರಸ್ಪರ ಕೈ ಹಿಡಿದು, ಅದರ ಮೇಲೊಂದು ವಸ್ತ್ರ ಹಾಕಿ, ಸಂಕೇತದಲ್ಲೇ ಬೆಲೆ ನಿರ್ಧರಿಸುತ್ತಿದ್ದರು. ಇದು ಯಾವುದೂ ಖರೀದಿದಾರ ಹಾಗೂ ಮಾರಾಟಗಾರನಿಗೆ ತಿಳಿಯುತ್ತಲೇ ಇರುತ್ತಿರಲಿಲ್ಲ. ಗುಟ್ಟಾಗಿ ಬೆಲೆ ನಿಗದಿಯಾದ ನಂತರ, ಮಧ್ಯವರ್ತಿಗಳು ತಮ್ಮ ಜೇಬು ತುಂಬಿಸಿಕೊಳ್ಳುತ್ತಿದ್ದರು. ಆದರೆ ಈಗ ಎಲ್ಲವೂ ಖುಲ್ಲಂಖುಲ್ಲಾ ಎಂದೆನ್ನುತ್ತಿವೆ ರಾಸು ಮಾರಾಟ ಆ್ಯಪ್‌ಗಳು.

ಹಾಗೆಂದಮಾತ್ರಕ್ಕೆ ಇಲ್ಲಿ ಎಲ್ಲವೂ ಹಾಲಿನಂತೆಯೇ ಶುದ್ಧ ಎನ್ನುವಂತಿಲ್ಲ. ಯಾಮಾರಿದರೆ ಹಣದೊಂದಿಗೆ ವೈಯಕ್ತಿಕ ಮಾಹಿತಿ ಕಳವಾದರೂ ಆಶ್ಚರ್ಯಪಡಬೇಕಾಗಿಲ್ಲ. ಹೀಗೆ ಬಾಗಲಕೋಟೆಯ ಕರ್ಲಕೊಪ್ಪದಲ್ಲಿ ಕುಳಿತು ಪಂಜಾಬ್ ನವಾನ್‌ಶಹರ್ ಜಿಲ್ಲೆಯಲ್ಲಿ ಬೆಳೆದ ಮುರ್ರಾ ಎಮ್ಮೆಯನ್ನೋ ಅಥವಾ ಗುಜರಾತ್‌ನ ಗೀರ್ ಹಸುವನ್ನೋ ನೋಡಲು ಹಾಗೂ ಖರೀದಿಸಲು ಸಾಧ್ಯವಾಗಿಸಿದ ಬಹಳಷ್ಟು ಆ್ಯಪ್‌ಗಳು ಈಗ ಸದ್ದು ಮಾಡುತ್ತಿವೆ. ಅದರಲ್ಲೂ ಇತ್ತೀಚೆಗೆ ದೆಹಲಿ ಐಐಟಿಯ ಇಬ್ಬರು ಯುವತಿಯರು ಬೆಂಗಳೂರಿನಲ್ಲಿ ಆರಂಭಿಸಿದ animall.in ಎಂಬ ಅಂತರ್ಜಾಲ ತಾಣದ ಜನಪ್ರಿಯತೆ ಮೂಲಕ ಮೂಲಕ ಇಂಥ ಆ್ಯಪ್‌ಗಳು ವ್ಯಾಪಕ ಪ್ರಚಾರ ಪಡೆದವು.

ಅವುಗಳಲ್ಲಿ ಪಶುಶಾಲಾ (https://www.pashushala.com), ಪಶುಲೋಕ್ (https://www.pashulok.com/) ಗಮನಸೆಳೆಯುತ್ತಿವೆ. ಅವಲ್ಲದೆ ಪಶು ಮಾಲ್ (Pashu mall), ಪಶು ಮೇಳ (Pashu Mela), ಪಶು ವ್ಯಾಪಾರ್ (Pashu Vyapar) ಹಾಗೂ ಸರ್ಕಾರದ ಇ-ಗೋಪಾಲ (e-gopala) ಆ್ಯಪ್‌ಗಳು ರೈತರ ಮಟ್ಟದಲ್ಲೂ ಈಗ ಸದ್ದು ಮಾಡುತ್ತಿವೆ. ಹರಿಯಾಣ, ಉತ್ತರ ಪ್ರದೇಶ, ರಾಜಸ್ಥಾನ, ಗುಜರಾತ್‌ನಲ್ಲಿ ಹೆಚ್ಚು ಪ್ರಚಲಿತದಲ್ಲಿದ್ದ ಈ ಆ್ಯಪ್‌ಗಳು ಕೋವಿಡ್-19 ಹಾಗೂ ಲಾಕ್‌ಡೌನ್ ನಂತರದಲ್ಲಿ ಲಕ್ಷಕ್ಕೂ ಮೀರಿ ಡೌನ್‌ಲೋಡ್ ಕಂಡಿವೆ.

ನೀತು ಯಾದವ್ ಹಾಗೂ ಕೀರ್ತಿ ಜಾಂಗ್ರಾ ಆರಂಭಿಸಿದ ಅನಿಮಾಲ್ ಆ್ಯಪ್ ಉತ್ತರ ಭಾರತದ ಮೂರು ರಾಜ್ಯಗಳಲ್ಲಿ 40 ಲಕ್ಷ ಬಳಕೆದಾರರನ್ನು ಹೊಂದಿದೆ. 2019ರಲ್ಲಿ ಆರಂಭಗೊಂಡ ಆ್ಯಪ್ ಇದು. ಆರಂಭವಾದ 30 ದಿನಗಳಲ್ಲಿ ಅದರ ಮೂಲಕ 50 ರಾಸುಗಳಿಗೂ ಅಧಿಕ ಮಾರಾಟವಾಗಿದೆ. 2023ರಲ್ಲಿ ಇದು 5ಲಕ್ಷಕ್ಕೆ ಏರಿಕೆಯಾಗಿದೆ ಎಂದು ವರದಿಯಾಗಿರುವುದು ಈ ಕ್ಷೇತ್ರದಲ್ಲಿ ಅಚ್ಚರಿ ಮೂಡಿಸಿದೆ. ಈಗಾಗಲೇ ಹಲವು ಆ್ಯಪ್‌ಗಳು ಉತ್ತಮ ಮಾರಾಟ ದಾಖಲೆಯನ್ನೂ ಹೊಂದಿವೆ. ಗೂಗಲ್ ಪ್ಲೇಸ್ಟೋರ್‌ನಲ್ಲಿ ಅನಿಮಾಲ್ ಆ್ಯಪ್ ಐದು ಲಕ್ಷಕ್ಕೂ ಅಧಿಕ ಡೌನ್‌ಲೋಡ್ ಕಂಡಿದೆ. ಮೂಫಾರ್ಮ್ ಹತ್ತು ಲಕ್ಷ, ಪಶುಶಾಲಾ ಒಂದು ಲಕ್ಷ, ಪಶುಮೇಳ, ಪಶುಮಾಲ್ ಇತ್ಯಾದಿಗಳ ಡೌನ್‌ಲೋಡ್ ಸಂಖ್ಯೆ 50 ಸಾವಿರಕ್ಕಿಂತ ಹೆಚ್ಚು. ಸರ್ಕಾರದ ಇ-ಗೋಪಾಲಾ ಆ್ಯಪ್ ಕೂಡ ಒಂದು ಲಕ್ಷ ಡೌನ್‌ಲೋಡ್ ಆಗಿದೆ.

ಹೈಟೆಕ್ ಉದ್ಯಮದ ರೂಪುರೇಷೆ: ಆನ್‌ಲೈನ್‌ನಲ್ಲಿ ಸಂತೆಯಂತೆ ರಾಸುಗಳ ಹಲ್ಲು ಮತ್ತು ಕೆಚ್ಚಲು ಮಾತ್ರವಲ್ಲ, ಅದರ ತಂದೆ, ತಾಯಿ, ಅಜ್ಜ ಹಾಗೂ ಅಜ್ಜಿಯರ 'ಜಾತಕ'ವೂ ಲಭ್ಯ. ದರ ನಿಗದಿಗೆ ಚಾಟ್ ಸೌಕರ್ಯವೂ ಇದೆ. ಕೇವಲ ರಾಸುಗಳೇ ಅಲ್ಲದೆ, ಅಂಡಾಣು, ವೀರ್ಯ, ಭ್ರೂಣ, ಹೆಣ್ಣುಕರುಗಳನ್ನೇ ನೀಡಬಲ್ಲ ವೀರ್ಯ, ರಾಸುಗಳ ಆಹಾರ, ಲಸಿಕೆ, ಇತರ ಪರಿಕರ ಎಲ್ಲವೂ ಕುಳಿತಲ್ಲೇ ಖರೀದಿಸುವಂತೆ ವಿನ್ಯಾಸಗೊಳಿಸಿರುವುದು ರೈತರಿಗೆ ಕುಳಿತಲ್ಲೇ ರಾಸುಗಳ ಮಾಲ್ ಒಳಗೆ ಒಂದು ಸುತ್ತು ಹಾಕಿಬರುವಂತೆ ಮಾಡಿದೆ.

ಐಐಎಂ ರಾಂಚಿಯ ಗೌರವ್ ಚೌಧರಿ ಅವರ ಪಶುಶಾಲಾ 2018ರಲ್ಲಿ ಆರಂಭಗೊಂಡಿತು. ಹೆಚ್ಚಾಗಿ ಉತ್ತರ ಭಾರತದ ರಾಜ್ಯಗಳನ್ನೇ ಕೇಂದ್ರೀಕರಿಸಿರುವ ಈ ಡಿಜಿಟಲ್ ವೇದಿಕೆಯ ಹಿಂದೆ ಜಾನುವಾರುಗಳನ್ನು ಎಂದೂ ಸಾಕದ ಟೆಕ್ಕಿಗಳೇ ಇದ್ದಾರೆ.

9ನೇ ಪುಟಕ್ಕೆ...



ಬುದ್ಧ-ನಮ್ಮೊಳಗೇ ಇರುವ ಬೆಳಕು

ಎಸ್. ನಟರಾಜ ಬೂದಾಳು

'ನಿನಗೆ ನೀನೇ ಬೆಳಕು'-ಇದು ಬುದ್ಧನ ಕೊನೆಯ ನುಡಿ. ಬುದ್ಧದರ್ಶನ ಹೊರಗಿನಿಂದ ತಿಳಿದುಕೊಳ್ಳಬೇಕಾದದ್ದಲ್ಲ; ಬದಲಿಗೆ ತನ್ನೊಳಗೇ ಇರುವುದನ್ನು ಕಂಡುಕೊಳ್ಳುವ ಸಂಗತಿ. ಹಾಗಾಗಿ ಬುದ್ಧನಾಗುವ ಸಾಧ್ಯತೆ ಎಲ್ಲರಿಗೂ ಇದೆ. ಇಡೀ ಜಗತ್ತು ಈ ಹೊತ್ತು ತಲ್ಲಣಿಸುತ್ತಿದೆ. ಧರ್ಮದ, ಜಾತಿಯ, ಭಾಷೆಯ, ದೇಶಗಳ, ಜನಾಂಗಗಳ, ಮನುಷ್ಯರ ಬಣ್ಣದ ಗಂಡು-ಹೆಣ್ಣಿನ ನಡುವಿನ ತಾರತಮ್ಯದ ಗೆರೆಗಳು ಮತ್ತು ನಿಸರ್ಗ ವಿರೋಧಿಯಾದ ಪೊಳ್ಳು ತತ್ವಜ್ಞಾನಗಳು ಇವತ್ತಿನ ಬಹುಪಾಲು ಸಂಕಟಗಳಿಗೆ ಕಾರಣವಾಗಿವೆ. ಇವುಗಳಿಗೆ ಪರಿಹಾರ ಹುಡುಕಿಕೊಡುವುದೇ ಬುದ್ಧನ ಗುರಿಯಾಗಿತ್ತು.

ಬೌದ್ಧ ತಾತ್ವಿಕತೆಯು ಕೇವಲ ಕೇಳಿಸಿಕೊಳ್ಳುವ, ತಾತ್ವಿಕತೆಯಲ್ಲ; ಬದುಕುವ ಬಾಳು. ಅದು ಪ್ರಪಂಚದ ಈ ಹೊತ್ತಿನ ರೋಗಕ್ಕೆ ಮದ್ದು ದೊರಕುವ ಆಸ್ಪತ್ರೆ. ಬುದ್ಧ ಗುರುತತ್ವ ವೈದ್ಯನಾಗಿರುವುದರಿಂದ ಅವನ ಬಳಿ ದುಃಖಕ್ಕೆ ಈಡಾದ ಯಾವ ಮನುಷ್ಯನೂ ಹೋಗಬಹುದು. ಅದನ್ನು ಒಂದು ಧರ್ಮ ಎನ್ನುವುದಕ್ಕಿಂತ ಅದೊಂದು ರೋಗ ಪರಿಹಾರ ಎನ್ನುವುದೇ ಸೂಕ್ತವಾದದ್ದು. ಹಾಗಾಗಿ ಅದನ್ನು ತಿಳಿದುಕೊಳ್ಳುವುದು ಎಂದರೆ: ಸರಿ ಇಲ್ಲದಿರುವುದನ್ನು ಸರಿಪಡಿಸಿಕೊಂಡು ಬಾಳುವುದು.

ಕಳ್ಳತನ ಮಾಡಬೇಡಿ, ಸುಳ್ಳು ಹೇಳಬೇಡಿ, ಹಾದರ ಮಾಡಬೇಡಿ, ಮದ್ಯ ಕುಡಿಯಬೇಡಿ, ಇತ್ಯಾದಿ ವಿಧಿ-ನಿಷೇಧಗಳ ಪಟ್ಟಿ ಎಲ್ಲ ಧರ್ಮಗಳಲ್ಲಿಯೂ ಇದೆ. ಬೌದ್ಧದರ್ಶನದಲ್ಲಿಯೂ ಇದೆ. ಹಾಗಾದರೆ ಬೌದ್ಧ ಧರ್ಮದ ವಿಶೇಷ ಏನು? ಈ ಪ್ರಶ್ನೆಗಳಿಗೆ ಬೌದ್ಧ ದರ್ಶನದಲ್ಲಿ ಸ್ಪಷ್ಟ ಮತ್ತು ಖಚಿತವಾದ ಉತ್ತರಗಳಿವೆ. ನಮ್ಮ ಈವರೆಗಿನ ಲೋಕಗ್ರಹಿಕೆಯ ಕ್ರಮವನ್ನು ಕೈಬಿಡದ ಹೊರತು ಬೌದ್ಧ ತಾತ್ವಿಕತೆಯನ್ನು ಕೇವಲ ಕೇಳಿಸಿಕೊಂಡರೆ ಏನೂ ಪ್ರಯೋಜನವಿಲ್ಲ.

ಬೌದ್ಧ ದರ್ಶನದ ನಿಲುವುಗಳು ಇವು

ಅಕಾಲ್ಪನಿಕತೆ ಬುದ್ಧ ಗುರು ಮುಂದಿಟ್ಟ ಬಹು ಮುಖ್ಯ ನಿಲುವು. ನಮ್ಮ ಅನುಭವಕ್ಕೆ ಬರದ ಭ್ರಮೆ, ಕಲ್ಪನೆ, ಊಹೆ, ಕಾಲ್ಪನಿಕ ನಂಬಿಕೆಗಳು ಅದೆಷ್ಟೇ ಪ್ರಾಚೀನವಾದರೂ, ಕೋಟ್ಯಂತರ ಜನ ನಂಬಿ ಬದುಕುತ್ತಿದ್ದರೂ, ಸುತ್ತಲಿನ ಸಂಸ್ಥೆಗಳು ಹೇಳುತ್ತಿದ್ದರೂ ಅವುಗಳನ್ನು ನಿಜವೆಂದು ಒಪ್ಪಿಕೊಳ್ಳಬೇಡಿ. ಏಕೆಂದರೆ ಇವೇ ಈಗ ನಮ್ಮ ಬದುಕನ್ನು ನಿಯಂತ್ರಿಸುತ್ತಿವೆ. ಕಾಲ್ಪನಿಕ ಸಂಗತಿಗಳ ದೊಡ್ಡ ಪಟ್ಟಿ ಇದೆ. ಬ್ರಹ್ಮವಾದ, ಆತ್ಮವಾದ, ಜಾತಿವಾದ, ಲಿಂಗ ತಾರತಮ್ಯವಾದ, ಜನಾಂಗೀಯವಾದ ಅಸ್ಪೃಶ್ಯತೆ ಮುಂತಾದುವುಗಳೆಲ್ಲವೂ ಭಾಷೆಯಲ್ಲಿ ಕಟ್ಟಿದ ಭ್ರಮಾತ್ಮಕ ಸಂಗತಿಗಳು. ಆದರೆ ಘೋರವಾದ ಪರಿಣಾಮಗಳನ್ನು ಉಂಟುಮಾಡುತ್ತಿವೆ. ಬುದ್ಧ ಇಂಥವುಗಳನ್ನು ಇಲ್ಲದ ಮೊಲದ ಕೊಂಬಿನ ಬಗೆಗಿನ ಚರ್ಚೆ ಎನ್ನುತ್ತಾನೆ. ಇತರ ಧರ್ಮಗಳು ಏನನ್ನಾದರೂ ಹೇಳಲಿ, ಪಾಲಿಸುವವರು ಪಾಲಿಸಲಿ. ಅದು ಅವರ ಸ್ವಾತಂತ್ರ್ಯ. ಆದರೆ ನಿಸರ್ಗ ವಿವೇಕ ಯಾವ ಸಂಗತಿಗಳನ್ನು ಒಪ್ಪಿಕೊಳ್ಳುತ್ತದೆಯೋ ಅವುಗಳನ್ನು ಮಾತ್ರ ಒಪ್ಪಿ ಪಾಲಿಸಿ ಎನ್ನುವುದು ಬೌದ್ಧ ತಾತ್ವಿಕತೆಯ ನಿಲುವು.

ತ್ರಿಲಕ್ಷಣಗಳು: ಅನಿತ್ಯ, ಅನಾತ್ಮ ಮತ್ತು ದುಃಖ-ಇವು ಲೋಕದ ನಿಜ ಲಕ್ಷಣಗಳು. ಎಲ್ಲವೂ ಸದಾ ಬದಲಾಗುತ್ತಲೇ ಹೋಗುತ್ತವೆ; ಯಾವುದರಲ್ಲಿಯೂ ಅದರದ್ದೇ ಆದ ಸ್ವಂತದ್ದು ಎನ್ನುವುದು ಇರುವುದಿಲ್ಲ; ಮತ್ತು ಲೋಕ ಸದಾ ತಲ್ಲಣಿಸುತ್ತಿರುತ್ತದೆ, ಸ್ಥಿರವಾಗಿರುವುದಿಲ್ಲ. ಇದನ್ನು ಬುದ್ಧ ತಿಳಿಸಿಕೊಟ್ಟಿದ್ದಾನೆ.

ಸಾಮರಸ್ಯ-ಲೋಕದ ನಡೆ ಲೋಕವೆನ್ನುವುದು ಹರಿಯುತ್ತಿರುವ ಪ್ರವಾಹ. ಇಲ್ಲಿ ಯಾರಿಗೂ, ಯಾವುದಕ್ಕೂ ಸ್ವತಂತ್ರ ಅಸ್ತಿತ್ವವಿಲ್ಲ. ಎಲ್ಲ ಮತ್ತೊಂದನ್ನು ಅವಲಂಬಿಸಿಯೇ ಇರಬೇಕು. ಎಲ್ಲವೂ ಎಲ್ಲರಿಂದ ಮತ್ತು ಎಲ್ಲರಿಗಾಗಿ ಇದೆ. ಇಲ್ಲಿ ಯಾರನ್ನೂ ಯಾವುದನ್ನೂ ಇಲ್ಲವಾಗಿಸಿ ಬಾಳಲಾಗದು. ಎಲ್ಲವೂ ಮತ್ತೊಂದರ ಸಂಬಂಧದಲ್ಲಿ ಮಾತ್ರ ಉಂಟಾಗಬಲ್ಲದು. ಹಾಗಾಗಿ ಎಲ್ಲದರ ನಡುವೆ ಸಾಮರಸ್ಯವೊಂದೇ ಅನಿವಾರ್ಯ ದಾರಿ. ಮತ್ಯಾವುದಕ್ಕೋ ಕೆಡುಕು ಮಾಡಿ ತನಗೆ ಒಳಿತು ಮಾಡಿಕೊಳ್ಳುವುದು ಸಾಧ್ಯವಿಲ್ಲ. ಇದಕ್ಕೆ ವ್ಯತಿರಿಕ್ತವಾದ ನಡೆಯೇ ನಮ್ಮ ನಡುವಿನ ಸಂಘರ್ಷಕ್ಕೆ ಕಾರಣವಾಗಿದೆ. ಹಾಗಾಗಿ ಪ್ರಜಾಪ್ರಭುತ್ವ, ವಿಜ್ಞಾನ ಮತ್ತು ಬೌದ್ಧ ತಾತ್ವಿಕತೆಯ ನಡುವೆ ಸಮಾನತೆ ಇದೆ. ಈ ಪ್ರತೀತ್ಯ ಸಮುತ್ಪಾದ ತತ್ವವು ಲೋಕವನ್ನು ಸರಿಯಾಗಿ ವಿವರಿಸಿಕೊಡುವ ವೈಜ್ಞಾನಿಕ ತಿಳಿವಳಿಕೆಯಾಗಿದೆ.

ಪ್ರಮಾಣ ನಿರಾಕರಣೆ: 'ಯಾವುದನ್ನೂ ಪ್ರಶ್ನಿಸದೆ ಒಪ್ಪಿಕೊಳ್ಳಬೇಡಿ; ನನ್ನ ಮಾತನ್ನು ಕೂಡ' ಎನ್ನುವುದು ಬುದ್ಧನ ನಿಲುವು. 'ಪರಂಪರೆಯ ಆಚರಣೆಯಲ್ಲಿದೆ, ಧಾರ್ಮಿಕ ಗ್ರಂಥಗಳಲ್ಲಿದೆ, ತಾರ್ಕಿಕವಾಗಿ ಸರಿಯಿದೆ, ಇಂಥವರು ಹೇಳಿದ್ದಾರೆ ಅಥವಾ ಹೇಳಿಲ್ಲ, ಹೇಳುತ್ತಿರುವವರು ನಂಬಿಕೆಗೆ ಅರ್ಹರು/ ಅರ್ಹರಲ್ಲ, ಹೇಳುತ್ತಿರುವವರು ಗುರುಗಳು ಅಥವಾ ಗುರುಗಳಲ್ಲ ಎಂಬ ಕಾರಣಗಳಿಗಾಗಿ ಯಾವುದನ್ನೂ ಒಪ್ಪಿಕೊಳ್ಳಬೇಡಿ ಅಥವಾ ತಿರಸ್ಕರಿಸಬೇಡಿ. ಬದಲಿಗೆ ಸ್ವತಃ ವಿವೇಚಿಸಿ ನೋಡಿದಾಗ ಯಾವ ಸಂಗತಿಗಳು ಲೋಕಕ್ಕೆ ಕೇಡುಂಟುಮಾಡುತ್ತವೆಯೋ, ಅಂಥವುಗಳಿಂದ ದೂರವಿರಿ'. ತಮ್ಮನ್ನು ಪ್ರಶ್ನಿಸುವುದನ್ನು ಒಪ್ಪದ ಕೆಲವೇ ಪ್ರಮಾಣ ಗ್ರಂಥಗಳು ಲೋಕದ ಬಹುಪಾಲು ಸಂಕಟಕ್ಕೆ ಕಾರಣವಾಗಿವೆ ಎನ್ನುವುದು ಕಣ್ಣೆದುರಿನ ಸತ್ಯವಾಗಿದೆ.

ಕರುಣಾ ಮೈತ್ರಿ

ಲೋಕದ ಜೊತೆಗೆ ಕರುಣೆ ಮತ್ತು ಮೈತ್ರಿಯಿಂದ ಬಾಳಬೇಕು ಎನ್ನುವುದು ಕೇವಲ ಭಾವನಾತ್ಮಕ ತೀರ್ಮಾನವಲ್ಲ. ಅದೊಂದು ಅನಿವಾರ್ಯ ನಡೆ. ಎಲ್ಲರೂ ಎಲ್ಲವನ್ನೂ ಬಾಳಿಸಲು ಬೇಕಾದ ನಿಲುವು. ಮತ್ತೂ ವಿಶೇಷವೆಂದರೆ ಎಲ್ಲರಿಗೂ ಬದುಕುವ ಹಕ್ಕಿರುವ ಪ್ರಜಾಸತ್ತೆಯನ್ನು ಪಾಲಿಸಿದಾಗ ಲೋಕದೊಡನೆ ಉಂಟಾಗುವ ಸಂಬಂಧವೇ ಕರುಣಾ ಮೈತ್ರಿ. ಇದು ಬೌದ್ಧ ದರ್ಶನದ ನಿಲುವು ಮತ್ತು ನಿಸರ್ಗದ ದಾರಿ. ಅದರ ಭಾಗವಾಗಿರುವ ನಮಗೂ ಇರುವ ದಾರಿ. ಬೇರೆ ದಾರಿ ಹಿಡಿದಾಗಲೇ ಎಲ್ಲರಿಗೂ ಸಂಕಟ.

ನಮ್ಮ ಬದುಕಿನಲ್ಲಿ ನೆಲೆಗೊಂಡಿರುವ ಕೇಡುಗಳನ್ನು ನಿವಾರಿಸಿಕೊಳ್ಳದೆ ಉಳಿಗಾಲವಿಲ್ಲ. ಇದನ್ನು ಅರಿವಿಗೆ ತಂದುಕೊಡುವ ಕೆಲಸವನ್ನು ಅನೇಕ ಚಿಂತನಾಪ್ರಸ್ಥಾನಗಳು ಮಾಡಿವೆ, ಮಾಡುತ್ತಿವೆ. ಅವುಗಳಲ್ಲಿ ಬೌದ್ಧ ಧರ್ಮ, ವಿಜ್ಞಾನ ಮತ್ತು ಪ್ರಜಾಪ್ರಭುತ್ವ ಮುಖ್ಯವಾದವುಗಳು. ಅದು ನಿಸರ್ಗಸಹಜವಾಗಿ ಬದುಕುವ ಕ್ರಮ.ಅದನ್ನು ವಿದ್ವಾಂಸರಿಂದಲೇ, ಪುಸ್ತಕಗಳಿಂದಲೇ ತಿಳಿಯಬೇಕಿಲ್ಲ. ಯಾರಿಗೂ ಕೇಡು ಮಾಡದೆ ಬಾಳ ಬಯಸುವ ಎಲ್ಲರಿಗೆ ಹೊಳೆಯುವ ನಿಸರ್ಗ ವಿವೇಕ. ಅದನ್ನು ಕಳೆದುಕೊಳ್ಳದೆ ಬಾಳಬೇಕು ಅಷ್ಟೆ.

ಸರಿಯಾಗಿ ಬದುಕುವುದು ಹೇಗೆ ಎನ್ನುವ ಪ್ರಶ್ನೆಗೆ ಬುದ್ಧ ಗುರು ನೀಡಿದ ಉತ್ತರವೆಂದರೆ: ತಪ್ಪಾಗಿ ಬಾಳದಿರುವುದು! ಇದು ಇಷ್ಟು ಸರಳವಲ್ಲ ಅಥವಾ ಕಠಿಣವೂ ಅಲ್ಲ. ತಪ್ಪಾಗಿ ಬದುಕಬಾರದು ಎನ್ನುವುದಾದರೆ ಪ್ರತಿ ಕ್ಷಣವೂ ಸರಿ-ತಪ್ಪುಗಳನ್ನು ಎಚ್ಚರದಿಂದ ಆಯಾ ಸಂದರ್ಭಕ್ಕನುಗುಣವಾಗಿ ತೀರ್ಮಾನಿಸುತ್ತಲೇ ಇರಬೇಕು. ಹೀಗೆ ಎಚ್ಚರವನ್ನು ಸದಾ ಕಾಪಾಡಿಕೊಂಡವನನ್ನೇ ಬುದ್ಧನೆನ್ನುವುದು! ಪ್ರಜ್ಞೆ ಅಥವಾ ಅರಿವನ್ನು ನಿರಂತರವಾಗಿ ತಿಕ್ಕಿ ಬೆಳಗುತ್ತಲೇ ಇರಬೇಕು. ತಿಳಿವಳಿಕೆ ಕೂಡ ಹಾಗೇ ಬಿಟ್ಟರೆ ತುಕ್ಕು ಹಿಡಿಯುತ್ತದೆ. ನಮ್ಮ ವಿವೇಕವನ್ನು ತಿಕ್ಕಿ ತೊಳೆದು ಕಿಲುಬು ಹತ್ತದ ಹಾಗೆ ನೋಡಿಕೊಳ್ಳಬೇಕು.ಈ ಎಚ್ಚರವೇ ಬುದ್ಧ ತಿಳಿಸಿಕೊಟ್ಟಿರುವ ಮತ್ತು ಎಲ್ಲರ ಬದುಕಿನಲ್ಲೂ ಆಗಬೇಕಾದ 'ಜ್ಞಾನೋದಯವಾಗಿದೆ'.

ಜ್ಞಾನಮಾರ್ಗದಲ್ಲಿ ಬುದ್ಧಗುರುವಿಗೆ ಇರುವ ಸ್ಥಾನ ಮತ್ತಾರಿಗೂ ಇಲ್ಲ.

ಕಳೆದ ವರ್ಷ ಮಾರ್ಚ್ 17ರಂದು ಕುನೊ ಉದ್ಯಾನಕ್ಕೆ ಬಂದ ಚೀತಾ –ಪಿಟಿಐ ಚಿತ್ರ

ಇರುವುದೆಲ್ಲವ ಬಿಟ್ಟು...

8ನೇ ಪುಟದಿಂದ...

ಈಗ ನಮೀಬಿಯಾ ದೇಶದಿಂದ ಬಂದಿರುವ ಜೀವಿಗಳ ಹಿನ್ನೆಲೆಯನ್ನು ನೋಡಿ. ಅವುಗಳ ಬೇಟೆಯ ಪಟ್ಟಿಯಲ್ಲಿರುವುದು ಥಾಮಸನ್ ಗೆಜೆಲ್, ಸ್ಪ್ರಿಂಗ್ ಬಕ್, ಇಂಪಾಲ ಮತ್ತಿತರ ಸಸ್ಯಾಹಾರಿ ಪ್ರಾಣಿಗಳು. ಇವು ಸವನ್ನಾ ಹುಲ್ಲುಗಾವಲು ಪ್ರದೇಶಕ್ಕೆ ಸೀಮಿತ. ಆದರೆ ಕುನೊ ಉದ್ಯಾನವನದಲ್ಲಿರುವುದು ಕೃಷ್ಣಮೃಗ, ಚಿಂಕಾರ ಮತ್ತು ನೀಲ್‌ಗಾಯ್‌ಗಳು. ಇವನ್ನೆಲ್ಲ ಊಹಿಸಿಕೊಂಡಾಗ ಆಫ್ರಿಕಾದಲ್ಲಿ ವಿನಾಶದಂಚು ತಲುಪಿರುವ ಚೀತಾಗಳನ್ನು ಭಾರತಕ್ಕೆ ತಂದಿರುವುದು ಒಂದು ರೀತಿಯಲ್ಲಿ ಅನೈತಿಕ ನಿರ್ಧಾರ. ಇನ್ನೂ ಕಠಿಣವಾಗಿ ಹೇಳಬೇಕಾದಲ್ಲಿ ಅದನ್ನು ಮರಣದಂಡನೆ ಎನ್ನಬಹುದು.

ಹಾಗಾದರೆ ಇಂತಹ ಪ್ರಯೋಗಗಳು ಬೇರೆ ದೇಶಗಳಲ್ಲಿ ನಡೆದಿಲ್ಲವೇ ಎಂಬ ಪ್ರಶ್ನೆ ಎದುರಾಗುತ್ತದೆ. ಹೌದು, ಅಮೆರಿಕದಲ್ಲಿ ತೋಳಗಳನ್ನು, ಸೆಂಟ್ರಲ್ ಅಮೆರಿಕದಲ್ಲಿ, margay cat, ಜಾಗ್ವಾರ್, Amur leopard ಮತ್ತು ಮಿಡಲ್ ಈಸ್ಟ್ ಲೆಪರ್ಡ್‌ಗಳನ್ನು ಮರಳಿ ಕಾಡಿಗೆ ತರುವ ಪ್ರಯತ್ನ ನಡೆದಿದೆ. ಅದು ತಕ್ಕಮಟ್ಟಿಗೆ ಯಶಸ್ವಿ ಆಗಿದೆ. ಇದಕ್ಕೆ ಕಾರಣವೆಂದರೆ ಯೋಜನೆಯನ್ನು ಅನುಷ್ಠಾನಗೊಳಿಸುವ ಮುನ್ನ ನೂರಾರು ವಿಜ್ಞಾನಿಗಳು ದಶಕಗಳ ಕಾಲ ಅಧ್ಯಯನ ನಡೆಸಿ ನೀಡಿದ ವರದಿ ಮತ್ತು ಸಲಹೆಗಳು.

ಇಲ್ಲಿ ಆಗಿರುವ ಅನಾಹುತವೆಂದರೆ, ಕುನೊ ಅರಣ್ಯದಲ್ಲಿ ದೀರ್ಘಕಾಲ ಅಧ್ಯಯನ ನಡೆಸಿದ ರವಿ ಚಲಂ ಮತ್ತು ಅವರ ಜೊತೆ ಕೆಲಸ ಮಾಡಿದ ವಿಜ್ಞಾನಿಗಳ ವರದಿಯನ್ನು ಬದಿಗೊತ್ತಿ ಈ ಯೋಜನೆಯನ್ನು ರೂಪಿಸಿರುವುದು.

ಚೀತಾ ಯೋಜನೆ ಅವೈಜ್ಞಾನಿಕ ಮತ್ತು ನಿರರ್ಥಕ ಎಂದು ವಿಜ್ಞಾನಿಗಳ ತೀರ್ಮಾನದ ಹಿಂದೆ ಇನ್ನಷ್ಟು ಕಾರಣಗಳು ಇವೆ.

ಭಾರತದ ಕಾಡುಗಳಲ್ಲಿ ಸಂಕಷ್ಟಕ್ಕೆ ಸಿಲುಕಿರುವ ಅನೇಕ ಜೀವಿಗಳಿವೆ. ದೇಶದ ಹೆಮ್ಮೆಯ ಸಂಕೇತವಾದ ಇಂಡಿಯನ್ ಬಸ್ಟರ್ಡ್ ಹಕ್ಕಿಗಳ ಸಂಖ್ಯೆ 150ಕ್ಕೆ ಇಳಿದಿದೆ. ಇನ್ನು ಎಂಟು-ಹತ್ತು ವರ್ಷಗಳಲ್ಲಿ ಇವು ಕಣ್ಮರೆಯಾಗಬಹುದು. ಅವುಗಳ ನೆಚ್ಚಿನ ನೆಲೆಯಾದ ಹುಲ್ಲುಗಾವಲು ಪ್ರದೇಶಗಳನ್ನು ಸಂರಕ್ಷಿಸಲು ಸರ್ಕಾರ ಆಸಕ್ತಿ ತೋರುತ್ತಿಲ್ಲ. ಸಂರಕ್ಷಣೆಯ ಇತಿಹಾಸದಲ್ಲಿ ಯಶಸ್ವಿ ಯೋಜನೆ ಎಂದು ಮಾನ್ಯತೆ ಪಡೆದ ಹುಲಿ ಯೋಜನೆಗಳಿಗೆ ಅನುದಾನ ಪ್ರಮಾಣವನ್ನು ತೀವ್ರವಾಗಿ ಕಡಿತಗೊಳಿಸಲಾಗಿದೆ. ಇರುವ ಅಲ್ಪ ಸ್ವಲ್ಪ ಕಾಡನ್ನು ರೈಲ್ವೆ ಹಳಿಗಳು, ಎಕ್ಸ್‌ಪ್ರೆಸ್ ವೇಗಳು ಛೇದಿಸಿ ತುಂಡರಿಸುತ್ತಿವೆ. ಗಣಿಗಾರಿಕೆ ಮತ್ತಿತರ ಯೋಜನೆಗಳಿಗೆ ಕಾಡುಗಳು ನಲುಗುತ್ತಿವೆ.

ಇಂದಿನ ಪರಿಸ್ಥಿತಿಯಲ್ಲಿ ನಮ್ಮಲ್ಲಿ ಅಳಿದುಳಿದಿರುವ ಜೀವ ಪರಿಸರವನ್ನು ಉಳಿಸಿ ಸಂರಕ್ಷಿಸಿಕೊಳ್ಳುವುದು ಮೊದಲ ಆದ್ಯತೆ ಆಗಬೇಕು. ಇದಕ್ಕೆ ಪೂರಕವಾದ ಸ್ಪಷ್ಟತೆ ಮತ್ತು ಬದ್ಧತೆ ಸರ್ಕಾರಕ್ಕೆ ಇರಬೇಕು. ಆಗ ವ್ಯಯಿಸುವ ಹಣ ಮತ್ತು ಶ್ರಮಕ್ಕೆ ಅರ್ಥ ಬರುತ್ತದೆ.

ಇಂದಿನ ಜಾಗತಿಕ ಪರಿಸರದ ವಿದ್ಯಮಾನಗಳನ್ನು ಗಮನಿಸಿದಾಗ ಜೀವ ಪರಿಸರಗಳು ಭವಿಷ್ಯದ ಬದುಕಿಗೆ ಅನಿವಾರ್ಯ. ಈ ಬಗ್ಗೆ ಸಂಶೋಧನಾ ವರದಿಗಳು ಪ್ರಕಟಗೊಂಡಿವೆ. ಇದನ್ನು ಅರಿಯದಿದ್ದಾಗ, ಮುಂದಿನ ಪೀಳಿಗೆಯ ಜನ ನಮ್ಮ ಹಿರಿಯರು ಎಷ್ಟು ದಡ್ಡರಾಗಿದ್ದರು ಎಂದು ಯೋಚಿಸುವಂತಾದರೆ ಬೇಸರ ಮಾಡಿಕೊಳ್ಳುವ ಅಗತ್ಯವಿಲ್ಲ.

ಕಡೆಯ ಸುದ್ದಿ

- ಕುನೊ ಉದ್ಯಾನದಲ್ಲಿ ನಮೀಬಿಯಾದಿಂದ ಬಂದ ಎರಡು ಚೀತಾಗಳ ಸಾವು
- ಕುನೊದಿಂದ ಚೀತಾಗಳನ್ನು ರಾಜಸ್ಥಾನಕ್ಕೆ ಕಳುಹಿಸುವಂತೆ ಮಧ್ಯಪ್ರದೇಶದ ಅರಣ್ಯ ಇಲಾಖೆ ಮನವಿ
- ಕುನೊ ಅರಣ್ಯದಲ್ಲಿ 20 ಚೀತಾಗಳ ಬದುಕಿಗೆ ಅಗತ್ಯವಿರುವ ಸಂಪನ್ಮೂಲಗಳಿಲ್ಲ. ಹಾಗಾಗಿ ಪಕ್ಕದಲ್ಲಿರುವ ರಾಜಸ್ಥಾನದ ಮುಕುಂದ್ರ ಹುಲಿ ಯೋಜನೆಗೆ ಹಲವು ಚೀತಾಗಳನ್ನು ಸ್ಥಳಾಂತರಿಸುವಂತೆ ಯಜುವೇಂದ್ರ ದೇವ್ ಮನವಿ. (ಯಜುವೇಂದ್ರ ದೇವ್ ಚೀತಾ ಯೋಜನೆಯ ಅನುಷ್ಠಾನದಲ್ಲಿ ಮುಖ್ಯ ಪಾತ್ರ ವಹಿಸಿದ ಜೀವವಿಜ್ಞಾನಿ)

ಇಗೋ...ಇ-ಗೋ ಮಾರಾಟ

8ನೇ ಪುಟದಿಂದ...

ಒಂದು ಆಲೋಚನೆ, ಕ್ಷೇತ್ರ ಅರಿಯುವ ಒಂದಷ್ಟು ಪ್ರಯತ್ನ, ಉತ್ತಮ ಅಲ್ಗಾರಿದಮ್, ಕುಳಿತಲ್ಲೇ ಗಳಿಕೆಯ ದಾರಿಯ ಜತೆಗೆ, ಡಿಜಿಟಲ್ ಇಂಡಿಯಾದ ಸದ್ಬಳಕೆಯ ಪ್ರಯತ್ನ ಇದಾಗಿದೆ ಎಂಬುದು ಟೆಕ್ಕಿಗಳ ಅನಿಸಿಕೆ.

ರಾಸುಗಳ ಮಾರಾಟವು ಕೋವಿಡ್ ಸಮಯದಿಂದ ಉತ್ತಮ ವೇಗ ಕಂಡುಕೊಂಡಿತು. ಖರೀದಿಗೆ ಫೋಟೊಗಳಷ್ಟೇ ಸಾಲದು ಎಂಬುದು ರೈತರ ಅನಿಸಿಕೆ. ಹೀಗಾಗಿ ರಾಸುಗಳ ಮಾರಾಟದ ಜತೆಗೆ, ಜಾನುವಾರುಗಳ ಆರೋಗ್ಯ ಕುರಿತು ಆನ್‌ಲೈನ್ ಸಮಾಲೋಚನೆ, ಸಲಹೆ ಹಾಗೂ ಮಾರ್ಗದರ್ಶನದ ಮೂಲಕ ಆ್ಯಪ್‌ಗಳು ರೈತರನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನ ನಡೆಸಿವೆ.

ಕೇಂದ್ರ ಸರ್ಕಾರದ ಪಶು ಸಂಗೋಪನಾ ಇಲಾಖೆಯ ದಾಖಲೆಗಳ ಪ್ರಕಾರ ದೇಶದಲ್ಲಿನ ಜಾನುವಾರು ಸಂಖ್ಯೆ 53.5 ಕೋಟಿ. ಇದರಲ್ಲಿ ರಾಸುಗಳ ಸಂಖ್ಯೆ 30 ಕೋಟಿ. ಇದರಲ್ಲಿ 5.5 ಕೋಟಿಯಷ್ಟು ಎಮ್ಮೆ ಹಾಗೂ 8 ಕೋಟಿಯಷ್ಟು ಹಸುಗಳಿವೆ.

ಇವುಗಳ ಮಾರಾಟಕ್ಕೆ 2016ರಲ್ಲಿ ಕೇಂದ್ರ ಸರ್ಕಾರವೇ ಇ-ಗೋಪಾಲ ಎಂಬ ಇ-ಮಾರುಕಟ್ಟೆಯನ್ನು ಆರಂಭಿಸಿತು. ಗೂಗಲ್ ಪ್ಲೇ ಸ್ಟೋರ್‌ನಲ್ಲಿ ಒಂದು ಲಕ್ಷಕ್ಕೂ ಅಧಿಕ ಡೌನ್‌ಲೋಡ್ ಕಂಡಿರುವ ಈ ಆ್ಯಪ್‌ನ ಹೋಮ್‌ಪೇಜ್‌ನಲ್ಲಿ ಕೇವಲ 500ರಷ್ಟು ರಾಸುಗಳಿವೆ. ಬೇರೆ ಆ್ಯಪ್‌ಗಳಲ್ಲಿ ನೂರಾರು ಸಿಗುತ್ತವೆ ಎನ್ನುವುದು ರೈತರ ಅನಿಸಿಕೆ.

ಇಂಥ ಆ್ಯಪ್‌ಗಳು ವ್ಯಾಪಕವಾಗುತ್ತಿರುವಂತೆ ಉತ್ತರ ಭಾರತದ ರಾಜ್ಯಗಳಲ್ಲಿ ಜಾನುವಾರು ಮೇಳಗಳ ಸಂಖ್ಯೆ ಗಣನೀಯವಾಗಿ ಇಳಿಮುಖವಾಗುತ್ತಿದೆ. ಖರೀದಿಯಾದ ಜಾನುವಾರುಗಳ ಸಾಗಾಣಿಕೆಗೆ ನಿರ್ದಿಷ್ಟ ವರ್ಗಾವಣೆ ಪತ್ರ ಪಡೆಯುವುದನ್ನು ಕಡ್ಡಾಯಗೊಳಿಸಿರುವುದೂ ಇದಕ್ಕೊಂದು ಕಾರಣ. ಆದರೆ ಎಂಥದ್ದೇ ಪರವಾನಗಿ ಹೊಂದಿದರೂ ಗೋ ರಕ್ಷಕರಿಂದ ಪಾರಾಗುವುದು ಕಷ್ಟ ಎನ್ನುವುದು ಸಾರಿಗೆಯವರ ಗೋಳು. ಇದ್ರಿಸ್ ಕೊಲೆ ಪ್ರಕರಣ ಇತ್ತೀಚಿನ ಒಂದು ಉದಾಹರಣೆ.

ಆನ್‌ಲೈನ್‌ನಲ್ಲೂ ಮಧ್ಯವರ್ತಿಗಳ ಕಾಟ

ರೈತರಿಂದ ರೈತರಿಗಾಗಿಯೇ ನಿರ್ಮಿಸಿರುವ ಇಂಥ ಆ್ಯಪ್‌ಗಳಲ್ಲೂ ಮಧ್ಯವರ್ತಿಗಳ ಹಾವಳಿಯೇ ಹೆಚ್ಚು. ರೈತರಿಗೆ ಈವರೆಗೂ ಇಂಥ ಆ್ಯಪ್‌ಗಳು ತಲುಪಿಲ್ಲ. ತಲುಪಿದ್ದರೂ ಆ್ಯಪ್‌ಗಳಲ್ಲಿ ಕಾಣಿಸುವ ರಾಸುಗಳ ಚಿತ್ರಗಳನ್ನಷ್ಟೇ ನೋಡಿ ಖರೀದಿ ಮಾಡಲಾಗದು ಎಂಬುದು ಬಹಳಷ್ಟು ರೈತರ ಅನಿಸಿಕೆ.

ಧಾರವಾಡದ ರೈತ ಶಿವಾನಂದ ನಾಗಣ್ಣವರ, 'ರಾಸುಗಳ ಖರೀದಿ ಎಂದರೆ ಶೋರೂಂಗೆ ಹೋಗಿ ಕಾರು ಖರೀದಿಸಿದಂತಲ್ಲ. ರಾಸುಗಳನ್ನು ಖುದ್ದು ನೋಡಬೇಕು. ಅವುಗಳ ರೂಪ, ನಡಿಗೆ, ಹಲ್ಲು, ಕೆಚ್ಚಲು, ನಾಲ್ಕೂ ಮೊಲೆಗಳು ಸಮನಾಗಿವೆಯೇ, ಮಾರುವವನ ಸ್ಥಳದಲ್ಲಿ ಬೆಳಿಗ್ಗೆ ಹಾಗೂ ಸಂಜೆ ಎಷ್ಟು ಹಾಲು ನೀಡುತ್ತದೆ, ಸೋಂಕು ಮುಕ್ತವಾಗಿದೆಯೇ, ಗರ್ಭ ಧರಿಸಿದೆಯೇ, ಕರು ಹಾಕಿದ್ದರೆ ಎಷ್ಟು ತಿಂಗಳಿನದು ಎಂಬಿತ್ಯಾದಿ ಮಾಹಿತಿ ಅತ್ಯಗತ್ಯ. ಆದರೆ ಆನ್‌ಲೈನ್‌ನಲ್ಲಿ ಇವುಗಳಲ್ಲಿ ಕೆಲವು ಮಾಹಿತಿ ಇದ್ದರೂ, ಅದರ ವಿಶ್ವಾಸಾರ್ಹತೆಯ ಪ್ರಶ್ನೆಯೂ ಎದುರಾಗುತ್ತದೆ' ಎಂದು ರಾಸುಗಳ ಖರೀದಿ ಪ್ರಕ್ರಿಯೆ ಮಹತ್ವ ವಿವರಿಸಿದರು.

ನೋಂದಣಿ ಹೆಸರಿನಲ್ಲಿ ಆ್ಯಪ್‌ಗಳು ಕೇಳುವ ಕೆಲ ವೈಯಕ್ತಿಕ ಮಾಹಿತಿಯ ಕುರಿತ ಸುರಕ್ಷತೆಯ ಪ್ರಶ್ನೆಯೂ ಇದೆ. ಆ್ಯಪ್ ಅಭಿವೃದ್ಧಿಪಡಿಸಿದವರು ಜಾಹೀರಾತಿಗೆ ಜಾಗ ಮಾಡಿಕೊಟ್ಟು ದುಡಿಮೆಯ ಹಾದಿ ಕಂಡುಕೊಂಡಿದ್ದಾರೆ. ಮಧ್ಯವರ್ತಿಗಳು ರೈತರ ಪರವಾಗಿ ತಾವೇ ರಾಸುಗಳ ಚಿತ್ರವನ್ನು ಪೋಸ್ಟ್ ಮಾಡಿ, ತಮ್ಮದೇ ಫೋನ್ ಸಂಖ್ಯೆ ನೀಡುತ್ತಿದ್ದಾರೆ. ಅನಾರೋಗ್ಯಕ್ಕೆ ತುತ್ತಾದ ಹಸುಗಳನ್ನು ರೈತರು ಇಂಥ ಮಧ್ಯವರ್ತಿಗಳಿಗೆ ನೀಡುತ್ತಾರೆ. ಅವರು ತಾವೇ ಒಂದು ಡೇರಿ ಆರಂಭಿಸಿ (ಸೆಕೆಂಡ್ ಹ್ಯಾಂಡ್ ಕಾರು ಮಾರಾಟ ಕೇಂದ್ರವಿದ್ದಂತೆ) ದಕ್ಷಿಣದಿಂದ ಹೋಗುವ ಡೇರಿ ಆಸಕ್ತರಿಗೆ ಇಲ್ಲಿರುವ ಹಸುಗಳನ್ನು ಮಾರಾಟ ಮಾಡುತ್ತಿರುವ ಆರೋಪಗಳೂ ಇವೆ. ಆಕ್ಸಿಟಾಸಿನ್ ಲಸಿಕೆಯ ವ್ಯಾಪಕ ಬಳಕೆಯಿಂದಾಗಿ ಖರೀದಿ ಸ್ಥಳದಲ್ಲಿ ಹೆಚ್ಚು ಹಾಲು ಕೊಡುವ ರಾಸುಗಳು, ತಮ್ಮ ಡೇರಿಯಲ್ಲಿ ಹೆಚ್ಚು ಹಾಲು ಹಿಂಡದ ಉದಾಹರಣೆಗಳೂ ಇವೆ ಎಂದು ಈ ಕ್ಷೇತ್ರಕ್ಕೆ ಹೊಸದಾಗಿ ಪದಾರ್ಪಣೆ ಮಾಡಿರುವ ಅಭಿಷೇಕ್ ಹೇಳಿದರು.

ಆನ್‌ಲೈನ್ ತಾಣಗಳಲ್ಲಿ ವೈಯಕ್ತಿಕ ಮಾಹಿತಿ ದಾಖಲಿಸಬೇಕು. ವೈಯಕ್ತಿಕ ಮಾಹಿತಿ ಎಷ್ಟು ಸುರಕ್ಷಿತ ಎಂಬುದರ ಕುರಿತು ಉಲ್ಲೇಖ ಸಿಗದು. ಜತೆಗೆ ಸೈಬರ್ ಅಪರಾಧಗಳ ಅಪಾಯ ಇರುವ ಸಾಧ್ಯತೆಯೂ ಇದೆ ಎನ್ನುವುದು ಅವರ ಅನಿಸಿಕೆ.

ಭಾರತದಲ್ಲಿ ಡೇರಿ ನಡೆಸುವ ಹತ್ತು ಕೋಟಿಗೂ ಅಧಿಕ ರೈತರಿದ್ದಾರೆ. ಇಡೀ ಜಗತ್ತಿನ ಶೇ 22ರಷ್ಟು ಹಾಲು ಉತ್ಪಾದನೆ ಭಾರತದಲ್ಲಾಗುತ್ತಿದ್ದು, ಆ ಮೂಲಕ ಜಗತ್ತಿನ ಅಗ್ರಸ್ಥಾನದಲ್ಲಿದೆ. ಕೇಂದ್ರ ಪಶು ಸಂಗೋಪನೆ, ಡೇರಿ ಹಾಗೂ ಮೀನಗಾರಿಕೆ ಸಚಿವಾಲಯದ ಮಾಹಿತಿಯಂತೆ ನಮ್ಮ ದೇಶದ ಹೈನು ಉದ್ಯಮದ ಒಟ್ಟು ಮಾರುಕಟ್ಟೆ ₹13 ಸಾವಿರ ಶತಕೋಟಿಯಷ್ಟಿದೆ. ಶೇ 15ರ ದರದಲ್ಲಿ ಏರಿಕೆಯಾಗುತ್ತಿರುವ ಈ ಉದ್ಯಮ 2027ರ ಹೊತ್ತಿಗೆ ₹30 ಸಾವಿರ ಶತಕೋಟಿಗೆ ಹೆಚ್ಚಳವಾಗಲಿದೆ ಎಂದು ಆರ್ಥಿಕ ತಜ್ಞರು ಅಂದಾಜು ಮಾಡಿದ್ದಾರೆ. ಇದನ್ನೇ ಅವಲಂಬಿಸಿ ಜಾನುವಾರುಗಳ ನಿರ್ವಹಣಾ ಉದ್ಯಮವು ಸುಮಾರು 70ರಿಂದ 80 ಶತಕೋಟಿ ಅಮೆರಿಕನ್ ಡಾಲರ್‌ನಷ್ಟು ಬೆಳೆಯುವ ಅವಕಾಶವನ್ನು ಹೊಂದಿದೆ ಎಂದೆನ್ನಲಾಗಿದೆ. ಕೋಟಿಗಟ್ಟಲೆ ಜಾನುವಾರುಗಳಿರುವ ಭಾರತದ ಮಾರುಕಟ್ಟೆಯು ಸ್ಟಾರ್ಟ್‌ಅಪ್‌ಗಳಿಗೆ ಹುಲುಸಾದ ಹುಲ್ಲುಗಾವಲಾಗಿರುವುದಂತೂ ಸತ್ಯ.

ಖರೀದಿ ನಂತರ ಎಚ್ಚರಿಕೆ ಅಗತ್ಯ

ಅಂತರ್ಜಾಲ ತಾಣ, ಮೊಬೈಲ್ ಆ್ಯಪ್ ಹಾಗೂ ಯೂಟ್ಯೂಬ್‌ಗಳ ಮೂಲಕ ಸಾಕಷ್ಟು ಜನ ರಾಸುಗಳ ಮಾರಾಟದಲ್ಲಿ ತೊಡಗಿದ್ದಾರೆ. ಆದರೆ ಹೀಗೆ ಖರೀದಿಸಿದ ನಂತರ ಸ್ಥಳೀಯ ಪಶು ಆರೋಗ್ಯ ಇಲಾಖೆಯಿಂದ ರಾಸುಗಳ ಆರೋಗ್ಯ ಹಾಗೂ ಸೋಂಕು ಇಲ್ಲ ಎಂಬ ಪ್ರಮಾಣಪತ್ರ ಪಡೆಯುವುದು ಕಡ್ಡಾಯ. ಹರಿಯಾಣದಲ್ಲಿ ಖರೀದಿಸುವ ರಾಸು ಐದು ರಾಜ್ಯಗಳ ಗಡಿಯನ್ನು ದಾಟಬೇಕು. ಎಲ್ಲೆಡೆ ಈ ಪ್ರಮಾಣಪತ್ರ ಕಡ್ಡಾಯ. ಅದರಲ್ಲೂ ಗೀರ್ ತಳಿ ಹಸುಗಳಿಗೆ ಗುಜರಾತ್ ಸರ್ಕಾರ ನೀಡುವ ಖರೀದಿ ಪ್ರಮಾಣಪತ್ರ, ಆರೋಗ್ಯ ಪ್ರಮಾಣ ಪತ್ರ ಕಡ್ಡಾಯ' ಎಂದು ಬಾಗಲಕೋಟೆಯ ಅಭಿಷೇಕ್ ವಿವರಿಸಿದರು.

'ಇಲ್ಲಿಂದ ವಿಮಾನದಲ್ಲಿ ತೆರಳಿದರೆ, ಅಲ್ಲಿರುವ ಮಧ್ಯವರ್ತಿಗಳು ಇನ್ನೋವಾ ಕಾರಿನಲ್ಲಿ ರೈತರು, ಡೇರಿಗಳ ಸುತ್ತಾಟ ನಡೆಸುತ್ತಾರೆ. ಖರೀದಿಗೆ ಒಪ್ಪಿದರೆ, ಪ್ರತಿ ಜಾನುವಾರಿಗೆ ಮಧ್ಯವರ್ತಿಗಳಿಗೆ ₹15 ಸಾವಿರ ಹಾಗೂ ಸಾರಿಗೆ ವೆಚ್ಚ ₹15 ಸಾವಿರ ಕೊಡಬೇಕಾದ್ದು ಖರೀದಿದಾರರ ಹೊಣೆ. ಕರ್ನಾಟಕಕ್ಕೆ ಒಟ್ಟು ಮೂರು ದಿನಗಳ ಪ್ರಯಾಣ. ಜಾನುವಾರುಗಳ ಆರೈಕೆಗೆ ಒಬ್ಬ ಸಹಾಯಕನನ್ನು ದಿನಕ್ಕೆ ₹1 ಸಾವಿರ ಕೂಲಿ ಕೊಟ್ಟು ನೇಮಿಸಿಕೊಳ್ಳಬೇಕು. ರಾತ್ರಿ ಮಾತ್ರ ಸಂಚರಿಸುವ ಈ ವಾಹನ, ಹಗಲಿನಲ್ಲಿ ವಿರಮಿಸುತ್ತದೆ. ಅಲ್ಲಿ ರಾಸುಗಳನ್ನು ಟ್ರಕ್‌ನಿಂದ ಕೆಳಗಿಳಿಸಿ ನೆರಳಲ್ಲಿ ಕಟ್ಟಿ ಮೇವು, ನೀರು ನೀಡಲಾಗುತ್ತದೆ. ಕತ್ತಲಾದ ನಂತರ ಮತ್ತೆ ಪ್ರಯಾಣ. ಹೀಗೆ ಪ್ರಯಾಣದ ವೇಳೆಯಲ್ಲಿ ಸ್ಥಳೀಯ ರಾಸುಗಳಲ್ಲಿರುವ ರೋಗಗಳು ಉಣ್ಣೆಯ ಮೂಲಕ ಇವುಗಳಿಗೂ ಹತ್ತುವ ಅಪಾಯವಿದೆ. ಥೈಲೇರಿಯಾ ಎಂಬ ಸೋಂಕು ಪರಿಣಾಮ ನಾವೂ ₹1 ಲಕ್ಷ ಕೊಟ್ಟು ಖರೀದಿಸಿದ ಎರಡು ರಾಸುಗಳನ್ನು ಕಳೆದುಕೊಳ್ಳಬೇಕಾಯಿತು. ಜತೆಗೆ ಮಾರ್ಗ ಮಧ್ಯದಲ್ಲೇ ಟ್ರಕ್‌ನಲ್ಲೇ ಕೆಲ ರಾಸುಗಳು ಕರು ಹಾಕುತ್ತವೆ. ಕೆಲವೊಮ್ಮೆ ಅವುಗಳ ಕಾಲಿಗೆ ಸಿಕ್ಕು ಕರುಗಳು ಸಾಯುವ ಉದಾಹರಣೆಯೂ ಇದೆ. ರಾಸುಗಳು ಬಂದಿಳಿದು ಒಂದು ತಿಂಗಳು ಕಳೆಯುವವರೆಗೂ ಆತಂಕ ದೂರವಾಗದು' ಎಂದು ವಿವರಿಸಿದರು.

ಜಾನುವಾರು ಆನ್‌ಲೈನ್ ಮಾರಾಟದ ಅಂಬೆಗಾಲು

ರಾಸುಗಳ ಮಾರಾಟ ವೇದಿಕೆಯಾದ ಆ್ಯಪ್‌ಗಳು ಸದ್ಯ ಹೆಚ್ಚಿನ ಆದಾಯ ಗಳಿಸುತ್ತಿಲ್ಲ. ಆದರೆ ದೇಶದಲ್ಲಿ ರಾಸುಗಳ ಆನ್‌ಲೈನ್ ಮಾರಾಟ ಇನ್ನಷ್ಟು ಬೆಳವಣಿಗೆ ಕಾಣಬೇಕಿದೆ. ಹಿಂದೆ ಬಟ್ಟೆಗಳನ್ನು ಆನ್‌ಲೈನ್ ಮೂಲಕ ಖರೀದಿಸಲು ಸಾಕಷ್ಟು ಜನ ಹಿಂದೇಟು ಹಾಕುತ್ತಿದ್ದರು. ಆದರೆ ಈಗ ಆನ್‌ಲೈನ್‌ನಲ್ಲೇ ಖರೀದಿ ಪ್ರಕ್ರಿಯೆ ಹೆಚ್ಚು ನಡೆಯುತ್ತಿದೆ. ಬಹುಶಃ ಮುಂದಿನ 8ರಿಂದ 10 ವರ್ಷಗಳಲ್ಲಿ ರಾಸುಗಳ ಮಾರಾಟವೂ ಆನ್‌ಲೈನ್ ಮೂಲಕ ಹೆಚ್ಚು ನಡೆಯುವ ಸಾಧ್ಯತೆ ಇದೆ. ಆದರೆ ಅಮೆಜಾನ್, ಫ್ಲಿಪ್‌ಕಾರ್ಟ್ ಇತ್ಯಾದಿಗಳಂತೆ ಸದೃಢ ಆನ್‌ಲೈನ್ ಪ್ಲಾಟ್‌ಫಾರ್ಮ್‌ಗಳಾಗಬೇಕಷ್ಟೇ. ಇಲ್ಲಿ ಗ್ರಾಹಕರ ವೈಯಕ್ತಿಕ ಮಾಹಿತಿ ಸುರಕ್ಷಿತ ಎನ್ನುವುದು ಖಾತ್ರಿಯಾಗಬೇಕು' ಎನ್ನುವುದು ಹಾವೇರಿಯ ಅರವಿಂದ ದೇಸಾಯಿ ಅವರ ಅನಿಸಿಕೆ.

'ಉದಾಹರಣೆಗೆ ಗೋದ್ರೆಜ್ ಕಂಪನಿಯ ಮ್ಯಾಕ್ಸಿಮಿಲ್ಕ್ ಆನ್‌ಲೈನ್ ವೇದಿಕೆಯಲ್ಲಿ ಕಂಪನಿಯು ಭ್ರೂಣ, ವೀರ್ಯಗಳ ಹಾಗೂ ಕರುಗಳ ಮಾರಾಟವನ್ನು ನಡೆಸುತ್ತಿದೆ. ಇಲ್ಲಿಂದ ಖರೀದಿಸಿದ ಬಹಳಷ್ಟು ಗ್ರಾಹಕರು ಫಲಿತಾಂಶ ಆಧರಿಸಿ ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಆದರೆ ರಾಸುಗಳ ಮಾರಾಟ ಇನ್ನಷ್ಟು ಸುಧಾರಣೆಯಾಗಬೇಕಿದೆ' ಎನ್ನುವುದು ಅವರ ಅನಿಸಿಕೆ.

'ಆನ್‌ಲೈನ್ ವಿಡಿಯೊ ನೋಡಿ ಹತ್ತು ಎಮ್ಮೆ ಹಾಗೂ ಅವುಗಳ ಹತ್ತು ಕರುಗಳನ್ನು ಹರಿಯಾಣದಿಂದ ಖರೀದಿಸಿದ್ದೆ. ಟ್ರಕ್ ಮೂಲಕ ಕರ್ನಾಟಕಕ್ಕೆ ಬಂದ ಹತ್ತೇ ದಿನಗಳಲ್ಲಿ ಆ ಹತ್ತೂ ಕರುಗಳು ಅಸುನೀಗಿದವು. ಸಾಗಣೆ ಸಂದರ್ಭದಲ್ಲಿ ಟ್ರಕ್‌ನವರು ಅಷ್ಟಾಗಿ ಕಾಳಜಿ ವಹಿಸದ ಕಾರಣ, ಪೆಟ್ಟುಗಳಾಗುವ ಸಾಧ್ಯತೆ ಹೆಚ್ಚು. ಇನ್ನೂ ಕೆಲವೆಡೆ, ಮಾರ್ಗಮಧ್ಯೆ ಡಾಬಾಗಳಿಗೆ ಹಾಲು ನೀಡಲು ಟ್ರಕ್‌ನವರು ಒಳ ಒಪ್ಪಂದ ಮಾಡಿಕೊಳ್ಳುತ್ತಿರುವ ಸಂಗತಿಯೂ ಇದೆ. ಹೀಗಾಗಿ ರಾಸುಗಳ ಆನ್‌ಲೈನ್ ಖರೀದಿ ಇನ್ನಷ್ಟು ಉತ್ತಮಗೊಳ್ಳಬೇಕಿದೆ' ಎನ್ನುತ್ತಾರೆ ಅವರು.

'ಎ1 ಹಾಗೂ ಎ2 ಹಾಲುಗಳ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ದೇಸಿ ಹಸುವಿನ ಹಾಲು ಶ್ರೇಷ್ಠ ಎಂಬ ಮಾತೂ ಇದೆ. ಆದರೆ ಡೇರಿ ಉದ್ಯಮದಲ್ಲಿ ಇಂದಿಗೂ ಹಸುವಿನ ಹಾಲಿಗಿಂತ, ಕೊಬ್ಬು ಹೆಚ್ಚು ಇರುವ ಎಮ್ಮೆ ಹಾಲಿಗೆ ಬೆಲೆ ಹೆಚ್ಚು. ಇಂಥ ಒಂದಷ್ಟು ತಾರತಮ್ಯಗಳು ಬದಲಾಗಬೇಕು' ಎಂದು ಮಾತು ಮುಗಿಸಿದರು.

ಮುನ್ನೋಟ 30-04-2023 ರಿಂದ -06-05-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಯಂತ್ರಗಳೊಂದಿಗೆ ಕೆಲಸ ಮಾಡುವವರು ಹೆಚ್ಚು ಎಚ್ಚರದಿಂದಿರಿ. ಬಂಧುಗಳ ಸಂಬಂಧವನ್ನು ಗಟ್ಟಿ ಮಾಡಿಕೊಳ್ಳುವುದು ನಿಮಗೆ ಒಳಿತು. ವೃತ್ತಿಯಲ್ಲಿ ಅನಿರೀಕ್ಷಿತ ದೂರ ಪ್ರಯಾಣ ಒದಗಬಹುದು. ಕಾರ್ಯಗಳಲ್ಲಿ ಇದ್ದ ಅಡಚಣೆಯನ್ನು ಆಲೋಚಿಸಿ ನಿವಾರಣೆ ಮಾಡಿಕೊಳ್ಳಿರಿ. ಪ್ರಾಚೀನ ವಸ್ತುಗಳ ಸಂಗ್ರಹಕಾರರಿಗೆ ಬಯಸುತ್ತಿದ್ದ ವಸ್ತು ದೊರೆತು ಸಂತಸವಾಗುತ್ತದೆ. ಧನ ಆದಾಯವು ತೃಪ್ತಿಕರವಾಗಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ತರಕಾರಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಅಂಶ ದೊರೆಯುತ್ತದೆ. ಜೀವನಕ್ರಮದಲ್ಲಿ ಮಕ್ಕಳಿಗಾಗಿ ಸ್ವಲ್ಪ ಬದಲಾವಣೆ ಮಾಡಿಕೊಳ್ಳುವಿರಿ. ಹಿರಿಯರಿಗೆ ಬಹಳ ಕಾಲದಿಂದ ಅನುಭವಿಸುತ್ತಿದ್ದ ವ್ಯಾಧಿಯೊಂದು ಈಗ ತಹಬಂದಿಗೆ ಬರುತ್ತದೆ. ದಲ್ಲಾಳಿ ವ್ಯಾಪಾರವನ್ನು ಮಾಡುವವರಿಗೆ ಹೆಚ್ಚಿನ ಕಮಿಷನ್ ದೊರೆಯುತ್ತದೆ. ಕೃಷಿಯಿಂದ ಹೆಚ್ಚು ಧನ ಸಂಪಾದನೆ ಇದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಆಪ್ತರು ನಿಮ್ಮ ಸಕಾಲಿಕ ನೆರವಿಗಾಗಿ ನಿಮಗೆ ಧನ್ಯವಾದವನ್ನು ತಿಳಿಸುವರು. ಉದ್ದಿಮೆದಾರರು ತೆರಿಗೆ ವಿಷಯದಲ್ಲಿ ಹೆಚ್ಚು ಎಚ್ಚರಿಕೆ ವಹಿಸುವುದು ಒಳ್ಳೆಯದು. ರಾಜಕೀಯ ವ್ಯಕ್ತಿಗಳ ಹಿಂಬಾಲಕರಿಗೆ ಹೆಚ್ಚು ಸಂಪಾದನೆ ಆಗುವ ಯೋಗವಿದೆ. ಹಿರಿಯ ಅಧಿಕಾರಿಗಳಿಗೆ ಹೆಚ್ಚು ಸವಲತ್ತು ದೊರೆಯುತ್ತದೆ. ಖರ್ಚಿಗೆ ಸಾಕಷ್ಟು ಕಡಿವಾಣ ಹಾಕಿರಿ. ಅಧಿಕಾರಸ್ಥರೊಡನೆ ಹೆಚ್ಚಿನ ಸಂಪರ್ಕಗಳು ಬರುತ್ತವೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ನಿಮ್ಮ ವಾಕ್ಚಾತುರ್ಯವನ್ನು ಪ್ರದರ್ಶನ ಮಾಡಲು ಉತ್ತಮ ಅವಕಾಶ ದೊರೆಯುತ್ತದೆ, ಅದನ್ನು ಸದುಪಯೋಗ ಮಾಡಿಕೊಳ್ಳಿರಿ. ಕೆಲಸದಲ್ಲಿ ಕಂಡು ಬರುವ ಸಣ್ಣಪುಟ್ಟ ತಪ್ಪುಗಳನ್ನು ವರ್ತನೆಯಾಗದಂತೆ ಎಚ್ಚರವಹಿಸಿರಿ. ಧನ ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರಕ್ಕೆ ಬರುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಲಾಭವನ್ನು ಕಾಣಬಹುದು. ನೆರೆಹೊರೆಯವರ ವೈಶಮ್ಯ ಈಗ ಅನುಭವಕ್ಕೆ ಬರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ಸಂಶೋಧನಾ ಕ್ಷೇತ್ರದಲ್ಲಿರುವವರು ಹೆಚ್ಚಿನ ಸಾಧನೆ ಮಾಡುವ ಯೋಗವಿದೆ. ಮನೆಯ ಹಿರಿಯರ ಮಧ್ಯಸ್ಥಿಕೆಯಿಂದ ನೆಂಟಸ್ತಿಕೆಯಲ್ಲಿ ಸಂಬಂಧಗಳು ಕೂಡಿ ಬರಲಿವೆ. ನಿರುದ್ಯೋಗಿಗಳಿಗೆ ಹಿರಿಯರ ವಶೀಲಿಯಿಂದ ಉದ್ಯೋಗ ದೊರೆಯುವ ಸಾಧ್ಯತೆಗಳಿವೆ. ವೃತ್ತಿಯಲ್ಲಿ ಸ್ಪರ್ಧಾತ್ಮಕ ಪೈಪೋಟಿ ಇದ್ದರೂ ತೊಂದರೆ ಏನು ಇಲ್ಲ. ಪ್ರವಾಸಕ್ಕೆ ಹೋದಾಗ ನೀರಿನ ಬಗ್ಗೆ ಹೆಚ್ಚು ಜಾಗರೂಕರಾಗಿರಿ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ವಾರದ ಆರಂಭದಲ್ಲಿ ಆಲಸಿ ನಡವಳಿಕೆ ಇರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ವೃತ್ತಿಯಲ್ಲಿ ಪರಿಶ್ರಮಪಟ್ಟು ಕೆಲಸಮಾಡಬೇಕಾದ ಅನಿವಾರ್ಯತೆ ಇರುತ್ತದೆ. ಸ್ಥಿರಾಸ್ತಿ ಕೊಳ್ಳುವ ವಿಷಯದಲ್ಲಿ ಹೆಚ್ಚು ಗೊಂದಲಗಳು ಆಗುತ್ತವೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಹಣ ಖರ್ಚಾಗುತ್ತದೆ. ಸಾಲವನ್ನು ತೀರಿಸಲು ಸಾಲಗಾರರು ಗಡುವು ಕೊಡುತ್ತಾರೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸಮೂಹದಲ್ಲಿ ಮಾತಾಡುವಾಗ ಎಚ್ಚರ ಇರಲಿ. ಖಂಡಿತ ಒರಟು ಮಾತುಗಳು ಬೇಡ. ಕೃಷಿ ಬೆಳೆಗಳಿಂದ ಹೆಚ್ಚಿನ ಆದಾಯ ಬರುತ್ತದೆ. ಚುರುಕಾಗಿ ಕೆಲಸ ಮಾಡುತ್ತಿರುವಂತೆ ಅಭಿನಯ ಮಾಡುವಿರಿ. ಆಸ್ತಿ ವಿಚಾರದಲ್ಲಿ ಹೆಚ್ಚಿನ ಆತುರ ಬೇಡ. ಅಸಾಂಪ್ರದಾಯಕ ಊಟದಿಂದ ಆರೋಗ್ಯ ವ್ಯತ್ಯಾಸವಾಗಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಸ್ವಲ್ಪ ಪ್ರಶಾಂತತೆಯಿಂದ ಇರುವಿರಿ. ಧನದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ಶತ್ರುಗಳ ಮೇಲೆ ಸಾಕಷ್ಟು ಒತ್ತಡ ಹಾಕಿ ನಿಮ್ಮ ಕೆಲಸವನ್ನು ಸಾಧಿಸಿಕೊಳ್ಳುವಿರಿ. ಆಸ್ತಿ ವಿಚಾರದಲ್ಲಿದ್ದ ಗೊಂದಲಗಳು ಮಾತುಕತೆಯ ಮೂಲಕ ಬಗೆಹರಿಯುತ್ತವೆ. ವಿದ್ಯಾರ್ಥಿಗಳಿಗೆ ಹೆಚ್ಚು ಶ್ರಮ ಹಾಕಿ ಓದಲೇಬೇಕಾದ ಪರಿಸ್ಥಿತಿ ಇರುತ್ತದೆ. ಕೃಷಿಯಿಂದ ನಿರೀಕ್ಷಿತ ಆದಾಯವಿರುವುದಿಲ್ಲ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಆತ್ಮಗೌರವ ಹೆಚ್ಚಾಗುತ್ತದೆ. ತನಿಖಾ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಹೆಚ್ಚಿನ ಕೆಲಸದ ಒತ್ತಡ ಮತ್ತು ಉತ್ತಮ ಹೆಸರು ಬರುತ್ತದೆ. ಮಾತಿನ ಮೇಲೆ ಹೆಚ್ಚಿನ ಗಮನವಿರಲಿ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ. ವಿದೇಶಗಳಲ್ಲಿ ಓದಬೇಕೆಂದು ಪ್ರಯತ್ನ ಪಡುತ್ತಿರುವವರಿಗೆ ಈಗ ಅವಕಾಶಗಳು ಒದಗುತ್ತವೆ. ಹೊಸ ವ್ಯಾಪಾರಗಳಲ್ಲಿ ಹೆಚ್ಚಿನ ಲಾಭವನ್ನು ಕಾಣಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ವಾಕ್ ಚಾತುರ್ಯ ಉತ್ತಮವಾಗಿದ್ದು ಜನರನ್ನು ಸಮಾಧಾನಗೊಳಿಸುವಿರಿ. ಹಣದ ಒಳ ಹರಿವು ಸಾಮಾನ್ಯವಾಗಿರುತ್ತದೆ. ಹಣಕಾಸು ಸಂಸ್ಥೆ ನಡೆಸುವವರಿಗೆ ಸಮಾಧಾನಕರ ವಾತಾವರಣವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಯಶಸ್ಸನ್ನು ಪಡೆಯುವ ಯೋಗವಿದೆ. ತಾಯಿಯೊಡನೆ ಕಾವೇರಿದ ಮಾತುಗಳಾಗಬಹುದು. ಹಿರಿಯರ ವ್ಯವಹಾರಗಳಲ್ಲಿ ನಿಮಗೆ ಖಂಡಿತ ಪಾಲು ದೊರೆಯುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಕ್ರೀಡಾಪಟುಗಳಿಗೆ ಬಹಳ ಉತ್ತಮವಾದ ವಾರ, ಅವರಿಗೆ ಬೇಕಾದ ಸೌಲಭ್ಯಗಳು ದೊರೆಯುವುದರ ಜೊತೆಗೆ ಉತ್ತಮ ಸಾಧನೆ ಮಾಡುವ ಯೋಗವಿದೆ. ನಿಮ್ಮ ಮಾತು ನಡವಳಿಕೆಯಿಂದ ಜನರನ್ನು ಗೆಲ್ಲುವಿರಿ. ಧನ ಆದಾಯವು ಸಾಮಾನ್ಯವಾಗಿರುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಉತ್ತಮ ಅಭಿವೃದ್ಧಿ ಇರುತ್ತದೆ. ಎಲೆಕ್ಟ್ರಾನಿಕ್ಸ್ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಾಧನೆ ಮಾಡುವ ಯೋಗವಿದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಸಂಗೀತಗಾರರಿಗೆ ಉತ್ತಮ ವೇದಿಕೆ ದೊರೆಯುವ ಸಾಧ್ಯತೆ ಇದೆ. ಕೆಲವು ಕಲಾವಿದರುಗಳಿಗೆ ವಿದೇಶದಲ್ಲಿ ಕಲಾ ಪ್ರದರ್ಶನ ಮಾಡುವ ಅವಕಾಶ ದೊರೆಯುತ್ತದೆ. ಸಹೋದರಿಯರ ಬಾಂಧವ್ಯ ಅಭಿವೃದ್ಧಿಗೊಳ್ಳುತ್ತದೆ. ಕೃಷಿ ಮಾಡುವ ಇಚ್ಛೆ ಆಗುತ್ತದೆ, ಅದಕ್ಕಾಗಿ ಕೃಷಿಭೂಮಿ ಖರೀದಿ ಮಾಡಲು ಮುಂದಾಗುವಿರಿ. ಮಕ್ಕಳ ಬಗ್ಗೆ ಅಗೌರವಯುತವಾದ ಸುದ್ದಿಯೊಂದು ಕೇಳಿ ಬರುವ ಸಾಧ್ಯತೆ ಇದೆ.

ಪದಬಂಧ 2787



ಮೇಲಿನಿಂದ ಕೆಳಕ್ಕೆ

1. ದುರ್ಗಿಯ ಅವತಾರವೆತ್ತಿದ ಕಾತ್ಯಾಯನ ಮಗಳು 4
2. ಹಾಡಿದಾಗ ದೀರ್ಘವಾಗಿ ಹರಿವ ಅಮೃತ 4
3. ಬಿಸಿಲಲ್ಲಿ ದಣಿದಾಗ ತಂಪಾದ ಪಾನಕ 4
4. ಮೂಳೆ ಮಾಂಸದ ಈ ದೇಹಕ್ಕೆ ಒಂಭತ್ತು ಬಾಗಿಲುಗಳು 4
7. ವಿದ್ಯೆ, ಅಂತಸ್ತು, ಅಧಿಕಾರ ಇವುಗಳಲ್ಲಿ ಸರ ತೂಗುವವ 5
8. ದನಿ ಎತ್ತಿದರೆ ಇಂಪಾದ ಜೇನಿನಂತಹ ಪಲುಕು 5
9. ಇವರೇ ಸಿರಿವಂತರು 5
10. ವಿಷಯ ಮಂಥನದ ಕೋರ್ಟಿನ ತರ್ಕ 5
15. ಭೂಮಿಯನ್ನು ನುಂಗಿ ಹಾಕು 4
16. ವಿಧವಿಧವಾಗಿ ಬಗೆದಾಗ ಸಿಗುವ ಅನೇಕಾನೇಕ 4
18. ಕಾಲಡಿಯ ದ್ರವ ಬಹಳ ಚುರುಕು 4
19. ಸೂರ್ಯನ ಜೊತೆಗೂಡಿರುವ ಮಗ ಸುಯೋಧನ ಸಖ 4

ಎಡದಿಂದ ಬಲಕ್ಕೆ

1. ಪದ್ಯ ಸಾಹಿತ್ಯದ ಪುಣ್ಯ ಪ್ರವಾಹ ದೀರ್ಘವಾಗಿ ಹರಿದಿದೆ 4
3. ನೂರರ ಅಳತೆ ಬದುಕಿನ ಗೌರವ 4
5. ವಿಜಯನಗರದಿಂದ ಬೆಂಗಳೂರಿನವರೆಗೆ ಪಟ್ಟಣದ ಶಿವ 5
6. ಪ್ರಕೃತಿಯ ಮಡಲಲ್ಲಿ ಸುಂದರ ತಾಣ 5
9. ಒಂದು ಲಕ್ಷದ ದಶಮಾಂಶ ಭಾಗ 5
11. ಕಾರ್ಯಭಾರವುಳ್ಳ ಅಗ್ರಗಣ್ಯ 3
12. ವರವಾಗಿ ಬಂದ ಕೊಳ 4
13. ಪೀಳಿಗೆಯಿಂದ ಪೀಳಿಗೆಗೆ ಕುಲ ವೃದ್ಧಿ 4
14. ತನಗೆ ತಾನೆ ಹೇಳಿಕೊಂಡಿದ್ದು 3
15. ಬಂಗಾರ ಬಾನಿನಂತಹ ಹೂವು 5
17. ವಿಶ್ವ ವಿತ್ತ ಮಾರುಕಟ್ಟೆಯಲ್ಲಿ ಭಾರತದ ಮೂಲ ನಾಣ್ಯದ ರೇಟು 5
20. ಶರಣಂಗೆ ಶರಣಾರ್ಥಿಯಾದ ವೃಷಭ ರೂಪಿ 5
21. ಭಗೀರಥನಿಂದ ಭೂಮಿಗಿಳಿದ ಅವತಾರ ಧಾರೆ 4
22. ನಿಜವನ್ನೇ ನುಡಿವವ 4

ಪದಬಂಧ ಉತ್ತರ -2786

ಮೇಲಿಂದ ಕೆಳಕ್ಕೆ

1.ರಾಷ್ಟ್ರ ಭಕ್ತಿ 2.ಯಮಸಮಾನ 3.ದಿನಪತ್ರಿಕೆ 4.ರವರವ 6.ವಿಕಾಸ 10.ಸಮುದ್ರ 12.ವಧಮಾ 13.ಚಂಪಕಧಾಮ 14.ರಾಜಕಾರಣಿ 15.ಜನಸೇವಕ 16.ತಾಯಿಮಗಳು 18.ಜರೀಗೌ

ಎಡದಿಂದ ಬಲಕ್ಕೆ

1.ರಾಜಾಶ್ರಯ 3.ದಿವಾಕರ 5.ಮನೋವಿಜ್ಞಾನ 7.ಭಕ್ತಿರಸ 8.ಪಕ್ಷಾಂತರ 9.ಮಾನಸಪುತ್ರಿ 10.ಸನ್ಮಾನ 11.ಕೆಟ್ಟವ 13.ಚಂದ್ರತಾರಾ 15.ಜಯಮಾತಾ 17.ಜಯಜವಾನ 19.ಕಥಾನಕಾ 20.ಸೇವಾಶ್ರಮ 21.ರತ್ನಗೌರವ 22.ಮಧುರಾಣಿ 23.ಕರುಣಾಳು

ಮತ್ತೆ ಮತ್ತೆ 'ಅಣ್ಣನ ನೆನಪು'

ಪ್ರಕಾಶ ಕುಗ್ವೆ

ರಂಗಭೂಮಿ

'ಅಣ್ಣನ ನೆನಪು' ನಾಟಕದ ದೃಶ್ಯ

ಕನ್ನಡಿಗರ ಅಸ್ಮಿತೆ, ಕರ್ನಾಟಕ, ಕನ್ನಡತ್ವಕ್ಕೆ ಧಕ್ಕೆ ಎದುರಾದಾಗಲೆಲ್ಲ ಕುವೆಂಪು, ತೇಜಸ್ವಿ ಅವರು ನಮಗೆ ಮತ್ತೆ ಮತ್ತೆ ನೆನಪಾಗುತ್ತಾರೆ. ಇಂತಹದೊಂದು ಬಿಕ್ಕಟ್ಟಿನ ಸಂದರ್ಭದಲ್ಲೇ ತೇಜಸ್ವಿ ಅವರ 'ಅಣ್ಣನ ನೆನಪು' ರಂಗಕೃತಿಯಾಗಿ ಈಚೆಗೆ ಶಿವಮೊಗ್ಗದ ಕುವೆಂಪು ರಂಗಮಂದಿರದಲ್ಲಿ ಹಾಗೂ ಬೆಂಗಳೂರಿನ ಕೆ.ಎಚ್.ಕಲಾಸೌಧದಲ್ಲಿ ಪ್ರದರ್ಶನ ಕಂಡಿತು. ಬೆಂಗಳೂರಿನ ಪ್ರವರ ಥಿಯೇಟರ್ ತಂಡದ ಈ ಪ್ರಯೋಗ ಸಮಕಾಲೀನ ವಿದ್ಯಮಾನಗಳಿಗೆ ಪ್ರತಿರೋಧದಂತೆ ಕಂಡುಬಂತು.

ಭಾಷೆ, ಧರ್ಮ, ಸಿದ್ಧಾಂತ, ಸಂಗೀತ, ವಿಜ್ಞಾನ, ರಾಜಕೀಯ, ಪರಿಸರ ಹೀಗೆ ಎಲ್ಲವನ್ನೂ ಮನುಷ್ಯತ್ವದ ನೆಲೆಯಲ್ಲಿ ನೋಡುವ ಕುವೆಂಪು ಹಾಗೂ ತೇಜಸ್ವಿ ಅವರು ಈ ಕಾಲಕ್ಕೆ ಎಷ್ಟು ಹಾಗೂ ಹೇಗೆ ಮುಖ್ಯರು ಎಂದು ನಾಟಕ ಪ್ರತಿಧ್ವನಿಸುತ್ತದೆ.

'ಅಣ್ಣನ ನೆನಪು' 1996ರಲ್ಲಿ ಪ್ರಕಟಗೊಂಡು ಈಗಾಗಲೇ 18 ಮರುಮುದ್ರಣ ಕಂಡ ಕೃತಿ. ಇದು ತೇಜಸ್ವಿ ಅವರ ಮೂಲಕ ಕುವೆಂಪು ವ್ಯಕ್ತಿತ್ವವನ್ನು ನೋಡುವ ಕ್ರಮವೂ ಹೌದು. ತೇಜಸ್ವಿ ಅವರ ಆತ್ಮಕಥೆಯ ಕೆಲ ಭಾಗಗಳೂ ಹೌದು. ಕುವೆಂಪು ಸಾಹಿತ್ಯ ಕೃತಿಗಳಷ್ಟೇ ಅಲ್ಲದೆ ಅವರ ಆತ್ಮಕಥೆ 'ನೆನಪಿನ ದೋಣಿ'ಯಲ್ಲೂ ನೋಡಸಿಗದ ಕುವೆಂಪು 'ಅಣ್ಣನ ನೆನಪು'ನಲ್ಲಿ ಕಾಣಸಿಗುತ್ತಾರೆ. ಕೃತಿಯಲ್ಲಿ 41 ತಲೆಬರಹದ ಲೇಖನಗಳಿವೆ. ಒಂದೊಂದು ಭಾಗವೂ ಒಂದೊಂದು ನಾಟಕವಾಗುವ ಸನ್ನಿವೇಶಗಳಿವೆ. ಅಷ್ಟಕ್ಕೂ ತೇಜಸ್ವಿ ಅವರು ತಮ್ಮ ಭಾಷೆಯಲ್ಲಿ ಕಟ್ಟಿಕೊಡುವ ರಸಾನುಭವವನ್ನು ರಂಗದಲ್ಲಿ ಸೃಷ್ಟಿಸುವುದು ಬಹುದೊಡ್ಡ ಸವಾಲು. ಈ ಸೂಕ್ಷ್ಮತೆಗಳೊಂದಿಗೆ ರಂಗರೂಪಕ್ಕೆ ತಂದ ಲೇಖಕ ಕರಣಂ ಪವನ್ ಪ್ರಸಾದ್, ವಿನ್ಯಾಸ ಮತ್ತು ನಿರ್ದೇಶನ ಮಾಡಿದ ಹನು ರಾಮಸಂಜೀವ ಅವರು ದೊಡ್ಡ ಜವಾಬ್ದಾರಿಯನ್ನೇ ಮೆರೆದಿದ್ದಾರೆ.

ಹನು ರಾಮಸಂಜೀವ ಅವರು ಹೇಳಿಕೊಂಡಿರುವಂತೆ ಇದು 'ಸಾಕ್ಷ್ಯ ನಾಟಕ'. ಅಂದರೆ ಜೀವನಾಧಾರಿತ ನಾಟಕ. ಕುವೆಂಪು ಅವರ ವ್ಯಕ್ತಿತ್ವ ನಿರೂಪಣೆಗೆ ಎಷ್ಟು ಬೇಕೊ ಅಷ್ಟನ್ನು ಮಾತ್ರ ಆಯ್ದುಕೊಂಡು, ಅದನ್ನು ರಂಗದಲ್ಲಿ ತರುವಲ್ಲಿ ವಿನ್ಯಾಸಗಾರನ ಜಾಣ್ಮೆ ಹೆಚ್ಚು ಕೆಲಸ ಮಾಡಬೇಕಾಗುತ್ತದೆ.

ಅಷ್ಟು ದೊಡ್ಡ ಕವಿ, ಮನೆಯಲ್ಲಿ ಒಬ್ಬ ತಂದೆಯಾಗಿ ಮಕ್ಕಳನ್ನು ಶಾಲೆಗೆ ಕಳಿಸುವ ಬಗ್ಗೆ, ಸಂಗೀತ ಕಲಿಕೆಗೆ ಅವರನ್ನು ಒಡ್ಡುವ ರೀತಿ, ಹಿರಿಯರಿಗೆ ಗೌರವ ಕೊಡುವುದನ್ನು ಕಲಿಸುವ ಪರಿ, ಗಂಡನಾಗಿ ಹೆಂಡತಿಯನ್ನು ಗೌರವದಿಂದ ಕಾಣುತ್ತಲೇ ಆಕೆಯಲ್ಲಿರುವ ಸಂಪ್ರದಾಯಸ್ಥ ಮನಸ್ಥಿತಿ ಬದಲಿಸುವ ಬಗೆ, ಲೇಖಕನಾಗಿ ಇನ್ನೊಬ್ಬ ಸಾಹಿತಿ ಬಗೆಗಿನ ಅಭಿಪ್ರಾಯ, ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳ ಕುರಿತ ಅವರ ಖಚಿತ ಅಭಿಪ್ರಾಯ, ಅವರ ನ್ಯಾಯಪ್ರಜ್ಞೆ, ಸತ್ಯನಿಷ್ಠೆ -ಇವುಗಳೆಲ್ಲವೂ ನಾಟಕದಲ್ಲಿ ನಿಧಾನಕ್ಕೆ ನಿರೂಪಣೆಗೊಂಡು ಪ್ರೇಕ್ಷಕರಿಗೆ ಕುವೆಂಪು ಇನ್ನಷ್ಟು ಆಪ್ತರಾಗುತ್ತಾರೆ. ಈ 'ಕುವೆಂಪು ಮಾದರಿ'ಯನ್ನು ಹೊಸ ತಲೆಮಾರಿಗೂ ದಾಟಿಸುವ ಹಲವು ಪ್ರಯತ್ನಗಳೂ ನಾಟಕದಲ್ಲಿವೆ.

ಈ ನಾಟಕದಲ್ಲಿ ತೇಜಸ್ವಿ ಅವರ ಗೆಳೆಯ ಕಡಿದಾಳು ಶಾಮಣ್ಣ ಅವರ ಪಾತ್ರ ಬರುತ್ತದೆ. ಜೀವಂತ ಪಾತ್ರದ ಎದುರೇ ನಾಟಕದ ಪಾತ್ರ ಎದುರಾಗುವ ಸನ್ನಿವೇಶವೂ ಈ ಪ್ರಯೋಗಕ್ಕೆ ಒದಗಿಬಂದಿತ್ತು. ವಯೋಸಹಜವಾದ ಬಳಲಿಕೆಯಲ್ಲೇ ಶಾಮಣ್ಣ ಪ್ರೇಕ್ಷಕರ ಮೊದಲ ಸಾಲಿನಲ್ಲಿ ಕುಳಿತು ನಾಟಕ ವೀಕ್ಷಿಸಿ, ಸ್ವಲ್ಪ ಹುರುಪುಗೊಂಡರು.

'ಮಹಾರಾಜ ಕಾಲೇಜಿನ ಹಲವು ವಿದ್ಯಾರ್ಥಿಗಳು ಕಾಲೇಜಿನ ತಮಗೆ ಅಟೆಂಡನ್ಸ್ ಕೊಡಬೇಕೆಂದು ಗಲಾಟೆ ಆರಂಭಿಸುತ್ತಾರೆ. ಅಟೆಂಡನ್ಸ್ ಕೊಡಲು ಕುಲಪತಿಯಾಗಿದ್ದ ಕುವೆಂಪು ಅವರಿಗೆ ನಾನು ಹೇಳಬೇಕೆಂದು ಬಹಳ ಕೆಟ್ಟ ಭಾಷೆಯಲ್ಲಿ ಏಕವಚನ ಉಪಯೋಗಿಸಿ ಬೈದರು. ಅವರ ಅಹಂಕಾರದ ಮಾತಿನ ಮರ್ಜಿ, ಅವರ ವೇಷಭೂಷಣ ನೋಡಿದರೆ ಅವರೆಲ್ಲಾ ಆರ್‌ಎಸ್‌ಎಸ್‌ನವರಿರಬಹುದೆಂದು ಕಾಣುತ್ತದೆ. ಏಕೆಂದರೆ ಮಿಕ್ಕವರು ಯಾರೂ ಅಣ್ಣನ ಬಗ್ಗೆ ಎಷ್ಟೇ ಸಿಟ್ಟಿದ್ದರೂ ಅಷ್ಟು ಆಳವಾದ ತಿರಸ್ಕಾರ, ದ್ವೇಷಗಳಿಂದ ಏಕವಚನದಲ್ಲಿ ಮಾತಾಡುತ್ತಿರಲಿಲ್ಲ ಹೀಗೆ 'ಉದಯರವಿ ಮೇಲೆ ಹಲ್ಲೆ' ಭಾಗದಲ್ಲಿ ತೇಜಸ್ವಿಯವರು ಬರೆದುಕೊಂಡಿದ್ದಾರೆ. ಆದರೆ, ಅದು ರಂಗದಲ್ಲಿ ಆರ್‌ಎಸ್‌ಎಸ್ ಬದಲಿಗೆ ಯಾವುದೋ 'ಸಂಘ'ದವರು ಎಂದಷ್ಟೇ ಸಂಭಾಷಣೆ ಇದೆ. ಇದು ಇವತ್ತಿನ ಸಮೂಹ ಮಾಧ್ಯಮಗಳ ಬಾಯಿಗೆ ಸಿಕ್ಕು ವಿವಾದಗೊಳ್ಳುವುದನ್ನು ತಪ್ಪಿಸಿಕೊಳ್ಳಲು ರಂಗರೂಪ ಮಾಡಿದವರು, ನಿರ್ದೇಶಕರು ಜಂಟಿಯಾಗಿ ಪ್ರಜ್ಞಾಪೂರ್ವಕವಾಗಿ ಆರ್‌ಎಸ್‌ಎಸ್ ಪದ ಕೈಬಿಟ್ಟಿರುವುದಕ್ಕೆ ಸಾಕ್ಷಿ.

ನಾಟಕ ಗಂಭೀರವಾಗಿ ಸಾಗುತ್ತಿರುವಾಗಲೇ ದಿಢೀರ್ ಆಗಿ ಕುವೆಂಪು ಅವರ ಪದ್ಯಗಳು ಕೇಳಿಬಂದು, ಅವಕ್ಕೆ ಇತ್ತ ಜನಪದವೂ ಅಲ್ಲ, ಅತ್ತ ಆಧುನಿಕವೂ ಅಲ್ಲದ ನೃತ್ಯ ಸಂಯೋಜನೆ ಮಾಡಿರುವುದು ರಸಾಸ್ವಾದನೆಗೆ ಅಡ್ಡಿಯುಂಟು ಮಾಡುತ್ತವೆ. ಎರಡು ಸಲ ಹೀಗಾಗುತ್ತದೆ. ಇದಕ್ಕೆ ನಾಟಕದಲ್ಲಿ ಯಾವ ಸಮರ್ಥನೆಯೂ ಇಲ್ಲ.

ನಾಟಕದಲ್ಲಿ ಸಂಭಾಷಣೆಯೇ ಜೀವಾಳ. ಆದರೆ ಶಿವಮೊಗ್ಗದಲ್ಲಿ ಧ್ವನಿವರ್ಧಕ ಸಮರ್ಪಕವಾಗಿಲ್ಲದಿದ್ದರಿಂದ ಸಂಭಾಷಣೆಯನ್ನು ಅಸ್ಪಷ್ಟವಾಗಿತ್ತು. ದೃಶ್ಯಕ್ಕೆ ತಕ್ಕಂತೆ ರಂಗಸಜ್ಜಿಕೆ ಸಿದ್ಧತೆ ಮಾಡಿಕೊಳ್ಳುವ ಸಾಧ್ಯತೆಯೂ ಅಲ್ಲಲ್ಲಿ ಇತ್ತು. ಶಾಮಣ್ಣ, ತೇಜಸ್ವಿ ಅವರು ಸಂಗೀತ ಕಲಿಯುವಾಗ ಹಿನ್ನೆಲೆಯಲ್ಲಿ ಪೊಲೀಸ್ ಠಾಣೆಯ ಬೋರ್ಡ್ ಕಾಣಿಸುತ್ತದೆ!

ಒಂದೂವರೆ ಗಂಟೆಯ ಈ ಸುದೀರ್ಘ ನಾಟಕದಲ್ಲಿ ತೇಜಸ್ವಿ ಅವರಂತೆ ಕಂಡು, ಅವರನ್ನೇ ಆವಾಹಿಸಿಕೊಂಡಂತೆ ನಟಿಸಿದ್ದು ಹನು ರಾಮಸಂಜೀವ ಅವರು. ಕುವೆಂಪು ಪಾತ್ರಧಾರಿ ಮಹೇಶ್ ಕೂಡ ಸೊಗಸಾಗಿ ನಟಿಸಿದರು. ವಸ್ತ್ರವಿನ್ಯಾಸ (ಮಾಲತೇಶ ಬಡಿಗೇರ), ಸಂಗೀತ (ಅಕ್ಷಯ್ ಭೋಂಸ್ಲೆ), ಬೆಳಕು (ಸೂರ್ಯ ಸಾಥಿ) ನಾಟಕದ ಮತ್ತಷ್ಟು ಸಶಕ್ತ ಅಂಶಗಳು.

ವಿಚಾರಗಳನ್ನು ಕನ್ನಡಿಸುವ ಕನ್ನಡಿ

ಎಸ್.ದಿವಾಕರ್

ವಿಮರ್ಶೆ


ಮಾಯದ ಕನ್ನಡಿ
ಲೇ: ಅಕ್ಷರ ಕೆ.ವಿ.
ಪ್ರ: ಅಕ್ಷರ ಪ್ರಕಾಶನ, ಹೆಗ್ಗೋಡು
ಸಂ: 9449623526
ಪು: 224 ₹250

ಪ್ರಬಂಧ, ಪ್ರಸ್ತಾಪ, ಸಾಂದರ್ಭಿಕ, ಸಂದರ್ಶನ ಎಂಬ ನಾಲ್ಕು ಭಾಗಗಳಲ್ಲಿರುವ ಈ 'ಮಾಯದ ಕನ್ನಡಿ'ಯಲ್ಲಿ ನಾವು ನಮ್ಮನ್ನು ಬೆರಗುಗೊಳಿಸುವಷ್ಟು ವ್ಯಾಪಕ ಜ್ಞಾನವುಳ್ಳ ಒಬ್ಬ ವಿದ್ವಾಂಸನನ್ನಷ್ಟೇ ಅಲ್ಲ, ನಮಗೆ ಮನವರಿಕೆ ಮಾಡಿಕೊಡುವಷ್ಟೇ ಉಜ್ವಲವಾಗಿ ನಮ್ಮನ್ನು ಪ್ರಚೋದಿಸುವ ಪ್ರಬಂಧಕಾರನನ್ನೂ ಎದುರುಗೊಳ್ಳುತ್ತೇವೆ. ಈ ಬರಹಗಳು ತಮ್ಮ ಬೌದ್ಧಿಕ ವ್ಯಾಪ್ತಿಯಿಂದ ಹೇಗೋ ಹಾಗೆ ತಮ್ಮ ಸೂಕ್ಷ್ಮ ಗ್ರಹಣಶಕ್ತಿಯಿಂದಲೂ ವಿಶಿಷ್ಟ ದೃಷ್ಟಿಕೋನದಿಂದಲೂ ನಮ್ಮ ಗಮನ ಸೆಳೆಯುತ್ತವೆ.

'ಮೈಲುತುತ್ತದ ನೀಲ ಸ್ಫಟಿಕ' ಎಂಬ ಪ್ರಬಂಧವನ್ನೇ ತೆಗೆದುಕೊಳ್ಳಿ. ಅಡಿಕೆಯ ಕೊಳೆರೋಗಕ್ಕೆ ಸಿಂಪಡಿಸುವ ಮೈಲುತುತ್ತವನ್ನು ಕುರಿತು ಒಂದು ಧ್ಯಾನದಂತಿರುವ ಈ ಪ್ರಬಂಧ 18ನೆಯ ಶತಮಾನದಲ್ಲಿ ಫ್ರಾನ್ಸಿನ ಬೋರ್ದೊ ವಿಶ್ವವಿದ್ಯಾಲಯ ಕಂಡುಹಿಡಿದ ಬೋರ್ದೊ ದ್ರಾವಣ, ಕೆನಡಾದ ಲೆಸ್ಲೀ ಕೋಲ್ಮನ್ ಮೈಸೂರು ಪ್ರಾಂತ್ಯದಲ್ಲಿ ಅಡಿಕೆಯ ಕೊಳೆ ರೋಗಕ್ಕೆ ಸೂಚಿಸಿದ ಅದೇ ಬೋರ್ದೊ ದ್ರಾವಣ, ಮೈಲುತುತ್ತದ ನೀಲಿಬಣ್ಣದ ಪ್ರಭೆ, ಸಂಸ್ಕೃತದಲ್ಲಿ ಅದಕ್ಕಿರುವ ತುತ್ಥ, ತುತ್ಥಕ ಎಂಬ ಹೆಸರುಗಳು, ಮಯೂರ-ಮೈರ-ಮೈಲು ಎಂಬ ಮಾರ್ಗದಲ್ಲಿ ನಡೆದ ಅಪಭ್ರಂಶ, ನವಿಲು ತುತ್ತವೇ ಮೈಲುತುತ್ತವಾದ ಬಗೆ, ರಾಸಾಯನಿಕ ಕ್ರಿಯೆಯಿಂದ ಉಂಟಾಗುವ ವಸ್ತುಧರ್ಮದ ಬದಲಾವಣೆ, ಕ್ವಾಂಟಂ ಭೌತಶಾಸ್ತ್ರ, ದರ್ಶನಶಾಸ್ತ್ರದ ಭಾಷೆಯಲ್ಲಿ ಪದಾರ್ಥ ಮೀಮಾಂಸೆ, ಛಾಂದೋಗ್ಯೋಪನಿಷತ್ತಿನ 'ತ್ರಿವೃತ್ಕರಣ', ಆಮೇಲಿನ ಸಿದ್ಧಾಂತಕಾರರ 'ಪಂಚೀಕರಣ'ವೆಂಬ ಪರಿಕಲ್ಪನೆ, ತಾಮ್ರ-ಗಂಧಕ-ನೀರುಗಳಿಂದ ಹುಟ್ಟಿದ ಮೈಲುತುತ್ತದ ಸ್ಫಟಿಕ ಆ ಐದು ಮೂಲವಸ್ತುಗಳಲ್ಲೂ ಇಲ್ಲದ ನೀಲಿಪ್ರಭೆಯನ್ನು ಪಡೆದುಕೊಳ್ಳುವ ಪರಿ, ಮೈಲುತುತ್ತದ ನೀಲಿಯನ್ನು ದ್ವೈತ-ಅದ್ವೈತ-ವಿಶಿಷ್ಟಾದ್ವೈತಗಳು ಹೇಗೆ ಗ್ರಹಿಸಬಹುದೆಂಬ ವಿಚಾರಲಹರಿ- ಹೀಗೆ ನಾವು ಯೋಚಿಸಿರದ/ಗಮನಿಸಿರದ ಅನೇಕ ವಸ್ತು ವಿಶೇಷಗಳನ್ನು ಚರ್ಚಿಸುವ, ಕೇಂದ್ರದಿಂದ ಹೊರಟು ಹತ್ತು ದಿಕ್ಕುಗಳಲ್ಲಿ ಸಂಚರಿಸಿ ಮತ್ತೆ ಕೇಂದ್ರಕ್ಕೇ ಹಿಂದಿರುಗುವ ಈ ಪ್ರಬಂಧ ಹಲವು ಬಣ್ಣದ ಎಳೆಗಳನ್ನು ನೆಯ್ದು ರಚಿಸಲಾದ ಒಂದು ಸುಂದರ ವಿನ್ಯಾಸ.

ಈ ಪುಸ್ತಕದ ಶೀರ್ಷಿಕೆಯೂ ಆಗಿರುವ ಮೊದಲ ಪ್ರಬಂಧ 'ಮಾಯದ ಕನ್ನಡಿ' ಕೇರಳದ ಕಣ್ಣೂರಿನ ಬಳಿಯ ಒಂದು ಊರಿನಲ್ಲಿ ನಡೆದ ತೆಯ್ಯಮ್ ಪ್ರದರ್ಶನವನ್ನು ನಿರೂಪಿಸುತ್ತ ಅದ್ವೈತದಂಥ ಅಮೂರ್ತತತ್ತ್ವವನ್ನು ಸಾಕ್ಷಾತ್ಕರಿಸಿ ಕೊಡುತ್ತದೆ. ಲೌಕಿಕ ಬುನಾದಿಯಲ್ಲೇ ಅಲೌಕಿಕ ಅನುಭವವೊಂದು ಘಟಿಸಿಬಿಟ್ಟಿತೆಂದು ನಮಗೆ ಮನವರಿಕೆ ಮಾಡಿಕೊಡುವ ಅಕ್ಷರ 'ನಾವೆಲ್ಲ ನಿಜವೆಂದು ಭಾವಿಸಿರುವ ಈ ಲೋಕದಲ್ಲಿ ಎಷ್ಟು ನೆಮ್ಮದಿಯಾಗಿ ಮುಳುಗಿಕೊಂಡಿರುತ್ತೇವೆ ಅಂದರೆ, ಅದರ ಆಚೆಗಿನ ಒಂದು ಝಲಕು ಕಂಡರೂ ಸಾಕು, ನಮ್ಮ ಮನಸ್ಸು ವಿಚಲಿತಗೊಂಡು ಆತಂಕ ಹುಟ್ಟುತ್ತದೆ; ನಮಗೆ ಕಾಣುವ ಈ ಭೌತಿಕದ ಆಚೆಗೂ ಏನೆಲ್ಲ ಇರಬಹುದಲ್ಲ ಅನ್ನಿಸಿ ಭಯವಾಗತೊಡಗುತ್ತದೆ' ಎಂದು ತಮ್ಮ ಮಿತ್ರರೊಬ್ಬರ ಮಾತನ್ನು ಉಲ್ಲೇಖಿಸುತ್ತಾರೆ. 'ಕಾಣ್ಕೆ ಕಣ್ಕಟ್ಟುಗಳ ನಡುವೆ ಗೆರೆ ಬಲು ತೆಳುವು'.

'ಪ್ರಜ್ಞೆ ಎಂಬ ಪದಾರ್ಥ' ಇನ್ನೊಂದು ಮುಖ್ಯ ಪ್ರಬಂಧ. ಅಮೆರಿಕನ್ ಕಂಪೆನಿಯ ಉನ್ನತ ಉದ್ಯೋಗಿಗಳಾದ ಗಂಡ–ಹೆಂಡಿರ (ಸಂಭವನೀಯ) ವೈಯಕ್ತಿಕ ಸಮಸ್ಯೆಯೊಂದರ ಜಾಡು ಹಿಡಿದು ಕೃತಕ ಬುದ್ಧಿಮತ್ತೆ, ಪ್ರಜ್ಞೆ ಪದಾರ್ಥದ ಮೇಲೆ ಎಂಥ ಯಶಸ್ಸು ಸಾಧಿಸಬಹುದೆಂದು ಸೂಚಿಸುವ ಒಂದು ರಂಗಪ್ರಸಂಗ, ಸ್ಟಾನಿಸ್ಲಾವ್‌ಸ್ಕಿಯ ಅಭಿನಯ ಶಿಕ್ಷಣ ವಿಧಾನ, ಮನೋವಿಜ್ಞಾನ, ಡೆಕಾರ್ಟ್ ಮತ್ತು ಗೆಲಿಲಿಯೋರ ವಿಚಾರಗಳು, ಸಾಂಖ್ಯದರ್ಶನ ಮೊದಲಾದವುಗಳನ್ನು ಪರಿಗ್ರಹಿಸಿ ಕಡೆಗೆ ಅಂತರ್ಜಾಲದಲ್ಲಿ 'ಪ್ಯಾನ್‌ಸೈಖಿಸಮ್‌ನ ತತ್ತ್ವದ ಮೂಲಾಂಶವು ಅದ್ವೈತ ಮತ್ತು ಪ್ರತ್ಯಭಿಜ್ಞಾನಗಳಲ್ಲಿ ಕಾಣಸಿಗುತ್ತದೆ ಎಂದು ಸೂಚಿಸುವ ಹಲವು ಉಲ್ಲೇಖಗಳು ನನಗೆ ಕಾಣಸಿಕ್ಕಿದವು' ಎಂದು ಕೊನೆಗೊಳ್ಳುತ್ತದೆ.

ಭಾರತದಲ್ಲಿ ಬ್ರಿಟಿಷರ ಆಡಳಿತಕ್ಕೆ ಮೊದಲು ಎಂಥ ಪರಿಸ್ಥಿತಿಯಿತ್ತೆಂದು ತಿಳಿಯಲು ಹಲವು ದಶಕಗಳ ಕಾಲ ಸಂಶೋಧನೆ ನಡೆಸಿದ ಧರಮ್‌ಪಾಲ್ ಲಂಡನ್ನಿನ ಬ್ರಿಟಿಷ್ ಮ್ಯೂಸಿಯಮ್‌ನಲ್ಲಿ ಮತ್ತು ಇಂಡಿಯಾ ಆಫೀಸ್ ಲೈಬ್ರರಿಯಲ್ಲಿ ಸಾವಿರಾರು ಪುಟಗಳಷ್ಟು ದಾಖಲೆಗಳನ್ನು ಕೈಯಲ್ಲಿ ಬರೆದು ಪ್ರತಿಮಾಡಿಕೊಂಡವರು. 'ಗಾಂಧಿಯ ಗುರಿಗೆ ಧರಮ್‌ಪಾಲ್ ದಾರಿಗಳು' ಎಂಬ ಲೇಖನದಲ್ಲಿ ಅಕ್ಷರ ಅವರು ಇಂಗ್ಲಿಷಿನಲ್ಲಿರುವ ಧರಮ್‌ಪಾಲರ ಐದು ಮುಖ್ಯ ಗ್ರಂಥಗಳ ವಿಚಾರಗಳನ್ನು ಸಂಗ್ರಹಿಸಿ ಕೊಡುತ್ತ, '18-19ನೆಯ ಶತಮಾನಗಳ ಇತಿಹಾಸ ಕುರಿತು ಭಾರತದ ಇನ್ನಾವ ಸಂಶೋಧಕನೂ ಮಾಡಿದ್ದಕ್ಕಿಂತ ಹೆಚ್ಚು ಕೆಲಸ ಮಾಡಿದ್ದಾರೆ; ಆದರೆ, ಇತಿಹಾಸದ ಪಠ್ಯಗಳಲ್ಲಿ ಅವರ ಹೆಸರು ಕಾಣಸಿಗುವುದಿಲ್ಲ' ಎಂದಿರುವುದು ನಮ್ಮಕಾಲದ ವ್ಯಂಗ್ಯವೇ ಸರಿ.

ಒಳ್ಳೆಯ ಬರವಣಿಗೆಯನ್ನು ಇಷ್ಟಪಡುವವರೆಲ್ಲರೂ ಅಕ್ಷರ ಅವರ ಶೈಲಿಯನ್ನು, ಆ ಶೈಲಿಗಿರುವ ಧ್ವನಿಶಕ್ತಿಯನ್ನು, ಅದಕ್ಕಿರುವ ಓಜಸ್ಸನ್ನು ಇಷ್ಟಪಡಲೇಬೇಕು. ಅವರಲ್ಲಿ ಅಸ್ಪಷ್ಟತೆಯಿಲ್ಲ; 'ರಾಜಕೀಯವಾಗಿ ಸರಿ' ಎನ್ನುವಂಥ ಒಂದೇಒಂದು ವಾಕ್ಯವೂ ಇಲ್ಲ. ಇನ್ನು ಅವರ ಪ್ರಬಂಧಗಳಲ್ಲಿ/ಲೇಖನಗಳಲ್ಲಿ ಎಂಥ ಸಂರಚನೆಯಿರುತ್ತದೆಂದರೆ ಅವು ಪರಿಪೂರ್ಣವಾಗಿ ಕಟ್ಟಿದ ಕಟ್ಟಡದಂತೆ ನಿಜಕ್ಕೂ ಪ್ರಮಾಣಬದ್ಧವಾಗಿರುತ್ತವೆ. ನನಗೆ ಅನ್ನಿಸುವಂತೆ ಅವರದು ಡಿವಿಜಿಯವರ ಗದ್ಯಕ್ಕೆ ಹತ್ತಿರವಾಗಿರುವ ಗದ್ಯ. ತೀರ ಗಂಭೀರವಾದ ವಿಷಯವನ್ನು ಚರ್ಚಿಸುವಾಗ, ಒಂದು ಮುಖ್ಯ ವಿಚಾರವನ್ನು ವಿಷದಪಡಿಸಬೇಕೆನಿಸಿದಾಗ ಅವರು, ಡಿವಿಜಿಯವರ ಹಾಗೆಯೇ, ಓದುಗರನ್ನು ಹೆಜ್ಜೆಹೆಜ್ಜೆಗೂ ನಡೆಸುತ್ತ, ವಿಶಿಷ್ಟ ಕತೆ-ಪ್ರಸಂಗಗಳಿಂದ ಅವರ ಮನಸ್ಸನ್ನು ಸೆಳೆದುಕೊಳ್ಳುತ್ತ ತಾರ್ಕಿಕ ಅಂತ್ಯವನ್ನು ತಲಪುತ್ತಾರೆ. ಅವರಿಗೆ ಬುದ್ಧಿವಂತರೆನಿಸಿಕೊಂಡವರ ಕೆಲವು ಅಭಿಪ್ರಾಯಗಳು ಮನವೊಲಿಕೆಯಿಂದ, ನಿರ್ಭೀತ ನಿಲುವಿನಿಂದ, ಸಮಗ್ರ ದೃಷ್ಟಿಯಿಂದ ಬದಲಾಗಬಹುದೇ ಹೊರತು ಒತ್ತಾಯ ಹೇರುವುದರಿಂದಲ್ಲ ಎಂದು ಗೊತ್ತಿದೆ.

ಕ್ಲೀಶೆಗಳನ್ನು ಬಹುವಾಗಿ ದ್ವೇಷಿಸಿದ ಜಾರ್ಜ್ ಆರ್ವೆಲ್ ಅಭಿವ್ಯಕ್ತಿಯಲ್ಲಿ ನುಸುಳಬಹುದಾದ ಎಲ್ಲ ಬಗೆಯ ನಿರ್ಲಕ್ಷ್ಯವನ್ನೂ ದ್ವೇಷಿಸಿದ. ಅದಕ್ಕೆ ಕಾರಣ ಅವನಿಗೆ ಸ್ಪಷ್ಟ ಚಿಂತನೆಗೆ ಭಾಷೆಯ ಸ್ಪಷ್ಟತೆ ಅತ್ಯಗತ್ಯವೆಂಬ, ಸ್ಪಷ್ಟಚಿಂತನೆಯಿಲ್ಲದಿದ್ದರೆ ಸಾಮಾಜಿಕ ಆರೋಗ್ಯವೂ ಇಲ್ಲವೆಂಬ ನಂಬಿಕೆಯಿದ್ದದ್ದು. ಅಕ್ಷರ ಅವರು ಸಂಸ್ಕೃತಿಗಿರಬೇಕಾದ ಸ್ವಾಯತ್ತತೆಯ ಬಗ್ಗೆ ಬರೆಯಲಿ, ಕನ್ನಡ ಭಾಷೆಯ ಕ್ರಿಯಾಶೀಲತೆಗೆ ಬದಲಾಗಿ ನಾವು ಅನುಸರಿಸುತ್ತಿರುವ 'ಪ್ರತಿಕ್ರಿಯಾಶೀಲತೆ'ಯ ಬಗ್ಗೆ ಎಚ್ಚರಿಸಲಿ, ಕನ್ನಡ ಪುಸ್ತಕೋದ್ಯಮ ಹುಡುಕಿಕೊಳ್ಳಬೇಕಾದ ದಾರಿಗಳ ಬಗ್ಗೆ ಬರೆಯಲಿ, ಚಿಪ್ಪಳಿ ಗೋಪಾಲಕೃಷ್ಣರಾಯರ ವ್ಯಕ್ತಿತ್ವವನ್ನು ಚಿತ್ರಿಸಲಿ, ಎಂ.ಎ. ಹೆಗಡೆ, ಜಿ.ರಾಜಶೇಖರ ಅವರ ಪಾಂಡಿತ್ಯ, ವೈಚಾರಿಕತೆಗಳ ಬಗ್ಗೆ ಬರೆಯಲಿ, ಅವರು ತೀರ ವೈಯಕ್ತಿಕ ಪ್ರಬೇಧ ಎನ್ನಿಸುವ ಪ್ರಬಂಧವನ್ನು ಸಾಮಾಜಿಕ ಚಿಂತನೆಯ ಒಂದು ಆಯಾಮವಾಗಿ ಪರಿವರ್ತಿಸುತ್ತಾರೆ. ಹಾಗಾಗಿ ಅವರು ಕೇವಲ ಚಿಂತಿಸುವುದಿಲ್ಲ, ತಮ್ಮ ಓದುಗರನ್ನೂ ಚಿಂತಿಸುವಂತೆ ಪ್ರೇರೇಪಿಸಬಲ್ಲವರು.

ಚರಿತ್ರೆ ವರ್ತಮಾನಗಳಲ್ಲಿ ಆಳವಾಗಿ ಮುಳುಗಿರುವ, ಪ್ರಸಂಗಗಳಿಂದ ಸೂಕ್ತಿಗಳಿಂದ ಸಮೃದ್ಧವಾಗಿರುವ, ಒಂದು ಜೀವಮಾನದ ಓದು ಅಧ್ಯಯನಗಳಿಂದ ಪ್ರಬೋಧನೆಗೊಂಡ ಒಂದು ಮನಸ್ಸು ಈ 'ಮಾಯದಕನ್ನಡಿ'. ಇದು ನಮ್ಮ ಕಾಲದ ಬಹುಮುಖ್ಯ ಚಿಂತಕರೊಬ್ಬರ ವಿಚಾರಗಳನ್ನು ಕನ್ನಡಿಸುವ ಕನ್ನಡಿಯೂ ಹೌದು.

ಬಹುತೇಕ ಹಕ್ಕಿಪಿಕ್ಕಿ ಸಮುದಾಯದವರು ವಿದೇಶಗಳಲ್ಲಿ ಅಲೆಮಾರಿ ಬದುಕನ್ನು ನಡೆಸುತ್ತಿರುವುದರಿಂದ ಪಕ್ಷಿರಾಜಪುರದ ಬೀದಿಗಳು ಬಿಕೊ ಎನ್ನುತ್ತಿವೆ

ಹಕ್ಕಿಪಿಕ್ಕಿಗಳ ಹಕೀಕತ್ತು

8ನೇ ಪುಟದಿಂದ...

ವಿದೇಶಕ್ಕೆ ಹೋಗುವವರ ಸಂಖ್ಯೆ ಹೆಚ್ಚಿದಂತೆಲ್ಲ ಇವರಲ್ಲೇ ಪೈಪೋಟಿಯೂ ಆರಂಭವಾಯಿತು. ಹೆಚ್ಚಿನ ಮಂದಿ ವ್ಯಾಪಾರ ಇಲ್ಲದೇ ಬರಿಗೈಲಿ ವಾಪಸ್ಸಾದರು. ಲೇವಾದೇವಿಗಾರರ ಕಿರುಕುಳ ಸಹಿಸಲಾರದೇ ಅಡ್ಡದಾರಿ ತುಳಿದವರೂ ಇದ್ದಾರೆ.

'ನಾವು ಕೆಲವೊಂದು ಗಿಡಮೂಲಿಕೆಗಳನ್ನು ಕೇರಳದ ತಲಚೇರಿ, ಮಾನಂದವಾಡಿಗೆ ತೆರಳಿ ಹುಡುಕಿ ತರುತ್ತೇವೆ. ಆದರೂ, ವಿದೇಶದಲ್ಲಿ ಹೋದ ಎಲ್ಲರಿಗೂ ವ್ಯಾಪಾರ ಆಗುವುದಿಲ್ಲ. ಅದೃಷ್ಟ ಇದ್ದವರು ಭರಪೂರ ವ್ಯಾಪಾರ ನಡೆಸಿ ಕಿಸೆ ತುಂಬಿಸಿಕೊಂಡು ಬರುತ್ತಾರೆ. ಹೆಚ್ಚಿನ ಮಂದಿ ಬರಿಗೈಯಲ್ಲಿ ವಾಪಸ್ ಬರುತ್ತಾರೆ. ಮತ್ತೆ ಅದೇ ಲೇವಾದೇವಿಗಾರರ ಬಳಿ ಕೈಯೊಡ್ಡಿ ಮತ್ತೊಂದು ದೇಶಕ್ಕೆ ಹಾರುತ್ತಾರೆ. ವ್ಯಾಪಾರವಾದ ಹಣದ ಬಹುಭಾಗ ಸಾಲ ಕೊಟ್ಟವರ ಕಿಸೆಗೆ ಹೋಗುತ್ತದೆ. ನಮಗುಳಿಯುವುದು ಕೊನೆಗೆ ಊಟ ಮಾಡುವಷ್ಟು ಮಾತ್ರ' ಎಂದು ಕಾಶೀನಾಥ್ ಹೇಳುತ್ತಾರೆ.

'ನಮ್ಮ ಮನೆಯಿಂದ ಐವರು ಲಕ್ಷಾಂತರ ರೂಪಾಯಿ ಸಾಲ ಮಾಡಿಕೊಂಡು ಸುಡಾನ್ ದೇಶಕ್ಕೆ ಹೋಗಿ ಒಂದು ತಿಂಗಳಾಗಿಲ್ಲ. ಅಲ್ಲಿ ಯುದ್ಧ ಆರಂಭವಾಯಿತು. ಅವರು ವಾಪಸ್ ಬಂದರೂ ಇಲ್ಲಿನ ಸಾಲ ತೀರಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಿದೆ' ಎಂದು ತಲೆ ಕಾಶೀನಾಥ್ ತಲೆ ಮೇಲೆ ಕೈ ಹೊತ್ತು ಕುಳಿತರು.

ಇಂದಿಗೂ ಹಕ್ಕಿಪಿಕ್ಕಿಗಳಲ್ಲಿ ಶಿಕ್ಷಣ ಪಡೆದವರ ಸಂಖ್ಯೆ ಕಡಿಮೆ. ಶೈಕ್ಷಣಿಕವಾಗಿ ಹಿಂದುಳಿದ, ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಪಟ್ಟಿಯಲ್ಲೂ ಹಿಂದಿರುವಂಥ ದೇಶಗಳನ್ನೇ ಇವರು ಮಸಾಜ್ ತೈಲಗಳ ಮಾರಾಟಕ್ಕೆ ಆಯ್ಕೆ ಮಾಡಿಕೊಳ್ಳುತ್ತಾರೆ. ಪ್ರವಾಸಿ ವೀಸಾದಡಿ ಆ ದೇಶಗಳಿಗೆ ಹೋಗಿ, ಅಲ್ಲಿ ಊರಿಂದೂರಿಗೆ ಅಲೆದಾಡಿ ಆಯುರ್ವೇದಿಕ್ ಎಣ್ಣೆಗಳನ್ನು ಮಾರಾಟ ಮಾಡುತ್ತಾರೆ. ಬದಲಾದ ಕಾಲಘಟ್ಟಕ್ಕೆ ಹೊಂದಿಕೊಂಡಿರುವ ಕೆಲವರು ತಮ್ಮ ಆಯುರ್ವೇದಿಕ್ ಎಣ್ಣೆಗಳನ್ನು ಆನ್‌ಲೈನ್‌ನಲ್ಲೂ ಮಾರಾಟ ಮಾಡಿ ಲಾಭ ಗಳಿಸುತ್ತಿದ್ದಾರೆ.

ಗಳಿಕೆಯ ಹೊಸ ದಾರಿಗಳು ತೆರೆದುಕೊಂಡರೂ, ಆರ್ಥಿಕ ಅಶಿಸ್ತಿನಿಂದ ಲೇವಾದೇವಿದಾರರ ಹಿಡಿತಕ್ಕೆ ಸಿಲುಕುತ್ತಿರುವವರೇ ಹೆಚ್ಚು ಎಂದು ಸ್ಥಳೀಯರೇ ವಸ್ತುಸ್ಥಿತಿಗೆ ಕನ್ನಡಿ ಹಿಡಿಯುತ್ತಾರೆ.

ಕಾಲ್ಪನಿಕ ಚಿತ್ರರಂಗದ ಅಂತರಂಗ

ಒಳನೋಟ


ಚಿತ್ತರಂಗ(ಕಾದಂಬರಿ)
ಲೇ: ಆಶಾ ರಘು
ಪ್ರ: ಸಾಹಿತ್ಯ ಲೋಕ ಪಬ್ಲಿಕೇಷನ್ಸ್
ಸಂ: 9945939436
ಪು: 308 ₹370

ಸಿನಿಮಾ ಚಿತ್ರೀಕರಣದ ವೇಳೆ ನಡೆದ ಘಟನೆಗಳನ್ನು, ಅನುಭವಗಳನ್ನು ಹಲವು ನಿರ್ದೇಶಕರು ಹಾಗೂ ಚಿತ್ರತಂಡದಲ್ಲಿ ಕಾರ್ಯನಿರ್ವಹಿಸಿದವರು ಕೃತಿರೂಪದಲ್ಲಿ ಕಟ್ಟಿಕೊಟ್ಟ ಹಲವು ಉದಾಹರಣೆಗಳು ಕನ್ನಡದಲ್ಲಿವೆ. ಇಂಥ ಕೃತಿಗಳಲ್ಲಿ ಇರುವ ಅಂಶಗಳು ಅನುಭವ ಆಧರಿತವಾದವು. ಚಿತ್ರರಂಗದಲ್ಲಿನ ಕೆಲ ಖ್ಯಾತ ಕಲಾವಿದರ ಬದುಕಿನ ಪ್ರೇರಣೆ ಪಡೆದ ಕಾದಂಬರಿಗಳೂ ಇವೆ.

ರಂಗಭೂಮಿ, ಕಿರುತೆರೆ, ಸಿನಿಮಾಗಳಲ್ಲಿ ಸಂಭಾಷಣೆಕಾರರಾಗಿ, ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ ಅನುಭವ, ಅನುಭಾವಗಳಿಗೆ ಕಾದಂಬರಿ ರೂಪ ನೀಡಿ ಕಾಲ್ಪನಿಕ ಲೋಕ ಸೃಷ್ಟಿಸಿದ್ದಾರೆ ಆಶಾ ರಘು. ಅದುವೇ 'ಚಿತ್ತರಂಗ'. ಒಂದರ್ಥದಲ್ಲಿ ಚಿತ್ರರಂಗದ 'ಚಿತ್ತರಂಗ' ಈ ಹೊತ್ತಿಗೆ. ಚಲನಚಿತ್ರರಂಗವೇ ಈ ಕೃತಿಯ ಕೇಂದ್ರ ವಸ್ತು. 'ಆವರ್ತ', 'ಗತ' ಹಾಗೂ 'ಮಾಯೆ' ಬಳಿಕ ಕಾದಂಬರಿ ಲೋಕದಲ್ಲಿ ಈ ಕೃತಿ ಅವರ ನಾಲ್ಕನೇ ಹೆಜ್ಜೆ.

ಕನ್ನಡ ಚಿತ್ರರಂಗದ ಎಪ್ಪತ್ತು-ಎಂಬತ್ತರ ದಶಕದ ವಾತಾವರಣವನ್ನು ಈ ಕೃತಿ ಹೊಂದಿದೆ. ಅರಿಕೆಯಲ್ಲೇ ಈ ಕೃತಿಯಲ್ಲಿ ಬರುವ ಎಲ್ಲ ಪಾತ್ರಗಳು ಹಾಗೂ ಸನ್ನಿವೇಶಗಳು ಕೇವಲ ಕಾಲ್ಪನಿಕ ಎನ್ನುವುದನ್ನು ಲೇಖಕಿ ಸ್ಪಷ್ಟಪಡಿಸುತ್ತಾರೆ. ಈ ಸ್ಪಷ್ಟನೆಗೂ ಕಾರಣವಿದೆ. ಕೃತಿಯನ್ನು ಓದಿದ ಓದುಗನಿಗೆ ಇಲ್ಲಿನ ಪಾತ್ರಗಳು ಕನ್ನಡ ಚಿತ್ರರಂಗದ ಖ್ಯಾತ ನಿರ್ದೇಶಕ ಹಾಗೂ ಕಲಾವಿದರಿಗೆ ಹೋಲಿಕೆಯಂತೆ ತೋರುತ್ತದೆ. ಮುನ್ನುಡಿ ಬರೆದ ಎಚ್.ಎಸ್.ಸತ್ಯನಾರಾಯಣ ಅವರು ಇದನ್ನು ನೇರವಾಗಿ ಉಲ್ಲೇಖಿಸಿ, 'ಕಾದಂಬರಿ ಓದಿ ಮುಗಿಸಿದ ಮೇಲೆ ನಮ್ಮ ಕನ್ನಡ ಚಿತ್ರರಂಗವನ್ನಾಳಿದ ಪುಟ್ಟಣ್ಣ ಕಣಗಾಲ್, ಕಲ್ಪನಾ, ಆರತಿ ಬಿಡದೆ ಕಾಡುವಷ್ಟು ನೆನಪಾಗುತ್ತಾರೆ. ಇದು ಅವರ ಕುರಿತಾದ ಕಾದಂಬರಿಯೆಂಬ ಭಾವ ಆವರಿಸಿಬಿಡುತ್ತದೆ' ಎಂದಿದ್ದಾರೆ. ಇದಕ್ಕೆ ಪ್ರತಿಯಾಗಿ 'ಓದುಗರು ಇದನ್ನು ಕೇವಲ ಒಂದು ಸೃಜನಶೀಲ ಕಲ್ಪಿತ ಕಾದಂಬರಿಯಾಗಿಯಷ್ಟೇ ಭಾವಿಸಬೇಕು' ಎಂದಿದ್ದಾರೆ ಲೇಖಕಿ. ಈ ಮೂಲಕ ಪೂರ್ವಗ್ರಹವಿಲ್ಲದೆ ಈ ಕೃತಿಯ ಓದಿಗಿಳಿಯಬೇಕು ಎನ್ನುವ ಸಂದೇಶ ನೀಡಿದ್ದಾರೆ.

ಕೃತಿ ಆರಂಭವಾಗುವುದು ಸುಬ್ಬಣ್ಣ ಎಂಬ ಸಿನಿಮಾ ನಿರ್ದೇಶಕನ ಸಾಮರ್ಥ್ಯ ಪ್ರದರ್ಶನದಿಂದ. ಈತನೇ ಚಿತ್ರದ ನಾಯಕ. 'ಸ್ಟಾರ್ ಮೇಕರ್ ನಾನು' ಎನ್ನುವ ಸುಬ್ಬಣ್ಣನ ಮಾತೇ ಆತನ ವ್ಯಕ್ತಿತ್ವವನ್ನು ಓದುಗರ ಮುಂದಿಡುತ್ತದೆ. ಇಂಥ ನಿರ್ದೇಶಕನ ಬದುಕು, ಆತನ ಬದುಕಿನಲ್ಲಿ ಬರುವ ಅಹಲ್ಯ–ಕಸ್ತೂರಿ ಎಂಬ ತಾರೆಯರು, ಸುಬ್ಬಣ್ಣನ ಪತ್ನಿ ರಾಜೇಶ್ವರಿಯ ಅಂತರಂಗ ತೆರೆದುಕೊಳ್ಳುತ್ತಾ ಕೃತಿ ಸಾಗುತ್ತದೆ. ಒಟ್ಟಿನಲ್ಲಿ ಕೃತಿಯು ಜೀವನ–ನಾಟಕದ ಸಮಗ್ರಚಿತ್ರ. ಚಿತ್ರರಂಗದಲ್ಲಿ ನಡೆಯುವ ಸಂಬಂಧಗಳ ಬಿರುಕು, ಅನುಮಾನ, ಊಹಾಪೋಹ ಹೀಗೆ ವಾಸ್ತವಕ್ಕೆ ಹತ್ತಿರವೆನಿಸುವ ಹಲವು ಸನ್ನಿವೇಶಗಳು ಇಲ್ಲಿವೆ.

ಚಲನಚಿತ್ರದಲ್ಲಿ ಬಳಸುವ ಪ್ರಮುಖ ಫ್ಲ್ಯಾಶ್‌ಬ್ಯಾಕ್ ತಂತ್ರವನ್ನೇ ಇಲ್ಲಿ ಬಳಸಿಕೊಂಡು, ಪತ್ರಕರ್ತನೊಬ್ಬ ನಡೆಸುವ ಸಂದರ್ಶನದದ ರೂಪ ನೀಡಿ ಸುಬ್ಬಣ್ಣನ ಬದುಕನ್ನು ಬಾಲ್ಯದಿಂದ ನಿರ್ದೇಶನದವರೆಗೂ ಹರಿಯಬಿಡುತ್ತಾರೆ. ಸುಬ್ಬಣ್ಣನ ಬದುಕಿನ ಹೆಜ್ಜೆಗಳನ್ನು ಕಲಾತ್ಮಕವಾಗಿ ಪೋಣಿಸಿದ್ದಾರೆ ಲೇಖಕಿ. ಸುಬ್ಬಣ್ಣ ನಿರ್ದೇಶಕನಾಗಿದ್ದರೂ, ಆತನ ಬದುಕಿನ ವಿವರಣೆ ಸಿನಿಮಾ ಶೈಲಿ ಪಡೆದುಕೊಳ್ಳದೆ ವಾಸ್ತವವೇ ಎನಿಸಿಬಿಡುವಷ್ಟು ಲೇಖನಿ ಹೊರಳಿದೆ. ಅಹಲ್ಯ ಎಂಬ ನಟಿಯೊಂದಿಗಿನ ಸಂಬಂಧ, ಪ್ರಭಾ ನೆನಪು, ಕಸ್ತೂರಿಯ ಬಣ್ಣದ ಲೋಕದ ಏಳುಬೀಳು ಬಿಡಿಸುತ್ತಾ, ಸಿನಿಮಾ ಶೈಲಿಯಲ್ಲೇ ನಿರೂಪಣೆ ಮಾಡುತ್ತಾ ಹೋಗುತ್ತಾರೆ ಲೇಖಕಿ. ರಾಜೇಶ್ವರಿಯ ಪಾತ್ರಪೋಷಣೆ ಉಲ್ಲೇಖಾರ್ಹ. ಹೀಗಾಗಿಯೇ ಕಥೆಗೆ ವೇಗವಿದೆ. ಕಥೆಯೊಳಗೊಂದು ಕಥೆ ಹಣೆಯುವ ಆಶಾ ಅವರ ಕೈಚಳಕವೂ ಇಲ್ಲಿ ಕಾಣಬಹುದು. ಬರವಣಿಗೆಯ ಶೈಲಿ ಓದಿನ ಓಘಕ್ಕೆ ಪೂರಕ. ಸಿನಿಮಾದ ತಾಂತ್ರಿಕ ಅಂಶಗಳನ್ನು ಕೃತಿಯ ಹಲವು ಕಡೆ ಕಾಣಬಹುದಾಗಿದೆ

ಮೊದಲ ಓದು

ಸಮುದಾಯ ಪರಿಚಯಿಸುವ ಅಧ್ಯಯನ ನಿಷ್ಠೆ


ಕಾಡುಗೊಲ್ಲ ಬುಡಕಟ್ಟು ಕುಲಕಥನ
ಲೇ: ಡಾ.ಮಲ್ಲಿಕಾರ್ಜುನ ಕಲಮರಹಳ್ಳಿ
ಪ್ರ: ಗೀತಾಂಜಲಿ ಪುಸ್ತಕ ಪ್ರಕಾಶನ
ಸಂ: 9449886390
ಪು: 490 ₹600

ವೃತ್ತಿಯಿಂದ ಉಪನ್ಯಾಸಕರಾಗಿ, ಪ್ರವೃತ್ತಿಯಿಂದ ಬರಹಗಾರರಾಗಿರುವ ಡಾ.ಮಲ್ಲಿಕಾರ್ಜುನ ಕಲಮರಹಳ್ಳಿಯವರು ಅಧ್ಯಯನಯೋಗ್ಯ ಕೃತಿಗಳಿಂದ ಪರಿಚಿತರು. ಅವರ ಈ ಹಿಂದಿನ ಕೃತಿಗಳಾದ 'ಕಾಡಹಕ್ಕಿ ಹಾಡು', 'ಗೊಲ್ಲರ ಇತಿಹಾಸ ಕಥನ' ಕೃತಿಗಳು ಗೊಲ್ಲ ಸಮುದಾಯದತ್ತ ಬೆಳಕು ಚೆಲ್ಲಿದ್ದವು. ಇದೀಗ ನೂತನ ಕೃತಿ 'ಕಾಡುಗೊಲ್ಲ ಬುಡಕಟ್ಟು ಕುಲಕಥನ' ಪ್ರಕಟಗೊಂಡಿದೆ.

'ಕರ್ನಾಟಕದಲ್ಲಿನ ಬೇರೆ ಬೇರೆ ಸಮುದಾಯಗಳ ಮೇಲೆ ಅಪಾರ ಪ್ರಮಾಣದಲ್ಲಿ ಅಧ್ಯಯನಗಳು ನಡೆದಿವೆ. ಆದರೆ ಎಲ್ಲವೂ ಒಂದು ಚೌಕಟ್ಟಿನಡಿಯಲ್ಲಿ ಬಂಧಿತವಾದಂತೆ ಕಾಣುತ್ತವೆ. ಈ ಕೃತಿಯಲ್ಲಿ ಸಿದ್ಧಸೂತ್ರದಿಂದ ಹೊರಬಂದು, ಒಂದು ಸಮುದಾಯವನ್ನು ಪರಿಚಯಿಸುವ ಯತ್ನ ಕಾಣುತ್ತಿದೆ' ಎಂದು ಡಾ.ರಹಮತ್ ತರೀಕೆರೆಯವರು ಟಿಪ್ಪಣಿಯಲ್ಲಿ ಹೇಳುತ್ತಾರೆ. ಲೇಖಕರು ಕಾಡುಗೊಲ್ಲ ಜನಾಂಗವನ್ನು ಬಹಳ ಕಾಲದಿಂದ ಅಧ್ಯಯನ ಮಾಡಿದ್ದಾರೆ ಮತ್ತು ಅದನ್ನು ವಿಭಿನ್ನ ನೆಲೆಯಲ್ಲಿ ಪರಿಚಯಿಸುವ ಯತ್ನ ಮಾಡಿದ್ದಾರೆಂಬುದು ಕೃತಿಯನ್ನು ಓದುತ್ತ ಹೋದಂತೆ ತಿಳಿಯುತ್ತದೆ.

'ಕೃತಿಯ ಒಡಲೊಳಗೆ ಕಾಡುಗೊಲ್ಲ ಬುಡಕಟ್ಟಿನ ಚಾರಿತ್ರಿಕ ಸಂಗತಿಗಳನ್ನೊಳಗೊಂಡಂತೆ ಸಾಂಸ್ಕೃತಿಕ ಪರಂಪರೆ, ಮೌಖಿಕ ಕಥನಗಳ ಪರಿಕಲ್ಪನೆಗಳು, ಈ ಕಥನದೊಳಗಿನ ವಿವಿಧ ಸ್ವರೂಪದ ಸಂಘರ್ಷದ ನೆಲೆಗಳು, ಕಾಡುಗೊಲ್ಲರ ಬದುಕಿನ ಸ್ಥಿತ್ಯಂತರಗಳು, ವಿವಿಧ ಅಧ್ಯಯನಗಳನ್ನು ಒಂದೆಡೆ ತಂದು ವಿಶ್ಲೇಷಣೆಗೆ ಒಳಪಡಿಸುವ ಪ್ರಯತ್ನ ಮಾಡಿರುವೆ' ಎಂದು ಲೇಖಕರು ಕೃತಿಯ ಮೊದಲ ಮಾತಿನಲ್ಲಿ ಹೇಳಿದ್ದಾರೆ.

ಕೃತಿಯ ಪ್ರಾರಂಭದ ಪುಟಗಳಲ್ಲಿ ಕೃತಿ ಕುರಿತಾಗಿ ವಿದ್ವಾಂಸರ ಟಿಪ್ಪಣಿಗಳಿವೆ. ಡಾ.ಕೃಷ್ಣಮೂರ್ತಿ ಹನೂರು, ರಹಮತ್ ತರೀಕೆರೆ, ಡಾ.ಬಂಜಗೆರೆ ಜಯಪ್ರಕಾಶ್ ಮೊದಲಾದ ವಿದ್ವಾಂಸರು ಕೃತಿ ಏನನ್ನು ಹೇಳಲು ಹೊರಟಿದೆ ಎಂಬ ಕಿರುನೋಟವನ್ನು ನೀಡುತ್ತಾರೆ. ನಂತರದ ಅಧ್ಯಾಯದಲ್ಲಿ ಕಾಡುಗೊಲ್ಲ ಬುಡಕಟ್ಟನ್ನು ಪರಿಚಯಿಸಿಕೊಡುವ ಕಥನಗಳಿವೆ. ಗೊಲ್ಲ ಶಬ್ದದ ನಿಷ್ಪತ್ತಿ ಹೇಗಾಯಿತು ಎಂಬ ವಿವರ ಸಿಗುತ್ತದೆ. ಪಶುಪಾಲಕರಾಗಿದ್ದ ಗೊಲ್ಲರನ್ನು ಸಂಸ್ಕೃತದಲ್ಲಿ 'ಗೋಪಾಲ', 'ಗೋಪಿ' ಎಂದು ಉಲ್ಲೇಖಿಸಿದ, ನಂತರ ಕನ್ನಡದಲ್ಲಿ ಅದು 'ಗೋವಳ'ನೆಂದು ರೂಪಾಂತರಗೊಂಡ ಕಥೆ ಬರುತ್ತದೆ. ಕನ್ನಡದ ಯಾವ ಪ್ರಮುಖ ಕೃತಿಗಳಲ್ಲಿ ಗೊಲ್ಲರ ಕುರಿತಾಗಿ ಉಲ್ಲೇಖ ಬಂದಿದೆ ಎಂಬ ಸ್ಥೂಲ ಚಿತ್ರವನ್ನು ಲೇಖಕರು ಈ ಅಧ್ಯಾಯದಲ್ಲಿ ನೀಡುತ್ತಾರೆ. ವೇದ, ಪುರಾಣಗಳಲ್ಲಿಯೂ ಗೊಲ್ಲರ ಬಗೆಗಿನ ಉಲ್ಲೇಖದ ವಿವರಣೆಯನ್ನು ಓದುಗರಿಗೆ ಒದಗಿಸುತ್ತಾರೆ.

ನಂತರದ ಅಧ್ಯಾಯಗಳಲ್ಲಿ ಕಾಡುಗೊಲ್ಲ ಬುಡಕಟ್ಟಿನ ಪ್ರಾಚೀನತೆ, ಮೂಲನೆಲೆ, ಗೊಲ್ಲರ ಹಟ್ಟಿಯ ಸಂರಚನೆ ಕುರಿತಾದ ವಿವರಣೆಗಳು ಸಿಗುತ್ತವೆ. ಇದಕ್ಕೆ ಪೂರಕವಾದ ಮೂಲಗಳನ್ನು ಲೇಖಕರು ಉಲ್ಲೇಖಿಸುತ್ತಾರೆ. ಇಡೀ ಕೃತಿಯಲ್ಲಿನ ಬಹಳ ಆಸಕ್ತಿಕರ ಅಧ್ಯಾಯ ಕಾಡುಗೊಲ್ಲರ ಮೌಖಿಕ ಕಾವ್ಯ ಪರಂಪರೆ ಮತ್ತು ಪರಿಕಲ್ಪನೆಗಳು. ಗೊಲ್ಲರ ಸಾಹಿತ್ಯ ಜಗತ್ತನ್ನು ಪರಿಚಯಿಸುವ ಯತ್ನವಿಲ್ಲಿ ಕಾಣುತ್ತದೆ. ಒಟ್ಟಾರೆಯಾಗಿ ಗೊಲ್ಲ ಸಮುದಾಯದ ಕುರಿತು ಸಮಗ್ರ ಮಾಹಿತಿ ಒದಗಿಸುವ ಕೃತಿ.

40 ಸಿನಿಮಾಗಳ ಲೋಕದಲ್ಲೊಂದು ಸುತ್ತು


ಸಿನಿಲೋಕ 21
ಲೇ: ಎ.ಎನ್.ಪ್ರಸನ್ನ
ಪ್ರ: ಪಾಂಚಜನ್ಯ ಪಬ್ಲಿಕೇಷನ್ಸ್
ಸಂ: 9740066842
ಪು: 340 ₹350

ಕೆ.ಪಿ.ಟಿ.ಸಿ.ಎಲ್‌ನಲ್ಲಿ ಎಂಜಿನಿಯರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಲೇಖಕ ಪ್ರಸನ್ನ ಅವರು ಸಾಹಿತ್ಯ ಕೃಷಿಯ ಜೊತೆಗೆ ಸಿನಿಮಾಸಕ್ತರಾಗಿ ಈ ಕ್ಷೇತ್ರದಲ್ಲೂ ಕೃಷಿ ಮಾಡಿದ್ದಾರೆ. ಈ ಆಸಕ್ತಿಯೇ ಸಿನಿಮಾ ಕುರಿತ ಅವರ ನಾಲ್ಕನೇ ಕೃತಿಯಾಗಿ ಮೂಡಿಬಂದಿದೆ.

ಈ ಕೃತಿಯು ಇಪ್ಪತ್ತೊಂದನೇ ಶತಮಾನದ ಮೊದಲಿನ ಎರಡು ದಶಕಗಳಲ್ಲಿ (2001–2021) ಹೊರದೇಶಗಳಲ್ಲಿ ಬಿಡುಗಡೆಯಾಗಿ ಜಗತ್ತಿನ ಗಮನಸೆಳೆದ ಆಯ್ದ ನಲವತ್ತು ಚಿತ್ರಗಳ ವಿಶ್ಲೇಷಣಾತ್ಮಕ ಲೇಖನಗಳ ಮಾಲೆ. ಇಲ್ಲಿನ ಹಲವು ಲೇಖನಗಳು ಈಗಾಗಲೇ ಇ–ಮ್ಯಾಗಜಿನ್‌ವೊಂದರಲ್ಲಿ ಪ್ರಕಟವಾಗಿದ್ದು, ಇವುಗಳನ್ನು ಕ್ರೋಡೀಕರಿಸಿ ಗುಚ್ಛವಾಗಿ ಇಲ್ಲಿ ಕಟ್ಟಿಕೊಟ್ಟಿದ್ದಾರೆ. 31 ದೇಶಗಳ 40 ಚಿತ್ರಗಳ ವಿಮರ್ಶೆ ಇಲ್ಲಿದೆ. ಈ ಪೈಕಿ ಆಸ್ಕರ್ ಪ್ರಶಸ್ತಿ ವಿಭಾಗದಲ್ಲಿ ಅತ್ಯುತ್ತಮ ಚಿತ್ರದ ಪ್ರಶಸ್ತಿ ಪಡೆದ 'ದ ಕಿಂಗ್ಸ್ ಸ್ಪೀಚ್', 'ದ ಆರ್ಟಿಸ್ಟ್', 'ಮೂನ್‌ಲೈಟ್', 'ಡ್ರೈವ್ ಮೈ ಕಾರ್' ಸೇರಿದಂತೆ ಹಲವು ಚಿತ್ರಗಳ ಛಾಯಾಚಿತ್ರಗಳ ಸಹಿತ ವಿಮರ್ಶೆಗಳೂ ಸೇರಿವೆ.

ಜಗತ್ತಿನಲ್ಲಿ ನಡೆದ ಹಲವು ಕ್ರಾಂತಿಗಳು, ಘಟನೆಗಳು, ಸಾಂಸ್ಕೃತಿಕ ತಲ್ಲಣಗಳು ಹಲವು ಶೈಲಿಯ ಸಿನಿಮಾಗಳಿಗೆ ಅಡಿಪಾಯ ಹಾಕಿವೆ. ಇಪ್ಪತ್ತೊಂದನೇ ಶತಮಾನದಲ್ಲಾಗಿರುವ ತಂತ್ರಜ್ಞಾನದ ಬೆಳವಣಿಗೆಯನ್ನು ಬಳಸಿಕೊಂಡು ಇಂದಿನ ಸಿನಿಮಾಗಳು ಮನುಷ್ಯನ ಹೊಸ ಆಲೋಚನೆ, ತಲ್ಲಣಗಳನ್ನು ತೆರೆಗೆ ತಂದು ಹೊಸ ಸಿನಿಮಾ ಪರಿಭಾಷೆ ಹುಟ್ಟುಹಾಕಿವೆ. ತಾವು ಕಂಡ ಸಿನಿಮಾಗಳಲ್ಲಿ ಈ ಬೆಳವಣಿಗೆಯನ್ನು ದಾಖಲಿಸಿದ್ದಾರೆ ಲೇಖಕರು. ಕೇವಲ ಸಿನಿಮಾದ ವಿಮರ್ಶೆ ಇಲ್ಲಿಲ್ಲ. ಬದಲಾಗಿ ಆ ಸಿನಿಮಾಗೆ ವೇದಿಕೆಯಾದ ದೇಶ, ಅಲ್ಲಿನ ಸ್ಥಿತಿಯನ್ನೂ ಸೂಚ್ಯವಾಗಿ ದಾಖಲಿಸಿದ್ದಾರೆ. ಕೆಲವೆಡೆ ಇಡೀ ಸಿನಿಮಾ ಕಥೆಯನ್ನೇ ಬರೆದಿದ್ದಾರೆ.

ಶಿಕ್ಷಕನ ವೃತ್ತಿ ಬದುಕಿನ ಹೆಜ್ಜೆಗಳು

ಶಿಕ್ಷಕನ ವೃತ್ತಿ ಬದುಕಿನ ತಲ್ಲಣಗಳು
ಲೇ: ಡಾ.ವ್ಹಿ.ಎ.ಬೆನಕನಾಳ
ಪ್ರ: ಶ್ರೀಶೈಲ ಪ್ರಕಾಶನ
ಸಂ: 9448986708
ಪು: 176 ₹150

ಶಿಕ್ಷಕನೋರ್ವ ಹಲವರ ಭವಿಷ್ಯಗಳನ್ನು ರೂಪಿಸುವ ಶಿಲ್ಪಿ. ಆದರೆ ಕೆಲ ಶಿಕ್ಷಕರ ಅಸಭ್ಯ ವರ್ತನೆ ವಿದ್ಯಾರ್ಥಿಗಳಿಗಷ್ಟೇ ಅಲ್ಲದೆ ಇತರೆ ಶಿಕ್ಷಕರಿಗೂ ಸಂಕಷ್ಟ, ಸಮಸ್ಯೆಗಳನ್ನು ತಂದೊಡ್ಡುತ್ತವೆ. ಇದು ಹಲವು ಶಾಲಾ ಕಾಲೇಜುಗಳಲ್ಲಿ ವಾಸ್ತವವೂ ಹೌದು. ಇಂಥ ಅನುಭವಗಳ ಬುತ್ತಿ ಈ ಕೃತಿ.

ಶಿಕ್ಷಕರಾಗಿ, ಉಪನ್ಯಾಸಕರಾಗಿ, ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸಿದ ವ್ಹಿ.ಎ.ಬೆನಕನಾಳ ತಮ್ಮ ಅನುಭಗಳನ್ನು ಇಲ್ಲಿ ದಾಖಲಿಸಿದ್ದಾರೆ. ಒಟ್ಟು 42 ಅಧ್ಯಾಯಗಳಲ್ಲಿ ಪದವಿ ವಿದ್ಯಾಭ್ಯಾಸ, ಶಿಕ್ಷಕ ವೃತ್ತಿಗೆ ಹೆಜ್ಜೆ ಇಟ್ಟ ಕ್ಷಣಗಳು, ತಾವು ಶಿಕ್ಷಕರಾಗಿದ್ದ ಹೈಸ್ಕೂಲ್ ಪರಿಸರ, ಅಲ್ಲಿನ ಸಿಬ್ಬಂದಿ, ಅನುಭವಿಸಿದ ಸಮಸ್ಯೆಗಳು, ಕಾಲೇಜು ಪ್ರಾಧ್ಯಾಪಕರಾಗಿ ಸೇರ್ಪಡೆ, ಅಲ್ಲಿನ ಸಹೋದ್ಯೋಗಿಗಳ ಅವಾಂತರಗಳನ್ನು ಬಿಚ್ಚಿಟ್ಟಿದ್ದಾರೆ ಲೇಖಕರು. ಕೃತಿಯನ್ನು ಆತ್ಮಕಥೆಯಂತೆ ಬರೆದರೂ, ಶಿಕ್ಷಕರು ಹೇಗಿರಬೇಕು? ಅವರ ಕರ್ತವ್ಯಗಳೇನು? ಎನ್ನುವ ಸಲಹೆಗಳನ್ನೂ ಪ್ರತ್ಯೇಕ ಅಧ್ಯಾಯದಲ್ಲಿ ಲೇಖಕರು ನೀಡಿದ್ದಾರೆ.

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ
bhanuvara@prajavani.co.in

ಕಥೆ
ಸದಾಶಿವ್ ಸೊರಟೂರು ಅವರ ಸಂಕನ ಪೂಜೆ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸ್ಮಿತಾ ಅಮೃತರಾಜ್. ಸಂಪಾಜೆ ಅವರ ನಿಲುದಾಣ ಸಿಗದಿರಲಿ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಉಗ್ಗು ಸಂಖ್ಯಾ ವಿನೋದ

ಒಂದು ಸಂಖ್ಯೆಯಲ್ಲಿ ಎಲ್ಲ ಅಂಕಿಗಳೂ ಒಂದೇ ಆಗಿದ್ದರೆ ಅಂಥ ಸಂಖ್ಯೆಗಳಿಗೆ ಉಗ್ಗು ಸಂಖ್ಯೆಗಳು ಎನ್ನುತ್ತಾರೆ. ಉದಾ: 111, 3333, 88888

ಇಂಥ ಮೂರಂಕಿಯ ಒಂದು ಉಗ್ಗು ಸಂಖ್ಯೆಯನ್ನು ಒಂದರ ಕೆಳಗೆ ಒಂದರಂತೆ ಆರು ಬಾರಿ ಹಚ್ಚಿಕೊಂಡು ಅದರ ಮೊತ್ತವನ್ನು ಉಗ್ಗು ಸಂಖ್ಯೆಯ ಮೂರು ಅಂಕಿಗಳ ಮೊತ್ತದಿಂದ ಭಾಗಿಸಿದರೆ ಭಾಗಲಬ್ಧ ಯಾವಾಗಲೂ 222 ಸ್ಥಿರಸಂಖ್ಯೆ ಬರುತ್ತದೆ

```
ಉದಾ 1            ಉದಾ 2

   666              888
   666              888
 + 666            + 888
   666              888
   666              888
   666              888
 --------         --------
18)3996(222      24)5328(222
   36               48
   ----             ----
   39               52
   36               48
   ---              ----
   36               48
   36               48
   --               ----
   00               00
```

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂರಕ್ಷರಗಳ ಪದದ ಮಧ್ಯ ಇನ್ನೆರಡು ಅಕ್ಷರ ಸೇರಿಸಿ ಐದು ಅಕ್ಷರಗಳ ಪದ ರಚಿಸಿ

ಅಕ್ಷರ ಪಟ್ಟಿ

ಡ	ಪ	ಬ	ವ	ಗೆ
ಗಾ	ನ	ಮ	ವ	ಚ
ಲ	ಡ	ಕ	ರ	ಭ
ಟ	ಹ	ರಿ	ಲಾ	ಗೆ

1	ಅ			ನಾಥ
2	ಕ			ವನ
3	ಕ			ರಿಕೆ
4	ಸ			ರಿಸು
5	ಗ			ದರು
6	ತೋ			ರಿಕೆ
7	ಉ			ರಿಸು
8	ತ			ರಿಸು
9	ಬ			ಡಿಸು
10	ಕು			ಡಿಸು

ಪುಟಾಣಿ ಪದಬಂಧ

_	_	ಸ	ರ	ಸರಕೊಳ್ಳುವ ಆತುರ
_	_	ವಾ	ರ	ವಾರಕ್ಕೊಮ್ಮೆ ಹಂಚುವ ಪ್ರಸಾದ
_	_	ಹಾ	ರ	ಹಾರ ಹಾಕಿ ಮಾಡಿದ ನಿವಾರಣೆ
_	_	ಜ	ನ	ಜನರಿಂದ ಆದ ಉಪಯೋಗ
_	_	ಗ	ರ	ಗರ ಬಡಿದಾಗ ಉಂಟಾದ ಇರಸು-ಮುರಿಸು

ಡಿಶ್ಯುಂ ಚಿಕ್ಕು ಕೇಲಿಕ್ಸ್ಪು ಕಥೆಯ — ಅಪಾಯಕ್ಕೇ ಅಪಾಯ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಅದಲು ಬದಲು ಕಂಚಿ ಕದಲು

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಿ

ನಮ್ಮ ಚಿಕ್ಕ ಮನೆ =
ನಿಜರಾಮು =
ನಿಜರಾಧ =
ಮಗುಹಾರು =

ಪಂಚ ಕ್ವಿಜ್ಞಾಯ

1. ನಮ್ಮ ರೂಪಾಯಿ ನೋಟಿನ ಮೇಲೆ ಯಾರ ಸಹಿ ಇರುತ್ತದೆ?
1.ರಾಷ್ಟ್ರಪತಿ 2.ರಿಸರ್ವ್ ಬ್ಯಾಂಕ್ ಗವರ್ನರ್ 3.ಪ್ರಧಾನಮಂತ್ರಿ 4.ಹಣಕಾಸು ಮಂತ್ರಿ

2. ಆರ್ಯಭಟ ಯಾರ ಕಾಲದಲ್ಲಿ ಜೀವಿಸಿದ್ದನು?
1.ಸಮುದ್ರಗುಪ್ತ 2.ಚಂದ್ರಗುಪ್ತ-2 3.ಅಶೋಕ 4.ಹರ್ಷ

3. ಕರ್ನಾಟಕದ ಚುನಾಯಿತ ವಿಧಾನಸಭಾ ಸದಸ್ಯರ ಸಂಖ್ಯೆ ಎಷ್ಟು?
1.226 2.224 3.212 4.206

4. ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷರು ಯಾರು?
1.ರಾಷ್ಟ್ರಪತಿ 2.ಉಪರಾಷ್ಟ್ರಪತಿ 3.ಪ್ರಧಾನಿ 4.ಉಪಪ್ರಧಾನಿ

5. ಭಾರತಕ್ಕೆ ಆರ್ಯರು ಎಲ್ಲಿಂದ ಬಂದರು?
1.ಮಧ್ಯ ಅಮೆರಿಕ 2.ಮಧ್ಯ ಯುರೋಪ್ 3.ಮಧ್ಯ ಆಫ್ರಿಕಾ 4.ಮಧ್ಯ ಏಷ್ಯಾ

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ: 1.ಸಡಗರ 2.ಪುರೋಹಿತ 3.ಯಜಮಾನ 4.ರಾಜಗಿರಿ 5.ಸಹೋದರ

ಅದಲು ಬದಲು: 1. ನಮ್ಮ ಭಾರತ 2.ಅಲ್ಲು ಗಡಿ ಸಮಸ್ಯೆ 3.ಜನಮಾಯ 4.ರಾಣಿಮಗಿ

ಜಾಣಪದ ಆಟ: 1.ಕೊಪ್ಪಳ, 2.ಹಾವೇರಿ, 3.ಕೊಡಗು, 4.ಹಾಸನ, 5.ಬ್ಯಾಡಗಿ, 6.ಸಾಗರ, 7.ಕೋಲಾರ, 8.ಗದಗ

ಜಾಣ ಒಗಟುಗಳು: 1.ಜೇನುಗೂಡು, 2.ಪೆನ್ನು, 3.ತುರುಬ, 4.ಅನ್ನದ ಗಡಿಗಿ, 5.ನಾಲಗಿ, 6.ಬೈತಲೆ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in



ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ಪ್ರತೀಕ್ಷಾ ಜೋಯ್ಸ್, ಆನಂದಪುರ, ಸಾಗರ

ಭುವನೇಶ್ವರ ಎಂ. ಎಂ., ವಿಜಯನಗರ

ವೇದಾ ಎಸ್, ಬೆಂಗಳೂರು

ನೀರಾನೆ... ಎಲ್ಲಿ ನಿಮ್ಮನೆ?

ಡಾ. ಕೆ.ಎಸ್.ಚೈತ್ರಾ



ಮೂರು ಟನ್ ತೂಕದ ನೀರಾನೆ

ಮರಗಳ ಎಡೆಯಿಂದ ನಿಧಾನವಾಗಿ ವಾಲಾಡುತ್ತ, ಹುಲ್ಲಿನಲ್ಲಿ ನಡೆದಾಡಿ, ನಂತರ ನದಿ ತೀರದಲ್ಲಿ ಜಾರಿ, ಮಣ್ಣು ನೀರಿನಲ್ಲಿ ಮುಳುಗುತ್ತಿದ್ದ ಈ ಆನೆಯಂತಹ ದೈತ್ಯಜೀವಿಗಳನ್ನು ಕಂಡ ಹಳ್ಳಿಗರಿಗೆ ಎಲ್ಲಿಲ್ಲದ ಆಶ್ಚರ್ಯ. ಚಿತ್ರಗಳಲ್ಲಿ ಕಂಡ, ಯಾರಿಂದಲೋ ಕೇಳಿದ ಆಫ್ರಿಕಾದಂತಹ ದೂರ ದೇಶದಲ್ಲಿರುವ ಸುಮಾರು ಮೂರು ಟನ್ ಭಾರವಿರುವ ಈ ಪ್ರಾಣಿಗಳನ್ನು ನೋಡಲು ಜನರೆಲ್ಲರೂ ಕೆಲಸ ಬಿಟ್ಟು ಓಡಿ ಬರುವಷ್ಟು ಸೋಜಿಗ ಅದಾಗಿತ್ತು. ಆದರೆ ಪರಿಸ್ಥಿತಿ ಎರಡು ದಶಕಗಳಲ್ಲಿ ಸಂಪೂರ್ಣ ಬದಲಾಗಿದೆ. ಈಗ ಆ ಪ್ರಾಣಿ ಹೆಸರು ಕೇಳಿದರೇ ಹೆದರಿಕೆ-ಬೇಸರ. ಹೇಗಾದರೂ ತೊಲಗಿದರೆ ಸಾಕು ಎಂಬ ಮನೋಭಾವ. ಇದು ದಕ್ಷಿಣ ಅಮೆರಿಕಾದ ಕೊಲಂಬಿಯಾ ದೇಶದ ಗ್ರಾಮಗಳಲ್ಲಿ ಹಿಪ್ಪೋಪೊಟಮಸ್ ಅಥವಾ ನೀರಾನೆ/ನೀರ್ಗುದುರೆ ಬಗ್ಗೆ ಇರುವ ಧೋರಣೆ. ಸ್ವಾರಸ್ಯಕರ ವಿಷಯವೆಂದರೆ, ಭಾರತಕ್ಕೆ ಇವುಗಳಲ್ಲಿ ಅರವತ್ತು ನೀರಾನೆಗಳು ಈ ವರ್ಷದ ಅಂತ್ಯಕ್ಕೆ ಬರುವ ಎಲ್ಲಾ ಸಾಧ್ಯತೆಗಳೂ ಇವೆ.

ಎಲ್ಲಿಂದ ಬಂತು ನೀರಾನೆ?

ನೀರಿನಲ್ಲಿ ಮುಳುಗಿದ್ದು, ದೊಡ್ಡ ಕಣ್ಣು ಪುಟ್ಟ ಕಿವಿ ಅಷ್ಟೇ ಕಾಣುವ ಹಾಗೆ ಇರುವ ದೊಡ್ಡ ಸಸ್ತನಿಗಳು ನೀರಾನೆಗಳು. ಹಾಗೆ ನೋಡಿದರೆ ಇವುಗಳ ತವರೂರು ಆಫ್ರಿಕಾ. ಇದೀಗ ದಕ್ಷಿಣ ಅಮೆರಿಕಾದ ಕೊಲಂಬಿಯಾದಿಂದ ನಮ್ಮ ಭಾರತಕ್ಕೆ ಅರವತ್ತು ನೀರಾನೆಗಳು ಬರುವ ಸಾಧ್ಯತೆ ಇದೆ. ಒಮ್ಮೆ ವಿಸ್ಮಯ ಮೂಡಿಸಿದ್ದ ಈ ಪ್ರಾಣಿಗಳ ಬಗ್ಗೆ ಅಲ್ಲಿಯ ಜನರ ಆಕ್ರೋಶ ವ್ಯಕ್ತಪಡಿಸಲು ಕಾರಣವಿದೆ.

ಕೊಲಂಬಿಯಾಕ್ಕೆ ಇವು ತಾವಾಗಿ ಬಂದದ್ದಲ್ಲ; ಅತಿಥಿಗಳಾಗಿಯೇ ಕಾಲಿಟ್ಟಿದ್ದು. ತನ್ನ ಷೋಕಿಗಾಗಿ ಅವುಗಳನ್ನು 1980ರಲ್ಲಿ ವೈಭವೋಪೇತ ಹಸಿಂಡ ನೆಪೋಲ್ಸ್ ಎಸ್ಟೇಟ್‌ಗೆ ಅನಧಿಕೃತವಾಗಿ ಬರಮಾಡಿಕೊಂಡದ್ದು ಮಾದಕ ವಸ್ತು ಕೊಕೇನ್ ವ್ಯವಹಾರದಲ್ಲಿ ಜಗತ್ತಿಗೆ ದೊರೆಯೆಂದು ಪ್ರಸಿದ್ಧನಾದ ಪಾಬ್ಲೋ ಎಸ್ಕೋಬಾರ್. ದೊಡ್ಡ ಎಸ್ಟೇಟಿನಲ್ಲಿ ಜಿರಾಫ್, ಒಂಟೆ, ಆಸ್ಟ್ರಿಚ್, ಜಿಂಕೆ ಹೀಗೆ ಅನೇಕ ಪ್ರಾಣಿಗಳನ್ನು ಸಾಕಿದ್ದ. ಅದರೊಂದಿಗೇ ಬಂದದ್ದು ಒಂದು ಗಂಡು ಮತ್ತು ಮೂರು ಹೆಣ್ಣು ನೀರಾನೆಗಳು. 1993ರಲ್ಲಿ ಆತನ ನಿಧನದ ನಂತರ ಈ ಪ್ರಾಣಿಗಳ ಮೇಲ್ವಿಚಾರಣೆ ಮಾಡುವವರು ಇಲ್ಲವಾದರು. ಕೆಲವು ಎಸ್ಟೇಟಿನಲ್ಲಿಯೇ ಉಳಿದವು. ಹೊಸದಾಗಿ ಸೇರ್ಪಡೆಯಾದ ಮರಿಗಳು ಆಹಾರ ಅರಸಿ ಹೊರನಡೆದವು. ಹಾಗೆ ಅವು ಉಷ್ಣ ಮತ್ತು ಜೌಗು ಪ್ರದೇಶವಾದ ಆಂಟಿಯೊಕ್ರಿಯದ ಮ್ಯಾಗ್ದೊಲಿನ್ ನದಿಯ ತೀರವನ್ನು ತಮ್ಮ ವಸತಿಯನ್ನಾಗಿ ಮಾಡಿಕೊಂಡವು. ನಾಲ್ಕು ನೀರಾನೆಗಳಿದ್ದದ್ದು, ಈಗ 140ಕ್ಕೂ ಹೆಚ್ಚಾಗಿವೆ. ಅವುಗಳ ಮೂಲ ನೆಲೆಯಾದ ಆಫ್ರಿಕಾವನ್ನು ಬಿಟ್ಟರೆ ಇವುಗಳು ಅತ್ಯಂತ ಹೆಚ್ಚು ಸಂಖ್ಯೆಯಲ್ಲಿರುವುದು ಕೊಲಂಬಿಯಾದಲ್ಲೇ.

ಈ ನೀರಾನೆಗಳಿಗೆ ಸಹಜ ಶತ್ರುಗಳಾದ ಮೊಸಳೆ, ಸಿಂಹ ಅಥವಾ ಇನ್ನಿತರ ಆಫ್ರಿಕನ್ ವನ್ಯಪ್ರಾಣಿಗಳು ಇಲ್ಲಿಲ್ಲ. ಹಾಗಾಗಿ ಆಫ್ರಿಕಾಗಿಂತ ಅತ್ಯಂತ ವೇಗವಾಗಿ ಇಲ್ಲಿ ಇವುಗಳ ವಂಶಾಭಿವೃದ್ಧಿ ಆಗುತ್ತಿದೆ. ಅಧ್ಯಯನದ ಪ್ರಕಾರ ಇದೇ ರೀತಿಯಲ್ಲಿ ಅವುಗಳ ವಂಶಾಭಿವೃದ್ಧಿ ಮುಂದುವರೆದರೆ 2024ರಲ್ಲಿ ಅವುಗಳ ಸಂಖ್ಯೆ 1,400 ತಲುಪುವ ಸಾಧ್ಯತೆ ಇದೆ.

ಅಸಮತೋಲನ

ಹೆಚ್ಚುತ್ತಿರುವ ನೀರಾನೆಗಳಿಂದಾಗಿ ಪರಿಸರ ವ್ಯವಸ್ಥೆಗೆ ಭಂಗ ಬಂದಿದೆ. ಜಗತ್ತಿನ ಅತಿದೊಡ್ಡ ನದಿಗಳಲ್ಲಿ ಒಂದಾದ, ಅಪಾರ ಜೀವವೈವಿಧ್ಯ ಹೊಂದಿರುವ ನದಿ ಮೆಗ್ದಲಿನಾ. ಇದರ ತಟದಲ್ಲಿ ವಾಸವಾಗಿರುವ ಈ ನೀರಾನೆಗಳು ಪ್ರತಿರಾತ್ರಿ ಸುಮಾರು ನಲವತ್ತು ಕೆ.ಜಿ ಹುಲ್ಲನ್ನು ತಿನ್ನುತ್ತವೆ. ಅವು ಹೊರಹಾಕುವ ತ್ಯಾಜ್ಯ ವಸ್ತುಗಳು ನೀರನ್ನು ಕಲುಷಿತಗೊಳಿಸುತ್ತವೆ. ಇದರಿಂದಾಗಿ ಮೀನು ಸೇರಿದಂತೆ ನದಿಯಲ್ಲಿರುವ ಅಪರೂಪದ ಜೀವಜಾಲ ನಶಿಸಿ ಹೋಗುತ್ತಿದೆ. ಆಹಾರವನ್ನು ಅತಿ ಹೆಚ್ಚಿನ ಪ್ರಮಾಣದಲ್ಲಿ ಸೇವಿಸುವುದರಿಂದ ಇನ್ನಿತರ ಅಳಿವಿನ ಅಂಚಿನಲ್ಲಿರುವ ಪ್ರಾಣಿಗಳಿಗೂ ಅಪಾಯವಿದೆ.

> ದಕ್ಷಿಣ ಅಮೆರಿಕಾದ ಕೊಲಂಬಿಯಾದಿಂದ ನಮ್ಮ ಭಾರತಕ್ಕೆ ಅರವತ್ತು ನೀರಾನೆಗಳು ಬರುವ ಸಾಧ್ಯತೆ ಇದೆ. ಆಫ್ರಿಕಾದಿಂದ ಬಂದು ನೆಲೆಸಿದ್ದ ನಾಲ್ಕು ನೀರಾನೆಗಳ ಸಂಖ್ಯೆ 140 ದಾಟಿರುವುದಕ್ಕೆ ಪರಿಹಾರ ಮಾರ್ಗ ಇದು. ನೀರಾನೆಗಳು ತಮ್ಮ ಮನೆ ಎಲ್ಲಿ ಎನ್ನುವಂತಾಗಿರುವ ಈ ಪರಿಸ್ಥಿತಿಗೆ ಕಾರಣಗಳು ಆಸಕ್ತಿಕರ.

ಉದಾಹರಣೆಗೆ ವೆಸ್ಟ್‌ಇಂಡಿಯನ್ ಮ್ಯಾನಟಿ, ಟ್ರಾಪಿಕಲ್ ಆಟರ್‌ಗಳಿಗೆ ಇವು ತೀವ್ರಸ್ಪರ್ಧೆಯನ್ನು ಒಡ್ಡುತ್ತಿವೆ. ಈ ನೀರಾನೆಗಳು ಉಭಯವಾಸಿಗಳಾಗಿವೆ. ಕೊಲಂಬಿಯಾದ ಅನೇಕ ಹಳ್ಳಿಗಳಲ್ಲಿ ಮೀನುಗಾರಿಕೆ ಜನರ ಮುಖ್ಯ ಉದ್ಯಮ. ಹೀಗಾಗಿ ನದಿಯನ್ನೇ ತಮ್ಮ ನಿತ್ಯದ ಬದುಕಿಗಾಗಿ ಅವಲಂಬಿಸಿದ್ದಾರೆ. ಹೊಸದಾಗಿ ಬಂದು ಸೇರಿದ ಮತ್ತು ತಮ್ಮ ಸಂತತಿಯನ್ನು ತೀವ್ರವಾಗಿ ಹೆಚ್ಚಿಸಿಕೊಳ್ಳುತ್ತಿರುವ ಈ ನೀರಾನೆಗಳಿಂದ ಜನರು ಹಾಗೂ ಪ್ರಾಣಿಗಳ ನಡುವೆ ಸಂಘರ್ಷ ಶುರುವಾಗಿದೆ. ತಮ್ಮ ಆಹಾರ ಮತ್ತು ಅಸ್ತಿತ್ವಕ್ಕಾಗಿ ನೀರಾನೆಗಳು ಸ್ಥಳೀಯರ ಮೇಲೆ ಆಗಾಗ ಹಲ್ಲೆ ನಡೆಸುವುದು ಸಾಮಾನ್ಯವಾಗಿದೆ. ಹಾಗಾಗಿಯೇ ಕೊಲಂಬಿಯಾದ ಪರಿಸರ ಸಚಿವಾಲಯವು ಕಳೆದ ವರ್ಷ ನೀರಾನೆಗಳನ್ನು ಆಕ್ರಮಣಕಾರಿ ಪ್ರಾಣಿಗಳೆಂದು ಘೋಷಿಸಿದೆ.

ನಿಯಂತ್ರಣ ಕ್ರಮಗಳು

ಇವುಗಳನ್ನು ನಿಯಂತ್ರಿಸಲು ಸಾಕಷ್ಟು ಪ್ರಯತ್ನಗಳು ನಡೆದಿವೆ. ಸಂತಾನಶಕ್ತಿಹರಣಕ್ಕಾಗಿ ಗರ್ಭನಿರೋಧಕ ಔಷಧ ಹಾಕುವ, ಶಸ್ತ್ರಚಿಕಿತ್ಸೆ ಮಾಡಿಸುವ ಯೋಜನೆ ಕೈಗೊಳ್ಳಲಾಗಿತ್ತು. ಆದರೆ ಇದು ಸಮಯ ಬೇಡುವ, ಅಪಾಯಕಾರಿ ಯೋಜನೆ. ಪ್ರತಿ ಪ್ರಾಣಿಗೂ 7,000 ಪೌಂಡ್‌ಗಳಷ್ಟು ದುಡ್ಡನ್ನು ಖರ್ಚು ಮಾಡಬೇಕು. ಅದರೊಂದಿಗೇ ದಪ್ಪ ಚರ್ಮವನ್ನು ಚುಚ್ಚುವುದು ಕಷ್ಟ. ಕೆಲವು ಬಾರಿ ಮತ್ತು ಬರಿಸುವ ಔಷಧ ಪರಿಣಾಮಕಾರಿಯಲ್ಲ; ಹಾಗೆಂದು ಹೆಚ್ಚಿಗೆ ಪ್ರಮಾಣದಲ್ಲಿ ನೀಡಿದರೆ ಪ್ರಾಣಿಗಳೇ ಸಾಯಬಹುದು. ಹಾಗಾಗಿ ಸಾಕಷ್ಟು ಯೋಚಿಸಿ ಸ್ಥಳೀಯ ಸಂಸ್ಥೆಯ ಮೂಲಕ ವಿದೇಶಿ ಬೇಟೆಗಾರರಿಗೆ ಇವುಗಳನ್ನು ಸಾಯಿಸಲು ಬೇಡಿಕೆಯನ್ನು ಮುಂದಿಟ್ಟಿತ್ತು. ಆ ಪ್ರಕಾರ 2009ರಲ್ಲಿ ಪೆಪೆ ಎನ್ನುವ ನೀರಾನೆಯನ್ನು ಕೊಲ್ಲಲಾಗಿತ್ತು. ದೈತ್ಯ ಮೃತದೇಹದ ಮುಂದೆ ಸೈನಿಕರು ನಿಂತಂತಹ ಚಿತ್ರ ಮಾಧ್ಯಮಗಳಲ್ಲಿ ಪ್ರಕಟವಾದದ್ದೇ ಕೊಲಂಬಿದಲ್ಲಿ ಮತ್ತು ಇತರ ದೇಶಗಳಲ್ಲಿ ದೊಡ್ಡದೊಂದು ಈ ಅಮಾನವೀಯ ಕೃತ್ಯದ ಬಗ್ಗೆ ಗಲಾಟೆ ಎದ್ದಿತು. ಹಾಗಾಗಿ ಈ ರೀತಿ ನೀರಾನೆಗಳನ್ನು ಸಾಯಿಸುವ ಪ್ರಯತ್ನದಿಂದ ಸರ್ಕಾರ ಹಿಂದೆಗೆಯುವುದು ಅನಿವಾರ್ಯವಾಗಿತ್ತು.

ಸರ್ಕಾರ ಜನರ ಜೀವಕ್ಕೆ ಗಮನಕೊಡದೆ ಪ್ರಾಣಿ ರಕ್ಷಣೆ ಎಂದು ಕುಳಿತರೆ ತಮ್ಮ ರಕ್ಷಣೆಯನ್ನು ತಾವೇ ಮಾಡಿಕೊಳ್ಳುತ್ತೇವೆ. ಇವುಗಳ ಮಾಂಸ, ಹಂದಿಮಾಂಸದ ಹಾಗೆ ಇರುತ್ತದೆ. ಹಾಗಾಗಿ ಅವುಗಳನ್ನು ಕೊಂದು ತಿನ್ನುವುದೇನೂ ಕಷ್ಟವಲ್ಲ ಎಂಬ ನಿರ್ಧಾರಕ್ಕೆ ಇಲ್ಲಿನ ಜನರು ಬಂದಿದ್ದಾರೆ. ಹಾಗೆಂದು ಎಲ್ಲರೂ ಈ ನೀರಾನೆಗಳನ್ನು ವಿರೋಧಿಸುತ್ತಾರೆ ಎಂದೇನಿಲ್ಲ. ಎಲ್ಲೆಡೆಯಂತೆ ಪರ-ವಿರೋಧಗಳು ಇಲ್ಲೂ ಇವೆ. 'ಶಾಂತವಾಗಿದ್ದಾಗ ಏನೂ ತೊಂದರೆ ಮಾಡದ ಮುದ್ದು ಪ್ರಾಣಿಗಳಾದ ಈ ನೀರಾನೆಗಳು ಸ್ವಭಾವತಃ ಆಕ್ರಮಣಕಾರಿಯಲ್ಲ. ಕೆಲವು ವರ್ಷಗಳಿಂದ ಅವುಗಳ ಜೊತೆಗೆ ಒಂದೇ ಸ್ಥಳದಲ್ಲಿ ವಾಸವಾಗಿದ್ದು, ಅವುಗಳ ಆಂಗಿಕ ಭಾಷೆಯನ್ನು ನಾವು ಕಲಿತಿದ್ದೇವೆ. ಅವುಗಳಿಗೆ ಸಿಟ್ಟು ಬಂದಾಗ ಸುಮ್ಮನೆ ಬಿಟ್ಟುಬಿಡುವುದು ಸೂಕ್ತ. ಮೀನುಗಾರಿಕೆಯಲ್ಲಿ ನಮಗೆ ಲಾಭ ಕಡಿಮೆಯಾಗಿದೆ ನಿಜ. ಆದರೆ ಈ ನೀರಾನೆಗಳನ್ನು ನೋಡಲು ಸಾಕಷ್ಟು ಪ್ರವಾಸಿಗರು ಬರುತ್ತಿದ್ದಾರೆ. ಅವುಗಳಿಂದ ಪ್ರವಾಸೋದ್ಯಮದಲ್ಲಿ ಹೆಚ್ಚಿನ ಲಾಭ ಬರುತ್ತಿದೆ. ಹಿಪ್ಪೋ ಟೂರಿಸಂ ಎಂದೇ ನಮ್ಮ ಹಳ್ಳಿಗಳನ್ನು ಗುರುತಿಸಲಾಗುತ್ತಿದೆ. ಒಂದು ರೀತಿಯಲ್ಲಿ ನಮ್ಮ ಆದಾಯದ ಮೂಲವೂ ಆಗಿರುವ ಈ ನೀರಾನೆಗಳನ್ನು ಸಹಿಸಿಕೊಳ್ಳುವುದು ಅನಿವಾರ್ಯ' ಎನ್ನುವವರೂ ಇದ್ದಾರೆ.

ಸ್ಥಳಾಂತರ!

ಈಗ ಕಂಡುಕೊಂಡಿರುವ ಪರಿಹಾರವೆಂದರೆ ಇವುಗಳಲ್ಲಿ ಅರವತ್ತನ್ನು ಭಾರತಕ್ಕೆ ಮತ್ತು ಹತ್ತನ್ನು ಮೆಕ್ಸಿಕೋಕ್ಕೆ ಕಳುಹಿಸುವುದು. ಜೀವಶಾಸ್ತ್ರಜ್ಞ ಜೇನ್ ಸನರ್ ಹೇಳುವ ಪ್ರಕಾರ, ಇವುಗಳನ್ನು ಕಳುಹಿಸುವುದು ಅಷ್ಟು ಸುಲಭವಲ್ಲ. ಮೊದಲು ಅವುಗಳನ್ನು ಸೆರೆಹಿಡಿದು, ರೋಗಗಳಿಗಾಗಿ ರಕ್ತ ಪರೀಕ್ಷೆ ಮಾಡಬೇಕು. ವಿಶೇಷವಾಗಿ ತಯಾರಿಸಲಾದ ದೊಡ್ಡ ಬೋನುಗಳಲ್ಲಿ ಹೆಲಿಕಾಪ್ಟರ್‌ಗಳಲ್ಲಿ ಕಳುಹಿಸಬೇಕು. ಬೇರೆ ದೇಶಕ್ಕೆ ಕಾಲಿಡುವ ಮುನ್ನ ಕ್ವಾರಂಟೈನ್ ಮಾಡುವುದೂ ಅವಶ್ಯ. ಅಗತ್ಯವಿದ್ದಲ್ಲಿ ಸಂತಾನಶಕ್ತಿಹರಣ ಚಿಕಿತ್ಸೆಯನ್ನು ಮಾಡಬೇಕಾಗುತ್ತದೆ. ಇದಕ್ಕೆಲ್ಲ ಸುಮಾರು ಮೂವತ್ತೈದು ಲಕ್ಷ ಡಾಲರ್ ಖರ್ಚಾಗುತ್ತದೆ. ಇದರ ಬದಲು ಅವುಗಳನ್ನು ಕೊಲ್ಲುವುದೇ ಸುಲಭವಾದ ಮತ್ತು ಪ್ರಾಯೋಗಿಕವಾದ ವಿಧಾನ. ಆದರೆ ಅದಕ್ಕೆ ತೀವ್ರ ವಿರೋಧ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಈ ರೀತಿಯ ದುಬಾರಿ-ಕಷ್ಟಕರ ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

ಭಾರತದ ಜಾಮ್ ನಗರಕ್ಕೆ ಸ್ಥಳಾಂತರ?

ಭಾರತದ ಗುಜರಾತ್ ರಾಜ್ಯದ ಜಾಮ್ ನಗರದಲ್ಲಿರುವ ಗ್ರೀನ್ಸ್ ಜೂಆಲಜಿ ರೆಸ್ಕ್ಯು ಅಂಡ್ ರಿಹ್ಯಾಬಿಲಿಟೇಶನ್ ಕಿಂಗ್‌ಡಂಗೆ ಮತ್ತು ಮೆಕ್ಸಿಕೋಗೆ ನೀರಾನೆಗಳನ್ನು ಕಳುಹಿಸಲಾಗುತ್ತದೆ ಎಂದು ತಿಳಿಸಲಾಗಿದೆ. ಇದರ ಬಗ್ಗೆ ಅಧಿಕೃತ ಪ್ರಕಟಣೆ ಭಾರತದಿಂದ ಬಂದಿಲ್ಲ. ಆದರೆ ಇಲ್ಲಿನ ಮೂಲಗಳ ಪ್ರಕಾರ ಜಾಮ್ ನಗರದಲ್ಲಿ ಕೇವಲ ಹನ್ನೆರಡು ನೀರಾನೆಗಳಿಗೆ ಅವಕಾಶವಿದ್ದು, ಈಗಾಗಲೇ ಎರಡು ನೀರಾನೆಗಳಿವೆ. ಭಾರತದಲ್ಲಿ ನೀರಾನೆಗಳ ಸಂಖ್ಯೆ 65 ರಿಂದ 85 ಕ್ಕೆ (1995 ರಿಂದ 2022ಕ್ಕೆ) ಏರಿದೆ. ಈ ಕಾರಣದಿಂದ ಅವುಗಳ ಮೂಲ ನೆಲೆಗೆ ವಾಪಸ್ ಕಳುಹಿಸುವುದೇ ಸೂಕ್ತ ಎನ್ನುವುದು ಪ್ರಾಣಿತಜ್ಞರ ಅಭಿಪ್ರಾಯ. ವ್ಯಕ್ತಿಯೊಬ್ಬನ ಷೋಕಿಗಾಗಿ ತಮ್ಮ ಮೂಲ ನೆಲೆ ಕಳೆದುಕೊಂಡ ಅತಂತ್ರ ಪ್ರಾಣಿಗಳು, ಜನರಿಗೆ ಆಗುತ್ತಿರುವ ತೊಂದರೆ ಇವೆಲ್ಲವೂ ಪರಿಸರದ ಸಮತೋಲನ ಹದಗೆಟ್ಟರೆ ಆಗುವ ಅಪಾಯಕ್ಕೆ ಒಂದು ಉದಾಹರಣೆಯಾಗಿ ಕಾಣುತ್ತಿದೆ.



ಸಂಕ್ಷಿಪ್ತ ಸುದ್ದಿ

ಕೇಜ್ರಿವಾಲ್ ಮನೆ ನವೀಕರಣ: ದಾಖಲೆ ಕೇಳಿದ ಎಲ್‌ಜಿ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಅಧಿಕೃತ ನಿವಾಸವನ್ನು ದುಬಾರಿ ವೆಚ್ಚದಲ್ಲಿ ನವೀಕರಿಸಲಾಗಿದೆ ಎಂಬ ಕುರಿತು ವಿವಾದಗಳಿದ್ದಿವೆ. ಈ ಬೆನ್ನಲ್ಲೇ, ನಿವಾಸದ ನವೀಕರಣಕ್ಕೆ ತಗುಲಿರುವ ವೆಚ್ಚದ ಕುರಿತು ದಾಖಲೆಗಳನ್ನು ಸಂಗ್ರಹಿಸಿ 15 ದಿನಗಳೊಳಗೆ ವರದಿ ನೀಡುವಂತೆ ಅಧಿಕಾರಿಗಳಿಗೆ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೆನಾ ಆದೇಶಿಸಿದ್ದಾರೆ.

ನವೀಕರಣ ಕಾಮಗಾರಿಯಲ್ಲಿ ಭಾರಿ ಅವ್ಯವಹಾರ ನಡೆದಿದೆ ಎಂಬ ಕುರಿತು ವರದಿಗಳನ್ನು ಆಧರಿಸಿ ರಾಜನಿವಾಸ ಏಪ್ರಿಲ್ 27ರಂದು ಈ ಆದೇಶ ಹೊರಡಿಸಿದೆ.

ಸೈನಿಕರು ಸಾವು

ರಜೌರಿ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯಲ್ಲಿ ಶನಿವಾರ ಆಂಬುಲೆನ್ಸ್ ಕಮರಿಗೆ ಬಿದ್ದ ಪರಿಣಾಮ ಇಬ್ಬರು ಸೇನಾ ಸಿಬ್ಬಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to: https://homages.deccanherald.com
or
Scan QR code to access booking form

ಉತ್ತರ ಕ್ರಿಯೆ

ಶ್ರೀಮತಿ ಪ್ರೇಮಕುಮಾರಿ
ಜನನ: 06-10-1950 - ಮರಣ: 21-04-2023

ಮೊ: 9731913690/ 9945279152.

ಸುಡಾನ್: ಸಣ್ಣ ವಾಯುನೆಲೆಯಲ್ಲಿ ನೈಟ್ ವಿಷನ್ ಗಾಗಲ್ಸ್ ಬಳಸಿ ಕಾರ್ಯಾಚರಣೆ

121 ಮಂದಿ ರಕ್ಷಿಸಿದ ವಾಯುಪಡೆ

ನವದೆಹಲಿ (ಪಿಟಿಐ): ಸಂಘರ್ಷ ಪೀಡಿತ ಸುಡಾನ್‌ನ ರಾಜಧಾನಿ ಖಾರ್ಟೂಮ್‌ನಿಂದ ಸುಮಾರು 40 ಕಿ.ಮೀ. ಉತ್ತರಕ್ಕೆ ವಾಡಿ ಸಯ್ಯಿದ್ನಾ ಎಂಬಲ್ಲಿರುವ ಸಣ್ಣ ವಾಯುನೆಲೆಯಿಂದ ಪ್ರತಿಕೂಲ ಸನ್ನಿವೇಶದಲ್ಲೂ ಭಾರತೀಯ ವಾಯುಪಡೆ 121 ಜನರನ್ನು ರಕ್ಷಣೆ ಮಾಡುವ ಮಹತ್ವದ ಯಶಸ್ವಿ ಕಾರ್ಯಾಚರಣೆ ನಡೆಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಏಪ್ರಿಲ್ 27 ಮತ್ತು 28ರ ಮಧ್ಯರಾತ್ರಿಯಲ್ಲಿ ಸಿ–130ಜೆ ಸರಕು ಸಾಗಣೆ ವಿಮಾನದ ಮೂಲಕ ಈ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು.

'ಸಣ್ಣದಾದ ವಾಯುನೆಲೆಯಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸುವಾಗ ಭಾರತೀಯ ವಾಯುಪಡೆಯು ಅನೇಕ ಸವಾಲುಗಳನ್ನು ಎದುರಿಸಬೇಕಾಯಿತು. ರಾತ್ರಿಯ ಕತ್ತಲಲ್ಲಿ ವಿಮಾನವು ಲ್ಯಾಂಡಿಂಗ್ ಮಾಡಲು ಅಲ್ಲಿ ಯಾವುದೇ ರೀತಿಯ ಬೆಳಕು ಇರಲಿಲ್ಲ. ಪಕ್ಕದಲ್ಲಿ ಮಾರ್ಗದರ್ಶನವೂ ಇರಲಿಲ್ಲ. ಹಾಗಾಗಿ, ವಾಯುಪಡೆಯ ಸಿಬ್ಬಂದಿ ನೈಟ್ ವಿಷನ್ ಗಾಗಲ್ಸ್ (ಕತ್ತಲೆಯಲ್ಲಿ ಬಳಸುವ ವಿಶೇಷ ಕನ್ನಡಕ) ಬಳಸಿ ಲ್ಯಾಂಡಿಂಗ್ ಮತ್ತು ಟೇಕ್ ಆಫ್ ಮಾಡಬೇಕಾಯಿತು' ಎಂದು ಅಧಿಕಾರಿಯೊಬ್ಬರು ಹೇಳಿದರು.

'ರನ್‌ವೇ ಯಾವುದೇ ಅಡೆತಡೆಗಳಿಂದ ಮುಕ್ತವಾಗಿದೆ ಎಂದು ಖಚಿತಪಡಿಸಿಕೊಳ್ಳಲು ವಿಮಾನ ಸಿಬ್ಬಂದಿ ತಮ್ಮ ಎಲೆಕ್ಟ್ರೋ-ಆಪ್ಟಿಕಲ್ ಮತ್ತು ಇನ್‌ಫ್ರಾರೆಡ್ ಸಂವೇದಕಗಳನ್ನು ಬಳಸಿದರು ಮತ್ತು ಸಮೀಪದಲ್ಲಿ ಯಾವುದೇ ಶತ್ರುಗಳ ಉಪಸ್ಥಿತಿ ಇಲ್ಲ ಎಂಬುದನ್ನು ಖಚಿತಪಡಿಸಿಕೊಂಡರು.

ಲ್ಯಾಂಡಿಂಗ್ ನಂತರ, ಐಎಎಫ್‌ನ 8 ಗರುಡ್ ಕಮಾಂಡೋಗಳು ಪ್ರಯಾಣಿಕರನ್ನು ಮತ್ತು ಅವರ ಲಗೇಜ್‌ಗಳನ್ನು ವಿಮಾನದೊಳಗೆ ಇರಿಸಿದರು. ಈ ವೇಳೆ ವಿಮಾನದ ಎಂಜಿನ್ ಅನ್ನು ಚಾಲನೆಯಲ್ಲೇ ಇರಿಸಿಕೊಳ್ಳಲಾಗಿತ್ತು. ಬಳಿಕ ನೈಟ್ ವಿಷನ್ ಗಾಗಲ್ ಬಳಸಿ ವಿಮಾನವನ್ನು ಯಶಸ್ವಿಯಾಗಿ ಟೇಕಾಫ್ ಮಾಡಲಾಯಿತು' ಎಂದು ವಿವರಿಸಿದರು.

ಸುಡಾನ್ ಬಂದರಿಗೆ ಭಾರತೀಯರನ್ನು ಕರೆತರುವ ನಿಟ್ಟಿನಲ್ಲಿ 'ಆಪರೇಷನ್ ಕಾವೇರಿ' ಕೆಲವು ದಿನಗಳಿಂದ ಜಾರಿಯಲ್ಲಿದೆ. ಈಗಾಗಲೇ ನೂರಾರು ಮಂದಿಯನ್ನು ನೌಕಾಪಡೆ ಹಡಗುಗಳ ಮೂಲಕ ಮೊದಲು ಜಿದ್ದಾಕ್ಕೆ ಹಾಗೂ ಬಳಿಕ ಭಾರತಕ್ಕೆ ಕರೆತರಲಾಗಿದೆ. ಆದರೆ ಸುಡಾನ್ ಬಂದರಿಗೆ ತೆರಳಲು ಅಸಾಧ್ಯವಾದವರನ್ನು ರಕ್ಷಿಸುವ ಸಲುವಾಗಿ ಈ ವಿಶೇಷ ಕಾರ್ಯಾಚರಣೆ ನಡೆಯಿತು. ರಕ್ಷಿಸಿದವರಲ್ಲಿ ಒಬ್ಬರು ಗರ್ಭಿಣಿ ಸಹ ಸೇರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

2021ರ ಆಗಸ್ಟ್‌ನಲ್ಲಿ ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಅತಿಕ್ರಮಣದ ಬಳಿಕ ಭಾರತೀಯ ವಾಯುಪಡೆಯು ಕಾಬೂಲ್‌ನಿಂದ ಭಾರತೀಯರನ್ನು ಸ್ಥಳಾಂತರಿಸಲು ಇದೇ ರೀತಿಯ ಕಾರ್ಯಾಚರಣೆಗಳನ್ನು ನಡೆಸಿತ್ತು.

ಸುಡಾನ್‌ನಿಂದ ಬಂದ 49 ಮಂದಿಗೆ ಕ್ವಾರಂಟೈನ್

ಬೆಂಗಳೂರು: ಸುಡಾನ್‌ನಿಂದ ಬಂದವರಲ್ಲಿ ಹಳದಿ ಜ್ವರ ಲಸಿಕೆಯ ಪ್ರಮಾಣ ಪತ್ರ ಹೊಂದಿರದ 49 ಮಂದಿಯನ್ನು ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯಲ್ಲಿ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

ಸುಡಾನ್‌ನಲ್ಲಿ ಸಿಲುಕಿದ್ದ ಭಾರತೀಯರನ್ನು ಸ್ವದೇಶಕ್ಕೆ ಕರೆತರಲು ಕೇಂದ್ರ ಸರ್ಕಾರ 'ಆಪರೇಷನ್ ಕಾವೇರಿ' ಕಾರ್ಯಾಚರಣೆ ಆರಂಭಿಸಿದ್ದು, ಶುಕ್ರವಾರ ಸಂಜೆ 114 ಕನ್ನಡಿಗರು ಸೇರಿ 362 ಜನರು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದರು.

ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಸುಡಾನ್, ದಕ್ಷಿಣ ಆಫ್ರಿಕ ಸೇರಿದಂತೆ ಕೆಲ ದೇಶಗಳಿಂದ ಇಲ್ಲಿಗೆ ಬರುವವರು ಕಡ್ಡಾಯವಾಗಿ ಹಳದಿ ಜ್ವರಕ್ಕೆ ಲಸಿಕೆ ಪಡೆದಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿರಬೇಕು. ಆದರೆ, ಶುಕ್ರವಾರ ಇಲ್ಲಿಗೆ ಬಂದವರಲ್ಲಿ ಕೆಲವರು ಈ ಪ್ರಮಾಣ ಪತ್ರ ಹೊಂದಿರಲಿಲ್ಲ. ಇನ್ನೂ ಕೆಲವರ ಪ್ರಮಾಣ ಪತ್ರದ ಅವಧಿ ಮುಗಿದಿದ್ದರಿಂದ ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ.

'ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಸುಡಾನ್‌ನಿಂದ ಬಂದವರನ್ನು ಕ್ವಾರಂಟೈನ್‌ಗೆ ಒಳಪಡಿಸಲಾಗಿದೆ. ಅಲ್ಲಿಂದ ಬಂದ ದಿನಗಳನ್ನು ಪರಿಗಣಿಸಿ, ಇಲ್ಲಿ 5ರಿಂದ 6 ದಿನಗಳು ಇರಿಸಿಕೊಳ್ಳಲಾಗುತ್ತದೆ. ಪ್ರಮಾಣ ಪತ್ರಗಳನ್ನು ಮತ್ತೊಮ್ಮೆ ಪರಿಶೀಲಿಸಲಾಗುತ್ತದೆ. ಪ್ರಮಾಣ ಪತ್ರ ಮಾನ್ಯತೆ ಹೊಂದಿದ್ದರೆ ಅವರನ್ನು ಮನೆಗೆ ಕಳುಹಿಸಲಾಗುತ್ತದೆ. ಕ್ವಾರಂಟೈನ್‌ನಲ್ಲಿ ಇರುವವರಿಗೆ ಲಸಿಕೆ ನೀಡಲು ವಿಪತ್ತು ನಿರ್ವಹಣಾ ಪ್ರಾಧಿಕಾರ ಕ್ರಮವಹಿಸಲಿದೆ' ಎಂದು ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆಯ ನಿರ್ದೇಶಕ ಡಾ.ಸಿ. ನಾಗರಾಜ್ ತಿಳಿಸಿದರು.

ಸೇನಾ ಮುಖ್ಯಸ್ಥರ ಮಾತುಕತೆಗೆ ಆಹ್ವಾನ

ಖಾರ್ಟೂಮ್(ಎಎಫ್‌ಪಿ/ ರಾಯಟರ್ಸ್): ಸುಡಾನ್‌ನಲ್ಲಿ ಸೇನೆ ಮತ್ತು ಅರೆಸೇನಾ ಪಡೆಗಳ ನಡುವಣ ಸಂಘರ್ಷ ಮೂರನೇ ವಾರಕ್ಕೆ ಕಾಲಿಟ್ಟಿದ್ದು, ಶನಿವಾರವೂ ರಾಜಧಾನಿ ಖಾರ್ಟೂಮ್ ಮೇಲೆ ಬಾಂಬ್ ದಾಳಿ ನಡೆದಿದೆ.

'ಇಡೀ ದೇಶವೇ ಆರ್ಥಿಕವಾಗಿ ಕುಸಿದು ಬಿದ್ದಿದೆ. ಇಂತಹ ಸ್ಥಿತಿಯಲ್ಲಿ ಅಧಿಕಾರಕ್ಕಾಗಿ ಸಂಘರ್ಷ ಮುಂದುವರಿಸುವುದು ಸರಿಯಲ್ಲ. ಎರಡು ಸೇನೆಗಳ ಮುಖ್ಯಸ್ಥರು ಮಾತುಕತೆಗೆ ಬರಬೇಕು' ಎಂದು ವಿಶ್ವಸಂಸ್ಥೆಯು ಮುಕ್ತ ಆಹ್ವಾನ ನೀಡಿದೆ.

'ಮಾತುಕತೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸಬೇಕು. ಸೌದಿ ಅರೇಬಿಯಾದ ಜಿದ್ದಾ ಅಥವಾ ದಕ್ಷಿಣ ಸುಡಾನ್‌ನ ಜುಬಾದಲ್ಲಿ ಇದಕ್ಕೆ ವ್ಯವಸ್ಥೆ ಮಾಡಲಾಗುವುದು. ಆದರೆ, ಮಾತುಕತೆಗೆ ಯಾವುದೇ ಸಮಯ ನಿಗದಿಪಡಿಸಿಲ್ಲ. ಇಬ್ಬರೂ ಮುಖ್ಯಸ್ಥರು ಒಟ್ಟಾಗಿ ಕುಳಿತು ಮಾತುಕತೆ ನಡೆಸುತ್ತಾರೆಯೇ ಎಂಬುದು ದೊಡ್ಡ ಪ್ರಶ್ನೆಯಾಗಿದೆ' ಎಂದು ಸುಡಾನ್‌ನಲ್ಲಿರುವ ವಿಶ್ವಸಂಸ್ಥೆಯ ಪ್ರತಿನಿಧಿ ವೋಲ್ಕರ್ ಪರ್ಥೆಸ್ ಹೇಳಿದ್ದಾರೆ.

'ಇಬ್ಬರೂ ನಾವೇ ಗೆಲ್ಲುತ್ತೇವೆ ಎಂಬ ಭ್ರಮೆಯಲ್ಲಿದ್ದಾರೆ. ಈ ಮನಸ್ಥಿತಿ ಬದಲಾಗಬೇಕಿದೆ' ಎಂದಿದ್ದಾರೆ.

ಸುದ್ದಿ 2 ನಿಮಿಷ

ಫಿರಂಗಿದಳಕ್ಕೆ ಐವರು ಮಹಿಳಾ ಅಧಿಕಾರಿಗಳ ನಿಯೋಜನೆ

ನವದೆಹಲಿ (ಪಿಟಿಐ): ಇದೇ ಮೊದಲ ಬಾರಿಗೆ ಭಾರತೀಯ ಸೇನೆಯು ಐವರು ಮಹಿಳಾ ಅಧಿಕಾರಿಗಳನ್ನು ಫಿರಂಗಿದಳಕ್ಕೆ (ಆರ್ಟಿಲರಿ ರೆಜಿಮೆಂಟ್) ನೇಮಿಸಿದೆ.

ಚೆನ್ನೈನ ಅಧಿಕಾರಿಗಳ ತರಬೇತಿ ಅಕಾಡೆಮಿಯಲ್ಲಿ ಶನಿವಾರ ತರಬೇತಿ ಪೂರ್ಣಗೊಳಿಸಿದ ಬಳಿಕ ಮಹಿಳಾ ಅಧಿಕಾರಿಗಳು ಫಿರಂಗಿದಳಕ್ಕೆ ನಿಯೋಜನೆಗೊಂಡರು.

ಲೆಫ್ಟಿನೆಂಟ್ ಮೆಹಕ್ ಸೈನಿ, ಲೆಫ್ಟಿನೆಂಟ್ ಸಾಕ್ಷಿ ದುಬೆ, ಲೆಫ್ಟಿನೆಂಟ್ ಅದಿತಿ ಯಾದವ್, ಲೆಫ್ಟಿನೆಂಟ್ ಪಾಯಸ್ ಮುದ್ಗಿಲ್ ಮತ್ತು ಲೆಫ್ಟಿನೆಂಟ್ ಆಕಾಂಕ್ಷಾ ಅವರು ಪಿರಂಗಿದಳಕ್ಕೆ ನಿಯೋಜನಗೊಂಡಿದ್ದಾರೆ. ಐವರು ಅಧಿಕಾರಿಗಳಲ್ಲಿ ಮೂವರನ್ನು ಚೀನಾ ಗಡಿ ಬಳಿ, ಇನ್ನಿಬ್ಬರನ್ನು ಪಾಕಿಸ್ತಾನ ಗಡಿ ಬಳಿಯ ಸೇನಾ ಸರಹದ್ದು ಬಳಿ ನಿಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಗಾಲ್ವಾನ್ ಹುತಾತ್ಮನ ಪತ್ನಿ ಈಗ ಸೇನೆ ಅಧಿಕಾರಿ: ಗಾಲ್ವಾನ್ ಕಣಿವೆಯಲ್ಲಿ 2020ರಲ್ಲಿ ನಡೆದಿದ್ದ ಸಂಘರ್ಷದಲ್ಲಿ ಹುತಾತ್ಮರಾಗಿದ್ದ ಯೋಧ ನಾಯ್ಕ್ ದೀಪಕ್ ಸಿಂಗ್ ಪತ್ನಿ ರೇಖಾ ಸಿಂಗ್ ಭಾರತೀಯ ಸೇನೆಯಲ್ಲಿ ಲೆಫ್ಟಿನೆಂಟ್ ಹುದ್ದೆಗೆ ನೇಮಕವಾಗಿದ್ದಾರೆ.

ವಿಶ್ವಪರ್ಯಟನೆ: ಕಮಾಂಡರ್ ಟಾಮಿ ಅಭಿಲಾಷ್ ಸಾಧನೆ

ನವದೆಹಲಿ: ನೌಕಾಪಡೆಯ ನಿವೃತ್ತ ಕಮಾಂಡರ್ ಟಾಮಿ ಅಭಿಲಾಷ್ ಅವರು ಹಾಯಿದೋಣಿಯಲ್ಲಿ ಕೈಗೊಂಡಿದ್ದ ಪರ್ಯಟನೆಯನ್ನು ಶನಿವಾರ ಪೂರ್ಣಗೊಳಿಸುವ ಮೂಲಕ ಈ ಸಾಧನೆ ಮಾಡಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಒಂಟಿಯಾಗಿ ವಿಶ್ವಪರ್ಯಟನೆ ನಡೆಸುವ ಗೋಲ್ಡನ್ ಗ್ಲೋಬ್ ರೇಸ್‌ನಲ್ಲಿ ಪಾಲ್ಗೊಂಡಿದ್ದ ಅವರು, 236 ದಿನಗಳ ಕಾಲ ಸಮುದ್ರಯಾನದ ನಂತರ ಫ್ರೆಂಚ್ ಕರಾವಳಿ ತಲುಪಿ, ದ್ವಿತೀಯ ಸ್ಥಾನ ಪಡೆದರು. ದಕ್ಷಿಣ ಆಫ್ರಿಕಾದ ಕಿರ್ಸ್ಟನ್ ನ್ಯೂಶಫರ್ ಪ್ರಥಮ ಸ್ಥಾನ ಪಡೆದರು. ಈ ಸ್ಪರ್ಧೆಯಲ್ಲಿ ಒಟ್ಟು 16 ಸ್ಪರ್ಧಿಗಳಿದ್ದರು. 1968ರಲ್ಲಿ ಸರ್ ರಾಬಿನ್ ನಾಕ್ಸ್ ಜಾನ್‌ಸ್ಟನ್ ಅವರು ಭಾರತದಲ್ಲಿ ತಯಾರಿಸಿದ್ದ 'ಸುಹೈಲಿ' ಎಂಬ ದೋಣಿ ಬಳಸಿ ಒಂಟಿಯಾಗಿ ವಿಶ್ವಪರ್ಯಟನೆ ಮಾಡಿದ್ದರು. 312 ದಿನಗಳಲ್ಲಿ ತಮ್ಮ ಯಾನ ಪೂರ್ಣಗೊಳಿಸಿದ್ದರು. ಅವರ ಈ ಸಾಹಸಕ್ಕೆ 50 ವರ್ಷ ತುಂಬಿದ ಪ್ರಯುಕ್ತ 'ಗೋಲ್ಡನ್ ಗ್ಲೋಬ್ ರೇಸ್' ಹೆಸರಿನಲ್ಲಿ ಸ್ಪರ್ಧೆ ಆಯೋಜಿಸಲಾಗಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ನ್ಯೂಜಿಲೆಂಡ್: ಕಿವಿ ಪಕ್ಷಿ ಉಳಿವಿಗೆ ಹೊಸ ಪ್ರಾಜೆಕ್ಟ್

ವೆಲಿಂಗ್ಟನ್(ಎಎಫ್‌ಪಿ): 'ಕಿವಿ' ನ್ಯೂಜಿಲೆಂಡ್‌ನ ರಾಷ್ಟ್ರೀಯ ಪಕ್ಷಿ. ಹಾರಲಾಗದ ಇದಕ್ಕೆ ಬಾಲವಿಲ್ಲ. ಪಕ್ಷಿ ಸಂಕುಲದಲ್ಲಿಯೇ ಅಪರೂಪವಾಗಿರುವ ವಾಸನೆ ಗ್ರಹಣ ಶಕ್ತಿ ಇದಕ್ಕಿದೆ. ಇದರ ಸಹಾಯದಿಂದಲೇ ಇದು ಅರಣ್ಯದ ತರಗೆಲೆಗಳ ನಡುವೆ ಇರುವ ಹುಳು ಹುಪ್ಪಟೆಗಳನ್ನು ಹೆಕ್ಕಿ ತಿನ್ನುತ್ತದೆ.

ಆದರೆ, ರಾಜಧಾನಿ ವೆಲಿಂಗ್ಟನ್‌ನ ಬೆಟ್ಟಗುಡ್ಡಗಳಲ್ಲಿ ಇದರ ಹೆಜ್ಜೆ ಸಪ್ಪಳ ಕೇಳಿ ಒಂದು ಶತಮಾನ ಕಳೆದಿದೆಯಂತೆ. ಹಾಗಾಗಿಯೇ, ಅಲ್ಲಿನ ಸರ್ಕಾರ 'ದಿ ಕ್ಯಾಪಿಟಲ್ ಕಿವಿ ಪ್ರಾಜೆಕ್ಟ್' ಮೂಲಕ ರಾಜಧಾನಿಯ ಸುತ್ತಮುತ್ತ ಮತ್ತೆ ಅವುಗಳಿಗೆ ಆವಾಸ ಕಲ್ಪಿಸಲು ಮುಂದಾಗಿದೆ. ಅಲ್ಲಿನ ಸಂರಕ್ಷಣಾ ವಿಭಾಗದ ಮಾಹಿತಿ ಅನ್ವಯ ನ್ಯೂಜಿಲೆಂಡ್‌ನಲ್ಲಿ ಈಗ 70 ಸಾವಿರ ಕಿವಿ ಪಕ್ಷಿಗಳಷ್ಟೇ ಉಳಿದಿವೆ. ಇವುಗಳ ಸಂರಕ್ಷಣೆಗೆ ದೇಶದಾದ್ಯಂತ 90ಕ್ಕೂ ಹೆಚ್ಚು ಸಮುದಾಯ ಆಧಾರಿತ ಕಾರ್ಯಕ್ರಮ ರೂಪಿಸಲಾಗಿದೆ.

ರಾಹುಲ್ ಗಾಂಧಿ ಅರ್ಜಿಗೆ ವಿರೋಧ

ಮಾನನಷ್ಟ ಮೊಕದ್ದಮೆ: ಮೇಲ್ಮನವಿ ವಜಾಗೆ ಗುಜರಾತ್ ಸರ್ಕಾರ ಮನವಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮಾನನಷ್ಟ ಮೊಕದ್ದಮೆಯಲ್ಲಿ ಸೂರತ್‌ನ ನ್ಯಾಯಾಲಯ ವಿಧಿಸಿರುವ ಶಿಕ್ಷೆಗೆ ತಡೆ ಕೋರಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಹೈಕೋರ್ಟ್‌ಗೆ ಸಲ್ಲಿಸಿರುವ ಮರು ಪರಿಶೀಲನಾ ಅರ್ಜಿಗೆ ಗುಜರಾತ್ ಸರ್ಕಾರ ಶನಿವಾರ ವಿರೋಧ ವ್ಯಕ್ತಪಡಿಸಿತು.

'ಗಂಭೀರ ಅಪರಾಧ ಎಸಗಿದ್ದಕ್ಕಾಗಿ ರಾಹುಲ್ ಅವರಿಗೆ ಶಿಕ್ಷೆಯಾಗಿದೆ. ಹೀಗಾಗಿ ಅವರ ಮೇಲ್ಮನವಿಯನ್ನು ವಜಾಗೊಳಿಸಬೇಕು' ಎಂದು ಸರ್ಕಾರಿ ವಕೀಲ ಮಿತೇಶ್ ಅಮಿನ್ ಅವರು ಗುಜರಾತ್ ಹೈಕೋರ್ಟ್‌ಗೆ ಮನವಿ ಮಾಡಿದರು.

ನ್ಯಾಯಮೂರ್ತಿ ಹೇಮಂತ್ ಪ್ರಚ್ಛಕ್ ಅರ್ಜಿ ವಿಚಾರಣೆ ನಡೆಸಿದರು. ರಾಹುಲ್ ಗಾಂಧಿ ಪರ ವಾದ ಮಂಡಿಸಿದ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ, ಗುಜರಾತ್ ಸರ್ಕಾರದ ನಿಲುವನ್ನು ವಿರೋಧಿಸಿದರು.

ಗಂಭೀರ ಅಪರಾಧಕ್ಕಾಗಿ ಚುನಾಯಿತ ಪ್ರತಿನಿಧಿಗಳಿಗೆ ವಿಧಿಸಿದ್ದ ಶಿಕ್ಷೆಗೆ ನ್ಯಾಯಾಲಯಗಳು ತಡೆ ನೀಡಿರುವ ಪ್ರಕರಣಗಳನ್ನು ಸಿಂಘ್ವಿ ಹೈಕೋರ್ಟ್ ಗಮನಕ್ಕೆ ತಂದರು. 'ಇದು ಸಿವಿಲ್ ವ್ಯಾಜ್ಯದ ರೀತಿಯ ಪ್ರಕರಣ. ಹಾಗಾಗಿ, ಈ ಪ್ರಕರಣಕ್ಕೂ, ಗುಜರಾತ್ ಸರ್ಕಾರಕ್ಕೂ ಯಾವುದೇ ಸಂಬಂಧ ಇಲ್ಲ' ಎಂದು ವಾದಿಸಿದರು.

'ರಾಹುಲ್ ವಿರುದ್ಧದ ಪ್ರಕರಣ ಗಂಭೀರ ಸ್ವರೂಪದ್ದಲ್ಲ, ಯಾವುದೇ ದುಷ್ಟತನವನ್ನೂ ಒಳಗೊಂಡಿಲ್ಲ. ಹೀಗಾಗಿ, ಅವರಿಗೆ ವಿಧಿಸಿರುವ ಶಿಕ್ಷೆಯನ್ನು ರದ್ದು ಮಾಡಬೇಕು' ಎಂದು ಸಿಂಘ್ವಿ ಮನವಿ ಮಾಡಿದರು.

ಆಗ ವಾದ ಮುಂದುವರಿಸಿದ ಮಿತೇಶ್ ಅಮಿನ್, 'ಸರ್ಕಾರಿ ವಕೀಲನಾಗಿ ನನಗೆ ಕೋರ್ಟ್‌ನಲ್ಲಿ ಮಾತನಾಡಲು ಶಾಸನಬದ್ಧ ಹಕ್ಕು ಇದೆ. ಇಂಥ ಪ್ರಕರಣಗಳಿಗೆ ಸಂಬಂಧಿಸಿ ಹಲವಾರು ತೀರ್ಪುಗಳಿವೆ. ಆದರೆ, ಅಂತಿಮವಾಗಿ ತೀರ್ಪು ನೀಡುವುದು ಕೋರ್ಟ್‌ನ ವಿವೇಚನೆಗೆ ಬಿಟ್ಟದ್ದು' ಎಂದರು. ಆಗ, ನ್ಯಾಯಮೂರ್ತಿ ಹೇಮಂತ್, 'ಒಬ್ಬ ಚುನಾಯಿತ ಪ್ರತಿನಿಧಿಯಾಗಿ ರಾಹುಲ್ ಗಾಂಧಿ ಅವರು ಮಾತನಾಡುವಾಗ ಎಚ್ಚರದಿಂದ ಇರಬೇಕಿತ್ತು' ಎಂದು ಮೌಖಿಕವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ಎರಡೂ ಕಡೆಯವರ ವಾದಗಳನ್ನು ಆಲಿಸಿದ ನಂತರ ಅವರು ವಿಚಾರಣೆಯನ್ನು ಮಂಗಳವಾರಕ್ಕೆ (ಮೇ 2) ಮುಂದೂಡಿದರು.

ಆನಂದ್ ಬಿಡುಗಡೆಗೆ ವಿರೋಧ: 'ಸುಪ್ರೀಂ'ನಲ್ಲಿ ಅರ್ಜಿ

ನವದೆಹಲಿ (ಪಿಟಿಐ): ಐಎಎಸ್ ಅಧಿಕಾರಿ ಜಿ.ಕೃಷ್ಣಯ್ಯ ಹತ್ಯೆ ಪ್ರಕರಣದ ಅಪರಾಧಿ ಬಿಹಾರದ ಮಾಜಿ ಸಂಸದ ಆನಂದ್ ಮೋಹನ್ ಅವರ ಅವಧಿಪೂರ್ವ ಬಿಡುಗಡೆ ಪ್ರಶ್ನಿಸಿ ಅಧಿಕಾರಿಯ ಪತ್ನಿ ಉಮಾ ಕೃಷ್ಣಯ್ಯ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ರಾಜ್ಯ ಸರ್ಕಾರ ಇತ್ತೀಚೆಗೆ ಜೈಲು ನಿಯಮಗಳಿಗೆ ತಿದ್ದುಪಡಿ ಮಾಡಿದ ನಂತರ 15 ವರ್ಷ ಶಿಕ್ಷೆ ಪೂರೈಸಿದ ಆನಂದ್ ಮೋಹನ್‌ನನ್ನು ಗುರುವಾರ ಸಹರ್ಸಾ ಜೈಲಿನಿಂದ ಬಿಡುಗಡೆ ಮಾಡಲಾಯಿತು.

ಪಾತಕಿ ಮುಖ್ತಾರ್, ಸಂಸದ ಅಫ್ಜಲ್ ದೋಷಿ

ಘಾಜಿಪುರ (ಉತ್ತರ ಪ್ರದೇಶ) (ಪಿಟಿಐ): 2007ರ ಗ್ಯಾಂಗ್‌ಸ್ಟರ್ ಕಾಯ್ದೆ ಪ್ರಕರಣದಲ್ಲಿ ಪಾತಕಿ, ರಾಜಕಾರಣಿ ಮುಖ್ತಾರ್ ಅನ್ಸಾರಿ ಮತ್ತು ಆತನ ಸಹೋದರ, ಬಿಎಸ್‌ಪಿ ಸಂಸದ ಅಫ್ಜಲ್ ಅನ್ಸಾರಿ ಅವರಿಗೆ ಇಲ್ಲಿನ ನ್ಯಾಯಾಲಯ ಶನಿವಾರ ಕ್ರಮವಾಗಿ 10 ವರ್ಷ ಮತ್ತು ನಾಲ್ಕು ವರ್ಷಗಳ ಜೈಲು ಶಿಕ್ಷೆ ವಿಧಿಸಿದೆ.

ಹೆಚ್ಚುವರಿ ಸೆಷನ್ಸ್ ಹಾಗೂ ಸಂಸದರು/ಶಾಸಕರ ನ್ಯಾಯಾಲಯದ ನ್ಯಾಯಾಧೀಶರು ಮುಖ್ತಾರ್‌ಗೆ ₹5 ಲಕ್ಷ ಮತ್ತು ಅಫ್ಜಲ್‌ಗೆ ₹ 1 ಲಕ್ಷ ದಂಡ ವಿಧಿಸಿದ್ದಾರೆ ಎಂದು ಎಡಿಜಿಸಿ ನೀರಜ್ ಶ್ರೀವಾಸ್ತವ ತಿಳಿಸಿದ್ದಾರೆ.

ಈ ಆದೇಶದಿಂದ ಅಫ್ಜಲ್ ಸಂಸತ್ ಸದಸ್ಯತ್ವ ಕಳೆದುಕೊಳ್ಳಬಹುದು. ಯಾವುದೇ ಶಾಸಕ ಅಥವಾ ಸಂಸದ ತಪ್ಪಿತಸ್ಥರೆಂದು ಪರಿಗಣಿಸಿ 2 ವರ್ಷ ಅಥವಾ ಅದಕ್ಕಿಂತ ಹೆಚ್ಚು ಕಾಲ ಜೈಲು ಶಿಕ್ಷೆಗೆ ಗುರಿಪಡಿಸಿದರೆ ಅನರ್ಹಗೊಳಿಸಲಾಗುತ್ತದೆ.

ವಿಚ್ಛೇದನ: ನಾಳೆ 'ಸುಪ್ರೀಂ' ತೀರ್ಪು?

ನವದೆಹಲಿ (ಪಿಟಿಐ): ಬೇರ್ಪಡಲು ಪತಿ ಮತ್ತು ಪತ್ನಿಯ ಒಪ್ಪಿಗೆ ಇದ್ದಾಗ, ಪ್ರಕರಣವನ್ನು ಕೌಟುಂಬಿಕ ನ್ಯಾಯಾಲಯಕ್ಕೆ ಒಪ್ಪಿಸದೇ ಅವರ ಮದುವೆಯನ್ನು ರದ್ದುಮಾಡುವುದಕ್ಕೆ ಸಂಬಂಧಿಸಿ ಸುಪ್ರೀಂಕೋರ್ಟ್ ಮೇ 1ರಂದು ತೀರ್ಪು ಪ್ರಕಟಿಸುವ ಸಾಧ್ಯತೆ ಇದೆ.

ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್, ಸಂಜೀವ್ ಖನ್ನಾ, ಎ.ಎಸ್.ಓಕಾ, ವಿಕ್ರಮನಾಥ್ ಹಾಗೂ ಜೆ.ಕೆ.ಮಾಹೇಶ್ವರಿ ಅವರಿರುವ ಸಂವಿಧಾನ ನ್ಯಾಯಪೀಠ, ಕಳೆದ ವರ್ಷ ಸೆಪ್ಟೆಂಬರ್ 29ರಂದು ತೀರ್ಪನ್ನು ಕಾಯ್ದಿರಿಸಿತ್ತು.

ಮನ್ ಕಿ ಬಾತ್: ಐಐಎಂಸಿ ಸಮೀಕ್ಷೆಯಲ್ಲಿ ಬಹಿರಂಗ

ಶಿಕ್ಷಣ, ನವೋದ್ಯಮ– ಪ್ರಭಾವಿ ವಿಷಯ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರು ನಡೆಸಿಕೊಡುವ ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ನಲ್ಲಿ ಶಿಕ್ಷಣ ಮತ್ತು ದೇಶದ ತಳಮಟ್ಟದ ನವೋದ್ಯಮಿಗಳ ಮಾಹಿತಿ ಅತ್ಯಂತ ಪ್ರಭಾವ ಬೀರಿದ ವಿಷಯಗಳಾಗಿವೆ' ಎಂದು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್ (ಐಐಎಂಸಿ) ತನ್ನ ಸಮೀಕ್ಷೆಯಲ್ಲಿ ಕಂಡುಕೊಂಡಿದೆ.

ಮನ್ ಕಿ ಬಾತ್ ಅನ್ನು ಕೇಳಲು ಜನರು ಇಂಟರ್‌ನೆಟ್ ಅನ್ನು ನೆಚ್ಚಿನ ವೇದಿಕೆಯನ್ನಾಗಿ ಮಾಡಿಕೊಂಡಿದ್ದಾರೆ, ಶೇ 12 ಜನರು ರೇಡಿಯೋ, ಶೇ 15 ಜನರು ದೂರದರ್ಶನ ಮತ್ತು ಶೇ 37ರಷ್ಟು ಜನರು ಮನ್ ಕಿ ಬಾತ್ ಕೇಳಲು ಇಂಟರ್‌ನೆಟ್ ಆಧಾರಿತ ವೇದಿಕೆಗಳನ್ನು ಬಳಸುತ್ತಾರ' ಎಂಬ ಆಸಕ್ತಿಕರ ವಿಷಯವೂ ಸಮೀಕ್ಷೆಯಿಂದ ತಿಳಿದುಬಂದಿದೆ.

ಐಐಎಂಸಿ ಮಹಾನಿರ್ದೇಶಕ ಸಂಜಯ್ ದ್ವಿವೇದಿ ಮಾತನಾಡಿ, 'ದೇಶದಾದ್ಯಂತ 116 ಸುದ್ದಿಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು ಹಾಗೂ ಮಾಧ್ಯಮದೊಂದಿಗೆ ಸಂಬಂಧ ಹೊಂದಿರುವ ಒಟ್ಟು 890 ವ್ಯಕ್ತಿಗಳು ಅಧ್ಯಯನದಲ್ಲಿ ಭಾಗವಹಿಸಿದ್ದಾರೆ' ಎಂದು ಹೇಳಿದ್ದಾರೆ.

'ಮನ್ ಕಿ ಬಾತ್' ಕಾರ್ಯಕ್ರಮದ ಕೇಳುಗರಲ್ಲಿ ಶೇ 40ರಷ್ಟು ಜನರು ಶಿಕ್ಷಣ ಹಾಗೂ ಶೇ 26ರಷ್ಟು ಜನರು 'ತಳಮಟ್ಟದ ನವೋದ್ಯಮಿಗಳ ಕುರಿತು ಮಾಹಿತಿ' ಅತ್ಯಂತ ಪ್ರಭಾವ ಬೀರಿದ ವಿಷಯಗಳು ಎಂದು ಹೇಳಿದ್ದಾರೆ' ಎಂದೂ ಅವರು ಮಾಹಿತಿ ನೀಡಿದ್ದಾರೆ.

'ಐಐಎಂಸಿಯು ನಡೆಸಿರುವ ಸರ್ವೇಯಲ್ಲಿ ಭಾಗವಹಿಸಿದ ಮಾಧ್ಯಮದ ಶೇ 76ರಷ್ಟು ಜನರು ಈ ರೇಡಿಯೊ ಕಾರ್ಯಕ್ರಮವು ದೇಶದ ಜನರಿಗೆ 'ನೈಜ ಭಾರತ'ವನ್ನು ಪರಿಚಯಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ ಎಂದು ನಂಬಿದ್ದಾರೆ. ದೇಶದ ಕುರಿತು ಪ್ರಧಾನಿ ಅವರಿಗಿರುವ ದೃಷ್ಟಿ ಹಾಗೂ ಜ್ಞಾನವು ಈ ಕಾರ್ಯಕ್ರಮವನ್ನು ಆಲಿಸಲು ಪ್ರೇರಣೆ ನೀಡುತ್ತದೆ ಎಂದೂ ಅವರು ತಿಳಿಸಿದ್ದಾರೆ' ಎಂದು ಸಂಜಯ್ ದ್ವಿವೇದಿ ಹೇಳಿದ್ದಾರೆ.

ಒಡಿಶಾದ ಪುರಿ ಸಮುದ್ರ ದಂಡೆಯಲ್ಲಿ 'ಮನ್ ಕಿ ಬಾತ್' ಮಾಸಿಕ ರೇಡಿಯೊ ಕಾರ್ಯಕ್ರಮದ 100ನೇ ಸಂಚಿಕೆ ಕುರಿತ ಮರಳು ಶಿಲ್ಪ ಕಲಾವಿದ ಸುದರ್ಶನ ಪಟ್ನಾಯಕ್ ಅವರು ಮರಳು ಶಿಲ್ಪ ರಚಿಸಿದರು —ಪಿಟಿಐ ಚಿತ್ರ

ವಿಶ್ವಸಂಸ್ಥೆಯಲ್ಲಿ ನೇರ ಪ್ರಸಾರ

ನ್ಯೂಯಾರ್ಕ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಮನದ ಮಾತು (ಮನ್ ಕಿ ಬಾತ್) ಮಾಸಿಕ ರೇಡಿಯೊ ಕಾರ್ಯಕ್ರಮದ 100ನೇ ಸಂಚಿಕೆಯು ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ನೇರ ಪ್ರಸಾರವಾಗಲಿದೆ.

ವಿಶ್ವಸಂಸ್ಥೆಯ ಭಾರತದ ಕಾಯಂ ಆಯೋಗವು ಈ ಕುರಿತು ಟ್ವೀಟ್ ಮಾಡಿದೆ. 'ಪ್ರಧಾನಿ ಮೋದಿ ಅವರ ಮನದ ಮಾತು ಕಾರ್ಯಕ್ರಮವು ಏಪ್ರಿಲ್ 30ರಂದು ವಿಶ್ವಸಂಸ್ಥೆಯ ಟ್ರಸ್ಟಿಶಿಪ್ ಕೌನ್ಸಿಲ್ ಚೇಂಬರ್‌ನಲ್ಲಿ ಪ್ರಸಾರವಾಗಲಿದೆ. ಈ ಐತಿಹಾಸಿಕ ಘಳಿಗೆಗೆ ಸಾಕ್ಷಿಯಾಗಲಿದೆ' ಎಂದಿದೆ.

ಇಂದು 100ರ ಸಂಭ್ರಮ

ಪ್ರಧಾನಿ ಅವರ ಮಾಸಿಕ ರೇಡಿಯೊ ಕಾರ್ಯಕ್ರಮ 'ಮನ್ ಕಿ ಬಾತ್'ಗೆ ಇಂದು (ಏ.30) 100ರ ಸಂಭ್ರಮ.

2014ರ ಅ. 3ರಂದು ಮೊದಲ ಸಂಚಿಕೆ ಪ್ರಸಾರವಾಗಿತ್ತು. ಇದುವರೆಗೆ 99 ಸಂಚಿಕೆಗಳನ್ನು ಪೂರೈಸಿರುವ 'ಮನ್ ಕಿ ಬಾತ್' ಕಾರ್ಯಕ್ರಮವನ್ನು 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಎರಡು ತಿಂಗಳು ಮಾತ್ರ ನಿಲ್ಲಿಸಲಾಗಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Call Centre

REQ. (FEMALE) TELECALLERS @ATTIBELLE (BANGALORE)
5 HOURS WORK ONLY
SALARY + INCENTIVE ₹13,000/- to 18,000/-
No.10, Kote Street, Anekal Road, Attibelle, Bangalore- 562107
78259 22477

Drivers

ಲಿಥಿಯಂ ಅರ್ಬನ್ ಟೆಕ್ನಾಲಜೀಸ್ ಪ್ರೈ.ಲಿ ಬೆಂಗಳೂರಿನಲ್ಲಿ 4 ವೀಲರ್ ಡ್ರೈವರ್‌ಗಳು ಬೇಕಾಗಿದ್ದಾರೆ ಸಂಬಳ- ತಿಂಗಳಿಗೆ ರೂ.19600 ರಿಂದ ರೂ. 22000+ ಆರೋಗ್ಯ ವಿಮೆ+ ಮಕ್ಕಳ ಶಿಕ್ಷಣದ ಲಾಭ. ವಿವರಗಳಿಗಾಗಿ ಕರೆಮಾಡಿ 080-69458600 ಸಂದರ್ಶನದ ಸ್ಥಳ: 158, 1ನೇ ಮಹಡಿ, ಸೀತಾರಾಮಪಾಳ್ಯ, ಹೂಡಿ, ಬೆಂಗಳೂರು, ಕರ್ನಾಟಕ 560048

Multiple Vacancy

ಬೇಕಾಗಿದ್ದಾರೆ: ಅಟೆಂಡರ್, ಬಸ್ ಡ್ರೈವರ್, ಸೆಕ್ಯೂರಿಟೀ ಗಾರ್ಡ್‌ಗಳು, ಆಯಾಗಳು, ಸಂಪರ್ಕಿಸಿ: ಕ್ಯಾಮ್ಲಿನ್ ಆಂಗ್ಲ ಶಾಲೆ, 6ನೇ 'ಸಿ' ಮೇನ್, 4ನೇ ಕ್ರಾಸ್, ಹಂಪಿನಗರ, ಬೆಂಗಳೂರು.

Wanted

ಉತ್ತಮ ಅನುಭವವುಳ್ಳ ಇಸ್ತ್ರಿ ಮಾಡುವವರು ಬೇಕಾಗಿದ್ದಾರೆ ಸಂಬಳ 23000-26000/-.ಬೆಳಿಗ್ಗೆ 10.00 ರಾತ್ರಿ 8.00.ಅಂಗಡಿ ಸಹಾಯಕರು ಬೆಳಿಗ್ಗೆ 9.30 ರಾತ್ರಿ 9.00. ಸಂಬಳ 15000/-. ಸ್ಟೋರ್ ಮ್ಯಾನೇಜರ್ (ಡ್ರೈ ಕ್ಲೀನಿಂಗ್‌ನಲ್ಲಿ ಅನುಭವವಿರಬೇಕು) ಬೆಳಿಗ್ಗೆ-9.30ರಾತ್ರಿ 9.00.ಸಂಬಳ 18,000- 30,000/-. ಬೆಂಗಳೂರು: 9880266007

ಬೇಕಾಗಿದ್ದಾರೆ: ಬೆಂಗಳೂರಿಗೆ ದಕ್ಷಿಣ ಭಾರತೀಯ ಅಡುಗೆಯವರು, ಸಹಾಯಕ ಅಡುಗೆಯವರು, ಗ್ರೈಂಡರ್ ಚಲಾಯಿಸುವವರು, ಹೋಟೆಲ್‌ನಲ್ಲಿ 5ರಿಂದ 10ವರ್ಷ ಅನುಭವ ಇರುವವರು, ಆಹಾರ ವಸತಿಯುಚಿತ ನೀಡಲಾಗುವುದು. ಸಂಪರ್ಕಿಸಿ: 7676296610

ಹೊಸ ವಾರಪತ್ರಿಕೆಗೆ ಬೇಕಾಗಿದ್ದಾರೆ. ಮಹಿಳಾ ಅನುವಾದಕರು, ಸಹಾಯಕ ಸಂಪಾದಕರು, ಬರಹಗಾರರು, ಕರಡು ತಿದ್ದುವವರು, ಕನ್ನಡದಲ್ಲಿ ಪರಿಣಿತರು. ಸಂಪರ್ಕಿಸಿ: 93412 88049

Domestic Helpers / Housekeeping

ಬೆಂಗಳೂರಿನ ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಮನೆಗೆಲಸದ ಹೆಂಗಸು ಬೇಕಾಗಿದ್ದಾರೆ. ಸಂಬಳ ರೂ.15000/, ಚಿಕ್ಕಸಂಸಾರಕ್ಕೆ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ: 9845058243

General

ಬೆಂಗಳೂರಿನಲ್ಲಿರುವ ಟೈರ್ ಅಂಗಡಿಗೆ ಸಹಾಯಕರು ಬೇಕಾಗಿದ್ದಾರೆ, ಸಂಬಳ 12,000/ ಜೊತೆಗೆ ಊಟ ಮತ್ತು ವಸತಿ ಕೊಡಲಾಗುವುದು. ಕೂಡಲೇ ಸಂಪರ್ಕಿಸಿ: 9900902109.

Teachers/ Professors

SITUATION VACANT
Experienced and qualified Headmistress, Teachers for Hindi and Kannada for immediate appointment for a High School in Marathahalli. Please send bio data to trinityassociationblr@gmail.com or call 6364900770

WANTED MONTESSORI
trained adults with a passion of working with little children @ Ace Montessori Padmanabhanagar Bengaluru contact:7338613945

ರೆಂಟಲ್ ಪ್ರಾಪರ್ಟೀಸ್

Accommodation Available

Commercial

FOR RENT- Old P.B Road, beside Shrigandha Lodge, Davanagere, Ground Floor- 800sqft, 1st Floor- 4000sqft, 2nd Floor- 4000sqft, Terrace Floor- 4000sqft, Basement- 4000sqft, Contact- 9448028103

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವ್ಯಾಪಾರ

Business to Business

Business

ಮನೆಯಿಂದಲೇ ಅಗರಬತ್ತಿ, ಕರ್ಪೂರ, ಸಾಂಬ್ರಾಣಿ, ಪೆನಾಯಿಲ್ ತಯಾರಿಸಿ ತಿಂಗಳಿಗೆ 20ಸಾವಿರ ಹಣ ಸಂಪಾದಿಸಿ. ಮಾರಾಟದ ಬಗ್ಗೆ ನಾವೇ ಸಹಕರಿಸುತ್ತೇವೆ. 9739715051

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತಪರಿಹಾರ ಸ್ತ್ರೀಪುರುಷ ವಶೀಕರಣಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್. ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ವೈಯಕ್ತಿಕ

Lost

ಕ್ರಯಪತ್ರ ಕಳೆದಿದೆ
ಶ್ರೀ ಸುರೇಶ್ ಎಂ ಬಿನ್ ಮರಿಯಪ್ಪರವರ ಹೆಸರಿಗೆ ಶ್ರೀ ಜಯರಾಂ ಎಮ್ ಬಿನ್ ಲೇಟ್ ಮುನಿವೆಂಕಟಪ್ಪರವರಿಂದ ಮಹದೇವಪುರ ಉಪನೋಂದಾಧಿಕಾರಿಗಳ ಕಛೇರಿಯಿಂದ ದಿ: 13-09-20211ರಲ್ಲಿ ನೋಂದಣಿಯಾಗಿದ್ದ ಶುದ್ಧ ಕ್ರಯಪತ್ರ ಕಳೆದುಹೋಗಿರುತ್ತೆ. ಈ ಬಗ್ಗೆ ಪೋಲಿಸ್ ದೂರು ಸಹ ನೀಡಲಾಗಿದೆ. ಯಾರಿಗಾದರೂ ಸಿಕ್ಕಿದಲ್ಲಿ ಸಂಪರ್ಕಿಸಿ: 7899795967

ಪ್ರವಾಸ

Travel

"ಶ್ರೇಯಸ್‌ಟೂರ್ಸ್: 15.05.2023 13/06/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್‌ಸಿಸ್ಟರ್ಸ್ ಪ್ರವಾಸ) ಅಸ್ಸಾಂ,ಅರುಣಾಚಲ, ಮೇಘಾಲಯ,ಮಣಿಪುರ ತ್ರಿಪುರ,ನಾಗಲ್ಯಾಂಡ್, ಮಿಝೋರಾಂ.22.05.2023 10ದಿನಗಳು 6ವಿಮಾನಗಳಲ್ಲಿ ಸಂಪೂರ್ಣ ನೇಪಾಳರಾಷ್ಟ್ರ ಪ್ರವಾಸ ಕಠ್ಮಂಡು ಪೋಕ್ರಾ ಮುಕ್ತಿನಾಥ ಮನಕಾಮನ,ಜನಕಪುರಿ, ಚಿತ್‌ವಾನ್ 10.07.2023 04/10ದಿನಗಳು ಅಮರನಾಥಯಾತ್ರಾ ವಿಶೇಷ ಲೇ ಲಡಾಖ್ ಶ್ರೀನಗರ ಕಾರ್ಗಿಲ್. 8073824856/ 6366322639/ 9206979202"

★ರಿಯಾಯಿತಿ ದರದಲ್ಲಿ★ ರೈಲು,ವಿಮಾನ, AC ಬಸ್ಸಿನಲ್ಲಿ 5.7.2023, 11.7.2023 11ದಿನಗಳು ಕಾಶಿ,ಗಯ,ಪ್ರಯಾಗ ದೆಹಲಿ,ಆಗ್ರಾ,ಮಥುರ,ಅಯೋಧ್ಯ ರೂ.29500 ಒಬ್ಬರಿಗೆ., ಆರ್.ಗಾಂಧಿ ಟೂರ್ಸ್. 9902433500, 9945445809, 08026760367. www.rgandhitours.com

13ದಿನಗಳ ಜೈಪುರ, ಆಗ್ರಾ,ಮಥುರ,ಅಮೃತಸರ,ಕಟ್ರಾ, ಚಾಮುಂಡಾ,ಮನಾಲಿ,ಚಂಡಿಘಡ್ ,ದೆಹಲಿ. 13ದಿನಗಳ ಚಾರ್ ಧಾಮ್ ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್, ಬೆಂಗಳೂರು. 9980270467, 9632776916, 080-41467722

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 17/05 ಕಾಶಿ, ಗಯ, ಅಯೋಧ್ಯ. 08/06 ಚಾರ್ಧಾಮ್ ಯಾತ್ರ ಕೇದಾರನಾಥ, ಬದ್ರಿನಾಥ್, ಗಂಗೋತ್ರಿ, ಯಮುನೋತ್ರಿ 9591017782, 9964527782

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ವಿಜಯ್ ಶಂಕರ್, ಶುಭಮನ್ ಗಿಲ್ ಮಿಂಚು; ಕೋಲ್ಕತ್ತ ನೈಟ್ ರೈಡರ್ಸ್‌ಗೆ ಸೋಲು

ಅಗ್ರಸ್ಥಾನಕ್ಕೇರಿದ ಗುಜರಾತ್

ಕೋಲ್ಕತ್ತ (ಪಿಟಿಐ): ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡದವರು ಹ್ಯಾಟ್ರಿಕ್ ಗೆಲುವಿನ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದು, 'ಪ್ಲೇ ಆಫ್' ಸ್ಥಾನ ಪಡೆಯುವ ನಿಟ್ಟಿನಲ್ಲಿ ಮತ್ತೊಂದು ಹೆಜ್ಜೆ ಮುಂದಿಟ್ಟಿದ್ದಾರೆ.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಆಲ್‌ರೌಂಡ್ ಪ್ರದರ್ಶನ ನೀಡಿದ ಹಾರ್ದಿಕ್ ಪಾಂಡ್ಯ ಬಳಗ ಏಳು ವಿಕೆಟ್‌ಗಳಿಂದ ಕೋಲ್ಕತ್ತ ನೈಟ್ ರೈಡರ್ಸ್ ತಂಡವನ್ನು ಮಣಿಸಿತು.

ಟೈಟನ್ಸ್ ತಂಡ ಈ ಮೂಲಕ ತವರು ನೆಲದಲ್ಲಿ ಅನುಭವಿಸಿದ್ದ ಸೋಲಿಗೆ ಮುಯ್ಯಿ ತೀರಿಸಿಕೊಂಡಿತು. ಆ ಪಂದ್ಯದಲ್ಲಿ ರಿಂಕು ಸಿಂಗ್ ಐದು ಸಿಕ್ಸರ್‌ಗಳನ್ನು ಹೊಡೆದು ಕೆಕೆಆರ್‌ಗೆ ರೋಚಕ ಜಯ ತಂದುಕೊಟ್ಟಿದ್ದರು.

ಮೊದಲು ಬ್ಯಾಟ್ ಮಾಡಿದ ನಿತೀಶ್ ರಾಣಾ ಬಳಗ ನಿಗದಿತ ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 179 ರನ್ ಗಳಿಸಿತು. ಮೊಹಮ್ಮದ್ ಶಮಿ (33ಕ್ಕೆ 3), ಜೋಶ್ ಲಿಟ್ಲ್ (25ಕ್ಕೆ 2) ಮತ್ತು ನೂರ್ ಅಹ್ಮದ್ (21ಕ್ಕೆ 2) ಅವರು ಪರಿಣಾಮಕಾರಿ ದಾಳಿ ಮೂಲಕ ಎದುರಾಳಿ ಬ್ಯಾಟರ್‌ಗಳನ್ನು ನಿಯಂತ್ರಿಸಿದರು.

ಇದಕ್ಕೆ ಉತ್ತರವಾಗಿ ಟೈಟನ್ಸ್, 17.5 ಓವರ್‌ಗಳಲ್ಲಿ ಮೂರು ವಿಕೆಟ್ ಕಳೆದುಕೊಂಡು ಗೆದ್ದಿತು. ಆರಂಭಿಕ ಬ್ಯಾಟರ್ ಶುಭಮನ್ ಗಿಲ್ (49 ರನ್, 35 ಎ.) ಮತ್ತು ಸ್ಫೋಟಕ ಆಟವಾಡಿದ ವಿಜಯ್ ಶಂಕರ್ (ಅಜೇಯ 51, 24 ಎ.) ಅವರು ನಿರಾಯಾಸ ಗೆಲುವಿಗೆ ಕಾರಣರಾದರು.

ಗಿಲ್ ಅವರು ಮೊದಲ ವಿಕೆಟ್‌ಗೆ ಸಹಾ ಜತೆ 41 ಹಾಗೂ ಎರಡನೇ ವಿಕೆಟ್‌ಗೆ ಹಾರ್ದಿಕ್ ಪಾಂಡ್ಯ (26) ಅವರೊಂದಿಗೆ 50 ರನ್ ಸೇರಿಸಿ ಭದ್ರ ಬುನಾದಿ ಹಾಕಿಕೊಟ್ಟರು. ಅರ್ಧಶತಕ

ಗುಜರಾತ್ ಟೈಟನ್ಸ್ ತಂಡದ ವಿಜಯ್ ಶಂಕರ್ (ಎಡ) ಮತ್ತು ಡೇವಿಡ್ ಮಿಲ್ಲರ್ ಅವರು ಪಂದ್ಯದ ಬಳಿಕ ಪೆವಿಲಿಯನ್‌ನತ್ತ ಹೆಜ್ಜೆಯಿಟ್ಟರು –ಪಿಟಿಐ ಚಿತ್ರ

ಪೂರೈಸಲು ಒಂದು ರನ್ ಬೇಕಿದ್ದಾಗ ಗಿಲ್ ಅವರು ಸುನಿಲ್ ನಾರಾಯಣ ಎಸೆತದಲ್ಲಿ ಆಂಡ್ರೆ ರಸೆಲ್‌ಗೆ ಕ್ಯಾಚಿತ್ತರು.

ವಿಜಯ್ ಮತ್ತು ಡೇವಿಡ್ ಮಿಲ್ಲರ್ (ಅಜೇಯ 32, 18 ಎ.) ಅವರು ಮುರಿಯದ ನಾಲ್ಕನೇ ವಿಕೆಟ್‌ಗೆ 39 ಎಸೆತಗಳಲ್ಲಿ 87 ರನ್ ಸೇರಿಸಿ ತಂಡವನ್ನು ಗೆಲುವಿನ ಗುರಿ ದಾಟಿಸಿದರು.

26 ರನ್ ಗಳಿಸಿದ್ದಾಗ ಮಿಲ್ಲರ್‌ಗೆ ಜೀವದಾನ ಲಭಿಸಿತು. ಸುಯಶ್ ಶರ್ಮಾ ಅವರು ಕ್ಯಾಚ್ ಕೈಚೆಲ್ಲಿದರು. ಈ ವೇಳೆ ಟೈಟನ್ಸ್ ಗೆಲುವಿಗೆ 29 ಎಸೆತಗಳಲ್ಲಿ 51 ರನ್‌ಗಳು ಬೇಕಿದ್ದವು. ಕೈಚೆಲ್ಲಿದ ಕ್ಯಾಚ್ ಕೆಕೆಆರ್‌ಗೆ ದುಬಾರಿಯಾಗಿ ಪರಿಣಮಿಸಿತು. ವಿಜಯ್ ಐದು ಹಾಗೂ ಮಿಲ್ಲರ್ ಎರಡು ಸಿಕ್ಸರ್ ಹೊಡೆದರು.

ಎಂಟು ಪಂದ್ಯಗಳಿಂದ 12 ಪಾಯಿಂಟ್ಸ್ ಕಲೆಹಾಕಿರುವ ಟೈಟನ್ಸ್ ತಂಡ ಅಗ್ರಸ್ಥಾನದಲ್ಲಿದೆ. ಇನ್ನು ಎರಡು ಪಂದ್ಯಗಳನ್ನು ಗೆದ್ದರೂ, 'ಪ್ಲೇ ಆಫ್'ನಲ್ಲಿ ಸ್ಥಾನ ಪಡೆಯಲಿದೆ. ಮತ್ತೊಂದೆಡೆ ಆರನೇ ಸೋಲು ಅನುಭವಿಸಿದ ಕೆಕೆಆರ್ ತಂಡದ 'ಪ್ಲೇ ಆಫ್' ಪ್ರವೇಶದ ಸಾಧ್ಯತೆ ಮತ್ತಷ್ಟು ಕ್ಷೀಣಿಸಿದೆ.

ಗುರ್ಬಾಜ್ ಅಬ್ಬರದ ಆಟ: ಮೊದಲು ಬ್ಯಾಟ್ ಮಾಡಿದ ಕೋಲ್ಕತ್ತ ತಂಡದ ಪರ ಆರಂಭಿಕ ಬ್ಯಾಟರ್ ರಹಮಾನುಲ್ಲಾ ಗುರ್ಬಾಜ್ (81 ರನ್, 39 ಎ.) ಬೀಸಾಟ ಆಡಿದರು. ಅಫ್ಗಾನಿಸ್ತಾನದ ಈ ಆಟಗಾರ ಏಳು ಸಿಕ್ಸರ್ ಮತ್ತು ಐದು ಬೌಂಡರಿ ಹೊಡೆದರು. ಅವರನ್ನು ಅದೇ ದೇಶದ ಇನ್ನೊಬ್ಬ ಆಟಗಾರರು ಸೆಲೆಕೊಂಡು ಔಟ್ ಮಾಡಿದ್ದು ವಿಶೇಷ. ಅವರು ನೂರ್ ಅಹ್ಮದ್ ಎಸೆತದಲ್ಲಿ ರಶೀದ್ ಖಾನ್‌ಗೆ ಕ್ಯಾಚಿತ್ತರು.

ಕೆಕೆಆರ್ ಮಧ್ಯಮ ಕ್ರಮಾಂಕ ವಿಫಲವಾಯಿತು. ರಸೆಲ್ ಕೊನೆಯಲ್ಲಿ ರಟ್ಟೆಯರಳಿಸಿದ್ದರಿಂದ ಸವಾಲಿನ ಮೊತ್ತ ಪೇರಿಸಿತು. ರಶೀದ್ ತಮ್ಮ ನಾಲ್ಕು ಓವರ್‌ಗಳಲ್ಲಿ 54 ರನ್ ಬಿಟ್ಟುಕೊಟ್ಟರು.

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 7ಕ್ಕೆ 179 (20 ಓವರ್)

ಜಗದೀಶನ್ ಎಲ್‌ಬಿಡಬ್ಲ್ಯು ಬಿ ಶಮಿ 19 (15 ಎ., 4X4)
ಗುರ್ಬಾಜ್ ಸಿ ರಶೀದ್ ಬಿ ನೂರ್ 81 (39 ಎ., 4X5, 6X7)
ಶಾರ್ದೂಲ್ ಸಿ ಶರ್ಮಾ ಬಿ ಶಮಿ 0 (4 ಎ.)
ವೆಂಕಟೇಶ್ ಎಲ್‌ಬಿಡಬ್ಲ್ಯು ಬಿ ಲಿಟ್ಲ್ 11 (14 ಎ.)
ನಿತೀಶ್ ಸಿ ತೆವಾಟಿಯಾ ಬಿ ಲಿಟ್ಲ್ 4 (3 ಎ., 4X1)
ರಿಂಕು ಸಿ ಲಿಟ್ಲ್ ಬಿ ನೂರ್ 19 (20 ಎ., 6X1)
ರಸೆಲ್ ಸಿ ತೆವಾಟಿಯಾ ಬಿ ಶಮಿ 34 (19 ಎ., 4X2, 6X3)
ವೈಸ್ ಔಟಾಗದೆ 8 (6 ಎ., 6X1)
ಇತರೆ: 3 (ವೈಡ್ 3)
ವಿಕೆಟ್ ಪತನ: 1–23 (ನಾರಾಯಣ ಜಗದೀಶನ್; 2.5), 2–47 (ಶಾರ್ದೂಲ್ ಠಾಕೂರ್; 4.6), 3–84 (ವೆಂಕಟೇಶ್ ಅಯ್ಯರ್; 10.1), 4–88 (ನಿತೀಶ್ ರಾಣಾ; 10.4), 5–135 (ರಹಮಾನುಲ್ಲಾ ಗುರ್ಬಾಜ್; 15.2), 6–156 (ರಿಂಕು ಸಿಂಗ್; 17.3), 7–179 (ಆಂಡ್ರೆ ರಸೆಲ್; 19.6)
ಬೌಲಿಂಗ್: ಮೊಹಮ್ಮದ್ ಶಮಿ 4–0–33–3, ಹಾರ್ದಿಕ್ ಪಾಂಡ್ಯ 3–0–34–0, ರಶೀದ್ ಖಾನ್ 4–0–54–0, ಜೋಶ್ ಲಿಟ್ಲ್ 4–0–25–2, ನೂರ್ ಅಹ್ಮದ್ 4–0–21–2, ಜಾಯಿಕ್ ಶರ್ಮಾ 1–0–12–0

ಗುಜರಾತ್ ಟೈಟನ್ಸ್ 3ಕ್ಕೆ 180 (17.5 ಓವರ್)

ಸಹಾ ಸಿ ಹರ್ಷಿತ್ ಬಿ ರಸೆಲ್ 10 (10 ಎ., 4X1)
ಗಿಲ್ ಸಿ ರಸೆಲ್ ಬಿ ಸುನಿಲ್ 49 (35 ಎ., 4X8)
ಹಾರ್ದಿಕ್ ಎಲ್‌ಬಿಡಬ್ಲ್ಯು ಬಿ ಹರ್ಷಿತ್ 26 (20 ಎ., 4X2, 6X1)
ವಿಜಯ್ ಶಂಕರ್ ಔಟಾಗದೆ 51 (24 ಎ., 4X2, 6X5)
ಮಿಲ್ಲರ್ ಔಟಾಗದೆ 32 (18 ಎ., 4X2, 6X2)
ಇತರೆ: 12 (ಲೆಗ್ ಬೈ 9, ವೈಡ್ 3)
ವಿಕೆಟ್ ಪತನ: 1–41 (ವೃದ್ಧಿಮಾನ್ ಸಹಾ; 4.1), 2–91 (ಹಾರ್ದಿಕ್ ಪಾಂಡ್ಯ; 10.4), 3–93 (ಶುಭಮನ್ ಗಿಲ್; 11.2)
ಬೌಲಿಂಗ್: ಹರ್ಷಿತ್ ರಾಣಾ 3–0–25–1, ಆಂಡ್ರೆ ರಸೆಲ್ 3–0–29–1, ವರುಣ್ ಚಕ್ರವರ್ತಿ 4–0–42–0, ಸುಯಶ್ ಶರ್ಮಾ 4–0–37–0, ಸುನಿಲ್ ನಾರಾಯಣ 3–0–24–1, ನಿತೀಶ್ ರಾಣಾ 0.5–0–14–0
ಫಲಿತಾಂಶ: ಗುಜರಾತ್ ಟೈಟನ್ಸ್ ತಂಡಕ್ಕೆ ಏಳು ವಿಕೆಟ್‌ಗಳ ಗೆಲುವು

ಚೆನ್ನೈನಲ್ಲಿ 'ಕಿಂಗ್ಸ್' ಹಣಾಹಣಿ

ಪಂಜಾಬ್ ಕಿಂಗ್ಸ್– ಚೆನ್ನೈ ಸೂಪರ್ ಕಿಂಗ್ಸ್ ಪಂದ್ಯ ಇಂದು

ಚೆನ್ನೈ (ಪಿಟಿಐ): ಮಹೇಂದ್ರ ಸಿಂಗ್ ಧೋನಿ ನೇತೃತ್ವದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಭಾನುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದ್ದು, ಪ್ರಬಲ ಪೈಪೋಟಿ ನಿರೀಕ್ಷಿಸಲಾಗಿದೆ.

ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆಯಲಿರುವ ಹಣಾಹಣಿಯಲ್ಲಿ ಸೂಪರ್ ಕಿಂಗ್ಸ್ ತಂಡ ಗೆಲ್ಲುವ 'ಫೇವರಿಟ್' ಎನಿಸಿಕೊಂಡಿದ್ದು, ಪಂದ್ಯದ ಫಲಿತಾಂಶ ನಿರ್ಧರಿಸುವಲ್ಲಿ ಆತಿಥೇಯ ಸ್ಪಿನ್ನರ್‌ಗಳು ಪ್ರಮುಖ ಪಾತ್ರ ವಹಿಸುವ ಸಾಧ್ಯತೆಯಿದೆ.

ಹಿಂದಿನ ಪಂದ್ಯದಲ್ಲಿ ಎದುರಾದ ಸೋಲಿನ ನಿರಾಸೆಯೊಂದಿಗೆ ಉಭಯ ತಂಡಗಳು ಕಣಕ್ಕಿಳಿಯಲಿವೆ. ಸೂಪರ್‌ಕಿಂಗ್ಸ್ ತಂಡ ರಾಜಸ್ಥಾನ ರಾಯಲ್ಸ್ ಎದುರು 32 ರನ್‌ಗಳಿಂದ ಸೋತಿದ್ದರೆ, ಪಂಜಾಬ್ ತಂಡ, ಲಖನೌ ಸೂಪರ್ ಜೈಂಟ್ಸ್ ಕೈಯಲ್ಲಿ 56 ರನ್‌ಗಳಿಂದ ಪರಾಭವಗೊಂಡಿತ್ತು.

ಜೈಪುರದಲ್ಲಿ ನಡೆದಿದ್ದ ಪಂದ್ಯದಲ್ಲಿ ಗೆಲುವಿಗೆ 203 ರನ್‌ಗಳ ಗುರಿ ಪಡೆದಿದ್ದ ಚೆನ್ನೈ ತಂಡಕ್ಕೆ ಬ್ಯಾಟಿಂಗ್ ಕೈಕೊಟ್ಟಿತ್ತು. ಆ ಪಂದ್ಯದಲ್ಲಿ ಮಾಡಿದ್ದ ಲೋಪಗಳನ್ನು ಬೇಗನೇ ಸರಿಪಡಿಸಿಕೊಳ್ಳುವ ಸವಾಲು ಮುಂದಿದೆ. ಡೆವೊನ್ ಕಾನ್ವೆ, ಋತುರಾಜ್ ಗಾಯಕವಾಡ ಮತ್ತು ಅಜಿಂಕ್ಯ ರಹಾನೆ ಅವರು ಬ್ಯಾಟಿಂಗ್‌ನಲ್ಲಿ ಚೆನ್ನೈ ತಂಡದ ಶಕ್ತಿ ಎನಿಸಿದ್ದಾರೆ.

ಧೋನಿ ಅವರು ಸ್ಪಿನ್ನರ್‌ಗಳಾದ ಮಹೀಷ ತೀಕ್ಷಣ, ರವೀಂದ್ರ ಜಡೇಜ ಮತ್ತು ಮೊಯೀನ್ ಅಲಿ ನೆರವಿನಿಂದ ಪಂಜಾಬ್ ಬ್ಯಾಟರ್‌ಗಳನ್ನು ಕಟ್ಟಿಹಾಕಲು ತಂತ್ರ ರೂಪಿಸಿದ್ದಾರೆ. ವೇಗದ ಬೌಲಿಂಗ್ ವಿಭಾಗದಲ್ಲಿ 14 ವಿಕೆಟ್‌ಗಳನ್ನು ಪಡೆದಿರುವ ತುಷಾರ್ ದೇಶಪಾಂಡೆ ಉತ್ತಮ ಪ್ರದರ್ಶನ ಮುಂದುವರಿಸುವ ವಿಶ್ವಾಸದಲ್ಲಿದ್ದಾರೆ.

ಮತ್ತೊಂದೆಡೆ ಬ್ಯಾಟರ್‌ಗಳ ಅಸ್ಥಿರ ಪ್ರದರ್ಶನ ಪಂಜಾಬ್ ತಂಡದ ಚಿಂತೆಗೆ ಕಾರಣವಾಗಿದೆ. ನಾಯಕ ಶಿಖರ್ ಧವನ್ ಅವರು ತಂಡಕ್ಕೆ ಮರಳಿದರೂ, ಶುಕ್ರವಾರ ನಡೆದಿದ್ದ ಪಂದ್ಯದಲ್ಲಿ ಸೋಲು ಎದುರಾಗಿತ್ತು. ಲಖನೌ ನೀಡಿದ್ದ 258 ರನ್‌ಗಳ ಗುರಿ ಬೆನ್ನಟ್ಟಿದ್ದ ತಂಡ, 201 ರನ್‌ಗಳಿಗೆ ಆಲೌಟಾಗಿತ್ತು.

ಚೆನ್ನೈ ತಂಡದ ಸ್ಪಿನ್ನರ್‌ಗಳನ್ನು ಎಚ್ಚರಿಕೆಯಿಂದ ಎದುರಿಸುವ ಸವಾಲು ಶಿಖರ್ ಬಳಗದ ಬ್ಯಾಟರ್‌ಗಳ ಮುಂದಿದೆ. ಅಗ್ರ ಕ್ರಮಾಂಕದ ಬ್ಯಾಟರ್‌ಗಳಾದ ಪ್ರಭಸಿಮ್ರನ್ ಸಿಂಗ್, ಅಥರ್ವ ತೈಡೆ ಮತ್ತು ಲಿಯಾಮ್ ಲಿವಿಂಗ್‌ಸ್ಟೋನ್ ತಮ್ಮ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುವುದು ಮುಖ್ಯ. ಸ್ಯಾಮ್ ಕರನ್ ಅವರ ಆಲ್‌ರೌಂಡ್ ಆಟ ಕೂಡಾ ತಂಡದ ಯಶಸ್ಸಿನಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನಿಮಾ ಆ್ಯಪ್

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	8	6	2	0	12	0.638
ರಾಜಸ್ಥಾನ	8	5	3	0	10	0.939
ಲಖನೌ	8	5	3	0	10	0.841
ಚೆನ್ನೈ	8	5	3	0	10	0.376
ಬೆಂಗಳೂರು	8	4	4	0	8	-0.139
ಪಂಜಾಬ್	8	4	4	0	8	-0.510
ಕೋಲ್ಕತ್ತ	9	3	6	0	6	-0.147
ಹೈದರಾಬಾದ್	8	3	5	0	6	-0.577
ಮುಂಬೈ	7	3	4	0	6	-0.620
ಡೆಲ್ಲಿ	8	2	6	0	4	-0.898

ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಸಿರಾಜ್	ಆರ್‌ಸಿಬಿ	14

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	422

ಅಭಿಷೇಕ್ ಆಟಕ್ಕೆ ಒಲಿದ ಗೆಲುವು

ಮಿಚೆಲ್ ಮಾರ್ಷ್ ಆಲ್‌ರೌಂಡ್ ಆಟ ವ್ಯರ್ಥ; ಹೈದರಾಬಾದ್‌ಗೆ ಮಣಿದ ಡೆಲ್ಲಿ

ನವದೆಹಲಿ (ಪಿಟಿಐ): ಅಭಿಷೇಕ್ ಶರ್ಮಾ ಮತ್ತು ಹೆನ್ರಿಕ್ ಕ್ಲಾಸೆನ್ ಅವರ ಬಿರುಸಿನ ಆಟದ ಬಲದಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಐಪಿಎಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಗೆಲುವು ಸಾಧಿಸಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಹೈದರಾಬಾದ್ ತಂಡಕ್ಕೆ 9 ರನ್‌ಗಳ ಗೆಲುವು ಒಲಿಯಿತು. ಮಿಚೆಲ್ ಮಾರ್ಷ್ (63 ರನ್, 27ಕ್ಕೆ 4 ವಿಕೆಟ್) ಆಲ್‌ರೌಂಡ್ ಆಟ ವ್ಯರ್ಥವಾಯಿತು.

ಮೊದಲು ಬ್ಯಾಟ್ ಮಾಡಿದ ಹೈದರಾಬಾದ್ ತಂಡ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 197 ರನ್ ರನ್ ಪೇರಿಸಿತು. ಡೆಲ್ಲಿ ತಂಡವು 6 ವಿಕೆಟ್ ಕಳೆದುಕೊಂಡು 188 ರನ್ ಗಳಿಸಿ ಸೋಲೊಪ್ಪಿಕೊಂಡಿತು.

ಗುರಿ ಬೆನ್ನತ್ತಿದ ಡೆಲ್ಲಿ ತಂಡವು ನಾಯಕ ಡೇವಿಡ್ ವಾರ್ನರ್ ಅವರನ್ನು ಪಂದ್ಯದ ಮೊದಲ ಓವರ್‌ನಲ್ಲೇ ಶೂನ್ಯಕ್ಕೆ ಕಳೆದುಕೊಂಡಿತು. ಈ ವಿಕೆಟ್ ಗಳಿಸಿದ ವೇಗಿ ಭುವನೇಶ್ವರ್ ಕುಮಾರ್ ಹೈದರಾಬಾದ್ ತಂಡಕ್ಕೆ ಮೇಲುಗೈ ಒದಗಿಸಿಕೊಟ್ಟರು.

ಎರಡನೇ ವಿಕೆಟ್‌ಗೆ ಫಿಲ್ ಸಾಲ್ಟ್ (59, 35ಎ, 4X9) ಹಾಗೂ ಮಾರ್ಷ್ (63, 39ಎ 4X1, 6X6) 110 ರನ್ ಸೇರಿಸಿ ಗೆಲುವಿನ ಭರವಸೆ ಮೂಡಿಸಿದ್ದರು. ಆದರೆ ಇವರಿಬ್ಬರು ಔಟಾದ ಬಳಿಕ ಬಂದ ಬ್ಯಾಟರ್‌ಗಳು ನಿರೀಕ್ಷಿತ ಆಟವಾಡುವಲ್ಲಿ ವಿಫಲರಾದರು. ಕೊನೆಯ ಹಂತದಲ್ಲಿ ಅಕ್ಷರ್ ಪಟೇಲ್ (29, 14ಎ, 4X1, 6X2) ನಡೆಸಿದ ಹೋರಾಟಕ್ಕೂ ಫಲ ಲಭಿಸಲಿಲ್ಲ.

ಹೈದರಾಬಾದ್ ಪರ ಮಯಂಕ್ ಮಾರ್ಕಂಡೆ (20ಕ್ಕೆ 2) ಬೌಲಿಂಗ್‌ನಲ್ಲಿ ಮಿಂಚಿದರು.

ಅಬ್ಬರದ ಆಟ: ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ನಾಯಕ ಏಡನ್ ಮರ್ಕರಂ ನಿರ್ಧಾರವನ್ನು ಬ್ಯಾಟರ್‌ಗಳು ಸಮರ್ಥಿಸಿಕೊಂಡರು. ಅಭಿಷೇಕ್ 36 ಎಸೆತಗಳಲ್ಲಿ 67 ರನ್ ಗಳಿಸಿದರೆ, ಕ್ಲಾಸೆನ್ ಅವರು ಅಜೇಯ ಅರ್ಧಶತಕದ (53 ರನ್, 27 ಎ., 4X2, 6X4) ಮೂಲಕ ಗಮನ ಸೆಳೆದರು. ಅಬ್ದುಲ್ ಸಮದ್ (28) ಕೊನೆಯಲ್ಲಿ ಸ್ಕೋರ್ ಹೆಚ್ಚಿಸಿದರು.

ಅಭಿಷೇಕ್ ಹೊರತುಪಡಿಸಿದರೆ, ಹೈದರಾಬಾದ್ ತಂಡದ ಅಗ್ರ ಕ್ರಮಾಂಕದ ಇತರ ಬ್ಯಾಟರ್‌ಗಳು ವಿಫಲರಾದರು.

ಮಿಚೆಲ್ ಮಾರ್ಷ್ (27ಕ್ಕೆ 4) ಅವರ ಚುರುಕಿನ ದಾಳಿಗೆ ಇತರ ಬ್ಯಾಟರ್‌ಗಳು ವಿಕೆಟ್ ಒಪ್ಪಿಸಿದರೂ, ಅಭಿಷೇಕ್ ಉತ್ತಮ ಲಯದಲ್ಲಿ ಆಡಿದರು. 12 ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. 12ನೇ ಓವರ್‌ನಲ್ಲಿ ಅವರು ಔಟಾಗುವಾಗ ತಂಡದ ಸ್ಕೋರ್ 109 ಆಗಿತ್ತು.

ಆ ಬಳಿಕ ದಕ್ಷಿಣ ಆಫ್ರಿಕಾದ ಬ್ಯಾಟರ್ ಕ್ಲಾಸೆನ್ ಅಬ್ಬರಿಸಿದರು. ಅಬ್ದುಲ್ ಸಮದ್ ಜತೆ ಆರನೇ ವಿಕೆಟ್‌ಗೆ 33 ಎಸೆತಗಳಲ್ಲಿ 53 ರನ್ ಹಾಗೂ ಅಕೀಲ್ ಹೊಸೇನ್ ಅವರೊಂದಿಗೆ ಏಳನೇ ವಿಕೆಟ್‌ಗೆ 18 ಎಸೆತಗಳಲ್ಲಿ 35 ರನ್ ಸೇರಿಸಿದರು. ಕೊನೆಯ ಐದು ಓವರ್‌ಗಳಲ್ಲಿ 62 ರನ್‌ಗಳು ಬಂದವು.

ಸಂಕ್ಷಿಪ್ತ ಸ್ಕೋರ್: ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 197 (ಅಭಿಷೇಕ್ ಶರ್ಮಾ 67, ರಾಹುಲ್ ತ್ರಿಪಾಠಿ 10, ಹೆನ್ರಿಕ್ ಕ್ಲಾಸೆನ್ ಔಟಾಗದೆ 53, ಅಬ್ದುಲ್ ಸಮದ್ 28, ಅಕೀಲ್ ಹೊಸೇನ್ ಔಟಾಗದೆ 16, ಮಿಚೆಲ್ ಮಾರ್ಷ್ 27ಕ್ಕೆ 4). ಡೆಲ್ಲಿ ಕ್ಯಾಪಿಟಲ್ಸ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 188 (ಫಿಲ್ ಸಾಲ್ಟ್ 59, ಮಿಚೆಲ್ ಮಾರ್ಷ್ 63, ಅಕ್ಷರ್ ಪಟೇಲ್ ಔಟಾಗದೆ 29; ಭುವನೇಶ್ವರ್ ಕುಮಾರ್ 45ಕ್ಕೆ 1, ಟಿ.ನಟರಾಜನ್ 34ಕ್ಕೆ 1 ಮಯಂಕ್ ಮಾರ್ಕಂಡೆ 20ಕ್ಕೆ 2, ಅಭಿಷೇಕ್ ಶರ್ಮಾ 26ಕ್ಕೆ 1). ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್ ತಂಡಕ್ಕೆ 9 ರನ್‌ಗಳ ಜಯ

ಅಭಿಷೇಕ್ ಶರ್ಮಾ ಬ್ಯಾಟಿಂಗ್– ಎಎಫ್‌ಪಿ ಚಿತ್ರ

ರೋಹಿತ್ ವಿಶ್ರಾಂತಿ ಕೇಳಿಲ್ಲ: ಬೌಷರ್

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ನಾಯಕ ರೋಹಿತ್ ಶರ್ಮಾ ಅವರು ವಿಶ್ರಾಂತಿಯನ್ನು ಕೇಳಿಲ್ಲ. ಆದರೆ ಅವರು ವಿಶ್ರಾಂತಿ ಬಯಸಿದಲ್ಲಿ ಆ ಬಗ್ಗೆ ಗಮನಹರಿಸಲಾಗುವುದು ಎಂದು ತಂಡದ ಮುಖ್ಯ ಕೋಚ್ ಮಾರ್ಕ್ ಬೌಷರ್ ಹೇಳಿದ್ದಾರೆ.

ಮುಂಬೈ ಇಂಡಿಯನ್ಸ್ ತಂಡ ಈ ಬಾರಿಯ ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ನೀಡಲು ವಿಫಲವಾಗಿದ್ದು ಸದ್ಯ ಪಾಯಿಂಟ್ ಪಟ್ಟಿಯಲ್ಲಿ 8ನೇ ಸ್ಥಾನಕ್ಕೆ ಕುಸಿದಿದೆ. ರೋಹಿತ್ ಈ ಬಾರಿ ತಂಡದ ಎಲ್ಲ ಪಂದ್ಯಗಳಲ್ಲೂ ಆಡಿದ್ದಾರೆ.

ಜೂನ್‌ನಲ್ಲಿ ನಡೆಯುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಉತ್ಸಾಹದಿಂದ ಕಣಕ್ಕೆ ಇಳಿಯಬೇಕಾದರೆ ರೋಹಿತ್ ಶರ್ಮಾ ಐಪಿಎಲ್‌ನ ಕೆಲವು ಪಂದ್ಯಗಳಿಂದ ವಿರಾಮ ಪಡೆದುಕೊಳ್ಳುವುದು ಉತ್ತಮ ಎಂದು ಭಾರತದ ಬ್ಯಾಟಿಂಗ್ ದಿಗ್ಗಜ ಸುನೀಲ್ ಗಾವಸ್ಕರ್ ಇತ್ತೀಚೆಗೆ ಸಲಹೆ ನೀಡಿದ್ದರು.

'ಅವರಿಗೆ ವಿಶ್ರಾಂತಿ ಬೇಕೆಂದು ಅನಿಸುತ್ತಿಲ್ಲ. ಆ ಬಗ್ಗೆ ತೀರ್ಮಾನ ಕೈಗೊಳ್ಳುವುದು ನನಗೆ ಸೇರಿದ್ದಲ್ಲ. ಸಹಜವಾಗಿ ನಮಗೆ ರೋಹಿತ್ ಆಡಬೇಕೆಂಬ ಮನಸ್ಸಿದೆ. ಅವರು ಅತ್ಯುತ್ತಮ ಆಟಗಾರ ಮತ್ತು ನಾಯಕ ಕೂಡ' ಎಂದು ಬೌಷರ್ ಹೇಳಿದರು. ರಾಜಸ್ಥಾನ ರಾಯಲ್ಸ್ ತಂಡದ ವಿರುದ್ಧ ಭಾನುವಾರ ಮುಂಬೈ ತಂಡ ಆಡಲಿದ್ದು, ಪೂರ್ವಭಾವಿಯಾಗಿ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

ರಾಜಸ್ಥಾನ– ಮುಂಬೈ ಪೈಪೋಟಿ

ಮುಂಬೈ (ಪಿಟಿಐ): ಪರದಾಡುತ್ತಿರುವ ಮುಂಬೈ ಇಂಡಿಯನ್ಸ್ ತಂಡ, ಭಾನುವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಆತ್ಮವಿಶ್ವಾಸದಲ್ಲಿರುವ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ಸಂಜು ಸ್ಯಾಮ್ಸನ್ ಪಡೆಯನ್ನು ಮಣಿಸಬೇಕಾದರೆ ಮುಂಬೈ ತನ್ನೆಲ್ಲಾ ಸಾಮರ್ಥ್ಯ ಬಳಸಿಕೊಳ್ಳಬೇಕಾಗುತ್ತದೆ.

ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿರುವ ರಾಯಲ್ಸ್ ತಂಡ ಕೊನೆಯ ಮೂರು ಪಂದ್ಯಗಳಲ್ಲಿ ಎರಡನ್ನು ಸೋತರೂ ಉತ್ತಮ ಲಯದಲ್ಲಿದೆ. ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಸೋಲಿಸಿದ ರೀತಿ ಇದಕ್ಕೊಂದು ಉದಾಹರಣೆ.

ಇನ್ನೊಂದು ಕಡೆ ರೋಹಿತ್ ಶರ್ಮಾ ಪಡೆ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ. ವಿಶೇಷವಾಗಿ ಕೊನೆಯ ಕೆಲವು ಓವರುಗಳಲ್ಲಿ ಬೌಲರ್‌ಗಳು ಧಾರಾಳಿಯಾಗುತ್ತಿರುವುದು ತಲೆನೋವಾಗಿದೆ. ಎದುರಾಳಿಗಳು ಇದರಿಂದ ದೊಡ್ಡ ಮೊತ್ತ ಕಲೆಹಾಕುತ್ತಿದ್ದಾರೆ. ಪಂಜಾಬ್ ಕಿಂಗ್ಸ್ ಆಟಗಾರರು ಮುಂಬೈ ವಿರುದ್ಧ ಕೊನೆಯ 30 ಎಸೆತಗಳಲ್ಲಿ 90 ರನ್ ಕೊಳ್ಳೆಹೊಡೆದಿದ್ದರು. ಗುಜರಾತ್ ಟೈಟನ್ಸ್ ತಂಡ ಕೊನೆಯ 24 ಎಸೆತಗಳಲ್ಲಿ 70 ರನ್ ಸೂರೆ ಮಾಡಿತ್ತು. ಬೆಹ್ರನ್‌ಡಾರ್ಫ್, ರಿಲಿ ಮೆರಿಡಿತ್ ಮತ್ತು ಅರ್ಜುನ್ ತೆಂಡೂಲ್ಕರ್ ಅವರು ದುಬಾರಿಯಾಗುತ್ತಿದ್ದಾರೆ.

ಮುಂಬೈ ತಂಡದ ಪ್ರಮುಖ ಬ್ಯಾಟರ್‌ಗಳು ಸ್ಥಿರ ಪ್ರದರ್ಶನ ನೀಡದಿರುವುದು ಚಿಂತೆ ಮೂಡಿಸಿದೆ. ರೋಹಿತ್ ಶರ್ಮಾ, ಇಶಾನ್ ಕಿಶನ್ ಮತ್ತು ಸೂರ್ಯಕುಮಾರ್ ಯಾದವ್ ಅವರಿಂದ ನಿರೀಕ್ಷಿತ ಸಾಮರ್ಥ್ಯ ಮೂಡಿಬರುತ್ತಿಲ್ಲ.

ಟೂರ್ನಿಯ ಮೊದಲಾರ್ಧದ ನಂತರ ಮುಂಬೈ ತಂಡ ಪಾಯಿಂಟ್ಸ್ ಪಟ್ಟಿಯಲ್ಲಿ ಎಂಟನೇ ಸ್ಥಾನಕ್ಕಿಳಿದಿದೆ. ಈ ಹಿಂದೆ ರಾಜಸ್ಥಾನ ರಾಯಲ್ಸ್‌ಗೆ ಆಡಿದ್ದ ವೇಗಿ ಜೋಫ್ರಾ ಆರ್ಚರ್ ಕಣಕ್ಕಿಳಿಯುವರೇ ಎಂಬುದನ್ನು ಕಾದುನೋಡಬೇಕಾಗಿದೆ. ಮೊಣಕೈ ನೋವಿನಿಂದ ಬಳಲುತ್ತಿರುವ ಅವರು ಗುಜರಾತ್ ವಿರುದ್ಧ ಆಡಿರಲಿಲ್ಲ.

ಎದುರಾಳಿಯ ದೌರ್ಬಲ್ಯದ ಲಾಭ ಎತ್ತಿಕೊಳ್ಳುವತ್ತ ರಾಯಲ್ಸ್ ಗಮನಕೊಡಲಿದೆ. ತಂಡದ ಬ್ಯಾಟಿಂಗ್ ಪ್ರಬಲವಾಗಿದೆ. ಜೋಸ್ ಬಟ್ಲರ್, ಯಶಸ್ವಿ ಜೈಸ್ವಾಲ್ ಉತ್ತಮ ಆರಂಭ ನೀಡುತ್ತಿದ್ದು, ಸಂಜು ಸ್ಯಾಮ್ಸನ್, ದೇವದತ್ತ ಪಡಿಕ್ಕಲ್, ಶಿಮ್ರೊನ್ ಹೆಟ್ಮೆಯರ್, ಧ್ರುವ್ ಜುರೆಲ್ ಅವರಿಂದಲೂ ಬ್ಯಾಟಿಂಗ್ ಕ್ರಮಾಂಕ ಆಳವಾಗಿದೆ. ಜುರೆಲ್ ಕೆಲವು ಪಂದ್ಯಗಳಲ್ಲಿ ಮಿಂಚಿದ್ದಾರೆ.

ಬೌಲಿಂಗ್ ರಾಯಲ್ಸ್ ತಂಡದ ಪ್ರಬಲ ಅಸ್ತ್ರ. ಸ್ಪಿನ್‌ದ್ವಯರಾದ ಯಜುವೇಂದ್ರ ಚಾಹಲ್ ಮತ್ತು ರವಿಚಂದ್ರನ್ ಅಶ್ವಿನ್ ಎಂಟು ಪಂದ್ಯಗಳಲ್ಲಿ 23 ವಿಕೆಟ್‌ಗಳನ್ನು ಹಂಚಿಕೊಂಡಿದ್ದಾರೆ. ವೇಗಿ ಟ್ರೆಂಟ್ ಬೌಲ್ಟ್ ಸ್ಫೂರ್ತಿದಾಯಕ ಪ್ರದರ್ಶನ ನೀಡುತ್ತಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30

ಮುಂಬೈ ತಂಡದ ಇಶಾನ್ ಕಿಶನ್

INSTITUTE OF HOTEL MANAGEMENT CATERING TECHNOLOGY AND APPLIED NUTRITION
"An Autonomous Body under Ministry of Tourism, Govt. of India"
S.J.P. Campus, Seshadri Road, Bangalore 560 001.
www.ihmbangalore.kar.nic.in, E-mail: ihmbengaluru@gmail.com
Ph. 080-22262960 / 22268562

ADMISSION NOTICE

APPLICATIONS ARE INVITED FOR ADMISSION TO THE 1 ½ YR.DIPLOMA /CRAFT COURSES IN FOOD PRODUCTION/ BAKERY/ FOOD & BEVERAGE SERVICE/ FOR THE ACADEMIC SESSION 2023-24

1. Application form along with other details is available on payment of Rs.300/- (Rs.150/- for SC/ST) inclusive of Registration fee payable by cash or D.D. in person. By post Rs.350/- (Rs.175/- for SC/ST & P.H.)
2. Issue of application form from: 01.05.2023
3. Last date for receipt of filled in Application Form by the Institute: 24.07.2023
4. Limited Hostel facility available.
5. For details of courses/fee etc., please visit: www.ihmbangalore.kar.nic.in

Sd/- PRINCIPAL

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು	
ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹62,170
ಒಡವೆ ಚಿನ್ನ 1ಗ್ರಾಂ	₹5,720
ಬೆಳ್ಳಿ ಕೆ.ಜಿಗೆ	₹76,500

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹455
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹457

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1625))
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹1020 (1020)
ಪಾಮೋಲಿನ್	₹925 (927)

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹132.50

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹800-1100
ಮಧ್ಯಮ	₹600-800
ಸಣ್ಣ	₹300-500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹8500-9234
ತುಮಕೂರು (ಇತರೆ)	₹3600-4600
ತುರುವೇಕೆರೆ	₹9200-9200

ಮುಂಬೈ ಧಾರಣೆ

ಶೇಂಗಾ
29-4-2023

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	11800-11900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630(1635)
ಒಂದು ವಾರದ ಡೆಲಿವರಿ	1625(1630)
ಸೋಯಾ ಕಚ್ಚಾ	852(860)
ಪಾಮ್ ವಾರದ ಡೆಲಿವರಿ	923(925)
ಸೂರ್ಯಕಾಂತಿ ಎಣ್ಣೆ ಕಚ್ಚಾ	900(900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 60,150 (60,100)
ಬೆಳ್ಳಿ ಕೆ.ಜಿ 74,150 (73,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'2024ರ ಒಳಗಾಗಿ ಪ್ರತಿ ಗ್ರಾಮಕ್ಕೂ 4ಜಿ'

ನವದೆಹಲಿ (ಪಿಟಿಐ): ದೇಶದ ಪ್ರತಿ ಗ್ರಾಮವೂ 2024ರ ಒಳಗಾಗಿ 4ಜಿ ಸಂಪರ್ಕ ಪಡೆಯಲಿದೆ ಎಂದು ಕೇಂದ್ರ ದೂರಸಂಪರ್ಕ ಖಾತೆ ರಾಜ್ಯ ಸಚಿವ ದೇವುಸಿಂಹ ಚೌಹಾಣ್ ತಿಳಿಸಿದ್ದಾರೆ.

38 ಸಾವಿರದಿಂದ 40 ಸಾವಿರ ಗ್ರಾಮಗಳಲ್ಲಿ ಸಿಗ್ನಲ್ ಇಲ್ಲ. 2024ರ ಒಳಗಾಗಿ ಈ ಗ್ರಾಮಗಳಲ್ಲಿಯೂ 4ಜಿ ಸಂಪರ್ಕ ಲಭ್ಯವಾಗಲಿದೆ ಎಂದಿದ್ದಾರೆ.

ಕೋಟಕ್ ಮಹೀಂದ್ರ ಬ್ಯಾಂಕ್ ಲಾಭ ಹೆಚ್ಚಳ

ಮುಂಬೈ (ಪಿಟಿಐ): ಕೋಟಕ್ ಮಹೀಂದ್ರ ಬ್ಯಾಂಕ್ ನಿವ್ವಳ ಲಾಭವು 2023ರ ಮಾರ್ಚ್ ತ್ರೈಮಾಸಿಕದಲ್ಲಿ ಶೇ 14.29ರಷ್ಟು ಹೆಚ್ಚಾಗಿ ₹4,566 ಕೋಟಿಗೆ ಏರಿಕೆ ಆಗಿದೆ.

ನಿವ್ವಳ ಬಡ್ಡಿ ವರಮಾನ ₹4,521 ಕೋಟಿಯಿಂದ ₹6,103 ಕೋಟಿಗೆ ಏರಿಕೆ ಆಗಿದೆ ಎಂದು ಹೇಳಿದೆ. ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 2.34 ರಿಂದ ಶೇ 1.78ಕ್ಕೆ ಇಳಿಕೆ ಕಂಡಿದೆ.

2022–23ನೇ ಹಣಕಾಸು ವರ್ಷಕ್ಕೆ ಬ್ಯಾಂಕ್‌ನ ನಿವ್ವಳ ಲಾಭ ಶೇ 23ರಷ್ಟು ಹೆಚ್ಚಾಗಿ ₹14,925 ಕೋಟಿಗೆ ಏರಿಕೆ ಆಗಿದೆ ಎಂದು ಬ್ಯಾಂಕ್ ಮಾಹಿತಿ ನೀಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-450
ನಡುಗೋಲು	500-600
ರಾಶಿ	700-750
ರಾಶಿ ಉತ್ತಮ	800-900
ಜರಡಿ	1000 - 1050
ಹೆರಕಿದ್ದು	1,300-1,400
ಹಸಿರು ಸಾಧಾರಣ	850-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1200-1500
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಚನ್ನಗಿರಿ	
ರಾಶಿ	47319-48500
ದಾವಣಗೆರೆ	
ರಾಶಿ	38666-47669
ಶಿರಸಿ	
ಬೆಟ್ಟೆ	38189-43199
ಬಿಳಿಗೋಟು	22099-32869
ಚಾಲಿ	33409-37112
ಕೆಂಪುಗೋಟು	27568-34299
ರಾಶಿ	42299-45699

ಏಪ್ರಿಲ್ 28ರವರೆಗೆ ₹9,852 ಕೋಟಿ ಮೌಲ್ಯದ ಷೇರು ಖರೀದಿ

ಎಫ್‌ಪಿಐ: ಏಪ್ರಿಲ್‌ನಲ್ಲಿ ಒಳಹರಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಈಚಿನ ದಿನಗಳಲ್ಲಿ ಭಾರತದಲ್ಲಿ ತಮ್ಮ ಹೂಡಿಕೆಯ ತಂತ್ರಗಾರಿಕೆಯನ್ನು ಬದಲಾಯಿಸಿಕೊಂಡಿರುವಂತೆ ಕಾಣುತ್ತಿದೆ. ಈ ವರ್ಷದ ಮೊದಲ ಮೂರು ತಿಂಗಳಲ್ಲಿ ಬಂಡವಾಳ ಹಿಂತೆಗೆತಕ್ಕೆ ಗಮನ ನೀಡಿದ್ದರು. ಆದರೆ ಏಪ್ರಿಲ್ ತಿಂಗಳಿನಲ್ಲಿ ಹೂಡಿಕೆಗೆ ಒತ್ತು ನೀಡಿದ್ದಾರೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ವಿದೇಶಿ ಹೂಡಿಕೆದಾರರು ಏಪ್ರಿಲ್‌ನಲ್ಲಿ ಕಳೆದ ಕೆಲವು ದಿನಗಳಿಂದ ಹೆಚ್ಚಿನ ಉತ್ಸಾಹದಿಂದ ವಹಿವಾಟು ನಡೆಸುತ್ತಿದ್ದಾರೆ. ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಏಪ್ರಿಲ್‌ನಲ್ಲಿ 28ರವರೆಗೆ ನಡೆದಿರುವ ವಹಿವಾಟಿನಲ್ಲಿ ₹9,852 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ವೃದ್ಧಿ ಆಗಿರುವುದು ವಿದೇಶಿ ಹೂಡಿಕೆದಾರರ ವಹಿವಾಟಿನ ರೀತಿ ಬದಲಾಗಲು ಪ್ರಮುಖವಾದ ಕಾರಣವಾಗಿದೆ. ಫೆಬ್ರುವರಿಯಲ್ಲಿ ಅಮೆರಿಕದ ಒಂದು ಡಾಲರ್‌ಗೆ ₹82.94ರ ಕನಿಷ್ಠ ಮಟ್ಟಕ್ಕೆ ತಲುಪಿದ್ದ ರೂಪಾಯಿ ಮೌಲ್ಯವು ಸದ್ಯ ಒಂದು ಡಾಲರ್‌ಗೆ ₹81.75ಕ್ಕೆ ಬಂದಿದೆ. ಭಾರತದ ಚಾಲ್ತಿ ಖಾತೆ ಕೊರತೆ ಕಡಿಮೆ ಆಗುತ್ತಿದ್ದು, ಇದು ಹೀಗೆಯೇ ಮುಂದುವರಿದಲ್ಲಿ ರೂಪಾಯಿ ಮೌಲ್ಯ ಇನ್ನಷ್ಟು ವೃದ್ಧಿಯಾಗಬಹುದು. ಹೀಗಾದಲ್ಲಿ ವಿದೇಶಿ ಹೂಡಿಕೆದಾರರು ಭಾರತದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಖರೀದಿ ವಹಿವಾಟು ನಡೆಸುವ ಸಾಧ್ಯತೆ ಇದೆ ಎಂದು ಅವರು ತಿಳಿಸಿದರು.

ಮುಖ್ಯಾಂಶಗಳು

- ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ವೃದ್ಧಿ
- ಹಣಕಾಸು ಸೇವೆ, ಆಟೊ, ಆಟೊ ಬಿಡಿಭಾಗ ವಲಯದ ಷೇರುಗಳ ಖರೀದಿ

ಮೂಡಿಗೆರೆ ಕಾಫಿ ಧಾರಣೆ (50 ಕೆಜಿಗೆ)

ಮುದ್ರೆಮನೆ	
ಎಪಿ	₹15250
ಎಸಿ	₹7980
ಆರ್‌ಪಿ	₹10500
ಆರ್‌ಸಿ	₹5830

ಬ್ಯಾಂಕ್‌ಗಳಿಗೆ ಎಂ.ಡಿ. ನೇಮಕ

ನವದೆಹಲಿ (ಪಿಟಿಐ): ಬ್ಯಾಂಕ್ ಆಫ್ ಇಂಡಿಯಾದ (ಬಿಒಐ) ವ್ಯವಸ್ಥಾಪಕ ನಿರ್ದೇಶಕರಾಗಿ ರಜನೀಶ್ ಕರ್ನಾಟಕ್ ಮತ್ತು ಬ್ಯಾಂಕ್ ಆಫ್ ಬರೋಡಾದ ವ್ಯವಸ್ಥಾಪಕ ನಿರ್ದೇಶಕರಾಗಿ ದೇವದತ್ ಚಂದ್ ಅವರನ್ನು ಕೇಂದ್ರ ಸರ್ಕಾರವು ಶನಿವಾರ ನೇಮಕ ಮಾಡಿದೆ.

ಬಿಒಐನ ಅತನು ಕುಮಾರ್ ದಾಸ್ ಅವರ ಅಧಿಕಾರಾವಧಿಯು 2023ರ ಜನವರಿಗೆ ಅಂತ್ಯವಾಗಿದ್ದು, ಅವರ ಸ್ಥಾನಕ್ಕೆ ರಜನೀಶ್ ಅವರನ್ನು ನೇಮಿಸಲಾಗಿದೆ. ಬ್ಯಾಂಕ್ ಆಫ್ ಬರೋಡಾ ಎಂ.ಡಿ. ಸಂಜೀವ್ ಚಡ್ಡಾ ಅವಧಿ ಜೂನ್ 30ರಂದು ಮುಗಿಯಲಿದ್ದು, ಜುಲೈ 1ರಂದು ದೇವದತ್ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

GTTC
ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ
ರಾಜಾಜಿನಗರ ಕೈಗಾರಿಕಾ ಪ್ರದೇಶ, ಬೆಂಗಳೂರು–560010. ದೂರವಾಣಿ: 080–23500808
080–23152118/119 ಫ್ಯಾಕ್ಸ್: 080–23301683,
ಮೊಬೈಲ್: 9141629584 / 9880217473

B.Voc ಪದವಿ ಕೋರ್ಸ್‌ಗಳಿಗೆ ಪ್ರವೇಶ ಪ್ರಕಟಣೆ–2023–2024
(ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ ಮತ್ತು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಯಾಗಿದೆ)

ನೀಡುತ್ತಿರುವ ಕೋರ್ಸ್‌ಗಳು:
ಜಿಟಿಟಿಸಿ, ಬೆಂಗಳೂರು ಕೇಂದ್ರವು ಕೆಳಕಂಡ ವಿಷಯಗಳ ಬಗ್ಗೆ ಅತಿ ಹೆಚ್ಚಿನ ಗಮನ ಕೇಂದ್ರೀಕರಿಸಿರುವ ಮತ್ತು ಉದ್ಯೋಗ ಆಧಾರಿತ ಕೋರ್ಸುಗಳನ್ನು ನೀಡುತ್ತದೆ.
1. B.Voc in ಟೂಲ್ ಅಂಡ್ ಡೈ ಮೇಕಿಂಗ್
2. B.Voc in ಪ್ರಾಡಕ್ಟ್ ಡಿಸೈನ್ ಅಂಡ್ ಮ್ಯಾನ್ಯುಫ್ಯಾಕ್ಚರಿಂಗ್
3. B.Voc in ಸ್ಮಾರ್ಟ್ ಮ್ಯಾನ್ಯುಫ್ಯಾಕ್ಚರಿಂಗ್–ಮೆಕಾಟ್ರಾನಿಕ್ಸ್

ಟೂಲ್ ಅಂಡ್ ಡೈ ಮೇಕಿಂಗ್, ಪ್ರಾಡಕ್ಟ್ ಡಿಸೈನ್ ಅಂಡ್ ಮ್ಯಾನ್ಯುಫ್ಯಾಕ್ಚರಿಂಗ್ ಮತ್ತು ಸ್ಮಾರ್ಟ್ ಮ್ಯಾನ್ಯುಫ್ಯಾಕ್ಚರಿಂಗ್ (ಮೆಕಾಟ್ರಾನಿಕ್ಸ್) ಕ್ಷೇತ್ರದಲ್ಲಿ ವೃತ್ತಿದಾಯಕ ಕೌಶಲ್ಯದ ಜೊತೆಗೆ ಬಲವಾದ ಸೈದ್ಧಾಂತಿಕ ಪರಿಜ್ಞಾನ ಮತ್ತು ಆಳವಾದ ಪ್ರಾಯೋಗಿಕ ಅರಿವನ್ನು ಮೂಡಿಸಲು ಈ ಕೋರ್ಸ್‌ಗಳನ್ನು ವಿನ್ಯಾಸಗೊಳಿಸಿದೆ. ಈ ಪದವಿ ಕೋರ್ಸ್‌ಗಳು ವಿವಿಧ ಮಟ್ಟಗಳಲ್ಲಿ ಬಹು ಸ್ವರೂಪದ ಪ್ರವೇಶ ಮತ್ತು ನಿರ್ಗಮನ ಅವಕಾಶದ ವೈಶಿಷ್ಟ್ಯತೆಯನ್ನು ಒಳಗೊಂಡಿರುತ್ತವೆ. ತಯಾರಿಕೆ ತಂತ್ರಗಾರಿಕೆಗಳ ಅತ್ಯಾಧುನಿಕ ಪ್ರವೃತ್ತಿಗೆ, ಕ್ಯಾಡ್/ಕ್ಯಾಮ್/ಸಿಎಇ ಮತ್ತು ಅತ್ಯುತ್ತಮ ಉದ್ಯೋಗ ಅವಕಾಶಗಳನ್ನು ಒಳಗೊಂಡಿರುವ ಕೋರ್ಸ್ ಆಗಿದೆ.

ಅರ್ಹತೆ:
ಅಭ್ಯರ್ಥಿಗಳು 2ನೇ ಪಿಯುಸಿ (ಯಾವುದೇ ವಿಷಯ)/ಐಟಿಐ (ಯಾವುದೇ ಟ್ರೇಡ್)/ಡಿಟಿಡಿಎಂ/ಡಿಪಿಎಂ/ಡಿಎಂಇ ಅಥವಾ ಇದಕ್ಕೆ ತತ್ಸಮಾನವಾದ ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು. ಸಾಮಾನ್ಯ ವರ್ಗದ ಅಭ್ಯರ್ಥಿಗಳು ಕನಿಷ್ಠ 50% ಅಂಕಗಳನ್ನು (ಪಜಾ/ಪಪಂ ಅಭ್ಯರ್ಥಿಗಳಾದಲ್ಲಿ 45%) ಪಡೆದಿರಬೇಕು.

ಅರ್ಜಿ:
ಬೆಂಗಳೂರಿನಲ್ಲಿ ಪಾವತಿಯಾಗುವಂತೆ ''**ಗೌರ್ನಮೆಂಟ್ ಟೂಲ್ ರೂಮ್ ಅಂಡ್ ಟ್ರೈನಿಂಗ್ ಸೆಂಟರ್**'' ಪರವಾಗಿ ಪಡೆದ ಡಿಮ್ಯಾಂಡ್ ಡ್ರಾಫ್ಟ್ ರೂಪದಲ್ಲಿ ರೂ.250/– (ಪಜಾ/ಪಪಂ ಅಭ್ಯರ್ಥಿಗಳಾದಲ್ಲಿ ರೂ.125/–) ಪಾವತಿ ಮಾಡಿ ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಪಡೆದುಕೊಳ್ಳಬಹುದು.

ಆಯ್ಕೆ:
ಪ್ರತಿಭೆ ಹಾಗು ಕೌನ್ಸೆಲಿಂಗ್ ಆಧಾರದ ಮೇಲೆ ಸೀಟುಗಳನ್ನು ಹಂಚಿಕೆ ಮಾಡಲಾಗುವುದು. ಭರ್ತಿಮಾಡಿದ ಅರ್ಜಿಗಳನ್ನು ಸ್ವೀಕರಿಸುವ ಕಡೆಯ **ದಿನಾಂಕ 20ನೇ ಮೇ 2023**. ಆಸಕ್ತಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಪ್ರಾಂಶುಪಾಲರು–ಪಿಜಿ/ಪಿಡಿ ಸ್ಟಡೀಸ್ ಇವರನ್ನು ಸಂಪರ್ಕಿಸಬಹುದು.

ಸಹಿ/–ವ್ಯವಸ್ಥಾಪಕ ನಿರ್ದೇಶಕರು

ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್

ತನಿಖೆಗೆ ಸಿದ್ಧ; ರಾಜೀನಾಮೆ ಕೊಡಲ್ಲ

ಗೊಂಡಾ, ಉತ್ತರ ಪ್ರದೇಶ (ಪಿಟಿಐ): ಏಳು ಮಂದಿ ಮಹಿಳಾ ಕುಸ್ತಿಪಟುಗಳು ತಮ್ಮ ವಿರುದ್ಧ ಮಾಡಿರುವ ಲೈಂಗಿಕ ದೌರ್ಜನ್ಯ ಆರೋಪಕ್ಕೆ ಸಂಬಂಧಿಸಿ 'ಯಾವುದೇ ರೀತಿಯ ತನಿಖೆಗೆ ಸಿದ್ಧ. ಆದರೆ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದಿಲ್ಲ. ರಾಜೀನಾಮೆ ನೀಡಿದರೆ ಅವರ ಆರೋಪಗಳನ್ನು ಒಪ್ಪಿಕೊಂಡಂತಾಗುತ್ತದೆ' ಎಂದು ಬ್ರಿಜ್ ಭೂಷಣ್ ಶರಣ್ ಸಿಂಗ್ ಶನಿವಾರ ಹೇಳಿದ್ದಾರೆ.

'ನಾನು ಅಮಾಯಕ. ಸುಪ್ರೀಂ ಕೋರ್ಟ್ ಮತ್ತು ದೆಹಲಿ ಪೊಲೀಸರ ಮೇಲೆ ನನಗೆ ಸಂಪೂರ್ಣ ವಿಶ್ವಾಸವಿದೆ. ಯಾವುದೇ ರೀತಿಯ ವಿಚಾರಣೆಯನ್ನು ಎದುರಿಸಲು ನಾನು ಸಿದ್ಧನಿದ್ದೇನೆ' ಎಂದು ಬಿಷ್ಣೋಹರ್‌ಪುರದ ತಮ್ಮ ನಿವಾಸದಲ್ಲಿ ಶನಿವಾರ ಮಾಧ್ಯಮಗೋಷ್ಠಿಯಲ್ಲಿ ಅವರು ತಿಳಿಸಿದ್ದಾರೆ.

'ರಾಜೀನಾಮೆ ಕೊಡುವುದು ನನಗೇನೂ ದೊಡ್ಡ ವಿಷಯ ಅಲ್ಲ. ಆದರೆ ಕ್ರಿಮಿನಲ್ ರೀತಿ ಹುದ್ದೆತ್ಯಾಗ ಮಾಡುವುದಿಲ್ಲ' ಎಂದು ಹೇಳಿದರು.

ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಶನಿವಾರ ಬೆಳಿಗ್ಗೆ ಕುಸ್ತಿಪಟುಗಳನ್ನು ಭೇಟಿ ಮಾಡಿರುವುದನ್ನು ಅವರು ಬಲವಾಗಿ ಆಕ್ಷೇಪಿಸಿದರು. 'ಈ ವಿವಾದಗಳ ಹಿಂದೆ ಯಾರಿದ್ದಾರೆ ಎಂಬುದು ಇವತ್ತು ಗೊತ್ತಾಗಿದೆ. ಇದೆಲ್ಲದರ ಹಿಂದೆ ಒಬ್ಬ ಉದ್ಯಮಿ ಮತ್ತು ಕಾಂಗ್ರೆಸ್ ಕೈವಾಡ ಇದೆ ಎನ್ನುವುದನ್ನು ನಾನು

ಬ್ರಿಜ್‌ಭೂಷಣ್ ಶರಣ್ ಸಿಂಗ್

ಆರಂಭದಿಂದಲೂ ಹೇಳುತ್ತ ಬಂದಿದ್ದೆ. ಅವರಿಗೆ ನನ್ನ ವಿರುದ್ಧ ಅಸಮಾಧಾನವಿದೆ' ಎಂದು ಬ್ರಿಜ್ ಭೂಷಣ್ ಹೇಳಿದರು. ಆದರೆ ಈ ಬಗ್ಗೆ ವಿವರ ನೀಡಲಿಲ್ಲ.

ಕೈಸರ್‌ಗಂಜ್ ಕ್ಷೇತ್ರದ ಬಿಜೆಪಿ ಸಂಸದರೂ ಆಗಿರುವ ಬ್ರಿಜ್‌ಭೂಷಣ್ ವಿರುದ್ಧ ಎಫ್‌ಐಆರ್ ದಾಖಲಿಸಬೇಕೆಂದು ಆಗ್ರಹಿಸಿ ಏಪ್ರಿಲ್ 23ರಿಂದ ದೇಶದ ಪ್ರಮುಖ ಕುಸ್ತಿಪಟುಗಳು ಧರಣಿ ನಡೆಸುತ್ತಿದ್ದಾರೆ. ಸಿಂಗ್ ಅವರನ್ನು ಎಲ್ಲ ಹುದ್ದೆಗಳಿಂದ ಮುಕ್ತಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ. ಅವರನ್ನು ಕೂಡಲೇ ಬಂಧಿಸಬೇಕೆಂದು ಕಾಂಗ್ರೆಸ್ ಒತ್ತಾಯಿಸಿದೆ.

ಶುಕ್ರವಾರ ರಾತ್ರಿ ಸಿಂಗ್ ವಿರುದ್ಧ ದೆಹಲಿ ಪೊಲೀಸರು ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದ್ದರು. ಮೊದಲನೆಯದು ಕುಸ್ತಿಪಟು ಬಾಲಕಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದ್ದು, ಪೋಕ್ಸೊ ಅಡಿ ಪ್ರಕರಣ ದಾಖಲಾಗಿದೆ. ಇನ್ನೊಂದು ಪ್ರಕರಣ, ಶೀಲಕ್ಕೆ ಚ್ಯುತಿ ತಂದ ಆರೋಪಕ್ಕೆ ಸಂಬಂಧಿಸಿದೆ.

'ಕುಸ್ತಿಪಟುಗಳು ಬೇಡಿಕೆಗಳೆಲ್ಲ ಈಡೇರಿದೆ. ಆದರೂ ಅವರು ಧರಣಿ ಕುಳಿತಿದ್ದಾರೆ. ಏಕೆ' ಎಂದು ಪ್ರಶ್ನಿಸಿದರು. 'ಇದು ಕ್ರೀಡಾಪಟುಗಳ ಧರಣಿಯಲ್ಲ. ಬದಲು ಸಂಚುಕೋರರ ಧರಣಿ' ಎಂದು ಬ್ರಿಜ್‌ಭೂಷಣ್ ಟೀಕಿಸಿದರು.

12 ವರ್ಷಗಳಿಂದ ಸಿಂಗ್, ಡಬ್ಲ್ಯುಎಫ್‌ಐ ಅಧ್ಯಕ್ಷರಾಗಿದ್ದಾರೆ. ಹೀಗಾಗಿ ಮತ್ತೊಂದು ಅವಧಿಗೆ ಅವರು ಸ್ಪರ್ಧಿಸುವಂತಿಲ್ಲ.

'ತಮ್ಮನ್ನು ಈ ಪ್ರಕರಣದಲ್ಲಿ ಸಿಲುಕಿಸಲು ಬಾಲಕಿಯೊಬ್ಬಳನ್ನು ಬಳಸಿಕೊಂಡಿರುವ ಆಡಿಯೊ ತುಣಕನ್ನು ತನಿಖಾ ಸಮಿತಿಗೆ ಕೊಟ್ಟಿದ್ದೇನೆ' ಎಂದೂ ಹೇಳಿದರು.

ಪ್ರಿಯಾಂಕಾ ಭೇಟಿ: ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಶನಿವಾರ ಬೆಳಿಗ್ಗೆ ಕುಸ್ತಿ ಪಟುಗಳು ಧರಣಿ ನಡೆಸುತ್ತಿರುವ ಜಂತರ್ ಮಂಥರ್‌ಗೆ ಭೇಟಿ ನೀಡಿ ಅವರಿಗೆ ಬೆಂಬಲ ಸೂಚಿಸಿದರು. ಸರ್ಕಾರವು ಫೆಡರೇಷನ್ ಅಧ್ಯಕ್ಷರನ್ನು ರಕ್ಷಿಸುತ್ತಿದೆ ಎಂದು ದೂರಿದರು.

ಪ್ರತಿಭಟನೆ ದುರ್ಬಲಗೊಳಿಸಬೇಡಿ: ಬಬಿತಾಗೆ ವಿನೇಶಾ ಮನವಿ

ವಿನೇಶಾ

ಬ್ರಿಜ್‌ಭೂಷಣ್ ವಿರುದ್ಧದ ಪ್ರತಿಭಟನೆಗೆ ಸಂಬಂಧಿಸಿದಂತೆ ಸಹೋದರ ಸಂಬಂಧಿ ಕುಸ್ತಿಪಟುಗಳಾದ ವಿನೇಶಾ ಹಾಗೂ ಬಬಿತಾ ಫೋಗಟ್ ನಡುವೆ ವಾಗ್ಯುದ್ಧ ನಡೆದಿದೆ.

'ಸಹೋದರಿ ಬಬಿತಾ ಅವರೇ, ಒಂದು ವೇಳೆ ನೊಂದ ಕುಸ್ತಿಪಟುಗಳ ಹಕ್ಕುಗಳ ಪರ ನೀವು ನಿಲ್ಲದಿದ್ದರೂ ಆಂದೋಲನವನ್ನು ದುರ್ಬಲಗೊಳಿಸುವ ಪ್ರಯತ್ನ ಮಾಡಬೇಡಿ ಎಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಪೀಡಕರ ವಿರುದ್ಧ ಧ್ವನಿಯೆತ್ತಲು ಮಹಿಳಾ ಕುಸ್ತಿಪಟುಗಳಿಗೆ ವರ್ಷಗಟ್ಟಲೇ ಸಮಯ ಬೇಕಾಯಿತು. ನೀವು ಕೂಡ ಮಹಿಳೆ. ನಮ್ಮ ನೋವು ಅರ್ಥ ಮಾಡಿಕೊಳ್ಳಿ' ಎಂದು ವಿನೇಶಾ ಟ್ವೀಟ್ ಮಾಡಿದ್ದಾರೆ.

ಇದಕ್ಕೂ ಮೊದಲು ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಭೇಟಿ ಕುರಿತು ಟ್ವೀಟ್ ಮಾಡಿದ್ದ ಬಬಿತಾ 'ಪ್ರಿಯಾಂಕಾ ತಮ್ಮ ಆಪ್ತ ಕಾರ್ಯದರ್ಶಿ ಸಂದೀಪ್ ಸಿಂಗ್ ಅವರ ಜೊತೆ ಕುಸ್ತಿಪಟುಗಳನ್ನು ಭೇಟಿಯಾದರು. ಆದರೆ ಈ ವ್ಯಕ್ತಿಯ ಮೇಲೆಯೇ ಮಹಿಳೆಯರ ಜೊತೆ ಅಸಭ್ಯವಾಗಿ ವರ್ತಿಸಿದ ಮತ್ತು ದಲಿತ ಮಹಿಳೆಯನ್ನು ಅವಮಾನಿಸಿದ ಆರೋಪವಿದೆ' ಎಂದಿದ್ದರು.

ತನಿಖೆ ವಿವರಗಳ ಸೋರಿಕೆ?

ಈ ಮಧ್ಯೆ ಸರ್ಕಾರದ ತನಿಖಾ ವೈಖರಿಯನ್ನು ಕುಸ್ತಿಪಟುಗಳು ಪ್ರಶ್ನಿಸಿದ್ದು, ತನಿಖೆಯ ವಿವರಗಳು ಸೋರಿಕೆಯಾಗಿವೆ. ಇದರಲ್ಲಿ ಬಾಲಕಿ ಕುಸ್ತಿಪಟುವಿನ ಹೆಸರೂ ಇದೆ' ಎಂದು ದೂರಿದ್ದಾರೆ. 'ತನಿಖೆಯ ವಿವರಗಳನ್ನು ಸೋರಿಕೆ ಮಾಡುತ್ತಿರುವವರಾರು?' ಎಂದು ನವದೆಹಲಿಯ ಜಂತರ್‌ಮಂತರ್‌ನಲ್ಲಿ ಧರಣಿನಿರತ ಕುಸ್ತಿಪಟುಗಳು ಪ್ರಶ್ನಿಸಿದ್ದಾರೆ. ಪೊಲೀಸರು ತಮ್ಮೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದಾರೆ. ಮ್ಯಾಟ್‌ಗಳನ್ನು ಒಯ್ಯಲು ಬಿಡುವುದಿಲ್ಲ ಎಂದೂ ದೂರಿದ್ದಾರೆ ಎಂದು ಎನ್‌ಡಿಟಿವಿ ವರದಿ ತಿಳಿಸಿದೆ.

ಬ್ಯಾಡ್ಮಿಂಟನ್: ಫೈನಲ್‌ಗೆ ಸಾತ್ವಿಕ್– ಚಿರಾಗ್

ಚಿರಾಗ್ (ಎಡ) ಮತ್ತು ಸಾತ್ವಿಕ್

ದುಬೈ (ಪಿಟಿಐ): ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಏಷ್ಯಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಡಬಲ್ಸ್ ವಿಭಾಗದ ಫೈನಲ್ ಪ್ರವೇಶಿಸಿದ ಭಾರತದ ಮೊದಲ ಜೋಡಿ ಎನಿಸಿಕೊಂಡರು.

ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಚೀನಾ ತೈಪೆಯ ಎದುರಾಳಿಗಳಾದ ಲಿ ಯಾಂಗ್ ಮತ್ತು ವಾಂಗ್ ಚಿ ಲಿನ್ ಅವರು ಅರ್ಧದಲ್ಲೇ ಹಿಂದೆ ಸರಿದದ್ದು, ಭಾರತದ ಜೋಡಿಯ ಫೈನಲ್ ಹಾದಿಯನ್ನು ಸುಗಮಗೊಳಿಸಿತು.

ಸಾತ್ವಿಕ್– ಚಿರಾಗ್ ಮೊದಲ ಗೇಮ್‌ಅನ್ನು 21–18 ರಲ್ಲಿ ಗೆದ್ದುಕೊಂಡರು. ಎರಡನೇ ಗೇಮ್‌ನಲ್ಲಿ 13–14 ರಲ್ಲಿ ಹಿನ್ನಡೆಯಲ್ಲಿದ್ದಾಗ ಯಾಂಗ್– ಚಿನ್ ಪಂದ್ಯ ತ್ಯಜಿಸಿದರು.

ಆರನೇ ಶ್ರೇಯಾಂಕ ಹೊಂದಿರುವ ಭಾರತದ ಜೋಡಿ ಭಾನುವಾರ ನಡೆಯುವ ಫೈನಲ್‌ನಲ್ಲಿ ಮಲೇಷ್ಯಾದ ಆಂಗ್ ಯೆವ್ ಸಿನ್– ತಿಯೊ ಎ ಯಿ ವಿರುದ್ಧ ಹಣಾಹಣಿ ನಡೆಸಲಿದೆ.

ಇನ್ನೊಂದು ಸೆಮಿಫೈನಲ್‌ನಲ್ಲಿ ಮಲೇಷ್ಯಾದ ಜೋಡಿ 21–6, 26–24 ರಲ್ಲಿ ಜಪಾನ್‌ನ ತಕುರೊ ಹೊಕಿ– ಯುಗೊ ಕೊಬಯಶಿ ಅವರನ್ನು ಮಣಿಸಿತು.

ಕ್ರಿಕೆಟ್: ಎಂಎಸ್‌ಆರ್‌ಐಟಿಗೆ ಪ್ರಶಸ್ತಿ

ಬೆಂಗಳೂರು: ಎಂಎಸ್‌ಆರ್‌ಐಟಿ ತಂಡವು ಇಲ್ಲಿ ನಡೆದ ಅಖಿಲ ಭಾರತ ಅಂತರ ಎಂಜಿನಿಯರಿಂಗ್ ಕಾಲೇಜು ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿತು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ವಜ್ರ ಮಹೋತ್ಸವದ ಅಂಗವಾಗಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಎಂಎಸ್‌ಆರ್‌ಐಟಿ ತಂಡ ಶನಿವಾರ 49 ರನ್‌ಗಳಿಂದ ಆರ್‌ವಿಸಿಇ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರು: ಬಿ.ಇ.ಎಲ್. ಅಂಗಣ: ಎಂಎಸ್‌ಆರ್‌ಐಟಿ 28 ಓವರ್‌ಗಳಲ್ಲಿ 4 ವಿಕೆಟ್‌ಗೆ 195 (ಅಕ್ಷನ್ ರಾವ್ 70, ದೀಪಕ್ ಶಂಕರ್ 67). ಆರ್‌ವಿಸಿಇ: 22.3 ಓವರ್‌ಗಳಲ್ಲಿ 146 (ಅಭಿರಾಮ್ ವಿ. 49; ಅಮೇಯ್ ಎಸ್. 36ಕ್ಕೆ 4). ಫಲಿತಾಂಶ: ಎಂಎಸ್‌ಆರ್‌ಐಟಿ ತಂಡಕ್ಕೆ 49 ರನ್‌ಗಳ ಜಯ ಮತ್ತು ಪ್ರಶಸ್ತಿ.

ಟೈಗರ್ ಕಪ್: ಸಿಕ್ಸ್ ಅಕಾಡೆಮಿಗೆ ಜಯ

ಬೆಂಗಳೂರು: ಸಿಕ್ಸ್ ಕ್ರಿಕೆಟ್ ಅಕಾಡೆಮಿ ತಂಡವು ಇಲ್ಲಿ ನಡೆಯುತ್ತಿರುವ ಟೈಗರ್ ಕಪ್ (14 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ 150 ರನ್‌ಗಳಿಂದ ಆರ್‌ಎಕ್ಸ್‌ಸಿಎ ಎದುರು ಭರ್ಜರಿ ಜಯ ಗಳಿಸಿತು.

ಶನಿವಾರ ನಡೆದ ಇನ್ನೊಂದು ಪಂದ್ಯದಲ್ಲಿ ಜಸ್ಟ್ ಕ್ರಿಕೆಟ್ ಅಕಾಡೆಮಿ 3 ವಿಕೆಟ್‌ಗಳಿಂದ ಕಪಿಲ್ ಸಿಸಿ ವಿರುದ್ಧ ಗೆದ್ದಿತು.

ಸಂಕ್ಷಿಪ್ತ ಸ್ಕೋರು: ಸಿಕ್ಸ್ ಅಕಾಡೆಮಿ: 30 ಓವರ್‌ಗಳಲ್ಲಿ 255 (ಓಂ ಅಗರವಾಲ್ 47, ಕ್ರಿಷ್ ಧಾಮಿ 42, ಪನ್ಮುಲ್ ಶರ್ಮಾ 41, ರಫಾ ಪೂಣಚ್ಚ 40; ಸಿದ್ಧಾರ್ಥ್ ಸರ್ದಾ 32ಕ್ಕೆ 3); ಆರ್‌ಎಕ್ಸ್‌ಸಿಎ: 30 ಓವರ್‌ಗಳಲ್ಲಿ 7 ವಿಕೆಟ್‌ಗೆ 105 (ಆಯುಷ್ಮಾನ್ ವೈಧ್ಯಾನ 34).

ಕಪಿಲ್ ಸಿಸಿ: 30 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 177 (ಪ್ರೀತ್ 56, ತೇಜಸ್ ಆರ್. 29). ಜಸ್ಟ್ ಕ್ರಿಕೆಟ್: 29.3 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 180 (ವಿಕ್ರಂ 55, ಅಮರನಾಥ್ ರೆಡ್ಡಿ 36; ಬಾನ್‌ಬಿ ಹರಿಹರನ್ 19ಕ್ಕೆ 3).

ಡಿಂಗ್ ಲಿರೆನ್

14ನೇ ಪಂದ್ಯ ಡ್ರಾ, ವಿಶ್ವ ಚೆಸ್ ಸಾಮ್ರಾಟ ನಿರ್ಧಾರ ಇಂದು

ಅಸ್ತಾನಾ, ಕಜಕಸ್ತಾನ: ಗ್ರ್ಯಾಂಡ್‌ಮಾಸ್ಟರ್‌ಗಳಾದ ಡಿಂಗ್ ಲಿರೆನ್ ಮತ್ತು ಇಯಾನ್ ನಿಪೊಮ್‌ನಿಷಿ ನಡುವಣ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ 14ನೇ ಹಾಗೂ ಅಂತಿಮ ಪಂದ್ಯ ಆರೂವರೆ ಗಂಟೆಗಳ ಸುದೀರ್ಘ ಹೋರಾಟ ಕಂಡರೂ ನಿರ್ಣಾಯಕ ಫಲಿತಾಂಶ ಹೊರಹೊಮ್ಮಲಿಲ್ಲ. ಶನಿವಾರ ನಡೆದ ಈ ಪಂದ್ಯ 90 ನಡೆಗಳ ನಂತರ ಡ್ರಾ ಆಯಿತು.

ಸ್ಕೋರ್ 7–7 ಆಗಿದ್ದು, ವಿಶ್ವ ಚಾಂಪಿಯನ್ ಆಟಗಾರನನ್ನು ನಿರ್ಧರಿಸಲು ಈಗ ನಾಲ್ಕು ಟೈಬ್ರೇಕರ್ ಪಂದ್ಯಗಳ ಮೊರೆ ಹೋಗಬೇಕಾಗಿದೆ. ಭಾನುವಾರ ಈ ಟೈಬ್ರೇಕರ್ ಪಂದ್ಯಗಳು ನಡೆಯಲಿವೆ. ಒಂದು ವೇಳೆ ಅಲ್ಲೂ ಸ್ಕೋರ್ ಸಮನಾದಲ್ಲಿ ಬ್ಲಿಟ್ಜ್ ಪಂದ್ಯಗಳ ಮೂಲಕ ವಿಶ್ವ ಚಾಂಪಿಯನ್ ಆಟಗಾರನನ್ನು ನಿರ್ಧರಿಸಲಾಗುವುದು.

ಬಿಳಿ ಕಾಯಿಗಳಲ್ಲಿ ಆಡಿದ ಲಿರೆನ್ ಅಂತಿಮ ಹಂತದಲ್ಲಿ ಒಂದು ಕಾಲಾಳು ಕಡಿಮೆ ಹೊಂದಿದ್ದರು. ಆದರೆ ನಿಪೊಮ್‌ನಿಷಿ ಗೆಲುವಿಗೆ ನಡೆಸಿದ ತಂತ್ರದಿಂದ ಪಾರಾಗುವಲ್ಲಿ ಕೊನೆಗೂ ಲಿರೆನ್ ಯಶಸ್ವಿಯಾದರು.

ಗೋಲ್ಡನ್ ಗ್ಲೋಬ್ ರೇಸ್: ಅಭಿಲಾಷ್ ಐತಿಹಾಸಿಕ ಸಾಧನೆ

ಅಭಿಲಾಷ್ ಟೋಮಿ

ತಿರುವನಂತಪುರಂ (ಪಿಟಿಐ): ಕೇರಳದ ಅಭಿಲಾಷ್ ಟೋಮಿ ಅವರು ಪ್ರತಿಷ್ಠಿತ ಗೋಲ್ಡನ್ ಗ್ಲೋಬ್ ರೇಸ್ (ವಿಶ್ವ ಸೇಲಿಂಗ್ ಚಾಂಪಿಯನ್‌ಷಿಪ್) ಪೂರ್ಣಗೊಳಿಸಿದ ಭಾರತದ ಮೊದಲ ಸೇಲಿಂಗ್ ಸ್ಪರ್ಧಿ ಎಂಬ ಐತಿಹಾಸಿಕ ಸಾಧನೆ ಮಾಡಿದ್ದಾರೆ.

ನೌಕಾಪಡೆಯ ನಿವೃತ್ತ ಅಧಿಕಾರಿಯಾಗಿರುವ 43 ವರ್ಷದ ಅಭಿಲಾಷ್ ಎರಡನೆಯವರಾಗಿ ಸ್ಪರ್ಧೆ ಕೊನೆಗೊಳಿಸಿದರು. ದಕ್ಷಿಣ ಆಫ್ರಿಕಾದ ಕರ್ಸ್ಟನ್ ನೊಯಿಶೇಫರ್ ಅವರು ಅಗ್ರಸ್ಥಾನ ಪಡೆದರು. ಮಾತ್ರವಲ್ಲ, ಈ ಪ್ರತಿಷ್ಠಿತ ರೇಸ್ ಗೆದ್ದ ಮೊದಲ ಮಹಿಳೆ ಎನಿಸಿಕೊಂಡರು.

ಏಕಾಂಗಿಯಾಗಿ ಸಮುದ್ರಯಾನ ಮಾಡುವ ಈ ಸಾಹಸ ಸ್ಪರ್ಧೆ 2022ರ ಸೆ.4 ರಂದು ಫ್ರಾನ್ಸ್‌ನ ಲೆಸ್ ಸಾಬ್ಲ್ ದೊಲೋನ್ ಎಂಬಲ್ಲಿ ಆರಂಭವಾಗಿತ್ತು. 'ಬಯಾನತ್' ಹೆಸರಿನ ಹಾಯಿದೋಣಿಯಲ್ಲಿ ವಿಶ್ವ ಪರ್ಯಟನೆ ಮಾಡಿದ ಅವರು ಶನಿವಾರ ಅದೇ ತಾಣಕ್ಕೆ ತಲುಪಿದರು. ನೊಯಿಶೇಫರ್ ಅವರು ಗುರುವಾರ ತಲುಪಿದ್ದರು. ಅಭಿಲಾಷ್ 236 ದಿನ ಸಮುದ್ರಯಾನ ಮಾಡಿ, 48,000 ಕಿ.ಮೀ ಕ್ರಮಿಸಿ ರೇಸ್ ಪೂರ್ಣಗೊಳಿಸಿದ್ದಾರೆ.

2018 ರಲ್ಲಿ ನಡೆದಿದ್ದ ರೇಸ್‌ನಲ್ಲಿ ಪಾಲ್ಗೊಂಡಿದ್ದರೂ, ಅವರು ಸ್ಪರ್ಧೆ ಪೂರ್ಣಗೊಳಿಸಿರಲಿಲ್ಲ. ಅವರ ಹಾಯಿದೋಣಿ ಬಿರುಗಾಳಿಗೆ ಸಿಲುಕಿ ಮಗುಚಿದ್ದರಿಂದ ಬೆನ್ನುಮೂಳೆಗೆ ಗಂಭೀರ ಗಾಯವಾಗಿತ್ತು. 82 ದಿನಗಳನ್ನು ಸಮುದ್ರದಲ್ಲಿ ಕಳೆದಿದ್ದ ಬಳಿಕ ದುರಂತ ಸಂಭವಿಸಿತ್ತು. ಆದರೆ ಈ ಬಾರಿ ಛಲಬಿಡದೆ ರೇಸ್ ಪೂರೈಸುವಲ್ಲಿ ಯಶ ಕಂಡಿದ್ದಾರೆ.

ಟ್ರಿಪಲ್ ಜಂಪ್: ಅಬ್ದುಲ್ಲಾಗೆ ಚಿನ್ನ

ನವದೆಹಲಿ (ಪಿಟಿಐ): ಭಾರತದ ಅಬ್ದುಲ್ಲಾ ಅಬೂಬಕ್ಕರ್ ಅವರು ಜಪಾನ್‌ನ ಹಿರೋಶಿಮಾದಲ್ಲಿ ನಡೆದ ಮಿಕಿಯೊ ಒಡಾ ಮೆಮೊರಿಯಲ್ ಅಥ್ಲೆಟಿಕ್ಸ್ ಕೂಟದ ಟ್ರಿಪಲ್ ಜಂಪ್ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ.

ಶನಿವಾರ ನಡೆದ ಸ್ಪರ್ಧೆಯಲ್ಲಿ ಅವರು 16.31 ಮೀಟರ್ಸ್ ಸಾಧನೆ ಮಾಡಿದರು.

2022ರ ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಅಬ್ದುಲ್ಲಾ ಅವರು ಬೆಳ್ಳಿ ಪದಕ ಗೆದ್ದಿದ್ದರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

ನೆಲಮಂಗಲ ಮತ್ತು ತ್ಯಾಮಗೊಂಡ್ಲು ಮುಖ್ಯರಸ್ತೆಯಲ್ಲಿ ವಿಶ್ವದರ್ಜೆಯ ಸೌಲಭ್ಯವುಳ್ಳ ಸೈಟುಗಳು ಲಭ್ಯ.

ಕಂಪನಿಯ 5ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಚದರ ಅಡಿಗೆ ಕೇವಲ 899 ರೂಗಳಲ್ಲಿ ನಿಮ್ಮ ನೆಲಮಂಗಲದಲ್ಲಿ ಸೈಟನ್ನು ಖರೀದಿಸಿ. ಹಾಗೂ ನೋಡಿದ ತಕ್ಷಣ SPOT BOOKING ಮಾಡಿಕೊಂಡರೆ ನೊಂದಣಿ ಹಣ (Registration cost) ಸಂಪೂರ್ಣ ಉಚಿತವಾಗಿರುತ್ತದೆ.

ಫ್ಲಾಟ್‌ಗಳು ಲಭ್ಯವಿದೆ
20×30, 30×40, 40×60

ಕೇವಲ ರೂ 899/-
Per sqft
ಬ್ಯಾಂಕ್ ಲೋನ್ ಹಾಗೂ ಕಂಪನಿಯಿಂದ 0% ಬಡ್ಡಿ ರಹಿತ ಸಾಲ ಸೌಲಭ್ಯ

SPOT BOOKING REGISTRTION COST FULL FREE

ನಿವೇಶನ ನೋಡಲು ಕರೆಮಾಡಿ
FREE FAMILY SITE VISIT

888 4249 249

ESSMA TURBO TUBULAR BATTERY
An Ultimate Power

27+ YEARS OF EXPERIENCE IN UPS BATTERY INDUSTRY

ESSMA UPS™ *Means Technology*

HIGH ON EFFICIENCY, LOW ON COST

ಕಾರ್ಮಿಕ ದಿನಾಚರಣೆಯ ಶುಭಾಶಯಗಳು 01.05.2023
ಕಳೆದ 27 ವರ್ಷಗಳಿಂದ ಭಾರತದಾದ್ಯಂತ ಉತ್ತಮ ಗುಣ ಮಟ್ಟದ UPS ಮತ್ತು Batteries ಉತ್ಪಾದನೆ ಹಾಗೂ ಮಾರಾಟ ಮಾಡುತ್ತಿರುವ ಎಸ್ಮ ಯುಪಿಎಸ್ ಅಂಡ್ ಬ್ಯಾಟರೀಸ್ (ESSMA UPS & BATTERIES)

150 AH 1 Battery + 1 KVA UPS + Stand
150 AH 2 Battery + 2 KVA UPS + Stand
Online UPS 1KV + 100 KV

AVAILABLE UPS & BATTERIES
• Offline : 1 KVA to 15 KVA • Online : 1 KVA to 100 KVA
• Stabilizer : 1 KVA to 100 KVA Oil Cool, Air Cool • Battery : 20AH to 260AH
• Solar Offline : 1 KVA to 15 KVA With M.P.P.T Charger
• Inbuilt UPS & Batteries Also Available

M.S. ELECTRONICS
Uninterrupted Power Supply

Mfrs : Sine wave Home UPS, Online UPS, Servo Stabilities, Solar UPS, Solar Water Heater & Batteries etc.,

OVER A DECADE OF SERVICE

No.2/1, 4th Cross, 5th Main Road, Ramachandrapuram, Bangalore - 560021
E : shivu@essmaups.com www.essmaups.com

FOR DISTRIBUTORS ENQUIRY	FOR DEALERS ENQUIRY	FOR PRODUCTS ENQUIRY	FOR SERVICE ENQUIRY
8971462505	8123482997	8792967801	080-23120885

ವಿವೇಕಾನಂದ ಪಿ.ಯು ಕಾಲೇಜು
VIVEKANANDA P.U COLLEGE
Recognized by Government of Karnataka
(A Unit Of V.I.P High School)
Adugodi, Bengaluru, 560030

Faith in destiny

ADMISSIONS OPEN 2023-24

Vivekananda P.U College - Where Excellence Meets Innovation!

Courses Offered :
- PCMB (NEET/K-CET/KVPY)
- PCMC (JEE/K-CET)
- CEBA (CA FOUNDATION)

6364688899
080-2212 0030

25+ YEARS Of Academic Excellence
Vivekananda P.U College

Value We Offer
- Dedicated and skilled faculties with excellent academic records.
- Special coaching classes for K-CET, NEET, and JEE conducted by experienced resource persons.
- Limited class sizes to ensure effective teaching.
- Skill development program to enhance students' abilities.
- Monthly parents-teachers meetings.
- Continuous attendance monitoring system.
- Special seminars on personality development.
- Remedial classes and personalized attention for each student.
- Well-equipped Physics, Chemistry, Biology, and Computer science laboratories.
- Special space for sports enthusiasts, with many students representing at the state and national levels

FOR ENQUIRIES
080-2212 0030 | www.viphighschool.org | viphighschoolinadugodi@gmail.com

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

KANAKAPURA ROAD
BMRDA APPROVED PREMIUM
BMRDA Approved
RESIDENTIAL Sites
Bank Loan Avbl Up to 90%
Ready for Registration & Construction
Starting From Rs.1749 Per. Sqft
PRM/KA/RERA/1251/310/AG/201102/002105
MH PROMOTERS
95138 50029
www.mhpromoters.in

Attention surgeons/surgical teams!
A new hospital near to ISKCON temple/Metro station in Mahalaxmi layout, Bengaluru is offering a unique opportunity to rent/manage/lease our fully equipped Operation theatre. Our state-of-the-art facilities are ready-made and available for immediate use. Whether you're looking to expand your services or start a new venture, our hospital is the perfect solution. Don't miss out on this exceptional opportunity.
Contact: 9900325808

REAL ESTATE SELLING

Sites

Banashankari

"AVAILABLE BDA Sites Banasankari 6th Stage 20x30, 30x40, 40x60, 50x80 Genuine buyers Contact: 9845146725/ 9741466369"

BEL Layout

BHARATH NAGAR, Magadi Road BEL Layout, First Stage, Commercial 40X60, North Facing 60ft Road, Skandha Estates: 7019251303

Bannerghatta Road

30X40 NF 2 BHK House, 30x40 WF, 30x50 WF 30x40 SWC BBMP Akhatha Akhyanagar:9341238064

Basaweshwaranagar

